ಶ್ರೀ ಕೆ ಜಿ ಬೋಪಯ್ಯ ಮಾನ್ಯ ಅಧ್ಯಕ್ಷರೆ, ಮಾನ್ಯ ಕಂದಾಯ ಸಚಿವರು ಆದೇಶ ಮಾಡಿದ್ದರೂ ಅಧಿಕಾರಿಗಳು ಅದನ್ನು ವಾಪಸ್ಸು ತೆಗೆದುಕೊಂಡಿಲ್ಲ ಮಾನ್ಯ ಕಂದಾಯ ಸಚಿವರು ಆದೇಶ ಮಾಡಿ ಬಹಳ ತಿಂಗಳುಗಟ್ಟಲೆಯಾಗಿದೆ ಮಾನ್ಯ ಸಚಿವರು ಮಾಡಿದ ಆದೇಶಕ್ಕೆ ಬೆಲೆ ಕೊಡದ ಅಧಿಕಾರಿಗಳಿದ್ದಾರೆ

(ಗೊಂದಲ)

ಅಧ್ಯಕ್ಷರು ಮಾನ್ಯ ಹೆಗ್ಡೆಯವರೆ, ಈಗ ತಾವು ಮಾತನಾಡಿ ದಯಮಾಡಿ ಯಾರೂ ತಪ್ಪು ಭಾವಿಸಬಾರದು ಇಂದು ಚರ್ಚೆಯ ಕೊನೆಯ ದಿನವಾಗಿದ್ದರಿಂದ ಬಹಳ ಜನ ಮಾತನಾಡುವವರಿದ್ದಾರೆ

ಶ್ರೀ ಬಿ ಎಸ್ ಯಡಿಯೂರಪ್ಪ ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಇದೇ ವಿಷಯದ ಬಗ್ಗೆ 11 ಗಂಟೆಗೆ ಸಭೆಯೊಂದನ್ನು ಕರೆದಿದ್ದಾರೆ ಇದರ ಬಗ್ಗೆ ಮಧ್ಯಾಹ್ನ ಅಥವಾ ಸಾಯಂಕಾಲದೊಳಗೆ ಏನಾದರೊಂದು ಪರಿಹಾರ ಹುಡುಕಿ, ಇವತ್ತು ಅಥವಾ ನಾಳೆ Statement ಅನ್ನು ಮಾಡಿಸುತ್ತೇವೆ ಮಾನ್ಯ ಮುಖ್ಯಮಂತ್ರಿಗಳು ಈ ಬಗ್ಗೆಯೆ 11 ಗಂಟೆಗೆ ಸಭೆಯೊಂದನ್ನು ಕರೆದಿದ್ದಾರೆ ಎಂಬುದನ್ನು ಗಮನಕ್ಕೆ ತರಬಯಸುತ್ತಿದ್ದೇನೆ

ಅಧ್ಯಕ್ಷರು ಮಾನ್ಯ ಹೆಗ್ಡೆಯವರೆ, ಆದಷ್ಟು ಬೇಗ ಎಲ್ಲರೂ ಕಡಿಮೆ ಅವಧಿ ಮಾತನಾಡಿ ಇದರಿಂದ ಎಲ್ಲರಿಗೂ ಅವಕಾಶವಾಗುತ್ತದೆ

4 ವಿತ್ತೀಯ ಕಾರ್ಯಕಲಾಪಗಳು .

2007–08ನೇ ಸಾಲಿನ ಅನುದಾನ ಬೇಡಿಕೆಗಳ ಮೇಲೆ ಮುಂದುವರೆದ ಚರ್ಚೆ

ಶ್ರೀ ಕೆ ಜಯಪ್ರಕಾಶ್ ಹೆಗ್ಡೆ (ಬ್ರಹ್ಮಾವರ) ಮಾನ್ಯ ಅಧ್ಯಕ್ಷರೆ, ಈ ಚರ್ಚೆ ಪ್ರಾರಂಭವಾದ ಮೇಲೆ ಮಾನ್ಯ ಉಪ ಮುಖ್ಯಮಂತ್ರಿಗಳು ಇಲ್ಲೇ ಕುಳಿತು ಎಲ್ಲರ ಮಾತನ್ನು ಕೇಳುತ್ತಿದ್ದಾರೆ ಇದು ಬಹಳ ಸಂತೋಷದ ವಿಚಾರವಾಗಿದೆ ಬೇರೆ ಮಂತ್ರಿಗಳು ಯಾರೂ ಇಲ್ಲದಿದ್ದರೂ, ಅವರೊಬ್ಬರೇ ಕುಳಿತುಕೊಂಡು ಕೇಳುತ್ತಿದ್ದಾರೆ, ಸಂತೋಷ ಈಗ ನಾನು ಪ್ರಾರಂಭ ಮಾಡುತ್ತಿರುವುದು ಏನೆಂದರೆ, ತಾವು ಸದನದಲ್ಲಿ ಕುಳಿತಿದ್ದಾಗ ಸಚಿವ ಸಂಪುಟದ ಸದಸ್ಯರೊಬ್ಬರು 'ಉಪ ಮುಖ್ಯಮಂತ್ರಿಗಳು incompetent' ಎಂದು ಹೇಳಿದರು ಇಂತಹ ಒಂದು ಪರಿಸ್ಥಿತಿ ನಿರ್ಮಾಣವಾದರೂ,

ಮುಂದೆ ತಾವು ಅದಕ್ಕೆ ಉತ್ತರವನ್ನು ಹೇಳಲಿಲ್ಲ There is a saying Public office is the last refuge of incompetent persons ಆ ಪರಿಸ್ಥಿತಿಗೆ ತಂದು ಇಟ್ಟು ಬಿಟ್ಟಿದ್ದೀರಿ ತಾವು incomplete ಹೌದೇ ಎಂದು ಭಾವಿಸುವಂತಹ ಪರಿಸ್ಥಿತಿಗೆ ತಂದು ಇಟ್ಟದ್ದೀರಿ ಇಲ್ಲದಿದ್ದರೆ immediate ಆಗಿ ನೀವು ಅವರಿಗೆ report ಮಾಡಬೇಕಾಗಿತ್ತು You should have said 'It is one of your business' ಎಂದು ನೀವು ಹೇಳಬೇಕಾಗಿತ್ತು ನಿಮ್ಮ ಮತ್ತು ಮುಖ್ಯಮಂತ್ರಿಗಳ ಮಧ್ಯದಲ್ಲಿ ಇರುವಂತಹ ವ್ಯವಸ್ಥೆಯಾದರೆ ನೀವು ನೇರವಾಗಿ ಅವರಿಗೆ 'none of your business' ಎಂದು ಹೇಳುವಂತಾ ದ್ದನ್ನಾದರೂ ಮಾಡಬೇಕಾಗಿತ್ತು ನೀವು ಉಪ ಮುಖ್ಯಮಂತ್ರಿಗಳು, ನಿಮ್ಮ ಸಚಿವ ಸಂಪುಟದ ಸಹೋದ್ಯೋಗಿಯೊಬ್ಬರು ನಿಮ್ಮ ಬಗ್ಗೆ ಈ ಮಾತನ್ನು ಆಡುತ್ತಿರುವಂತಾದ್ದು ಬಹಳ ತಪ್ಪಾಗುತ್ತದೆ ಅವರು ತಮ್ಮ ಮಾತನ್ನು ವಾಪಸ್ಸು ತೆಗೆದುಕೊಳ್ಳಬೇಕಾಗುತ್ತದೆ ಅವರು ಸದನದ ಹೊರಗಡೆ ಈ ಮಾತನ್ನು ಹೇಳಿದಲ್ಲಿ ನಾವು ಆ ಬಗ್ಗೆ ಇಲ್ಲಿ ಚರ್ಚೆ ಮಾಡುತ್ತಿರಲಿಲ್ಲ ಅವರು ಸದನದಲ್ಲೇ ಆ ಮಾತನ್ನು ಹೇಳಿದ್ದರಿಂದ ನಾವು ಚರ್ಚೆ ಮಾಡುತ್ತಿರಲಿಲ್ಲ ಅವರು ಸದನದಲ್ಲೇ ಆ ಮಾತನ್ನು ಹೇಳಿದ್ದರಿಂದ ನಾವು ಚರ್ಚೆ ಮಾಡಬೇಕಾಗುತ್ತದೆ ಅದರ ಬಗ್ಗೆಯೂ ಸಹ ತಾವು ಉತ್ತರವನ್ನು ಹೇಳಬೇಕಾಗುತ್ತದೆ ಕಳೆದ ಸಾರಿ ತಾವು ಆಯವ್ಯಯ ಮಂಡನೆಯನ್ನು ಮಾಡಿದಾಗ, Vote on Account ತೆಗೆದುಕೊಂಡಿರಿ ಈ ಪದ್ಧತಿ ತಪ್ಪಾಗುತ್ತದೆ ನಾನು ಅವತ್ತೂ ಹೇಳಿದ್ದೆ, ಇವತ್ತೂ ಹೇಳುತ್ತಿದ್ದೇನೆ ಪ್ರತಿ ಸಲ Vote on Account ಅನ್ನು ತೆಗೆದುಕೊಂಡು ಒಂದು ಸಾರಿ ಚರ್ಚೆಯನ್ನು ಮಾಡುವಂತಾದ್ದು, ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡಿದ ಮೇಲೆ ಪುನಃ ಈ ಬಾರಿ ಆಯವ್ಯಯದ ಬಗ್ಗೆ ಚರ್ಚೆಯನ್ನು ಮಾಡುವಂತಾದ್ದು ಬಹಳ ತಪ್ಪಾಗುತ್ತದೆ Budget present ಮಾಡಿದ ಮೇಲೆ ಕೂಡಲೇ ಅದರ ಬಗ್ಗೆ ಸಂಪೂರ್ಣ ಚರ್ಚೆಯಾದರೆ, ಈ ಅವಧಿಯಲ್ಲಿ ನಾವು ಬೇರ ವಿಷಯಗಳನ್ನು ಚರ್ಚೆ ಮಾಡಲಿಕ್ಕೂ ಸಹ ಅವಕಾಶವಾಗುತ್ತದೆ ದಯವಿಟ್ಟು ಈ ವ್ಯವಸ್ಥೆಯನ್ನು ಬದಲಾಯಿಸಬೇಕು ಕೇವಲ ಚುನಾವಣೆ ಬಂದಾಗ ಅಥವಾ ಬೇರೆ ಏನಾದರೂ ತೊಂದರೆಗಳು ಬಂದಾಗ emergency periodನಲ್ಲಿ Vote on Account ಅನ್ನು ತೆಗೆದುಕೊಳ್ಳುವಂತಹ

ವ್ಯವಸ್ಥೆ ಆಗಬೇಕು ಪ್ರತಿಯೊಂದು ವರ್ಷದಲ್ಲೂ ಈ ಒಂದು ವ್ಯವಸ್ಥೆಯನ್ನು ತರುವಂತಾದ್ದು ತಪ್ಪಾಗುತ್ತದೆ ಅದರ ಜೊತೆಗೆ, ತಾವು ಈ ಒಂದು ಬಜೆಟ್ ಅನ್ನು ಮಂಡನೆ ಮಾಡಿದ ಕೂಡಲೇ ಹೊಸ ಹೊಸ ಕಾರ್ಯಕ್ರಮಗಳನ್ನು announce ಮಾಡಿದಿರಿ ಮೇಲ್ಮನೆಗೆ ಹೋದ ಮೇಲೆ ಸಹ ಹೊಸ ಕಾರ್ಯಕ್ರಮಗಳನ್ನು announce ಮಾಡಿದಿರಿ ವಿರೋಧ ಪಕ್ಷದವರು ನಿಮ್ಮ ಮೇಲೆ Privilege Motion ಅನ್ನು move ಮಾಡುತ್ತಾರೆಂದ ಕೂಡಲೇ ಅದನ್ನೆಲ್ಲಾ ವಾಪಸ್ ತೆಗೆದುಕೊಂಡಿರಿ ಇದು ಬಹಳ ತಪ್ಪಾಗುತ್ತದೆ Fiscal Responsibility Act ಅನ್ನು pass ಮಾಡಿದ ಮೇಲೆ, ಇಂತಹ indiscipline ಅನ್ನು ತರುವಂತಾದ್ದು ತಪ್ಪಾಗುತ್ತದೆ ಆರ್ಥಿಕ ವ್ಯವಸ್ಥೆಯನ್ನು ಹಾಳು ಮಾಡಿಬಿಟ್ಟರೆ ಮುಂದೆ ಅದೇ ರೀತಿಯಾಗಿ ನಡೆದುಕೊಂಡು ಹೋಗುತ್ತದೆ ಪ್ರತಿ ಸರ್ಕಾರ ಅಧಿಕಾರಕ್ಕೆ ಬಂದಾಗ ಅವರಿಗೆ ಖುಷಿ ಬಂದಂತೆ, ಅವರಿಗೆ ಬೇಕಾದ ಕಾರ್ಯಕ್ರಮಗಳನ್ನು announce ಮಾಡಿಕೊಂಡು ಹೋಗುತ್ತಿದ್ದಲ್ಲಿ ಯಾವ ಪರಿಸ್ಥಿತಿ ನಿರ್ಮಾಣವಾಗಬಹುದು ಎನ್ನುವುದನ್ನು ಆಲೋಚನೆ ಮಾಡಬೇಕಾದಂತಹ ಪರಿಸ್ಥಿತಿ ಇದೆ ಇವತ್ತು ಈ ಕಾರ್ಯಕ್ರಮಗಳನ್ನು announce ಮಾಡಿದ್ದನ್ನು ನೀಡಿದರೆ, ನಿಮ್ಮಿಬ್ಬರ ಮಧ್ಯೆಯೇ ಭಿನ್ನಾಭಿಪ್ರಾಯ ಅಥವಾ one up man ship, ನಾವು ಜಾಸ್ತಿ ಮಾಡಿದ್ದೇವೆ, ನಾವು ಜಾಸ್ತಿ ಮಾಡಿದ್ದೇವೆ ಎಂದು ತೋರಿಸುವುದಕ್ಕೋಸ್ಕರ ನೀವು ಕಾರ್ಯಕ್ರಮಗಳನ್ನು announce ಮಾಡುತ್ತಿದ್ದೀರಾ? ಅಥವಾ ನೇರವಾಗಿ ಚುನಾವಣೆಗೆ ಹೋಗಬೇಕೆಂಬ ಆಲೋಚನೆಯಿಂದ ಈ ಒಂದು ಕಾರ್ಯಕ್ರಮಗಳನ್ನು announce ಮಾಡುತ್ತಿದ್ದೀರಾ ಎನ್ನುವುದನ್ನು ಸದನದ ಗಮನಕ್ಕೆ ತರಬೇಕಾಗುತ್ತದೆ ಏಕೆಂದರೆ, ನಿಮ್ಮೊಳಗೆ ಇದನ್ನು ಮಾಡಿಕೊಂಡಿದ್ದರೆ ಬಹಳ ತಪ್ಪಾಗುತ್ತದೆ ಇದರಿಂದ ನಮ್ಮ ರಾಜಕಾರಣಕ್ಕೆ ಯಾವ ಲಾಭವೂ ಆಗುವುದಿಲ್ಲ ಎಂಬುದಕ್ಕೆ 2-3 ಉದಾಹರಣೆಗಳನ್ನು ಕೊಡುತ್ತೇನೆ ಒಂದು, ಮಂಡ್ಯ ಪ್ಯಾಕೇಜ್, ಇನ್ನೊಂದು ಬಳ್ಳಾರಿ ಪ್ಯಾಕೇಜ್, ಅದರಿಂದ ಏನೂ ಲಾಭವಾಗಲಿಲ್ಲ ಅದರ ಜೊತೆಗೆ ಮಾನ್ಯ ರೇವಣ್ಣನವರು Housing Minister ಆಗಿ ಹೊಳೆನರಸೀಪುರಕ್ಕೆ ಬಹಳಷ್ಟು ಮನೆಗಳನ್ನು ಕೊಟ್ಟರು ಅದರಿಂದ ಅವರಿಗೆ ಲಾಭವಾಗಲಿಲ್ಲ ಇವೆಲ್ಲವನ್ನೂ ನೋಡುವಾಗ ಸ್ವಲ್ಪ ರಾಜ್ಯದ ಹಿತಾಸಕ್ತಿಯನ್ನು ನೋಡಿ ಕಾರ್ಯಕ್ರಮಗಳನ್ನು

ಹಾಕಿಕೊಳ್ಳುವಂತಹ ಪ್ರಯತ್ನವನ್ನು ಮಾಡಬೇಕೇ ಹೊರತು ಅವರು ಮಾಡಿದ್ದನ್ನೇ ನೀವು ಮಾಡಿ, ಅದೇ ಪರಿಸ್ಥಿತಿ ನಿರ್ಮಾಣವಾಗುವ ವ್ಯವಸ್ಥೆಯನ್ನು ಮಾಡಬೇಡಿ ಈ Fiscal Responsibility Act ಅನ್ನು ತಂದ ಮೇಲೆ, ಈ ಒಂದು ವ್ಯವಸ್ಥೆಯನ್ನು, Fiscal discipline ಅನ್ನು ಹಾಳು ಮಾಡುವಂತಹ ಪರಿಸ್ಥಿತಿ ಬರಬಾರದು ಎಂದು ಹೇಳುತ್ತೇನೆ ನೀವು ಬಂದ ಗಳಿಗೆಯಂತೂ ಬಹಳ ಚೆನ್ನಾಗಿತ್ತು ಹಿಂದಿನ ವರ್ಷಗಳಲ್ಲಿ ವ್ಯವಸ್ಥೆ ಸರಿಯಾಗಿ ಮಾಡಿದ್ದರಿಂದ ಸ್ವಲ್ಪ ನಮ್ಮ ಖಜಾನೆಯಲ್ಲಿ ಹಣವಿತ್ತು ನಿಮಗೆ ಖರ್ಚು ಮಾಡಲಿಕ್ಕೆ ಸಾಕಷ್ಟು ಹಣ ಸಿಕ್ಕಿತು ರೈತರ ಸಾಲವನ್ನು ಮನ್ನಾ ಮಾಡಿ ನೀವು ಬಹಳ ಒಳ್ಳೆಯ ಕೆಲಸವನ್ನು ಮಾಡಿದ್ದೀರಿ ಮೀನುಗಾರರ ಸಾಲವನ್ನು ಮನ್ನಾ ಮಾಡಿದ್ದೀರಿ, ನೇಕಾರರಿಗೆ ಶೇಕಡ 4ರ ಬಡ್ಡಿದರದಲ್ಲಿ ಸಾಲ ಕೊಡುವಂತೆ ಮಾಡಿದ್ದೀರಿ, ಇದು ಕೇವಲ one time progress ಆಗ್ಗಿಂದಾಗ್ಗೆ ಇದನ್ನು ಮಾಡಿಕೊಂಡು ಹೋದರೆ ತಪ್ಪಾಗುತ್ತದೆ ನಾವು ರೈತರ, ಮೀನುಗಾರರ ಮತ್ತು ನೇಕಾರರ ಬಗ್ಗೆ ಈ ತರಹ one time ಮಾತ್ರ Programme ಮಾಡಬಹುದು ಪ್ರತಿಯೊಂದು ಸಲವೂ ಈ ರೀತಿ ಮಾಡುವುದು ಸಾಧ್ಯವಾಗುವುದಿಲ್ಲ

ಶ್ರೀ ಜಿ ಸಿ ಮಾಗುಸ್ವಾಮಿ ಮಾನ್ಯ ಯಡಿಯೂರಪ್ಪನವರೆ, ನೇಕಾರರದು 10 ಲಕ್ಷ ರೂಪಾಯಿಗಳವರೆಗೆ ಸಾಲ ಎಂದು ಮಾಡಿದ್ದೀರಿ 10 ಲಕ್ಷದ ಮೇಲೆ 10 ಅಥವಾ 20 ಸಾವಿರ ರೂಗಳವರೆಗೆ ಜಾಸ್ತಿ ಲೋನ್ ಇದ್ದರೂ KSFC ಯಲ್ಲಿ ಅವರಿಗೆ ರಿಯಾಯಿತಿ ಸಿಕ್ಕುತ್ತಿಲ್ಲ KSFC ಯವರಿಗೆ ಈ ಬಗ್ಗೆ ಸ್ವಲ್ಪ relax ಮಾಡಲಿಕ್ಕೆ ಹೇಳಿ 10 ಲಕ್ಷದ 50 ಸಾವಿರಕ್ಕೂ ಆತನಿಗೆ ರಿಯಾಯಿತಿ ಸಿಕ್ಕುವುದಿಲ್ಲವೆಂದು ಹೇಳುತ್ತಿದ್ದಾರೆ 10 ಲಕ್ಷ ರೂಗಳ ಒಳಗಿದ್ದರೆ ಮಾತ್ರ ಎನ್ನುವುದನ್ನು ಸ್ವಲ್ಪ relax ಮಾಡಬೇಕು

ಶ್ರೀ ಕೆ ಜಯಪ್ರಕಾಶ್ ಹೆಗ್ಡೆ ರೈತರ ಸಾಲದ ಮೇಲಿನ ಬಡ್ಡಿಯನ್ನು ಶೇಕಡ 4ಕ್ಕೆ ಇಳಿಸಿದ್ದೀರಿ ಅದಕ್ಕಾಗಿ ನಿಮಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ ಇದೇ ಪ್ರಥಮ ಬಾರಿಗೆ ಇದನ್ನು ನಾವು ಜಾರಿಗೆ ತಂದಿದ್ದೇವೆ ಎಂದು ನೀವು ಹೇಳುವುದನ್ನು ನಾನು ಒಪ್ಪುವುದಿಲ್ಲ ಮಾನ್ಯ ಉಪ ಮುಖ್ಯಮಂತ್ರಿಗಳ ಗಮನಕ್ಕೆ State Bank of India, Monthly Review July 1973ರಲ್ಲಿನ ಒಂದು Para ವನ್ನು ನಾನಿಲ್ಲಿ ಓದಬಯಸುತ್ತೇನೆ 1972ರಲ್ಲೇ Differential

Interest Rate Scheme ಎಂಬುದೊಂದನ್ನು ಆಗಲೇ ಜಾರಿಗೆ ತಂದಿದ್ದರು ಅದರಲ್ಲಿ ಈ ರೀತಿ ಹೇಳಿದ್ದರು

> "Under the differential interest rate scheme introduced from April, 1972 public sector Banks have been giving loans at a concessional interest rates of 4% to the weaker section of the Community"

1972ರಲ್ಲೇ ಇದನ್ನು ಮಾಡಿದ್ದರು ಆಗ ನಾನು ರಾಜಕಾರಣದಲ್ಲೇ ಇರಲಿಲ್ಲ ಆಗಿನ ವಿರೋಧ ಪಕ್ಷಗಳು ಇದು ಆರ್ಥಿಕ ವ್ಯವಸ್ಥೆಯನ್ನು ಹಾಳು ಮಾಡುವಂತಾದ್ದು ಎಂದು ಇದಕ್ಕೆ ವಿರೋಧವನ್ನು ಮಾಡಿದ್ದರು ಆದರೆ over the years ಅದು ನಿಂತು ಹೋಗಿಬಿಟ್ಟಿತು ಇದು ತಾವೇನು ಶೇಕಡ 4ರ ದರದಲ್ಲಿ ಬಡ್ಡಿಯನ್ನು ವಿಧಿಸಿದ್ದೀರಿ, ಮುಂದಿನ ದಿನಗಳಲ್ಲಿ ಅದು ಯಾವ ದಿವಸ ನಿಲ್ಲುವಂತಹ ಪರಿಸ್ಥಿತಿ ಬರುತ್ತದೋ ಗೊತ್ತಿಲ್ಲ ಅದನ್ನು ಯಾವುದೇ ಸರ್ಕಾರವಿರಲಿ ಮುಂದುವರೆಸಿಕೊಂಡು ಹೋಗುವುದಿಲ್ಲ ನಿನ್ನೆ ಮಾನ್ಯ ಶರದ್ ಪವಾರ್‌ರವರು ಮೈಸೂರಿನಲ್ಲಿ ಇದನ್ನು ರಾಷ್ಟ್ರ ಮಟ್ಟದಲ್ಲಿ ಜಾರಿಗೆ ತರುತ್ತೇವೆ ಮತ್ತು ಕೃಷಿಕನೊಬ್ಬನ ಕುಟುಂಬದಲ್ಲಿ ಎಲ್ಲರೂ ಕೃಷಿಗೆ ಹೋಗಬಾರದು ಎನ್ನುವಂತಹ ಮಾತನ್ನೂ ಸಹ ಹೇಳಿದ್ದಾರೆ ತಾವು ಅತ್ಯಂತ ಒಳ್ಳೆಯ ಕೆಲಸವನ್ನು ಮಾಡಿರುವಂತಾದ್ದು ಏನೆಂದರೆ, ಈ ಬಾರಿ ಸಣ್ಣ ನೀರಾವರಿಗೆ ಹೆಚ್ಚು ಹಣವನ್ನು ಕೊಟ್ಟಿದ್ದೀರಿ ಏಕೆಂದರೆ, ನೀವು Major Irrigation ಗೆ ಎಷ್ಟು ಖರ್ಚು ಮಾಡಿದರೂ, ಅಷ್ಟೊಂದು ಭೂಮಿಗೆ ನೀರು ಉಣಿಸಲಿಕ್ಕೆ ಸಾಧ್ಯವಾಗುವುದಿಲ್ಲ ಆದರೆ Minor Irrigation ಗೆ ಈಗ ನೀವೇನು ಹಣವನ್ನು ಕೊಟ್ಟಿದ್ದೀರಿ, ಆದರಲ್ಲಿ ನಮ್ಮ ಭಾಗದಲ್ಲಿ ಉಪ್ಪು ನೀರಿನ ಅಣೆಕಟ್ಟುಗಳನ್ನು ಕಟ್ಟಲಿಕ್ಕೆ, ಚೆಕ್ ಡ್ಯಾಂಗಳನ್ನು ಕಟ್ಟಲಿಕ್ಕೆ, ನದಿ ತಡೆಗೋಡೆ ಕಟ್ಟಲಿಕ್ಕೆ ಬಹಳ ಅನುಕೂಲವಾಗುತ್ತಿದೆ ಇದರಿಂದ ಒಳ್ಳೆಯ ಕೆಲಸವನ್ನು ಮಾಡಿದಂತಾಗುತ್ತದೆ ಬಹಳ ಒಳ್ಳೆಯ ಕೆಲಸಗಳನ್ನು ಮಾಡಿದ್ದೀರಿ ಇನ್ನೂ ಹೆಚ್ಚಿನ ಹಣವನ್ನು ಕೊಟ್ಟಾಗ Water table rise ಮಾಡುವುದಕ್ಕೆ ಸಾಧ್ಯವಾಗುತ್ತದೆ ಬಾವಿಗಳಲ್ಲಿ ರೈತನ ಕೃಷಿಗೆ ಹೆಚ್ಚಿನ ನೀರು ಕೊಡುವುದಕ್ಕೆ ವ್ಯವಸ್ಥೆಯಾಗುತ್ತದೆ ಅತ್ಯಂತ ದುಃಖದ ಸಂಗತಿ,

ಶ್ರೀಮತಿ ಭಾಗೀರಥಿ ಟಿ ಮಾನ್ಯ ಅಧ್ಯಕ್ಷರೆ, ಚೆಕ್ ಡ್ಯಾಂ ಬಗ್ಗೆ ಮಾತನಾಡುತ್ತಿದ್ದಾರೆ, ತಾವು ಹೇಳಿದ ಹಾಗೆ ಈ ಸಾರಿ Minor Irrigationಗ ಸಾಕಷ್ಟು ಹಣ ಕೊಟ್ಟಿರತಕ್ಕಂಥಾದ್ದು ಬಹಳ ಒಳ್ಳೆಯ ಕೆಲಸ ಆದರೆ ನಮ್ಮಲ್ಲಿ ಏನಾಗುತ್ತಿದೆ ಎಂದರೆ, feasibility ಇರತಕ್ಕಂತಹ ಜಾಗವನ್ನು ನೋಡಿದಾಗ Forest ಮತ್ತು ಊರ ನಡುವೆ ಬಹಳ ಹತ್ತಿರದಲ್ಲಿ ಸಿಕ್ಕಂತಹ feasibilityಗ ಅರಣ್ಯ ಇಲಾಖೆಯಿಂದ ಬಹಳ ತೊಂದರೆಯಾಗುತ್ತಿದೆ ಅಲ್ಲಿ ಮಾಡುವುದಕ್ಕೆ ಬಿಡುತ್ತಿಲ್ಲ ದಯವಿಟ್ಟು ತಾವು ಅದನ್ನು ಮಾತನಾಡಿ ನಮಗೆ ಅನುಕೂಲ ಮಾಡಿಕೊಡಬೇಕೆಂದು ಹೇಳುತ್ತೇನೆ

ಶ್ರೀ ಜಯಪ್ರಕಾಶ್ ಹೆಗ್ಡೆ ಕೆ ಅದರ ಜೊತೆಗೆ ಒಂದು ದುಃಖಕರ ಸಂಗತಿ ನಿನ್ನೆ ಮಾನ್ಯ ಶ್ರೀರಾಮರೆಡ್ಡಿಯವರು ಮತ್ತು ಸಿದ್ದರಾಮಯ್ಯನವರು ಹೇಳಿದರು ಮರ ಮಾನ್ಯಗಳಿಗೆ ಅವರು ಹಣ ಕೇಳಲಿಲ್ಲ ಅವರ ಹತ್ತಿರ ಹಣದ ಕೊರತೆ ಇಲ್ಲ ಅದಕ್ಕೆ ಹೆಚ್ಚಿನ ಹಣ ಕೊಟ್ಟು ಯಾವುದಕ್ಕೆ ಅಗತ್ಯ ಇತ್ತು ಅದನ್ನು ಗುರುತಿಸುವಂಥಾದ್ದು, ಕಾರ್ಯಕ್ರಮಗಳನ್ನು ಕಡಿಮೆ ಮಾಡಿ, ಹೆಚ್ಚಿನ ಹಣವನ್ನು ಈ ಕೆಲಸಗಳಿಗೆ ಕೊಡಿ ಕಾರ್ಯಕ್ರಮಗಳನ್ನು ಹೆಚ್ಚು ಮಾಡಿಕೊಂಡು ಟೋಕನ್ ಗ್ರ್ಯಾಂಟ್ ಕೊಟ್ಟು ಅದನ್ನು ನಾವು ಕೊಟ್ಟಿದ್ದೇವೆಂದು ಹೇಳುವಂತಹ ಪರಿಸ್ಥಿತಿಗೆ ತರಬಾರದು ಎಂದು ಹೇಳುತ್ತಾ, ಈ ಅಂಗ ಪಕ್ಷಗಳ ಮಧ್ಯದ ಭಿನ್ನಾಭಿಪ್ರಾ ಯದಿಂದ ಹೊಸ ಹೊಸ ಕಾರ್ಯಕ್ರಮಗಳನ್ನು ಕೊಡುವಂಥಾದ್ದು ಕಡಿಮೆಯಾಗಬೇಕು ನೀವು ಲಾಟರಿ ಬ್ಯಾನ್ ಮಾಡಿದಿರಿ, ಒಳ್ಳೆಯ ಕೆಲಸ ಅದರಿಂದಾಗಿ OC ಯನ್ನು ನಿಲ್ಲಿಸುವಂಥಾದ್ದು, ಅಧಿಕಾರಿಗಳು ಕೆಲಸ ಮಾಡಿ OC ನಿಲ್ಲಿಸುವಂತಹ ಕೆಲಸವನ್ನು ಮಾಡುತ್ತಿದ್ದಾರೆ ಆದರೆ ಸಾರಾಯಿ ನಿಷೇಧ ಏನು ಮಾಡಿದ್ದೀರಿ, ಅದರಿಂದ ನೀವು ಎಲ್ಲಾ ಕಡೆ ಹೇಳಿಕೊಂಡು ಬಂದಿರುವಂಥಾದ್ದು, ಅದರಿಂದ ನಿಮಗೆ ಕೊರತೆಯಾಗುತ್ತದೆ 2,000 ಕೋಟಿ ರೂಪಾಯಿ ನಷ್ಟವಾಗುತ್ತದೆ ನಿಮ್ಮ figures ಪ್ರಕಾರ ಅದು ಕೊರತೆ ಆಗುವುದಕ್ಕೆ ಸಾಧ್ಯವಿಲ್ಲ ತಮ್ಮ Annexure I ನೋಡಿ It could be seen that for the quantity of 16 84 crores sold by the contractors for the year 2005-2006, they will be loosing total sale of 9 01 crores of liquors The collective loss for the year 2006-07 would be Rs 3,392 46 crores ಅವರು ನಿಮಗೆ ಸರಿಯಾದ ಲೆಕ್ಕವನ್ನು ಕೊಡುತ್ತಿರಲಿಲ್ಲ ಎಷ್ಟನ್ನು

ಕಟ್ಟುತ್ತಿದ್ದರು, ಅವರ ಪ್ರಮಾಣಕ್ಕೆ ಅವರು ಶರಾಬನ್ನು ಡ್ರಾ ಮಾಡುತ್ತಿರಲಿಲ್ಲ ನಾನು ಒಂದು ಅಂದಾಜು ಮಾಡಿ ನಿಮಗೆ ಲೆಕ್ಕವನ್ನು ಕೊಡುತ್ತೇನೆ 15 crore liters ಸಾರಾಯಿ 2006-07ಕ್ಕೆ ಅಧಿಕೃತ ಮಾರಾಟ ಆಗುತ್ತಿತ್ತು ಆ ಪ್ರಕಾರ ಒಂದು ಲೀಟರ್ ಸಾರಾಯಿಗೆ ಸರ್ಕಾರ ನಿಗದಿಪಡಿಸಿದ ದರ 115 ರೂ ಸಾಗಾಟ ವೆಚ್ಚ ಕಮಿಷನ್ ವಿದ್ಯುತ್ ಬಿಲ್, ಕಟ್ಟಡ ಬಾಡಿಗೆ, enforcement ಇದೆಲ್ಲದರ ವೆಚ್ಚ ಒಂದು ಲೀಟರ್‌ಗೆ 25 ರೂ ಸೇರಿಸಿದರೆ, ಒಟ್ಟು 95 ರೂ ಒಂದು ಲೀಟರ್‌ಗೆ ಲಾಭ ಇದು ಹೂಡಿಕೆ ಮೇಲಿನ ಬಡ್ಡಿ, contract ದಾರನ ಲಾಭ ಹೊರತುಪಡಿಸಿ 90 ರೂ 2006-07ಕ್ಕೆ ರಿಟೇಲ್‌ಗೆ 1,906 ರೂ ಒಂದು ವರ್ಷಕ್ಕೆ ಒಂದೂವರೆ ತಿಂಗಳಿಗೆ ಏನಾಗುತ್ತದೆ, 158 83 ಕೋಟಿ ರೂ ಇದರಿಂದ ಅವರ ಲೆಕ್ಕದ ಪ್ರಕಾರವೇ 300 ಕೋಟಿಗೂ ಮಿಕ್ಕಿದ ನಷ್ಟ contractor ಗೆ ಆಗುತ್ತಿತ್ತು ಅವನು ಲೆಕ್ಕ ಕೊಡುತ್ತಿರಲಿಲ್ಲ ಇದನ್ನು ನೋಡಿದ ಮೇಲೆ ತಾವು ಇದೆಲ್ಲದರ 150+2 ಲೀಟರ್, ಅನಧಿಕೃತ ಆಗುತ್ತಿತ್ತು ಇದು ಶೇಕಡ 70 ರಷ್ಟು IMLಗೆ conversion ಆದರೂ ಸಹ 28,35,648 ಪೆಟ್ಟಿಗೆಗಳು ಬರಬೇಕು Cheaper segment ನಲ್ಲಿ ಕನಿಷ್ಠ ಸರಾಸರಿ 25 ಲಕ್ಷ ಪೆಟ್ಟಿಗೆಗಳು ಬರಬೇಕು ಅದರ ಅರ್ಗ ಡ್ಯೂಟಿ ಒಂದು ಪಾಟ್ ಸ್ಟಿಪರ್‌ಗೆ 735 ರೂ ರಂತೆ 25 ಲಕ್ಷ ಆದರೆ 2196 ಕೋಟಿ ಬರಲೇಬೇಕಾಗುತ್ತದೆ ಆದ್ದರಿಂದ ಶರಾಬು ನಿಷೇಧ ಮಾಡಿದ್ದರಿಂದ ನಿಮಗೆ ನಷ್ಟವಾಗುವುದಿಲ್ಲ ಇಷ್ಟು ಜಾಸ್ತಿಯಾಗುತ್ತದೆ ಆದರ ಇದು ಬಂದ ಮೇಲೆ ಪುನಃ ಸಕೆಂಡ್ಸ್ ಎಲ್ಲಿ ಬಿಡುತ್ತೀರೋ ಎಂದು ನಮಗೆ ಅನುಮಾನ ಪ್ರಾರಂಭವಾಗಿದೆ 13 ಲಕ್ಷ 50,000 ಈಗಿನ ಮಾರಾಟವಾದರೆ, 25,000 X 1,3 ಲಕ್ಷ ಎಂದರೆ, expected ಮಾರಾಟವಾಗಬೇಕಾಗುತ್ತದೆ 30 ಲಕ್ಷ ಪೆಟ್ಟಿಗೆಗಳಿಗೆ ಸೀಮಿತ ಮಾಡಿ, ಉಳಿದದ್ದನ್ನು ಸಕೆಂಡ್ಸ್ ನಲ್ಲಿ ಬಿಡುವಂತಹ ಪರಿಸ್ಥಿತಿ ತರಬೇಡಿ ಬೇರೆ ರಾಜ್ಯಗಳಿಗೆ ಹೋಲಿಸಿ ನೋಡಿದಾಗ ಹೇಗೆ ಆಗುತ್ತದೆ ಎಂದರೆ, ನಮ್ಮಲ್ಲಿ ಅಂಗಡಿಗಳನ್ನು ಕೂಡುವಂಥಾದ್ದು ಜಾಸ್ತಿಯಾಗುತ್ತಿದ ಆಂದ್ರಪ್ರದೇಶದ ಟೋಟಲ್ population 7 5 crores ಅದರಲ್ಲಿ ಅಂಗಡಿಗಳು ಇರುವಂಥಾದ್ದು 7,719 9,800 ಜನಸಂಖ್ಯೆಗೆ ಒಂದು ಅಂಗಡಿ ತಮಿಳುನಾಡಿನಲ್ಲಿ 6 21 ಆದರೆ, ಅಂಗಡಿಗಳು 7,017, average 8,855 ಜನಸಂಖ್ಯೆಗೆ ಒಂದು ಅಂಗಡಿ ಕೇರಳದಲ್ಲಿ 3 18 ಲಕ್ಷ

ಜನಸಂಖ್ಯೆ ಆದರೆ, ಅಂಗಡಿಗಳು 895 ಅದು 35,515 ಕ್ಕೆ ಒಂದು ಅಂಗಡಿ ನಮ್ಮಲ್ಲಿ ಈಗಲೇ, 5,27,88,000 ಜನಸಂಖ್ಯೆಗೆ ಅಂಗಡಿಗಳು ಇರುವುದು 7,645 ಅಂದರೆ, 6905 ಜನಸಂಖ್ಯೆಗೆ ಒಂದು ಅಂಗಡಿ ಈಗಲೇ ಇಷ್ಟು ಹೆಚ್ಚು ಇದೆ ಅದಕ್ಕೋಸ್ಕರ ನೀವು ಅದನ್ನು ಹೆಚ್ಚು ಮಾಡುವುದು ಬಿಟ್ಟು, ಒಂದು ಮುನಿಸಿಪಾಲಿಟಿ ವ್ಯಾಪ್ತಿಯಲ್ಲಿರುವ ಅಂಗಡಿಯನ್ನು ಇನ್ನೊಂದು ಕಡೆ ವರ್ಗಾವಣೆ ಮಾಡುವುದಕ್ಕೆ ಬ್ಯಾನ್ ಇದೆ ನೀವು ಅವರಿಗೆ ವರ್ಗಾವಣೆ ಮಾಡಲಿಕ್ಕೆ ಕೊಟ್ಟಾಗ even ಆಗಿ distribute ಆಗುತ್ತದೆ ಹೆಚ್ಚು ಅಂಗಡಿಗಳನ್ನು ಕೊಡುವುದಕ್ಕೆ ಹೋಗಬೇಡಿ ಅಂಗಡಿಗಳನ್ನು ಅವರೇ ಹಂಚಿಕೊಂಡು ಬೇರೆ ಕಡೆ ಶಿಫ್ಟ್ ಮಾಡಿದಾಗ ಸ್ವಲ್ಪ ವ್ಯವಸ್ಥೆ ಸರಿ ಆಗುತ್ತದೆ ಆದ್ದರಿಂದ ದಯವಿಟ್ಟು ಇದನ್ನು ಒಂದೇ ಪಂಚಾಯಿತಿಯಲ್ಲಿರುವುದನ್ನು ಬೇರೆ ಬೇರೆ ಕಡೆ ಹೋಗುವಂತಹ ಪರಿಸ್ಥಿತಿ ತರಬೇಕು ಆದರೆ ಇನ್ನೊಂದು ಪರಿಸ್ಥಿತಿ ಆಯಿತು ಶರಾಬು ಅಂಗಡಿ, ಮನೆ ಹತ್ತಿರ ಇದ್ದರೆ ಕಡಿಮೆ ಬೆಲೆಯ ಶರಾಬು ಕುಡಿದು ಅವನು ಮನೆಯಲ್ಲಿ ಮಲಗುತ್ತಿದ್ದ 50 ರೂಪಾಯಿಯಾದರೂ ಅವನಿಗೆ ಉಳಿಯುತ್ತಿತ್ತು ಇವತ್ತು ಸಂಪೂರ್ಣ ಹಣವನ್ನು ಅವನು IMLಗೆ ಖರ್ಚು ಮಾಡುತ್ತಾನೆ ಚೀಪರ್ ಬ್ರ್ಯಾಂಡ್ ಕೂಡ ಶರಾಬಿಗಿಂತ ಬೆಲೆ ಜಾಸ್ತಿ ಅವನು ಕುಡಿದು ಮನೆಗೆ ಬರುವ ದಾರಿಯಲ್ಲಿ ಬೀಳುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ ಅದಕ್ಕೋಸ್ಕರ ನೀವು ಈ ಬದಲಾವಣೆಯನ್ನು ನೋಡಬೇಕಾಗುತ್ತದೆ ಶರಾಬು ನಿಲ್ಲಿಸಿದ್ದರಿಂದ ನಿಮಗೆ ಲಾಭವೇ ಹೊರತು ನಷ್ಟವೇನಾಗುವುದಿಲ್ಲ ಇವತ್ತು ಮಾನ್ಯ ಮುಖ್ಯಮಂತ್ರಿಗಳು ಮತ್ತು ಉಪ ಮುಖ್ಯಮಂತ್ರಿಗಳು ಅಧಿಕಾರಿಗಳು ನಮ್ಮ ಮಾತುಗಳನ್ನು ಕೇಳುತ್ತಿಲ್ಲವೆಂದು ಹೇಳಿಕೆಗಳನ್ನು ಕೊಡುತ್ತಿದ್ದೀರಿ ಅಧಿಕಾರಿಗಳು ನಿಮ್ಮ ಮಾತುಗಳನ್ನು ಕೇಳುತ್ತಿಲ್ಲವೆಂದರೆ, ಇವತ್ತು ಕೊಡಗಿನವರು ಎತ್ತಿದ ಪ್ರಶ್ನೆ ಏನು? ನಿಮ್ಮ Revenue Minister ಸದನದಲ್ಲಿ ಏನು ಉತ್ತರವನ್ನು ಕೊಟ್ಟರು, ಅದಕ್ಕೆ ಹೊರತಾಗಿ ಅವರು circular issue ಮಾಡುತ್ತಾರೆ ಈ ಪರಿಸ್ಥಿತಿ ಬಂದರೆ, ನಿಮ್ಮ ಮುಖ್ಯಮಂತ್ರಿಗಳು, ಉಪ ಮುಖ್ಯಮಂತ್ರಿಗಳು ಮತ್ತು ಮಂತ್ರಿಗಳ ಮಾತನ್ನು ಅಧಿಕಾರಿಗಳು ಕೇಳುವುದಿಲ್ಲ, ನಿಮ್ಮ ಸಚಿವ ಸಂಪುಟದವರೇ ನಿಮ್ಮ ಹೇಳಿಕೆಗಳನ್ನು ಕೊಡುತ್ತಿದ್ದಾರೆ ಈ ಪರಿಸ್ಥಿತಿ ಬಂದಾಗ ಶಾಸಕರ ಪರಿಸ್ಥಿತಿ ಏನಾಗಬಹುದು ಎಂದು ಆಲೋಚನೆ ಮಾಡಬೇಕು ನಾವು ಅದನ್ನು ಹಿಡಿತದಲ್ಲಿಟ್ಟುಕೊಳ್ಳುವಂತಹ ಅಬ್ಯಾಸ ಇದೆ

ಕೆಲಸವನ್ನು ಮಾಡಿಸಲಿಕ್ಕೆ ನಮಗೆ ಶಕ್ತಿ ಇದೆ ಸರ್ಕಾರ ಯಾವಾಗ ವೀಕ್ ಆಗುತ್ತದೆ, ಅಧಿಕಾರಿಗಳು ನಿಮ್ಮ ಮಾತನ್ನು ಕೇಳುವುದಿಲ್ಲ ಆ ಒಂದು impression ಅನ್ನು ನೀವು ಜನರಿಗೆ ಕೊಟ್ಟು ಆಗಿದೆ ಪತ್ರಿಕೆಗಳ ಮುಖೇನ ದಿನನಿತ್ಯ ಬರುತ್ತಿದೆ ಅದಕ್ಕೆ ಇಂತಹ ಸರ್ಕಾರ ಬೇಕೇ ಬೇಡವೇ ಎನ್ನುವಂಥಾದ್ದನ್ನು ಹೇಳುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ ಕಾರ್ಯಕ್ರಮಗಳು ಜಾರಿಗೆ ಬರದೇ ಇದ್ದಾಗ ನೀವು ಕಾರ್ಯಕ್ರಮಗಳನ್ನು ಹಾಕಿಕೊಂಡು ಏನು ಪ್ರಯೋಜನ ಎನ್ನುವಂತಹ ಮಾತನ್ನು ನಾನು ತಮಗೆ ಕೇಳುವುದಕ್ಕೆ ಇಚ್ಛೆ ಪಡುತ್ತೇನೆ ಇದು ಸರ್ಕಾರಕ್ಕೆ ಆಗದೇ ಇದ್ದಾಗ ಕೊನೆಗೆ ಏನಾಗುತ್ತದೆ, ಜನ ಜಾಗೃತರಾಗುತ್ತಾರೆ ಕಾನೂನನ್ನು ಕೈಗೆ ತೆಗೆದು ಕೊಳ್ಳುವಂತಹ ಪರಿಸ್ಥಿತಿ ನಿರ್ಮಾಣವಾಗಬಹುದು ಎಂದು ನಾನು ತಮ್ಮ ಗಮನಕ್ಕೆ ತರುತ್ತೇನೆ ಮಾನ್ಯ ರೇವಣ್ಣನವರು ಇಲ್ಲಿ ಇಲ್ಲ ಅವರು ಇಲ್ಲಿ ಇರಬೇಕಾಗಿತ್ತು ವಿದ್ಯುಚ್ಛಕ್ತಿಯ ಸಮಸ್ಯೆ ಮಳೆ ಪ್ರಾರಂಭವಾಗಿದೆ ಅವರು ಇದ್ದಿದ್ದರೆ ಒಳ್ಳೆಯದು ಮೊನ್ನೆ ಒಂದು ಭಾಗವನ್ನು ಮಾನ್ಯ ಮಾಧುಸ್ವಾಮಿ ಯವರು ಹೇಳಿದ್ದಾರೆ ಕೆಪಿಟಿಸಿಎಲ್ ಟೆಂಡರ್ ಬಗ್ಗೆನೂ ಹೇಳಿದರು, PWD ಬಗ್ಗೆನೂ ಹೇಳಿದರು ಆದರೆ, ಪವರ್ ಪೊಸಿಷನ್ ಏನಿದೆ ಎಂದು ಅವರ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ ಅಕ್ಟೋಬರ್ 3ರ ಮೇಲೆ ಗೊತ್ತಾಗುತ್ತದೆ ವಿದ್ಯುಚ್ಛಕ್ತಿಯ ಪರಿಸ್ಥಿತಿ ಅಲ್ಲ ಅವರ ಅಧಿಕಾರದ ಪವರ್

ಶ್ರೀ ಮಲ್ಲಿಕಾರ್ಜುನ ಖರ್ಗೆ ಮಾನ್ಯ ಅಧ್ಯಕ್ಷರೆ, ಈ ಸಾರಿ ಮಳೆ ಚೆನ್ನಾಗಿ ಬಂದಿದೆ ಮಳೆ ಚೆನ್ನಾಗಿ ಬಂದರೂ ಕೂಡ ಪವರ್ ಕಟ್ ಇದ್ದೇ ಇದೆ ಕನಿಷ್ಟ ಈ ಪವರ್ ಕಟ್ ಆದರೆ ಆಗಲಿ 3ನೇ ಅಕ್ಟೋಬರ್‌ಗೆ ಏನು ಪವರ್ ವರ್ಗಾವಣೆ ಮಾಡಬೇಕು, ಆ ಪವರ್ ಕಟ್ ಆಗಬಾರದು ಅದಕ್ಕೆ ಮಾನ್ಯ ಯಡಿಯೂರಪ್ಪನವರು ಸ್ವಲ್ಪ ಹುಷಾರಾಗಿ ನೋಡಿಕೊಂಡು ಹೋದರೆ ಒಳ್ಳೆಯದು 3ನೇ ಅಕ್ಟೋಬರ್‌ಗೆ ವರ್ಗಾವಣೆ ಆಗುವ ಪವರ್ ಕಟ್ ಆದರೆ, ಬಹಳ ಕಷ್ಟ ಯದ್ವಾತದ್ವಾ ಆಗಿಬಿಡುತ್ತದೆ ಏಕೆಂದರೆ ಇಡೀ ರಾಜ್ಯವೇ ಅಲ್ಲೋಲಕಲ್ಲೋಲವಾಗಿ ಬಿಡುತ್ತದೆ ಅದಕ್ಕಾಗಿ ಬಹಳ ಹುಷಾರಾಗಿರಬೇಕು

ಶ್ರೀ ಜಯಪ್ರಕಾಶ್ ಹೆಗ್ಡೆ ಕೆ ಬಹುತೇಕ ಪವರ್ ಶಟ್‌ಡೌನ್ ಆಗಿ ಬ್ಲಾಕ್‌ಔಟ್ ಆಗುವ ಛಾನ್ಸ್ ಇದೆ

ಶ್ರೀ ಜೆ ಸಿ ಮಾಧುಸ್ವಾಮಿ ಮಾನ್ಯ ಅಧ್ಯಕ್ಷರೆ, Power generate ಆಗುವುದೇ frictionನಲ್ಲಿ ಈಗ friction Start ಆಗಿದೆ, ಅಕ್ಟೋಬರ್

ಮೂರರೊಳಗೆ power generate ಆಗುತ್ತದೆ ಅಷ್ಟರೊಳಗೆ ಸಮಸ್ಯೆ ಪರಿಹಾರವಾ ಗುತ್ತದೆ ಈಗ friction start ಆಗಿದೆ ಇನ್ನು ಮುಂದೆ power generate ಆಗುತ್ತದೆ

(11-00 AM)

ಶ್ರೀ ಕೆ ಜಯಪ್ರಕಾಶ್ ಹೆಗ್ಡೆ ಮಾನ್ಯ ಅಧ್ಯಕ್ಷರೆ, ಈಗ ಮಳೆ ಪ್ರಾರಂಭವಾಗಿದೆ ಆದರೆ ಲೋಡ್ ಶೆಡ್ಡಿಂಗ್ ಮಾತ್ರ ನಿಂತಿಲ್ಲ ಬೆಂಗಳೂರಿ ನಲ್ಲಿಯೂ ಲೋಡ್ ಶೆಡ್ಡಿಂಗ್ ನಿಂತಿಲ್ಲ ಬೇರೆ ಕಡೆಯದು ಬಿಡಿ, ಬೆಂಗಳೂರಿ ನಲ್ಲಿಯೂ ನಿಂತಿಲ್ಲ ಅವರು ಹೇಳಿದ್ದೇನು? ಕೆಲವು ಕಡೆಗಳಲ್ಲಿ ಮಾತ್ರ ಲೋಡ್ ಶೆಡ್ಡಿಂಗ್ ಇದೆಯೆಂದು ಮೇನಲ್ಲಿ ಮಾತ್ರ ಲೋಡ್ ಶೆಡ್ಡಿಂಗ್ ಮಾಡಿದ್ದೇವೆ ಎಂದು ಹೇಳಿದ್ದಾರೆ ಆದರೆ ಪರಿಸ್ಥಿತಿ ಆ ರೀತಿ ಇಲ್ಲ Power position is very bad ಕೆ ಪಿ ಸಿ ಎಲ್ ನವರು ವಿದ್ಯುಚ್ಛಕ್ತಿ ಉತ್ಪಾದನೆಯನ್ನು ಸ್ವಲ್ಪ ಹೆಚ್ಚು ಮಾಡಿಕೊಂಡು ಬರುತ್ತಿದ್ದಾರೆ ಆದರೆ ಹೊಸದಾಗಿ ಯಾವುದೇ ಪ್ರಾಜೆಕ್ಟ್‌ಗಳು ಬರುತ್ತಿಲ್ಲ ಕೆ ಪಿ ಸಿ ಎಲ್ ಗೆ ಸುಮಾರು ಎರಡ್ಮೂರು ಸಾವಿರ ಕೋಟಿ ರೂಪಾಯಿಗಳನ್ನು ಕೆ ಪಿ ಟಿ ಸಿ ಎಲ್ ನವರು ಕೊಡಬೇಕಾಗಿದೆ ಕೆ ಪಿ ಟಿ ಸಿ ಎಲ್ ಗೆ ಸರ್ಕಾರದವರು ಕೊಡಬೇಕು ಅದನ್ನು ಸರ್ಕಾರದವರು ಕೊಡುತ್ತಿಲ್ಲ ಈ ಬಾರಿ ಬಜೆಟ್‌ನಲ್ಲಿ 2100 ಕೋಟಿ ರೂಪಾಯಿಗಳನ್ನೇನೋ ಇಟ್ಟಿದ್ದಾರೆ ಅದು ಸಂಪೂರ್ಣ ಸಬ್ಸಿಡಿಗೆ ಹೋಗುತ್ತದೆಯೇ ಹೊರತು ಬೇರೆ ಯಾವ ಹೊಸ ಪ್ರಾಜೆಕ್ಟ್‌ಗಳನ್ನು ತರುವುದಕ್ಕೆ ಸಾಧ್ಯವಾಗುತ್ತಿಲ್ಲ ಇದು ಇಂದಿನ ಪರಿಸ್ಥಿತಿ ಇರುವುದು ಈ ಪವರ್ ಪೊಸಿಶನ್ ಬಗ್ಗೆ ಸರ್ಕಾರದವರೇ ಹೇಳಿರುವುದು ನನ್ನ ಹತ್ತಿರ ಇದೆ 2006–07ರಲ್ಲಿ ಡಿಮ್ಯಾಂಡ್ ಇದ್ದದ್ದು 8824 M W , ಆದರೆ ಅವೈಲಬಲಿಟಿ 6732 M W , ಅಂದರೆ ಗ್ಯಾಪ್ 2116 M W , 2007–08ನಲ್ಲಿ 9373 M W ಡಿಮ್ಯಾಂಡ್ ಇದ್ದರೆ 7578 ಅವೈಲಬಲಿಟಿ ಇತ್ತು, ಅಂದರೆ ಗ್ಯಾಪ್ 1795 M W ಗ್ಯಾಪ್ ಇತ್ತು ಈ ವರ್ಷದ್ದು, Projected ಹೇಳುತ್ತೇನೆ 2008–09ಕ್ಕೆ 9971 M W ಡಿಮ್ಯಾಂಡ್ ಇದೆ, ಅವೈಲಬಲಿಟಿ 7472 M W , ಅಂದರೆ ಗ್ಯಾಪ್ 2499 M W , 2009–10ನಲ್ಲಿ ಡಿಮ್ಯಾಂಡ್ ಇರುವಂಥದ್ದು 10656 M W , ಅವೈಲಬಲಿಟಿ ಇರುವಂಥದ್ದು 8401 M W , ಅಂದರೆ ಗ್ಯಾಪ್ 2455 M W ಇರುತ್ತದೆ 2010–11 ನಲ್ಲಿ 11370 M W ಡಿಮ್ಯಾಂಡ್ ಇದ್ದರೆ ಅವೊತ್ತು ಅವೈಲಬಲ್

ಇರುವಂಥದ್ದು 8401 MW, ಅಂದರೆ 2916 MW ಶಾರ್ಟ್‌ಫಾಲ್ ಇರುತ್ತದೆ 2011-12ಕ್ಕೆ 12176 MW ಡಿಮ್ಯಾಂಡ್ ಬರುವುದಾದರೆ ಅವೈಲಬಲ್ ಪುನಃ 8401 MW ಮಾತ್ರ ಇರುತ್ತದೆ ಅವೈಲಬಲ್ ಜಾಸ್ತಿಯಾಗುವುದೇ ಇಲ್ಲ ಅವೊತ್ತು ಗ್ಯಾಪ್ ಎಷ್ಟಿರುತ್ತದೆಂದರೆ 3775 MW ಇರುತ್ತದೆ ಅಷ್ಟು ಶಾರ್ಟ್‌ಫಾಲ್ ಇರುತ್ತದೆ ಪರಿಸ್ಥಿತಿ ಏನಾಗುತ್ತದೆ ನೋಡಿ ಏಕೆಂದರೆ ನೀವು ಕೊಟ್ಟಿರುವುದೆಲ್ಲವೂ taking into consideration, ಇವರೇನು ಪ್ರಾಜೆಕ್ಟ್‌ಗಳು ಬರುತ್ತದೆ ಎಂದು ಹೇಳಿದ್ದಾರೆ ಅವೆಲ್ಲವೂ ಬಂದರೆ ಇಷ್ಟು ಶಾರ್ಟ್‌ಫಾಲ್ ಇರುತ್ತದೆ ಒಂದು ವೇಳೆ ಬರದಿದ್ದರೆ total black-out ಆಗುವಂಥ ಪರಿಸ್ಥಿತಿ ನಿರ್ಮಾಣವಾಗುತ್ತದೆಂದು ಹೇಳಬಯಸುತ್ತೇನೆ ಇವರು ಸುಮಾರು ಟೆಂಡರ್‌ಗಳನ್ನು ಕರೆದಿದ್ದಾರೆ

ಶ್ರೀ ಕೆ.ಆರ್.ರಮೇಶ್ ಕುಮಾರ್ ಮಾನ್ಯ ಅಧ್ಯಕ್ಷರೆ, ಹಿರಿಯ ಸದಸ್ಯರಾದ ಕೆ ಜಯಪ್ರಕಾಶ್ ಹೆಗಡೆಯವರು ಮಾತನಾಡುತ್ತಿದ್ದಾರೆ ಅವರು ಮಾತನಾಡುತ್ತಾ ಪವರ್ ವಿಷಯಕ್ಕೆ ಸಂಬಂಧಪಟ್ಟಂತೆ he is making a such a serious observation Upto 2015 ಇವರು Contemplate ಮಾಡಿರತಕ್ಕಂಥ ಎಲ್ಲ ಪ್ರಾಜೆಕ್ಟ್‌ಗಳೂ ಕೂಡ ಯಶಸ್ವಿಯಾಗಿ ನಿರ್ವಹಣೆ ಯಾದರೆ even than ನಮಗೆ ಎರಡು ಸಾವಿರ MW ನಷ್ಟು ಪವರ್ ಶಾರ್ಟೇಜ್ ಇರುತ್ತದೆ ಒಂದು ವೇಳೆ ಈ ಅಂದುಕೊಂಡಿರತಕ್ಕಂಥ ಎಲ್ಲಾ ಪ್ರಾಜೆಕ್ಟ್‌ಗಳಲ್ಲಿ ಯಾವುದಾದರೂ ಒಂದು ಪ್ರಾಜೆಕ್ಟ್ ಮಧ್ಯ fissle out ಆದರೆ ಸಂಪೂರ್ಣವಾಗಿ ನಾವು ಕತ್ತಲಲ್ಲಿ ಇರಬೇಕಾಗುತ್ತದೆ ಇಂಥ ವಿಷಯಕ್ಕೆ ಸಂಬಂಧಪಟ್ಟಂತೆ ಉತ್ತರ ಕೊಡುವವರು ಇಲ್ಲಿ ಯಾರು? Is there anybody from KPC here? ನಾನು ಏನು ಹೇಳುತ್ತೇನೆಂದರೆ, ಎಲ್ಲಾ ವಿಷಯಗಳಲ್ಲೂ ನಾವು ಸರ್ವಜ್ಞರಾಗಿರಬೇಕೆಂದೇನೂ ಇಲ್ಲ ಯಾರು ಅಲ್ಲಿ ಕುಳಿತುಕೊಂಡರೂ we have to take the assistance from the officers and do it ಆ ಕನಿಷ್ಟ ಕೆಲಸ ಮಾಡುವುದಕ್ಕೆ ಯಾರಾದ ರೊಬ್ಬರು ಇಲ್ಲಿ ಇರಬೇಕಲ್ಲ ಕೆ ಪಿ ಸಿ ಯವರಾದರೂ ಯಾರಾದರೂ ಒಬ್ಬರು ಇಲ್ಲಿ ಇದ್ದು, ಈ ತರಹದ observation ಮಾಡಿದ್ದಾರೆ ಎಂದು ಅಂಥ feedback ಕೊಟ್ಟರೆ ಉತ್ತರ ಕೊಡುವಾಗ ಅದನ್ನು ಕವರ್ ಮಾಡಿ ಹೇಳಬಹುದು ಎಲ್ಲಾ ಮೆಂಬರ್ಸ್ ಹೇಳಿದ ಎಲ್ಲಾ ಇಶ್ಯೂಸ್‌ಗಳನ್ನೂ ಕವರ್ ಮಾಡುವುದಕ್ಕೆ

ಆಗುವುದಿಲ್ಲ ಆದರೆ ಕಡೇಪಕ್ಷ ಇಂಥ ಮೇಜರ್ ಇಶ್ಯೂಸ್ like this, concerning the state, otherwise why should we speak?

ಶ್ರೀ ಜಿ ವಿ ಶ್ರೀರಾಮರೆಡ್ಡಿ ಮಾನ್ಯ ಅಧ್ಯಕ್ಷರೆ, 29 ಜನ ಮಂತ್ರಿಗಳು ಇಲ್ಲಿ ಇರಬೇಕಾಗಿರುವ ಕಡೆ ಇಲ್ಲ ಎಷ್ಟು ಜನ ಇದ್ದಾರೆ ನೋಡಿ

ಶ್ರೀ ಕೆ ಆರ್ ರಮೇಶ್ ಕುಮಾರ್ ರೆಡ್ಡಿಯವರೆ, ಅವರ ವಿಚಾರ ಬಿಟ್ಟುಬಿಡಿ ನಾನು ಏನು ಹೇಳುತ್ತೇನೆಂದರೆ ಮಂತ್ರಿಗಳು ಬರಲಿ, ಬರದೇ ಇರಲಿ, ಅವರಿಗೇನೇನೋ ಕೆಲಸ ಇರುತ್ತದೆ ಎಂದು ತಿಳಿದುಕೊಳ್ಳೋಣ ಏಕೆಂದರೆ ಅವರು ಮಂತ್ರಿಗಳು ಕಡೇ ಪಕ್ಷ observe ಮಾಡುವುದಕ್ಕೆ ಯಾರಾದರೂ ಇರಬೇಕಲ್ಲವೆ? Please answer me this question ಯಡಿಯೂರಪ್ಪನವರೆ

ಶ್ರೀ ವಾಟಾಳ್ ನಾಗರಾಜ್ ಆ ವಿಚಾರದಲ್ಲಿ ಯಡಿಯೂರಪ್ಪನವರಿಗೆ ನಾನು ಅಭಿನಂದನೆ ಸಲ್ಲಿಸುತ್ತೇನೆ ಏಕೆಂದರೆ ಎಲ್ಲರ ಭಾಷಣವನ್ನು ಕೂಡ ಅವರು ಗಂಭೀರವಾಗಿ ಸದನದಲ್ಲಿ ಕುಳಿತು ಕೇಳಿದ್ದೀರಿ ನನಗೆ ಬಹಳ ಸಂತೋಷವಾಯಿತು ನಿಜಕ್ಕೂ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಇದು ಒಳ್ಳೆಯ ಅಧ್ಯಾಯ 29 ಬೇಡಿಕೆಗಳಿವೆ ಅಧ್ಯಕ್ಷರೆ, ತಾವು ಬಹಳ ಹೊತ್ತು ಕುಳಿತುಕೊಳ್ಳುತ್ತೀರಿ ನಾವು ಕೂಡ ಬಹಳ ಹೊತ್ತು ಕುಳಿತಿರುತ್ತೇವೆ ನಿನ್ನೆ ಕೂಡ ಸಾಯಂಕಾಲ ಕೊನೆಯ ಪ್ರಶ್ನೆ ಮುಗಿದ ಮೇಲೂ ಕೂಡ ನಾವು ಕುಳಿತಿದ್ದೆವು ಈಗ ಇಲ್ಲಿ 29 ಬೇಡಿಕೆಗಳಿವೆ ಕನಿಷ್ಠ ಒಂಭತ್ತು ಜನ ಮಂತ್ರಿಗಳಾದರೂ ತಮ್ಮ ಬೇಡಿಕೆಗಳ ಬಗ್ಗೆ ಕೇಳಬೇಕಲ್ಲವೆ? ಹಣಕಾಸಿನ ವಿಚಾರದಲ್ಲಿ ಆ ಇಲಾಖೆಯ ಮಂತ್ರಿಗಳಾದ ಮಾನ್ಯ ಯಡಿಯೂರಪ್ಪನವರು ನೋಟ್ ಮಾಡಿಕೊಳ್ಳುತ್ತಿದ್ದಾರೆ ಆದರೆ ಎಲ್ಲರದನ್ನೂ ಯಡಿಯೂರಪ್ಪನವರ ಮೈಮೇಲೆ ಹಾಕುವುದಕ್ಕೆ ಆಗುವುದಿಲ್ಲ

ಅಧ್ಯಕ್ಷರು ಮಂತ್ರಿಗಳನ್ನು ಕರೆಸುತ್ತಾರೆ, ತಾವು ಮಾತನಾಡಿ

ಶ್ರೀ ಕೆ ಆರ್ ರಮೇಶ್‌ಕುಮಾರ್ 1974–75, 75–76ರಲ್ಲಿ ಕರ್ನಾಟಕದಲ್ಲಿ ಪವರ್‌ನಲ್ಲಿ ಸರ್‌ಪ್ಲಸ್ ಇತ್ತು ದೇವರಾಜ ಅರಸು ಸರ್ಕಾರ ಇದ್ದಾಗ ಈ ಸ್ಟೇಟ್ ಸರ್‌ಪ್ಲಸ್ ಇತ್ತು ಆಗ ನಾವು ಇಂಡಸ್ಟ್ರಿಯಲಿಸ್ಟ್‌ಗಳನ್ನು ಕೈಬೀಸಿ ಕರೆದೆವು ನಮ್ಮ ರಾಜ್ಯ ಇಂಡಿಯಾ ದೇಶದಲ್ಲಿಯೆ ಮೂರನೇ ಸ್ಥಾನದಲ್ಲಿತ್ತು ಬನ್ಸಿಲಾಲ್‌ರ ನಾಯಕತ್ವದಲ್ಲಿ Haryana ಮೊದಲನೆಯ ರ್‍ಯಾಂಕ್ ನಲ್ಲಿತ್ತು ಇವೊತ್ತು 2016 ಆದರೂ ಕೂಡ ನಾವು ಶಾರ್ಟ್‌ಫಾಲ್‌ನಲ್ಲಿ

ಇರುತ್ತೇವೆ ಎಂದು ಹೇಳುತ್ತೀರಿ, ಒಬ್ಬ ವಿರೋಧ ಪಕ್ಷದಲ್ಲಿರುವ ಮಾಜಿ ಮಂತ್ರಿಗಳಾದ ಒಬ್ಬ ಸೀನಿಯರ್ ಮೆಂಬರ್ former Minister, he is making his observations ಇಂಥ ಸಮಯದಲ್ಲಿ ಅವರಿಗೇನು ಕನ್‌ಸರ್ನ್ ಆದರೂ ಈ ಬಗ್ಗೆ ಇದೆಯೋ ಇಲ್ಲವೋ ಉತ್ತರ ಹೇಳುವುದಕ್ಕೆ? ಅಥವಾ ಇದೊಂದು ritual ಆಗಿದೆ ಇವರುಗಳೆಲ್ಲಾ ಕುಳಿತಿದ್ದಾರಪ್ಪಾ, ಬೆಲ್ ಹಾಕಿದ್ದಾರೆ, ಏನೋ ಒಂದಷ್ಟು ಹೇಳುತ್ತಾರೆ, ನಮಗೆ ತೋಚಿದ್ದು ಹೇಳಿ ನಾವು ಡಿಮ್ಯಾಂಡ್ಸ್ ಪಾಸ್ ಮಾಡಿಕೊಳ್ಳೋಣ ಎನ್ನುವಂತಿದೆ ಹಾಗೆಯೇ ನೀವು ಡಿಮ್ಯಾಂಡ್ಸ್ ಪಾಸ್ ಮಾಡಿಕೊಳ್ಳಿ ನಾನು ಏನು ತಮ್ಮಲ್ಲಿ ಅತ್ಯಂತ ನಮ್ರತೆಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆಂದರೆ ಡಿಮ್ಯಾಂಡ್ಸ್‌ನ್ನು ಬಿಟ್ಟುಬಿಡಿ If that is so ಬೇರೆ ಯಾವುದಾದರೂ ಬಿಸಿನೆಸ್ ಇದ್ದರೆ ಮಾಡಿಕೊಳ್ಳಿ ಏಕೆ ಬೇಕು ಈ ರೀತಿ, ನಾಮಕಾವಸ್ತೆ ಮಾಡುವುದಾದರೆ, ನಾವಂತೂ ಅತ್ಯಂತ ಶ್ರದ್ಧೆಯಿಂದ ಎಲ್ಲವನ್ನೂ ನೋಡಿಕೊಂಡು ಬಂದು ಇಲ್ಲಿ ಕುಳಿತಿರುತ್ತೇವೆ ಆದರೆ this is the disrespect shown to the House

ಅಧ್ಯಕ್ಷರು ಮಂತ್ರಿಗಳು ಬರುತ್ತಾರೆ, ಮಾತನಾಡಿ

ಶ್ರೀ ಜಿ ವಿ ಶ್ರೀರಾಮರೆಡ್ಡಿ ಪ್ರತಿ ದಿನ ಬೇಡಿಕೆಗಳ ಮೇಲೆ ಚರ್ಚೆಯಾದಾಗ ಯಡಿಯೂರಪ್ಪರವರೊಬ್ಬರನ್ನು ಬಿಟ್ಟರೆ ಬೇರೆ ಯಾವ ಮಂತ್ರಿಗಳೂ ಇಲ್ಲಿ ಇಲ್ಲ

ಶ್ರೀ ವಾಟಾಳ್ ನಾಗರಾಜ್ ಯಡಿಯೂರಪ್ಪರವರೊಬ್ಬರನ್ನು ಬಿಟ್ಟರೆ ಬೇರೆ ಯಾರನ್ನೂ ಕಾಣುತ್ತಿಲ್ಲ ಇಲ್ಲಿಯೇ ಮುಖ್ಯಮಂತ್ರಿಗಳು ಇದ್ದಾರೆ ಆದರೆ ಅವರು ಎಷ್ಟು ಸಾರಿ ಸದನಕ್ಕೆ ಬಂದು ಕುಳಿತಿದ್ದಾರೆ ಹೇಳಲಿ ಮಾನ್ಯ ಅಧ್ಯಕ್ಷರೆ, ತಾವೇ ಹೇಳಿ ಸಾರ್ ತಾವು ಹೇಳಿಬಿಟ್ಟರೆ ನಾವು ಸಂತೋಷವಾಗಿ ಕೇಳುತ್ತೇವೆ ಮುಖ್ಯಮಂತ್ರಿಗಳು ಎಷ್ಟು ಸಾರಿ ಬಂದಿದ್ದಾರೆ? ಎಷ್ಟು ಗಂಟೆಗಳ ಕಾಲ ಅವರು ಕುಳಿತುಕೊಂಡಿದ್ದಾರೆ? ಅವರಿಗೆ ಈ ಸದನದ ಬಗ್ಗೆ ಎಷ್ಟು ಕಾಳಜಿ ಇದೆ? ಮುಖ್ಯಮಂತ್ರಿಗಳ ಬೇಡಿಕೆ ಬೇರೆ ಇದೆ ಅವರು ಇರಬೇಕಲ್ಲವೆ?

ಅಧ್ಯಕ್ಷರು ಆಯಿತು, ಮಂತ್ರಿಗಳನ್ನು ಕರೆಸೋಣವಂತೆ ಹೆಗಡೆಯವರೆ, ತಾವು ಮಾತನಾಡಿ

ಶ್ರೀ ಕೆ ಜಯಪ್ರಕಾಶ್ ಹೆಗಡೆ ಮಾನ್ಯ ಅಧ್ಯಕ್ಷರೆ, ನಾನು ಈಗ ಹೇಳುತ್ತಿರುವುದು ಎಲ್ಲಾ ಸದಸ್ಯರ ಕನ್‌ಸರ್ನ್ ಆಗಿರುವಂಥದ್ದು ಇವರು

ಟೆಂಡರ್‌ನ್ನು ಕರೆಯುತ್ತಾರೆ ಎಲ್ಲಾ ಟೆಂಡರ್ಸ್ last date for Filing applications ಹೊಸ ಹೊಸ ಪ್ರಾಜೆಕ್ಟ್‌ಗಳಿಗೆ ಸಂಬಂಧಪಟ್ಟಂತೆ ಟೆಂಡರ್ ಅಪ್ಲಿಕೇಶನ್ ಫಿಲ್ ಮಾಡಿ ಕೊಡುವುದಕ್ಕೆ 27-3-2007 ಕಡೆಯ ದಿನವಾಗಿತ್ತು ಇಲ್ಲಿ ನಾನು ಮೂರನ್ನು ತೋರಿಸುತ್ತೇನೆ ಏಕೆಂದರೆ ಇಲ್ಲಿ ಎಲ್ಲವನ್ನು ಓದಿದರೆ ಕೇಳಬೇಕಾದವರ್‍ಯಾರು ಈಗ ಇಲ್ಲಿ ಇಲ್ಲವಲ್ಲ ಬೇರೆ ಬೇರೆ ಕಡೆಯದ್ದು, ಬೆಳಗಾಂ, ಘಟಪ್ರಭ, ಹೀಗೆ ಯಾವುದಕ್ಕೆ ಟೆಂಡರ್ ಹಾಕಿದ್ದಾರೆ, ಯಾವ ಹೊಸ ಪ್ರಾಜೆಕ್ಟ್‌ಗಳು ಬರುತ್ತದೆ ಎಂಬುದನ್ನು ಇವರು ಸದನಕ್ಕೆ ಹೇಳಬೇಕಲ್ಲ ಯಾವುದೂ ಬಂದಿಲ್ಲ ಎಂದು ನನಗೆ ಬಂದ ಮಾಹಿತಿ Mid term Basis ನಲ್ಲಿ ಕೆಲವು ಹೇಳುತ್ತಾರೆ ಅದರಲ್ಲಿ ಒಂದು 2500 M W, ಇನ್ನೊಂದು 3000 M W, ಇನ್ನೊಂದು 1500 M W, ಮಾನ್ಯ ಅಧ್ಯಕ್ಷರೆ, ಬಾರಿ ಇಂಟರೆಸ್ಟಿಂಗ್ ಎಂದರೆ, ನಮ್ಮ ಡಿಮ್ಯಾಂಡ್ ಎಷ್ಟಿದೆಯೆಂದು ತೋರಿಸಿದ್ದಾರೆ ಗೊತ್ತೆ, ಶಾರ್ಟೇಜ್ ಎಷ್ಟು ಎಂಬುದರ ಬಗ್ಗೆ 2010-11 ಕ್ಕೆ 3775 M W, ಎಂದು ಹೇಳುತ್ತಾರೆ ನಮ್ಮ ರಿಕ್ವೈರ್‌ಮೆಂಟ್ಸ್ 3897 ಮೆಗಾ ಯೂನಿಟ್ಸ್ ಎಂದು ಹೇಳುತ್ತಾರೆ ಅದರಲ್ಲಿ ಕಡಿಮೆ ತೋರಿಸಿ ಶಾರ್ಟ್‌ಫಾಲ್ ಬಾರೀ ಕಡಿಮೆ ತೋರಿಸುವುದಕ್ಕೆ ಹೋಗುತ್ತಾರೆ ಇತ್ತೀಚೆಗೆ ಇವರು ನಿಜವಾದ ಡಿಮ್ಯಾಂಡ್ ಎಷ್ಟಿದೆ ಎಂಬುದನ್ನು ತೋರಿಸುವುದಿಲ್ಲ ಇವತ್ತಿಗೆ ಶಾರ್ಟ್‌ಫಾಲ್ ಜನವರಿ 2007ಕ್ಕೆ 3897 ಎಂದು ಹೇಳುತ್ತಾರೆ ಏಪ್ರಿಲ್ 2006 ರಿಂದ 2007 ರವರೆಗೂ ಪುನಃ ಅದನ್ನೇ ಹೇಳಿದ್ದಾರೆ, ಟೋಟಲ್ ಹೇಳುತ್ತಾರೆ 32470, ಅಂದರೆ ಅವೈಲಬಲಿಟಿ ಕಡಿಮೆಯಾಗುತ್ತಾ ಹೋಗುತ್ತದೆ ನಮ್ಮ ರಾಜ್ಯ ಯಾವ ಪೊಸಿಶನ್‌ನಲ್ಲಿದೆ ಗೊತ್ತೆ? ಇವೊತ್ತು ಪವರ್ ಪ್ರೊಡಕ್ಷನ್‌ನಲ್ಲಿ ಇಡೀ ದೇಶದಲ್ಲಿ ನಮ್ಮ ರಾಜ್ಯ 7ನೇ ಸ್ಥಾನದಲ್ಲಿದೆ ಹಿಂದಿನ ವರ್ಷಗಳದ್ದನ್ನು ನೋಡಿದರೆ ನಾವು 2ನೇ, 3ನೇ ಸ್ಥಾನಗಳಲ್ಲಿದ್ದೆವು ಇವೊತ್ತು ನಾವು 7 ನೇ ಸ್ಥಾನದಲ್ಲಿದ್ದೇವೆ ನೆಕ್ಸ್ಟ್ ಈಯರ್‌ನಲ್ಲಿ ಎಷ್ಟನೇ ಸ್ಥಾನದಲ್ಲಿರುತ್ತೇವೋ ಗೊತ್ತಿಲ್ಲ ಏಕೆಂದರೆ ನಮ್ಮ ಅನೇಕ ಪ್ರಾಜೆಕ್ಟ್‌ಗಳನ್ನು ಸ್ಯಾಂಕ್ಷನ್ ಮಾಡಿರುವುದನ್ನು ಸೇರಿಸಿಕೊಂಡು ನಾನು ಪೊಸಿಶನ್ ಬಗ್ಗೆ ಹೇಳಿರುವುದು ಈಗಾಗಲೇ ಹಿಮಾಚಲ ಪ್ರದೇಶದವರು, ಅಸ್ಸಾಂ, ಸಿಕ್ಕಿಂನವರೆಲ್ಲರೂ ದೊಡ್ಡ ದೊಡ್ಡ ಹೈಡಲ್ ಪ್ರಾಜೆಕ್ಟ್‌ಗಳನ್ನು ಮಾಡುತ್ತಿದ್ದಾರೆ

ಶ್ರೀ ಕುಮಾರ್ ಬಂಗಾರಪ್ಪ ಹೆಗಡೆಯವರೆ ಒಂದ್ನಿಮಿಷ, ಮಾನ್ಯ ಉಪ ಮುಖ್ಯಮಂತ್ರಿಗಳು ಇಲ್ಲಿ ಇದ್ದಾರೆ ನಮ್ಮ ಮೇಜರ್ ಲಿಫ್ಟ್ ಇರಿಗೇಶನ್

Project ಗಳೇನಿವೆ lift Irregation ಅದರಲ್ಲಿ ನಾವೇನು ನೀರನ್ನು ಲಿಫ್ಟ್ ಮಾಡುತ್ತೇವೆಯೋ ಅಲ್ಲಿ raising mains ಯೂನಿಟ್ಸ್‌ನೊಳಗೇ ಪವರ್ ಯೂನಿಟ್ ಅನ್ನು ಫಿಕ್ಸ್ ಮಾಡುವಷ್ಟು ಕೆಪ್ಯಾಸಿಟಿ ಇವೊತ್ತಿನ ಟೆಕ್ನಾಲಜಿಯಲ್ಲಿ ಬೆಳೆದಿದೆ ಅಂದರೆ ನಾವು Power generation ಮೋಟಾರ್‌ಗಳಿಂದ ನೀರನ್ನು ಲಿಫ್ಟ್ ಮಾಡಿ ನಾವು ಮತ್ತೊಂದು raising mains ಕಳುಹಿಸುತ್ತೇವೋ ಆ U ಟರ್ನ್‌ನಲ್ಲಿಯೇ ನಮಗೆ ಪವರ್ ಜನರೇಶನ್ ಅನ್ನು ಮಾಡತಕ್ಕಂಥ ಯೂನಿಟ್ಸ್‌ಗಳು ಇವೊತ್ತಿವೆ ಅಲ್ಲಿ ಟರ್ಬೈನ್ಸ್‌ಗಳನ್ನು ಫಿಕ್ಸ್ ಮಾಡಿ ಆ ಯೂನಿಟ್ಸ್‌ಗೆ ಅಲ್ಲಿಂದ ಪವರ್ ಜನರೇಟ್ ಮಾಡಬಹುದು ಇಂಥದ್ದನ್ನು ಮಾಡಿರುವುದರಲ್ಲಿ ಎಕ್ಸ್‌ಪರ್ಟ್ಸ್‌ಗಳು ಫಿನ್ ಲ್ಯಾಂಡ್‌ನಲ್ಲಿದ್ದಾರೆ ಚೈನಾ ದೇಶದಲ್ಲಿ ಲಿಫ್ಟ್ ಇರಿಗೇಶನ್ ಅನ್ನು ಕಂಪ್ಲೀಟ್ ಆಗಿ ಯೂಸ್ ಮಾಡಿಕೊಂಡು ಮಿನಿ ಹೈಡಲ್ ಪ್ರಾಜೆಕ್ಟ್‌ಗಳನ್ನು ಮಾಡಿದ್ದಾರೆ ಆದರೆ ನಮ್ಮಲ್ಲಿ ಎಲ್ಲೆಲ್ಲಿ ಲಿಫ್ಟ್ ಇರಿಗೇಶನ್‌ಗಳನ್ನು ಮಾಡಿದ್ದೇವೆ ಅಲ್ಲಿ ಇನ್ನೂ ಕೂಡ - ನಮ್ಮ ಸಲಕರಣೆಗಳನ್ನು ಮಾರಿಕೊಂಡು, ನಮ್ಮೆಲ್ಲಾ ಯೂನಿಟ್ಸ್‌ಗಳನ್ನು ಕಿತ್ತುಕೊಂಡು ಹೋಗುವ ಲೆವಲ್‌ಗೆ ಮಾಡಿಕೊಳ್ಳುತ್ತಿದ್ದೇವೆಯೇ ಹೊರತು ನಾವು ಅದನ್ನು ಅಪ್‌ಡೇಟ್ ಮಾಡಿಕೊಂಡು ಅದರಿಂದ ಪವರ್ ಜನರೇಶನ್ ಮಾಡಬೇಕು ಎನ್ನುವುದನ್ನು ನಾವು ಇವೊತ್ತಿನವರೆಗೂ ಪ್ರಯತ್ನ ಮಾಡುತ್ತಿಲ್ಲ ನಾವು ಅದನ್ನು update ಮಾಡಿಕೊಂಡು, ಅದರಿಂದ Power generation ಮಾಡಬೇಕೆಂದು ನಾವು ಇವತ್ತಿನವರೆಗೂ ಕೂಡ ಪ್ರಯತ್ನ ಮಾಡುತ್ತಿಲ್ಲ Medium Irrigation and Minor Irrigationನಲ್ಲಿ ಏನೇನು lift irrigation Projects ಮಾಡುತ್ತಿದ್ದೇವೆ, ದಯಮಾಡಿ ಈ power projects ಅನ್ನು compulsory ಆಗಿ adopt ಮಾಡುವಂತಹ ಅವಶ್ಯಕತೆಗಳು ಬಹಳ ಇವೆ

ಶ್ರೀ ಕೆ ಜಯಪ್ರಕಾಶ್ ಹೆಗ್ಡೆ Lift Irrigationಗೆ Minor Irrigation ನವರು power billನ ದುಡ್ಡು ಕೊಡಬೇಕು ಅವರು ಕಟ್ಟಲಿಲ್ಲವೆಂದು power cut ಮಾಡಿ ಅದರಿಂದ ರೈತರಿಗೆ ತೊಂದರೆಯಾಗುತ್ತದೆ ಅವರು book adjustment ಮಾಡುವುದು ಬಿಟ್ಟು ಯಾವುದೇ ವಿದ್ಯುಚ್ಛಕ್ತಿ ಕಂಪನಿಯವರು power cut ಮಾಡುವುದಕ್ಕೆ ಹೋಗಬಾರದು ಅದರ ಬಗ್ಗೆ ಸರ್ಕಾರ ತೀವ್ರವಾಗಿ ಗಮನವನ್ನು ಹರಿಸಬೇಕಾಗುತ್ತದೆ ಇಲ್ಲದಿದ್ದರೆ ನಮ್ಮ

ರೈತರಿಗೆ ತೊಂದರೆ ಯಾಗುತ್ತದೆ ಆ ಮೇಲೆ ಹೊಸ projects ಬರುವುದಕ್ಕೆ ಎಲ್ಲಾ ಕಡೆಗೂ ವಿರೋಧ ಪ್ರಾರಂಭವಾಗುತ್ತದೆ Thermal Projectಗೆ ಎಲ್ಲಾ ಕಡೆಗೆ ಪ್ರಾರಂಭವಾಗಿದೆ ಆದರೆ ಮಾನ್ಯ ಮಂತ್ರಿಗಳ ಮನೆಯವರು ವಿರೋಧ ಮಾಡುವುದು ವಿಶೇಷವಾದ ಸಂಗತಿ ಮೈಸೂರಿನಲ್ಲಿ ಮಾನ್ಯ ಮಹದೇವ ಪ್ರಸಾದ್‌ರವರ ಮನೆಯವರೇ ವಿರೋಧ ಮಾಡುತ್ತಿದ್ದಾರೆ ಅವರು ಹೇಳಿಕೆಯನ್ನು ಕೊಟ್ಟಿರುವುದು ಏನೆಂದರೆ she has independent thinking ನನಗೆ ನನ್ನ ಮನೆಯವರಿಗೆ convince ಮಾಡುವುದಕ್ಕೆ ಸಾಧ್ಯವಾಗದಿದ್ದ ಮೇಲೆ ಊರಿನವರಿಗೆ ನಾನು ಏನು convince ಮಾಡುತ್ತೇನೆ ಎನ್ನುವ ಪ್ರಶ್ನೆಯು ಬರುತ್ತದೆ ಅದಕ್ಕೋಸ್ಕರ ಸರ್ಕಾರದಲ್ಲಿ ಇದ್ದವರು

ಶ್ರೀ ಮಲ್ಲಿಕಾರ್ಜುನ ಖರ್ಗೆ ಮಾನ್ಯ ಅಧ್ಯಕ್ಷರೆ, ಅನೇಕ ಸಾರಿ ಏನಾಗುತ್ತದೆ ಎಂದರೆ ಗಂಡ ಹೆಂಡತಿ ವಿಚಾರ ಬೇರೆ ಬೇರೆ ಇದ್ದರೂ ಕೂಡ, ಅವರು ಬೇರೆ ಬೇರೆ ಧರ್ಮಕ್ಕೆ ಸೇರಿದವರಾಗಿದ್ದು ಲಗ್ನ ಮಾಡಿಕೊಂಡಿದ್ದರೂ ಕೂಡ ಅದಕ್ಕೆ ವಿಶೇಷವಾದಂತಹ ಕಾನೂನಿದೆ ಅದು Special Marrige Act ಆ Act ಕೆಳಗೆ ಯಾರು ಲಗ್ನ ಮಾಡಿಕೊಳ್ಳುತ್ತಾರೆ ಅವರವರ ವಿಚಾರಗಳು ಭಿನ್ನವಿರುತ್ತದೆ ಆದರೆ ಅವರು ಗಂಡ ಹೆಂಡತಿಯಾಗಿ ಬದುಕಬಹುದು ಹಾಗೂ ಬಾಳಬಹುದು Marriage is held valid ಅದಕ್ಕೆ ನೀವು ಅವರಿಗೆ ಏಕೆ exemption ತೆಗೆದುಕೊಳ್ಳುತ್ತೀರಿ? Convince ಮಾಡುವುದಕ್ಕೆ ಆಗಿಲ್ಲ ಎಂದು ಹೇಳಿದಿರಿ, ಹೌದು ಅವರಿಗೆ convince ಮಾಡುವುದಕ್ಕೆ ಆಗಿಲ್ಲ ಇದು marriage, marriage ಗೂ ಅದಕ್ಕೂ ಏನೂ ಸಂಬಂಧವಿಲ್ಲ

ಶ್ರೀ ಕೆ ಜಯಪ್ರಕಾಶ್ ಹೆಗ್ಡೆ ನನ್ನ ಮನೆಯವರಿಗೆ convince ಮಾಡುವುದಕ್ಕೆ ಆಗದೇ ಇದ್ದ ಮೇಲೆ ಬೇರೆಯವರನ್ನು ಹೇಗೆ convince ಮಾಡುತ್ತೇನೆ ಎಂದು ಹೇಳಿರುವುದು

ಶ್ರೀ ವಾಟಳ್ ನಾಗರಾಜ್ ಬಹಳ ಜನರ ಮನೆಯಲ್ಲಿ ಹೆಂಡತಿ ಮಾತನ್ನು ಗಂಡ ಕೇಳುತ್ತಾರೆ, ಗಂಡನ ಮಾತನ್ನು ಹೆಂಡತಿ ಕೇಳುತ್ತಾರೆ ಹಾಗೆ ಕೇಳದೇ ಇರುವಂತಹ ವಿಚಾರವೂ ಉಂಟು

ಶ್ರೀ ಕೆ ಜಯಪ್ರಕಾಶ್ ಹೆಗ್ಡೆ ಹಿಂದೆ ನಮ್ಮ ಅನೇಕ ನಾಯಕರು ಗಳಿದ್ದರು ಆಗ ಗಂಡ ಮತ್ತು ಹೆಂಡತಿ ಬೇರೆ partyಯಲ್ಲಿದ್ದರು ಅವರ

ಚಿಂತನೆ ಬೇರೆ ಇತ್ತು ಅವರ principlesಗೆ Stick ಆಗುತ್ತಿದ್ದರು ಆದರೆ ಈ ಪರಿಸ್ಥಿತಿ ಹಾಗೆ ಇಲ್ಲ ಆ ವಿಚಾರವನ್ನು ಅಷ್ಟಕ್ಕೆ ಬಿಡುತ್ತೇನೆ Power supply to agriculture sector, ಈಗ ಪರಿಸ್ಥಿತಿ ಏನಾಗಿದೆ ಎಂದರೆ ಒಂದು ದಿವಸ ಕೂಡ 8 30ಕ್ಕಿಂತ ಜಾಸ್ತಿ 3 Phase ಕೊಟ್ಟಿಲ್ಲ ಆದರೆ ನಾವು ರೈತರಿಗೆ ಎಲ್ಲವನ್ನೂ ಮಾಡಿದ್ದೇವೆಂದು ಹೇಳುವುದು Load shedding 550MW 15th to 31st May ಮಾತ್ರ ಮಾಡಿದ್ದು ಎಂದು ಹೇಳುತ್ತಾರೆ ಇವತ್ತು Load Shedding ಆಗುತ್ತದೆ ಆದರೆ ಇಷ್ಟು ಮಳೆ ಬಂದು ಜಲಾಶಯಗಳು ತುಂಬಿದ್ದರೂ ಸಹ ಇವತ್ತಿಗೂ load shedding ಆಗುತ್ತಿದೆ ನಾವು ವಿದ್ಯುಚ್ಛಕ್ತಿ ಪರಿಸ್ಥಿತಿಯನ್ನು ನಾವು improve ಮಾಡಿಕೊಳ್ಳದೇ, ಮೊನ್ನೆ industries ಹಾಗೂ ಕೃಷಿ ಬಗ್ಗೆ ಚರ್ಚೆಯಾಯಿತು ಕೃಷಿ ಅಭಿವೃದ್ಧಿ ಆಗಬೇಕಾದರೂ ಸಹ ವಿದ್ಯುಚ್ಛಕ್ತಿ ಬೇಕು ನೀವು power ಕೊಡದೇ ಯಾವ industries ನವರು invest ಮಾಡುವುದಕ್ಕೆ ಬರುತ್ತಾರೆ? ಈಗ ಕೇವಲ landಗೆ ಸಂಬಂಧಪಟ್ಟಂತೆ real estateನ ಕೆಲಸ ಮಾತ್ರ ಆಗುತ್ತಿದೆ ಹೊರತು ಭೂಮಿಯನ್ನು ತೆಗೆದುಕೊಂಡು ಯಾರೂ ಕೂಡ industries ಅನ್ನು ಹಾಕುತ್ತಿಲ್ಲ ಭೂಮಿಯನ್ನು ತೆಗೆದುಕೊಂಡು ಇನ್ಯಾರು ಬರುತ್ತಾರೆ ಎಂದು ಕಾಯುವಂತಹ ಪರಿಸ್ಥಿತಿ ಬಂದಿದೆ ಸರ್ಕಾರದಲ್ಲಿ ಇರುವವರೇ ಅಥವಾ ಸರ್ಕಾರವೇ real estate business ಮಾಡುತ್ತಿದೆಯಾ ಎಂದು ಗೊತ್ತಿಲ್ಲ ಇದರ ಬಗ್ಗೆ serious ಆಗಿ ಆಲೋಚನೆ ಮಾಡಬೇಕಾಗುತ್ತದೆ ನಾನು ಮಾನ್ಯ ಉಪ ಮುಖ್ಯಮಂತ್ರಿಗಳಿಗೆ ಹೇಳುವುದೇನೆಂದರೆ ಭೂಮಿ ಒತ್ತುವರಿಗೆ ಸಂಬಂಧಪಟ್ಟಂತೆ ಒಂದು ಸಮಿತಿಯನ್ನು ಏನು ಮಾಡಿದ್ದೀರಿ, ಅದೇ ರೀತಿ KIADB ವಿಚಾರದಲ್ಲಿ ಕೂಡ ತನಿಖೆಯಾಗುವುದಕ್ಕೆ ಒಂದು ಸಮಿತಿಯನ್ನು ಮಾಡಿ ಇಷ್ಟು ವರ್ಷಗಳಲ್ಲಿ ಅಲ್ಲಿ ಏನಾಗುತ್ತಿದೆ ಎನ್ನುವುದರ ಬಗ್ಗೆ ಕೂಡ ತೀರ್ಮಾನವಾಗಲಿ ಇಲ್ಲದಿದ್ದರೆ ಎಲ್ಲರೂ ಕೂಡ ಇದನ್ನೇ ವ್ಯವಹಾರವನ್ನಾಗಿ ಮಾಡಿಕೊಳ್ಳುತ್ತಾರೆ ಈಗ ದೊಡ್ಡ ವ್ಯವಹಾರ ಯಾವುದು ಎಂದು ಯಾರನ್ನಾದರೂ ಕೇಳಿದರೆ Real estate business ಮಾಡುವವನು ನಮ್ಮ ರಾಜ್ಯದಲ್ಲಿ ದೊಡ್ಡ ವ್ಯವಹಾರಸ್ಥ ಅವನು ದೊಡ್ಡ ದೊಡ್ಡ ಮನೆಗಳನ್ನು ಕಟ್ಟುವವನಿಗೆ ಯಾವ ಕಾನೂನು ಇಲ್ಲ ಮಾನ್ಯ ಮಾಧುಸ್ವಾಮಿಯವರು

ಹೇಳುತ್ತಾರೆ, ಹೆಣ್ಣು ಕೇಳುವುದಕ್ಕೆ ಹೋಗುವವರು Real estate ಮನೆಗೆ ಹೋಗುತ್ತಾರಂತೆ, ಬೇರೆಯವರನ್ನು ಕೇಳುವುದಿಲ್ಲವಂತೆ ಆ ಪರಿಸ್ಥಿತಿ ಬಂದರೆ ಹೇಗೆ? ಈಗ industries policy ಎಂದು ತಂದಿದ್ದಾರೆ ಅದರಲ್ಲಿ ಏನಿದೆ? Industries ಬಂದರೆ ಮಾತ್ರ ಅಲ್ಲವೇ Policy ಬೇಕಾಗುವುದು ಹಳೇ policy ಯನ್ನೇ ಹಾಕಿರುವುದನ್ನು ಬಿಟ್ಟರೆ ಹೊಸದಾಗಿ ಏನನ್ನಾದರೂ ಹಾಕಿದ್ದಾರ? ಇದರಲ್ಲಿ ಹೊಸ policyಗಳು ಏನೂ ಇಲ್ಲ ಇದರಲ್ಲಿ ಒಂದಂತೂ ಆಗಿದೆ, ಅದೇನೆಂದರೆ ಮೊನ್ನೆ APMC act pass ಮಾಡಿದ್ದು, ಇದರಲ್ಲಿ Land Reforms Act has become redundant ಸಣ್ಣ ರೈತ ಯಾರೂ ಭೂಮಿಯನ್ನು ಮಾರುವುದಕ್ಕೆ ಹೋಗುತ್ತಾನೆ, ಸ್ವತಃ ಅವನು ಹಳ್ಳಿ ಕಡೆಯಲ್ಲಿ ಇದ್ದರೆ ಅವನಿಗೆ ಮಾರುವುದಕ್ಕೆ ಕಷ್ಟ ಬೆಂಗಳೂರು ಸುತ್ತಮುತ್ತ ಇದ್ದವರಿಗೆ land reforms act apply ಆಗುವುದಿಲ್ಲ ಏನೂ ಆಗುವುದಿಲ್ಲ ಇಲ್ಲಿ ನೇರವಾಗಿ ಮಾರಾಟ ಮಾಡಬಹುದು ಅದನ್ನು ಕೊಳ್ಳುವುದಕ್ಕೆ ದೊಡ್ಡ ದೊಡ್ಡ business ಆಗುತ್ತದೆ ಅದನ್ನು ನೇರವಾಗಿ conversion ಮಾಡಿ ಕೊಡುತ್ತಾರೆ ಈಗ Conversion ಅಗತ್ಯವೇ ಇಲ್ಲ ಸರ್ಕಾರ acquire ಮಾಡುವುದು ಒಂದು ಕಡೆ, ಬೇರೆ ಬೇರೆ ಹೆಸರಿನಲ್ಲಿ purchase ಮಾಡುವುದು ಒಂದು ಕಡೆ, ಮಾರಾಟ ಮಾಡುವುದು ಒಂದು ಕಡೆಯಾದರೆ growth of industries department in real estate business ಬಿಟ್ಟರೆ ಇನ್ನು ಬೇರೆ ಯಾವುದರಲ್ಲೂ ಆಗುತ್ತಿಲ್ಲ ಅದರ ಬಗ್ಗೆ ತನಿಖೆಯನ್ನು ಮಾಡಿದರೆ ವಿಚಾರಗಳು ಹೊರಗೆ ಬರುತ್ತವೆ ನಾನು ಮಾನ್ಯ ರಮೇಶ್‌ಕುಮಾರ್ ಹಾಗೂ ಮಾನ್ಯ ದೇಶಪಾಂಡೆಯವರು ಮಾತನಾಡಿದಾಗ ಹೇಳಿದರು ನಾನು ಅವರ ಕಾಲದಿಂದಲೂ ಕೇಳುತ್ತಿದ್ದೆನು ಸರ್ಕಾರ aquire ಮಾಡಿಕೊಡುವುದಕ್ಕೆ ಹೋಗಬೇಡಿ ಕೇವಲ facilitate ಮಾಡಿ Facilitate the Industrialists to buy the land ನೀವು ಸರ್ಕಾರದಿಂದ acquire ಮಾಡಿ ಕೊಡುವುದು ತಪ್ಪಾಗುತ್ತದೆ ಇವರು ಪ್ರತಿವರ್ಷ 30,000 ಕೋಟಿ, 40,000 ಕೋಟಿ ಹಾಗೂ ಈಗ 1,00,000 ಕೋಟಿ investment ಯಾವುದರಲ್ಲಿ ಆಗಿದೆ? ಎಷ್ಟು employment generate ಆಗಿದೆ? ಅದನ್ನು ಇವರು ಸದನದ ಗಮನಕ್ಕೆ ತರಬೇಕಾಗುತ್ತದೆ Employment generate

ಆಗಿಲ್ಲ, ಅದೂ ಆಗಿದ್ದರೆ IT sector ನಲ್ಲಿ ಮಾತ್ರ, not because the Government has helped them ಈಗ atmosphere ಬೆನ್ನಾಗಿದೆ ಅವರು ಬಂದು ಒಂದು ಉದ್ದಿಮೆಯನ್ನು ಹಾಕಿದ್ದಾರೆ ಇನ್ನೊಂದು ಸ್ವಲ್ಪ ದಿವಸದಲ್ಲಿ rupees strong ಆಗುತ್ತಾ ಹೋಗುತ್ತದೆ, dollar value ಕಡಿಮೆಯಾಗುತ್ತದೆ ಅವರು dollar strong ಇದೆ ಎಂದು ಅಲ್ಲಿ ಹೋಗುವುದಕ್ಕೆ ಪ್ರಯತ್ನ ಮಾಡುತ್ತಾರೆ ವಿನಃ ಈ ರಾಜ್ಯಕ್ಕೆ ಬರುವುದಕ್ಕೆ ಸಾಧ್ಯವಿಲ್ಲ ನಾವು basic industries ಅನ್ನು develop ಮಾಡುವುದಕ್ಕೆ ಪ್ರಯತ್ನ ಮಾಡಬೇಕು ಏಕೆಂದರೆ unskilled labourಗೆ employmentನಲ್ಲಿ ಯಾವ ರೀತಿ ಸಹಾಯ ಮಾಡುವುದಕ್ಕೆ ಸಾಧ್ಯವಾಗುತ್ತದೆ ಎಂದು ನೋಡಬೇಕು ಇನ್ನೊಂದು ನಾನು ಕಳೆದ ಬಾರಿ ಹೇಳಿದ್ದೆನು Engineeringಗೆ ಸೇರಿದಂತಹ ವಿದ್ಯಾರ್ಥಿಗಳು project report ಅನ್ನು ಮಾಡಬೇಕು Projectಗಳನ್ನು ಮಾಡುವಂತಹ ಸಂದರ್ಭದಲ್ಲಿ ಅವರೇ ಉದ್ದಿಮೆಗಳ ಹತ್ತಿರ ಹೋಗಿ ನಮಗೆ ಒಂದು ಅವಕಾಶ ಕೊಡಿ ಎಂದು ಕೇಳುವಂತಹ ಪರಿಸ್ಥಿತಿ ಇದೆ ಅದಕ್ಕೋಸ್ಕರ ನಾನು ಮಾನ್ಯ ದೇಶಪಾಂಡೆಯವರು ಹಾಗೂ ಮಾನ್ಯ ಸಿಂಧ್ಯರವರು ಮಂತ್ರಿಗಳಾಗಿದ್ದಾಗ ಕೇಳಿದ್ದೆನು ದಯವಿಟ್ಟು Visveswaraya Technological University (VTU) ಮತ್ತು industries ಮಧ್ಯ ಹೊಂದಾಣಿಕೆಯನ್ನು ಮಾಡಿಕೊಂಡು ಪ್ರತಿಯೊಂದು ಕಾಲೇಜುಗಳಿಗೆ ನೇರವಾಗಿ ಇಂತಹ ಉದ್ದಿಮೆಗಳಿಗೆ ಸಂಪರ್ಕವನ್ನು ಮಾಡಿಕೊಡಿ ಅವರಿಗೆ ನೇರವಾಗಿ project report ಗಳನ್ನು ಮಾಡುವುದಕ್ಕೆ ಅವಕಾಶವನ್ನು ಮಾಡಿಕೊಡಿ ಮಕ್ಕಳು ಉದ್ದಿಮೆಗಳ ಬಾಗಿಲಲ್ಲಿ ಭಿಕ್ಷುಕರಂತೆ ಹೋಗಿ ನಿಲ್ಲುವಂತಹ ಪರಿಸ್ಥಿತಿಯನ್ನು ಮಾಡಬೇಡಿ ಎಂದು ಹೇಳಿದ್ದೆ

ಶ್ರೀ ವಿ ಸೋಮಣ್ಣ ಮಾನ್ಯ ಅದ್ಯಕ್ಷರೇ, ಇದು ಬಹಳ ಮುಖ್ಯವಾದಂತಹ ವಿಚಾರವನ್ನು ನಾವು ತಮ್ಮ ಗಮನಕ್ಕೆ ತರುತ್ತೇನೆ ಜಯಪ್ರಕಾಶ್ ಹೆಗ್ಡೆರವರು ಏನು ಹೇಳಿದರು, engineering collegeನಲ್ಲಿ ಓದುತ್ತಿರುವಂತಹ ಮಕ್ಕಳು ಕೊನೇ 8ನೇ semesterಗೆ ಬಂದಾಗ ದೊಡ್ಡ ದೊಡ್ಡ IT BTಯ ಕಾರ್ಖಾನೆಯವರು ಏನು ಮಾಡುತ್ತಾರೆ ಎಂದರೆ ಸಾಮಾನ್ಯ ಮಕ್ಕಳಿಗೆ ಎಷ್ಟೇ ಅರ್ಹತೆ ಇದ್ದರೂ ಕೂಡ ಪ್ರವೇಶವನ್ನು ಕೊಡುವುದಿಲ್ಲ 8ನೇ semesterಗೆ ಬಂದಂತಹ ಮಕ್ಕಳ ಗೋಳು ಯಾವ ರೀತಿಯಾಗುತ್ತದೆ

ಎಂದರೆ ಯಾರಿಗೆ influence ಇರುತ್ತದೆ, ಅಂತಹವರ ಮಕ್ಕಳಿಗೆ ಮಾತ್ರ ಕೆಲವು ಪ್ರತಿಷ್ಠಿತ ಸಂಸ್ಥೆಗಳಲ್ಲಿ ಅವರನ್ನು project ಮಾಡುವುದಕ್ಕೆ ತೆಗೆದುಕೊಳ್ಳುತ್ತಾರೆ ಇಲ್ಲದಿದ್ದರೆ ತೆಗೆದುಕೊಳ್ಳುವುದಿಲ್ಲ ಅದಕ್ಕೆ ನಾವು ತಮ್ಮ ಮೂಲಕ ಸರ್ಕಾರವನ್ನು ವಿನಂತಿ ಮಾಡುವುದೇನೆಂದರೆ ಇಂತಿಂತಹ ಕಾಲೇಜಿಗೆ ಇಂತಿಂತಹವರನ್ನು ಹಾಕುತ್ತೇವೆ, ಇಷ್ಟು percentage ಅವರನ್ನು ತೆಗೆದುಕೊಳ್ಳಲೇಬೇಕು ಎಂದು ಒಂದು ಕಡ್ಡಾಯವನ್ನು ಮಾಡಿದರೆ ಸಾಮಾನ್ಯ ಮಕ್ಕಳಿಗೂ ಕೂಡ ಅವಕಾಶ ಸಿಗುತ್ತದೆ ಇದೊಂದು ಉತ್ತಮವಾದ ಬೆಳವಣಿಗೆ

ಶ್ರೀ ಕೆ ಜಯಪ್ರಕಾಶ್ ಹೆಗ್ಡೆ ಮಾನ್ಯ ಅಧ್ಯಕ್ಷರ, ನಾನು ಆಗಲೇ ಹೇಳಿದಂತೆ KIADB ಬಗ್ಗೆ ತನಿಖೆಯಾಗಬೇಕು ಏಕೆಂದರೆ ಮುಖ್ಯವಾಗಿ ಮೊನ್ನೆ IT raid ಆದಾಗ ಒಂದು ಉದಾಹರಣೆ ಸಿಕ್ಕಿದ್ದು ನಿನ್ನೆ ಪುನಃ IT raid ಇತ್ತಂತೆ ಎಲ್ಲಾ real estate ನವರಿಗೆ ಆಗುತ್ತಿದೆ ಇದರ ಬಗ್ಗೆ ತನಿಖೆಯಾದಾಗ ಮಾತ್ರ ನಮಗೆ ಸ್ವಲ್ಪ ಸರ್ಕಾರದ ಭೂಮಿ ಸಿಗುತ್ತದೆ ಹಾಗೂ ಈ ಕಳ್ಳ ವ್ಯವಹಾರವೂ ನಿಂತು ಹೋಗುತ್ತದೆ ಎನ್ನುವ ವಿಚಾರದ ಜೊತಗೆ, KREDEL ಬಗ್ಗೆ ತನಿಖೆಯಾಗಬೇಕು ಮೊನ್ನೆ ಮಾನ್ಯ ದಿನೇಶ್‌ಗುಂಡೂ ರಾವ್‌ರವರು ಒಂದು ಪ್ರಶ್ನೆಯನ್ನು ಕೇಳಿದಾಗ ಎಷ್ಟು ಜನ mini-hydel project ಅನ್ನು ತೆಗೆದುಕೊಂಡಿದ್ದಾರೆಂದು ಉತ್ತರ ಕೊಟ್ಟಿದ್ದರು ಅದರಲ್ಲಿ ಎಷ್ಟು ಜನ ಪ್ರಾರಂಭ ಮಾಡಿದ್ದಾರೆಂದು ಬೇಕು ಅದು trading ಆಗುತ್ತಿದೆ ಒಬ್ಬ ತೆಗೆದುಕೊಳ್ಳುವುದು ಅದನ್ನು ಇನ್ನೊಬ್ಬನಿಗೆ ಮಾರುವುದು ಅದನ್ನು ತೆಗೆದುಕೊಂಡು ಅವರೇ ಪ್ರಾರಂಭ ಮಾಡುತ್ತಿಲ್ಲ ಅದರ ಬಗ್ಗೆ ತನಿಖೆಯಾಗಬೇಕಾಗುತ್ತದೆ KREDLನವರು ಎಷ್ಟು sanction ಕೊಟ್ಟಿದ್ದಾರ, ಎಷ್ಟು ಪ್ರಾರಂಭ ಮಾಡಿದ್ದಾರೆ, ಪ್ರಾರಂಭ ಮಾಡದೇ ಇರುವಂಥಾದ್ದನ್ನು ಸರ್ಕಾರ cancel ಮಾಡುತ್ತದಾ? ಎನ್ನುವಂಥಾದ್ದು ಆಗಬೇಕು ನಾನು ಕಳೆದ ಬಾರಿ ನಮಗೂ ಒಂದೆರಡು ಕೊಡಿ ಎಂದು ಹೇಳಿದ್ದೆ ನಾವು ಬೇಗ ಪ್ರಾರಂಭ ಮಾಡುತ್ತೇವೆ

ಅಧ್ಯಕ್ಷರು ಮಾನ್ಯ ಕೆ ಜಯಪ್ರಕಾಶ್ ಹೆಗ್ಡೆಯವರೆ, ನೀವು ಆ ಕಡೆ ಈ ಕಡೆ ನೋಡಿಕೊಂಡು ಮಾತನಾಡಬೇಡಿ ತಾವು ಮಾತನಾಡುವುದಕ್ಕೆ

ಶುರು ಮಾಡಿ 45 ನಿಮಿಷವಾಯಿತು, ಇನ್ನು 5 ನಿಮಿಷಗಳಿಗೆ ಬೆಲ್ ಹೊಡೆಯುತ್ತೇನೆ

ಶ್ರೀ ಕೆ ಜಯಪ್ರಕಾಶ್ ಹೆಗ್ಡೆ ಮುಗಿಸುತ್ತೇನೆ ಇದರ ಜೊತೆಗೆ land auditing ಬೇಗ ಆಗಲಿಯೆಂದು ಹೇಳುತ್ತೇನೆ ಇನ್ನೊಂದು ಪ್ರಮುಖವಾದದ್ದು Medical Education ಬಗ್ಗೆ ಇಲ್ಲಿ ಯಾರು ಮಾತನಾಡಲಿಲ್ಲ ನಿನ್ನೆ ದಿವಸ Medical Education Minister ರವರು ಇಲ್ಲಿ ಇದ್ದರು, ನನಗೆ ನಿನ್ನೆ ಮಾತನಾಡುವುದಕ್ಕೆ ಅವಕಾಶ ಸಿಕ್ಕಿದ್ದರೆ ಚೆನ್ನಾಗಿತ್ತೆಂದು ಕಾಣುತ್ತದೆ ನಾನು ಒಂದು ಪ್ರಶ್ನೆಯನ್ನು ಕೇಳಿದ್ದೆ ಅದು seat matrix ಕೊಡದೇ ಇದ್ದಂತಹ ಕಾಲೇಜುಗಳು ಯಾವುವು ಎಂದು ಕೇಳಿದ್ದೆ ನನಗೆ ಅದರ ಬಗ್ಗೆ ಮಾಹಿತಿಯನ್ನು ಕೊಟ್ಟಿರಲಿಲ್ಲ ಆದರೆ ನನ್ನ ಹತ್ತಿರ ಮಾಹಿತಿ ಇದೆ ಒಂದು ಕಾಲೇಜಿಗೆ seat matrix ಕೊಡದೇ, ನೇರವಾಗಿ ಅವರೇ ಸೀಟನ್ನು ಮಾರಾಟ ಮಾಡಿಕೊಳ್ಳುವುದಕ್ಕೆ ಅವಕಾಶವನ್ನು ಕೊಟ್ಟಿದ್ದಾರೆ ಅವರು ನನಗೆ ಮಾಹಿತಿಯನ್ನು ಕೊಡದಿದ್ದರೆ, ನಾನು ಈ ಬಗ್ಗೆ Privilege motion ಅನ್ನು ಮೂವ್ ಮಾಡಬೇಕು ನಾನು ಮಾನ್ಯ ಮಂತ್ರಿಯವರಿಗೆ ಪತ್ರವನ್ನು ಬರೆದಿದ್ದೇನೆ Principle Secretary, Health Department Medical Education, ಇವರಿಗೆಲ್ಲಾ ಪತ್ರವನ್ನು ಬರೆದಿದ್ದೇನೆ ಇವರು ಯಾರು ಉತ್ತರವನ್ನು ಕೊಡಲಿಲ್ಲ ಆದರೆ ಒಂದು ಕಾಲೇಜಿಗೆ ಒಂದು ವರ್ಷ seat matrix ಅನ್ನೆ ಕೊಡದೇ, ಎಲ್ಲಾ file ಅನ್ನು ವಾಪಸ್ಸು ಕಳುಹಿಸಿದ್ದು ಯಾವಾಗ ಗೊತ್ತಾ? ಇದು ಎಲ್ಲಾ ಮುಗಿದ ಮೇಲೆ ಕಳುಹಿಸಿದ್ದಾರೆ ಅಂದರೆ ಎಲ್ಲಾ ನೀವೇ ಮಾರಾಟ ಮಾಡಿಕೊಳ್ಳಿ ಎಂದು ಅದರ ಬಗ್ಗೆ ತನಿಖೆಯಾಗಬೇಕು ಆ ಮಾಹಿತಿಯನ್ನು ಸದನಕ್ಕೆ ಕೊಡಬೇಕು ಅವರಿಗೆ ಏಕೆ seat matrix ಕೊಡಲಿಲ್ಲ? ಅವರು ಏನು ಹೇಳಿದರೆಂದರೆ, ಕೋರ್ಟ್ ಆದೇಶವಿತ್ತೆಂದು ಹೇಳಿದರು ಕೋರ್ಟ್ ಆದೇಶವಿಲ್ಲದೆ, seat matrix ಕೊಡದೇ ನೇರವಾಗಿ ಕಾಲೇಜುನವರು ಮಾರಾಟ ಮಾಡಿಕೊಳ್ಳುವುದಕ್ಕೆ ವ್ಯವಸ್ಥೆಯನ್ನು ಮಾಡಿದ್ದಾರೆ ಇದರ ಜೊತೆಗೆ ಇವತ್ತು Autonomous Colleges ಎಂದು ಹೇಳುತ್ತಾರೆ Autonomous Colleges ಎಂದರೆ ಸಂಪೂರ್ಣ ಆಡಳಿತ ವ್ಯವಸ್ಥೆಯನ್ನು ಅದೇ ಕಾಲೇಜಿನವರು ಮಾಡಬೇಕಾ -ಗುತ್ತದೆ ನನ್ನ ಬಳಿ U P Courtನ ಆದೇಶವಿದೆ Autonomous Colleges ಎಂದು ಸರ್ಕಾರದವರು control

ಮಾಡುತ್ತಿದ್ದರು ಅದಕ್ಕೆ U P Court ನವರು ಅವರಿಗೆ ಸ್ವಲ್ಪ ಝಾಡಿಸಿದ್ದಾರೆ ಅವರು ಏನು ಹೇಳುತ್ತಾರೆಂದರೆ, ಸರ್ಕಾರಕ್ಕೆ ಅಧಿಕಾರವೇ ಇಲ್ಲ ಒಂದು ಸಾರಿ Autonomous ಎಂದು ಆದರೆ, separate body ಆಗಬೇಕಾಗುತ್ತದೆ ಬೇರೆ ಕಡೆಗೆ transfer ಮಾಡುವಂಥಾದ್ದು, ಮೊನ್ನೆ ಇಲ್ಲಿ ಇವರು ಹುಬ್ಬಳ್ಳಿಯಿಂದ ಬೇರೆ ಕಡೆ ಮಾಡಿದ್ದಾರಲ್ಲಾ, ನಾವು ಅದನ್ನು ಮಾತನಾಡುವುದಿಲ್ಲ, ಏಕೆಂದರೆ ಹೊಸ ಕಾಲೇಜನ್ನು ಪ್ರಾರಂಭ ಮಾಡಲೆಂದು ನಾನು ಮಾತನಾಡಲಿಲ್ಲ ಆದರೆ ಇವರು ಮಾಡಿದ ತಪ್ಪು, ಇಲ್ಲಿ U P High Court ಆದೇಶದಲ್ಲಿ ನೇರವಾಗಿ ಹೇಳುತ್ತಾರೆ "The Board of Governors has, under the impugned order, Government officials" ಇಲ್ಲೂ ಅದೇ ಪರಿಸ್ಥಿತಿಯಾಗಿದೆ Government officials ಅನ್ನು ಮಾಡಿ ಇವರ controlನಲ್ಲಿ ಇಟ್ಟುಕೊಂಡು, ವರ್ಗಾವಣೆಯನ್ನು ಮಾಡುವುದಕ್ಕೆ ಇವರಿಗೆ ಅಧಿಕಾರ-ವಿಲ್ಲೆಂದು U P Government ಹೇಳಿದಾಗ, ಅಲ್ಲಿನ staffಗಳು Courtಗೆ ಹೋಗಿದ್ದು ಅವರ petition ಅನ್ನು allow ಮಾಡುತ್ತಾರೆ ಇದು ಪರಿಸ್ಥಿತಿ ಇರುವಂಥಾದ್ದು ಇನ್ನು ಒಂದು ವಿಚಾರವೇನೆಂದರೆ, ಈಗ ಹೊಸ ಕಾಲೇಜುಗಳನ್ನು ಮಾಡಿದ್ದಾರಲ್ಲಾ, ಅದು ಒಂದೇ ಡಿಸೈನ್ ಮಂಡ್ಯಕ್ಕೂ ಮತ್ತು ಬೀದರ್ ಇರುವಂಥಾದ್ದು ಆದರೆ ಒಂದೊಂದು ಕಡೆ ಒಂದೊಂದು ರೇಟ್ ಇದೆ ಒಂದು ಕಡೆ 1,000 ರೂಪಾಯಿಗಳಿದ್ದರೆ, ಇನ್ನೊಂದು ಕಡೆ 6,000 ರೂಪಾಯಿಗಳು ಇದೆ ಇದರ ಬಗ್ಗೆ ತನಿಖೆಯಾಗಬೇಕು ಇದು ಹೇಗೆ ಆಗುತ್ತದೋ ಗೊತ್ತಿಲ್ಲ ಒಂದೊಂದು ಕಡೆ ಒಂದೊಂದು ರೇಟನ್ನು ಕೊಟ್ಟು ಟೆಂಡರ್ ಅನ್ನು ಕರೆಯದೇ ಅವರಷ್ಟಕ್ಕೆ ಅವರು ಮಾಡಿದ್ದಾರೆ ಅದರ ಬಗ್ಗೆ ಮಾಹಿತಿಯನ್ನು ಸದನಕ್ಕೆ ಕೊಡಬೇಕಾಗುತ್ತದೆ ಸರ್ಕಾರ ನಾವು ಕಾಲೇಜುಗಳನ್ನು ಮಾಡಿದ್ದೇವೆಂದು ಹೆಗ್ಗಳಿಕೆಯನ್ನು ಮಾಡಿಕೊಳ್ಳುವುದಿಲ್ಲ ಅದರ ನಂತರ ಏನೇನು ನಡೆದಿದೆಯೆಂಬ ಬಗ್ಗೆಯೂ ಸರ್ಕಾರ ನೋಡಬೇಕಾಗುತ್ತದೆ, ಇಲ್ಲವೆಂದರೆ ಸರ್ಕಾರಕ್ಕೆ ನಷ್ಟವಾಗುತ್ತದೆ ಅದರ ಬಗ್ಗೆ ಮಾಹಿತಿಯನ್ನು ಕೊಡಬೇಕೆಂದು ಹೇಳುತ್ತೇನೆ ಇದು Medical Educationಗೆ ಸಂಬಂಧಪಟ್ಟಿದ್ದು ಹಿಂದಿನ ಕಾಂಗ್ರೆಸ್ ಸರ್ಕಾರದಲ್ಲಿ ಪ್ರಾರಂಬ ಮಾಡಿದ್ದು

ಶ್ರೀ ಜೆ ಸಿ ಮಾಧುಸ್ವಾಮಿ ಮಾನ್ಯ ಅಧ್ಯಕ್ಷರೆ, ಈಗ ಇದು ಪಕ್ಕಾ privilege ಆಗುತ್ತದೆ Minister ಶಾಮೀಲಾಗಿ seat matrix ಕೊಡದೇ,

ಅವರು admissions ಎಲ್ಲಾ close ಮಾಡಿದ ಮೇಲೆ, ಅಲ್ಲಿಗ ಕಾಗದವನ್ನು ಬರೆಯುತ್ತಾರೆ ಕೋರ್ಟ್ ಆರ್ಡರ್ ಇತ್ತೆಂದು ಹೇಳುತ್ತಾರೆ ಕೋರ್ಟ್ ಆರ್ಡರ್ ಇರಲೇ ಇಲ್ಲ, ಆ ಕಾಲೇಜುನವರು ನಿಮಗೆ seat matrix ಇಲ್ಲದೆ ಸೀಟೆ ಕೊಡಲಿಲ್ಲ ಎಂದು ಹೇಳುತ್ತಾರೆ ಇದನ್ನು ಇಲ್ಲಿ ಯಾರಾದರು ಒಬ್ಬರು serious ಆಗಿ ತೆಗೆದುಕೊಳ್ಳಬೇಕಲ್ಲಾ

ಅಧ್ಯಕ್ಷರು ಮಾನ್ಯ ಉಪ ಮುಖ್ಯಮಂತ್ರಿಯವರು ಇದ್ದರಲ್ಲಾ

ಶ್ರೀ ಜೆ ಪಿ ಮಾಧುಸ್ವಾಮಿ ಮಾನ್ಯ ಶ್ರೀ ಬಿ ಎಸ್ ಯಡಿಯೂರಪ್ಪ ನವರೆ, It is a direct charge on the Minister concerned against Medical Education

ಅಧ್ಯಕ್ಷರು ಅವರು ಉತ್ತರ ಕೊಡುತ್ತಾರೆ, ನೋಟ್ ಮಾಡಿಕೊಳ್ಳುತ್ತಿದ್ದಾರೆ

ಶ್ರೀ ಜೆ ಪಿ ಮಾಧುಸ್ವಾಮಿ ಅವರು ಶಾಮೀಲು ಆಗಿ, involve ಆಗಿದ್ದಾರೆಂಬ ಭಾವನೆ ಇಲ್ಲ ಬರುತ್ತಾ ಇದೆ

ಅಧ್ಯಕ್ಷರು ಆಯಿತು, He will answer

ಶ್ರೀ ಕೆ ಜಯಪ್ರಕಾಶ್ ಹೆಗ್ಡೆ . ಮಾನ್ಯ ಅಧ್ಯಕ್ಷರೆ, ನಾನು ಅವರು ಉತ್ತರ ಹೇಳುವಾಗ ಇದಕ್ಕೆ ಉತ್ತರವನ್ನು ಕೊಡುತ್ತಾರೆಂದು ಭಾವಿಸಿದ್ದೇನೆ ಅವರು ಉತ್ತರ ಕೊಡಲಿಲ್ಲವೆಂದರ, ನಾನು privilege motion ಅನ್ನು move ಮಾಡುತ್ತೇನ ನಾನು ವಿಷಯ ಹೇಳಿ ಆಗಿದೆ ಆದುದರಿಂದ ಇದರ ಬಗ್ಗೆ ಏಕೆ ಆಯಿತೆಂಬ ಮಾಹಿತಿ ಈ ಸದನಕ್ಕೆ ಬೇಕಾಗುತ್ತದೆ ಇದರ ಜೊತೆಗೆ ರಾಜಕಾರಣದಲ್ಲಿ ಏನಾಗುತ್ತದೆಂದರೆ, ಸಮಸ್ಯೆ ಇಷ್ಟೆ Political war is one, which every one shoots from the lip ಎಂದು ಹೇಳುತ್ತಾರೆ ನಾವು ಹೊಡೆಯುತ್ತೇವೆ, ಅದು ಏನಾಗುತ್ತದೆ ಎಂಬುದು ಗೊತ್ತಾಗುವುದಿಲ್ಲ, ಯಾರಿಗೆ ಅದು ತಗಲುತ್ತದೆಂಬುದು ಗೊತ್ತಿಲ್ಲ ಈಗ ಎರಡು ಕಡೆಗಳಲ್ಲಿ ಇರುವಂಥಾದ್ದರ ಒಗ್ಗೆ ಪತ್ರಿಕೆಯವರು ಹೆಚ್ಚಾಗಿ ಸದನಗಲ್ಲಿ ಎರಡೂ ಕಡೆಗಳಲ್ಲೂ ಶಾಮೀಲಾಗಿ ದ್ದಾರೆಂದು ಬರೆಯುತ್ತಾರೆ ಅದಕ್ಕೆ ಸುಮ್ಮನೆ ಕುಳಿತ್ತಿದ್ದಾರೆನ್ನುವಂಥಾದ್ದು ಆಗಬಾರದು ನಾವು ಶಾಮೀಲಾಗಿಲ್ಲ, ನಮಗೆ ಅದರ ಬಗ್ಗೆ ಮಾಹಿತಿ ಬೇಕು ನಾನು ನನ್ನ ಬಗ್ಗೆ ಹೇಳಬಹುದು ಈಗ ಪರಿಸ್ಥಿತಿ ಹೇಗೆ ಆಗಿದೆಯೆಂದರೆ, ನಿನ್ನೆ ಮಾನ್ಯ ಎ ಟಿ ರಾಮಸ್ವಾಮಿಯವರು, ವರದಿಯನ್ನು ಮಂಡನೆ ಮಾಡಿದರಲ್ಲಾ, ಅದರ ಬಗ್ಗೆ ಚರ್ಚೆ

ಪ್ರಾರಂಭವಾಗಿದೆ ಅದು ತಪ್ಪು ಎಂದು ಚರ್ಚೆಯಾಗಿದೆ ನಾನು ನಿಮ್ಮನ್ನು ಉದಾಹರಣೆಗೆ ತೆಗೆದುಕೊಳ್ಳುತ್ತೇನೆ ರಾಜಕಾರಣಿಗಳೆಂದು ಎಲ್ಲರನ್ನೂ ಸೇರಿಸಿ ಹೇಳಿದಾಗ, ಮಧ್ಯದಲ್ಲಿ ಒಬ್ಬೊಬ್ಬರು ಇರುವವರು ಏನು ಮಾಡಬೇಕು? ಬಿಟ್ಟು ಹೋಗಬೇಕಾ? ಆ ಪರಿಸ್ಥಿತಿಯನ್ನು ಹೋಗಲಾಡಿಸುವುದಕ್ಕೆ ಏನಾದರೂ ಮಾಡಬೇಕಾಗುತ್ತದೆ, ಏನೋ ಎಂಬುದು ನಮ್ಮ ಮನಸ್ಸಿನಲ್ಲಿದೆ ಅದಕ್ಕೆ ಚರ್ಚೆಯನ್ನು ಮಾಡೋಣ 'A politician who adopts politics as a profession cannot be honest' ಅಲ್ಲವಾ, ಇದು Profession ಅಲ್ಲ ಎಂಬುದು ಹೆಚ್ಚು ಜನರಿಗೆ ಗೊತ್ತಿಲ್ಲ ಇದು Profession ಅಲ್ಲವೆಂದು ಮನಸ್ಸಿನಲ್ಲಿ ಇದ್ದರೆ, ನಮ್ಮ ಪರಿಸ್ಥಿತಿ ಯಾವ ರೀತಿಯಾಗಿದೆಯೆಂದರೆ, corporate sector ನವರು control ಮಾಡುತ್ತಿದ್ದಾರೆ ನಮಗೆ ರಸ್ತೆ ಮಾಬೇಕಾದರೆ, "ಬಾಲ ನಾಯಿಯನ್ನು ಅಲ್ಲಾಡಿಸಿದ ಪರಿಸ್ಥಿತಿ" ಬಂದು ಬಿಟ್ಟಿದೆ ಏಕೆಂದರೆ Corporate sector ನವರು ರಸ್ತೆ ಸರಿಯಾಗಿಲ್ಲವೆಂದು ಗಲಾಟೆ ಮಾಡಿದರೆ, ಸರ್ಕಾರ ತುರ್ತಾಗಿ ಅದನ್ನು ದುರಸ್ತಿ ಮಾಡಿ ಕೊಡುತ್ತದೆ ಆದರೆ ಜನರು ರಸ್ತೆ ಸರಿಯಾಗಿಲ್ಲ, ಕುಡಿಯುವುದಕ್ಕೆ ನೀರಿಲ್ಲವೆಂದರೆ, ಅದರ ಬಗ್ಗೆ ಆಲೋಚನೆ ಮಾಡದಿರುವಂಥಾ ಪರಿಸ್ಥಿತಿ ಬಂದಿದೆ ಬಸ್ಸಿಲ್ಲವೆಂದರೂ ಕೊಡುವುದಿಲ್ಲ ನಾನು ಅಧಿಕಾರಿಗಳಲ್ಲಿ honesty ಇಲ್ಲವೆಂದು ಹೇಳುವುದಿಲ್ಲ ಇಲ್ಲಿ honest ಆಗಿ ಇರುವವರು ಇದ್ದಾರೆ Most impracticalನವರು ಇದ್ದಾರೆ ಇಲ್ಲಿ honest ಆಗಿ ಇರುವವರು ಕಡಿಮೆ ಇದ್ದಾರೆ ಅದರ ಜೊತೆಗೆ most impractical ನವರು ಇದ್ದಾರೆ , ನಮ್ಮ ಜನರಿಗೆ ಬೇಕಾಗಿರುವಂಥಾದ್ದು ಏನೆಂದರೆ honest and practical, ಇಲ್ಲದಿದ್ದರೆ ಏನಾಗುತ್ತದೆಯೆಂದರೆ, ದುಡ್ಡು ಕೊಟ್ಟರೆ ಪರವಾಗಿಲ್ಲ ಕೆಲಸವನ್ನು ಮಾಡಿಕೊಳ್ಳುತ್ತಾನಲ್ಲಾ, ಎಂದು ಹೇಳುವ ಪರಿಸ್ಥಿತಿಗೆ ಬಂದಿದೆ ಅದನ್ನು ಹೋಗಲಾಡಿ ಸುವುದಕ್ಕೆ ನಾವು ಏನಾದರೂ ಮಾಡಬೇಕೆನ್ನುವಂಥಾದ್ದರ ಬಗ್ಗೆ ಚರ್ಚೆ ಮಾಡಬೇಕಾಗಿದೆ ನಾವು ಮಾತನಾಡಿದರೆ, ಕಾನೂನು ಮಾತನಾಡುತ್ತಾರೆ ಇವತ್ತು adjournment motion ಅನ್ನು ಮೂವ್ ಮಾಡಿದ್ದು ಅದೇ, ಈಗ ಕಾನೂನನ್ನೇ ಮಾತನಾಡುವವರೇ ಜಾಸ್ತಿಯಾಗಿದ್ದಾರೆ ಅದಕ್ಕೆ ದಿವಂಗತ ಮಾನ್ಯ ಜೆ ಹೆಚ್ ಪಟೇಲ್‌ರವರು ಮಂಗಳೂರಿನಲ್ಲಿ ಒಂದು review meeting ನಲ್ಲಿದ್ದರು ಆಗ ನಾನು

ಮಂತ್ರಿಯಾಗಿ, ಅವರ ಜೊತೆಯಲ್ಲೇ ಇದ್ದೆ ಅಲ್ಲಿ ಯಾರೋ ಒಬ್ಬ ಅಧಿಕಾರಿ ಕಾನೂನು ಈ ರೀತಿ ಇದೆಯೆಂದು ಹೇಳಿದರು ಆಗ ಅವರು ಅವನಿಗೆ ನೇರವಾಗಿ ಏನು ಕೇಳಿದರೆಂದರೆ, ಕಾನೂನು ಏಕೆ? ಕಾನೂನು ಮಾಡಿರುವಂಥಾದ್ದು ಜನರಿಗೆ ಸಹಾಯವನ್ನು ಮಾಡುವುದಕ್ಕೆ, ಜನರಿಗೆ ಅದರಿಂದ ತೊಂದರೆಯಾಗುವುದಾದರೆ, ಅದನ್ನು repeal ಮಾಡೋಣ ವೆಂದು ಹೇಳಿದರು ನಮ್ಮ ಗಮನಕ್ಕೆ ಅದನ್ನು ತನ್ನಿ, we will repeal it, ಎಂದು ಹೇಳಿದರು ಕಾನೂನು ಅನ್ನು ನೆಪವಾಗಿಟ್ಟುಕೊಂಡು ಜನರಿಗೆ ತೊಂದರೆ ಮಾಡುವಂಥಾ ಅಧಿಕಾರಿಗಳನ್ನು ಏನು ಮಾಡಬೇಕು? ಅದನ್ನು ಬದಲಾವಣೆ ಮಾಡಬೇಕು ನಾನು ಮೊನ್ನೆ ಹೇಳಿದೆ, ಸರ್ಕಾರ ಹೇಳಿದ ಮಾತನ್ನು ಅದಿಕಾರಿ ಕೇಳದೇ ಹೋದರೆ ಅವನನ್ನು ಅಲ್ಲಿಂದ sift ಮಾಡಿ ಬೇರೆ ಯಾವ ಅಧಿಕಾರಿ ನಿಮ್ಮ ಮಾತನ್ನು ಕೇಳುತ್ತಾನೋ ಅವನನ್ನು ಅಲ್ಲಿಗೆ ತನ್ನಿ ಆದರೆ ಮಾನ್ಯ ಉಪ ಮುಖ್ಯಮಂತ್ರಿಯವರೆ, ಒಂದೇ ಜಿಲ್ಲೆಯಲ್ಲಿ ಒಂದೇ ಮನೆಯವರನ್ನು ಹಾಕುವಂಥಾದ್ದನ್ನು ತಪ್ಪಿಸಬೇಕಾಗುತ್ತದೆ ದಯವಿಟ್ಟು ಈ ರೀತಿ ಒಂದೇ ಜಿಲ್ಲೆಯಲ್ಲಿ ಒಂದೇ ಕಡೆ ಹಾಕಿದರೆ

ಶ್ರೀ ಜೆ ಸಿ ಮಾಧುಸ್ವಾಮಿ ಮಾನ್ಯ ಅಧ್ಯಕ್ಷರೆ, ಈಗ ಪ್ರಶ್ನೆ ಅದಿಕಾರಿ ಯಾರ ಮಾತನ್ನು ಕೇಳಬೇಕೆನ್ನುವಂಥಾದ್ದು ಈಗ constitutional ಆಗಿ ಇರುವವರದಾ, ಅಥವಾ unconstitutional authority ಯದೊ ಅಂಥಾ

ಅಧ್ಯಕ್ಷರು ಶ್ರೀ ಜೆ ಸಿ ಮಾಧುಸ್ವಾಮಿಯವರೆ, ನಿಮ್ಮ ನಿಮ್ಮಲ್ಲೆ ಚರ್ಚೆ ಬೇಡ

ಶ್ರೀ ಕೆ ಆರ್ ರಮೇಶ್‌ಕುಮಾರ್ ಮಾನ್ಯ ಅಧ್ಯಕ್ಷರೆ, ಈ ದೇಶದ ಇತಿಹಾಸವೇ, ಆ issue ಮೇಲೆ ಬದಲಾಯಿತು ಮಾನ್ಯ ಸಂಜಯ ಗಾಂಧಿಯವರು, He was not even a member of Parliamnet, He was controlling the whole administration, ಎಂದು ಶ್ರೀ ಜಯಪ್ರಕಾಶ್ ನಾರಾಯಣ್‌ರವರು extra constitutional authority ಇರಬಾರದೆಂದು ದೊಡ್ಡ issue ಮಾಡಿದರು ನಮಗೆ ಈಗ ಅನೇಕ ವಿಚಾರಗಳಲ್ಲಿ we get a feeling that there is extra constitutional authority being very much alive and working in Karnataka, Which is respomsible for is all these things That is the point

ಅಧ್ಯಕ್ಷರು ಮಾನ್ಯ ರಮೇಶ್ ಕುಮಾರ್‌ರವರೆ, ಅವರು ಮಾತನಾಡಲಿ

ಶ್ರೀ ಕೆ ಜಯಪ್ರಕಾಶ್ ಹೆಗ್ಡೆ Constitutional authority, extra constitutional authority ಯಾವುದು ಎಂದು ನಮಗೆ confusions Start ಆಗಿ ಬಿಟ್ಟಿದೆ I am totally confused ಎಲ್ಲಾ ಕಡೆಗಳಲ್ಲೂ ಇದು ಆಗಿದೆ ಆ ಪರಿಸ್ಥಿತಿ ಹೋಗಲಾಡಿಸುವ ಪ್ರಯತ್ನವನ್ನು ಮಾಡಬೇಕು ಇನ್ನು ಗ್ರಾಮೀಣಾಭಿವೃದ್ಧಿಯ ಬಗ್ಗೆ ಇಲ್ಲಿ ನಿನ್ನೆ ಮಾನ್ಯ ಉದಾಸಿಯವರು ಇದ್ದರು, ಇವತ್ತು ಇಲ್ಲ ನಾನು ಅವರನ್ನು ಕೇಳಿಕೊಳ್ಳುವಂಥಾದ್ದು ಇಷ್ಟೆ ಶಾಸಕರು, ಜಿಲ್ಲಾ ಪಂಚಾಯತ್ ಸದಸ್ಯರು, ತಾಲ್ಲೂಕು ಪಂಚಾಯತ್‌ನಲ್ಲಿ, ಗ್ರಾಮ ಪಂಚಾಯತ್‌ಗಳಲ್ಲಿ ಹಸ್ತಕ್ಷೇಪ ಮಾಡಬಾರದೆಂಬುದನ್ನು ನಾನು ಒಪ್ಪುತ್ತೇನೆ ಆದರೆ ಯಾರ್‍ಯಾರಿಗೆ ಯಾವ್ಯಾವ ಅಧಿಕಾರ ಇದೆಯೆನ್ನುವಂದಾದ್ದು ಸದಸ್ಯರಿಗೆ ಗೊತ್ತಾಗಬೇಕು ಜನರಿಗೂ ಗೊತ್ತಾಗಬೇಕು. ಏಕೆಂದರೆ ಮತ ಹಾಕುವಾಗ ಸಹ ಶಾಸಕರು ಕುಡಿಯುವ ನೀರು ಕೊಟ್ಟಿಲ್ಲ, ರಸ್ತೆ ಮಾಡಿಲ್ಲವೆನ್ನುವ ಪರಿಸ್ಥಿತಿ ಬರಬಾರದು ಇದನ್ನು ನೇರವಾಗಿ ಜನರಿಗೆ ತಿಳಿಸಿದಾಗ ಈ ಬದಲಾವಣೆಯನ್ನು ತರುವುದಕ್ಕೆ ಸಾಧ್ಯವಾಗುತ್ತದೆ

(11 30 AM)

ಇದು ಆಗದೇ ಇದ್ದಾಗ, ಶಾಸಕರ ಹತ್ತಿರ ಬಂದು ಕುಡಿಯುವ ನೀರು ಕೊಡಿ ಆಶ್ರಯ ಮನೆ ಕೊಡಿ ಎನ್ನುವುದನ್ನೆಲ್ಲ ತಂದಾಗ ಮಾತ್ರ ಈ ಚರ್ಚೆ ಪ್ರಾರಂಭವಾಗುವಂಥಾದ್ದು ಅದನ್ನು ಜನರಿಗೆ ತಿಳಿಸುವಲ್ಲಿ ಸರ್ಕಾರದ ವೈಫಲ್ಯವನ್ನು ನಾನು ಕಾಣುತ್ತೇನೆ ಸರ್ಕಾರ ಇದನ್ನು ಮಾಡಿದಾಗ ಯಾರಿಗೂ ಅಧಿಕಾರ ಬೇಕಾಗಿಲ್ಲ ನಮ್ಮ ಅದಿಕಾರ ಕಡಿಮೆಯಾದರೆ ನಮಗೆ ಸಂತೋಷ ಆದರೆ ಜನರ ಈ ಸಮಸ್ಯೆಗಳನ್ನು ಹೋಗಲಾಡಿಸುವಂಥ ಪ್ರಯತ್ನವನ್ನು ನಾವು ಮಾಡಬೇಕು ಕುಡಿಯುವ ನೀರಿನ ಬಗ್ಗೆ ಹೇಳಬೇಕೆಂದರೆ, it is a total failure on the part of the Government

ಶ್ರೀ ಡಿ ಆರ್ ಪಾಟೀಲ್ ನಮ್ಮ ಹಾಗೆ ಎಂ ಪಿ ಗಳೂ ಸಹ ಚುನಾಯಿತ ಪ್ರತಿನಿಧಿಗಳೇ, ಆದರೂ ಜನ ಅವರ ಹತ್ತಿರ ಹೋಗುವುದಿಲ್ಲ ಏಕೆಂದರೆ, ಜನರಿಗೆ ಪಕ್ಕಾ ಗೊತ್ತಿದೆ, ಈ ದೇಶದಲ್ಲಿ ಅಧಿಕಾರಿಗಳ ಮುಖಾಂತರ ಕೆಲಸವಾಗಬೇಕು ಆ ಅಧಿಕಾರಿಗಳನ್ನು transfer ಮಾಡುವ

ಅಧಿಕಾರ MLA ಗಳಿಗಿದೆ ಅದಕ್ಕೆ, MLA ಯವರನ್ನು ಹಿಡಿದರೆ ನಮ್ಮ ಕೆಲಸವಾಗುತ್ತದೆ ಎಂದು ತಿಳಿದಿದ್ದಾರೆ

ಶ್ರೀ ಕೆ ಜಯಪ್ರಕಾಶ್ ಹೆಗ್ಡೆ ನಾನು ಅದನ್ನು ಒಪ್ಪುವುದಿಲ್ಲ Transfer ಮಾಡುವ ಅಧಿಕಾರ ನಮಗಿಲ್ಲ ಪತ್ರವನ್ನು ಮಾತ್ರ ನಾವು ಕೊಡುತ್ತೇವೆ ಆದರೆ ವರ್ಗಾವಣೆ ಆಗುತ್ತದೋ, ಬಿಡುತ್ತದೋ, ಹೇಗೆ ಆಗುತ್ತದೆ ಎನ್ನುವುದು ನಮಗೆ ಗೊತ್ತಿಲ್ಲ ಪತ್ರ ಮಾತ್ರ ಶಾಸಕರದ್ದು

ಶ್ರೀ ಡಿ ಆರ್ ಪಾಟೀಲ್ ನಮ್ಮ ಪತ್ರದ ಮೇಲೆ ಆಗುತ್ತದಲ್ಲ

ಶ್ರೀ ಕೆ ಜಯಪ್ರಕಾಶ್ ಹೆಗ್ಡೆ ನಮ್ಮದು ಪತ್ರ ಮಾತ್ರ. ಉಳಿದದ್ದು ಏನೇನಾಗುತ್ತದೆ ಎನ್ನುವುದು ನಮಗೆ ಗೊತ್ತಿಲ್ಲ

ಒಬ್ಬ ಮಾನ್ಯ ಸದಸ್ಯರು ಪತ್ರ ಕೊಟ್ಟರೂ ಆಗುವುದಿಲ್ಲ

ಅಧ್ಯಕ್ಷರು ಬಹಳ ಹಿಂದೆ ಇದು ಇರಲಿಲ್ಲ 1983–84ರಿಂದ ಈ transfer ವಿಷಯ ವಿಧಾನಸೌಧಕ್ಕೆ ಬಂತು ಇದನ್ನು ಒಂದು ಜಾತ್ರೆಯಂತೆ ಮಾಡಿದ್ದು 1983ರಿಂದೀಚೆಗೆ 1983ರಿಂದ ಹಿಂದಕ್ಕೆ ಅದು ಏಕಿರಲಿಲ್ಲ? ಅದಕ್ಕೇ ನಾವು ಹೋಗಬಹುದು

ಶ್ರೀ ಡಿ ಆರ್ ಪಾಟೀಲ್ · ಒಳ್ಳೆಯವರು ಎನ್ನುವವರು ಕೆಟ್ಟ ಕೆಲಸ ಮಾಡುತ್ತಾರಲ್ಲ ಅದರಂತೆ, ರಾಮಕೃಷ್ಣ ಹೆಗಡೆಯವರು ಮಾಡಿದಂಥ ಕೆಟ್ಟ ಕೆಲಸವಿದು ನಿಜಲಿಂಗಪ್ಪನವರು ಬಹಳ ಒಳ್ಳೆಯ ನಾಯಕರು ಆದರೆ ಆ Prohibition relax ಮಾಡಿದವರು ಅವರೇ ಒಳ್ಳೆಯವರು ಮಾಡುವಂಥ ಕೆಟ್ಟ ಕೆಲಸವಿದು

ಶ್ರೀ ಕೆ ಜಯಪ್ರಕಾಶ್ ಹೆಗ್ಡೆ ಹಾಗಲ್ಲ ಪಾಟೀಲರೇ, ಒಬ್ಬರ ಜುಟ್ಟನ್ನು ಇನ್ನೊಬ್ಬರ ಕೈಯ್ಯಲ್ಲಿ ಕೊಟ್ಟಿದ್ದಾರೆ, ಯಾರೂ ಸರಿಯಾಗಿರಬಾರದೆಂದು ಜಿಲ್ಲಾ ಪಂಚಾಯತಿಯವರೂ ಚುನಾಯಿತ representatives

XXX

ಅಧ್ಯಕ್ಷರು ಪಾಟೀಲರೇ, ಅದರ ಬಗ್ಗೆ ಚರ್ಚೆಯಾಗುವುದು ಬೇಡ, ಅವರು ಮಾತನಾಡಲಿ

XXX ಅಧ್ಯಕ್ಷರ ಅಪ್ಪಣೆ ಮೇರೆಗೆ ಈ ಪದಗಳನ್ನು ಕಡತದಿಂದ ತೆಗೆದು ಹಾಕಲಾಗಿದೆ

ಶ್ರೀ ಕೆ ಜಯಪ್ರಕಾಶ್ ಹೆಗ್ಡೆ · ಕುಡಿಯುವ ನೀರಿನ task force ಬಗ್ಗೆ ನಾನು ಮಾತನಾಡುತ್ತಿದ್ದೆ ಗ್ರಾಮ ಪಂಚಾಯಿತಿಯವರು implementing authority ಮತ್ತು ಅವರೇ manage ಮಾಡುವುದು ಎಂದು ಇತ್ತು ಅದನ್ನು ತೆಗೆದು

ಶ್ರೀ ಎಸ್ ಎಸ್ ಪಾಟೀಲ್ ಇಲ್ಲಿ ಇಲ್ಲದವರ ಬಗ್ಗೆ ಮಾತನಾಡುವುದು ಸರಿಯಲ್ಲ ಅಧ್ಯಕ್ಷರೇ ಯಾರು ಮಾತನಾಡಿದರೂ ತಪ್ಪು

ಶ್ರೀ ಡಿ ಆರ್ ಪಾಟೀಲ್ ಮತ್ತೆ ಇತಿಹಾಸ ಮಾತನಾಡುವುದು ಬೇಡವೇ?

ಶ್ರೀ ಎಸ್ ಎಸ್ ಪಾಟೀಲ್ ಏನೂ ಇತಿಹಾಸವಿಲ್ಲ ಸುಮ್ಮನೆ ಏಕೆ ಮಾತನಾಡುತ್ತೀರಿ? ಅದು ತಪ್ಪು, ಈ ರೀತಿಯಾಗಿ ಮಾತನಾಡಬಾರದು

ಶ್ರೀ ಡಿ ಆರ್ ಪಾಟೀಲ್ ನಾವು ಏನು ತಪ್ಪು ಮಾತನಾಡಿದ್ದೇವೆ ಎಂದು ಹೇಳಿ

ಅಧ್ಯಕ್ಷರು ಆಯಿತು, ಅವರು ಮಾತನಾಡಲು ಬಿಡಿ

XXX

ಶ್ರೀ ಕೆ ಜಯಪ್ರಕಾಶ್ ಹೆಗ್ಡೆ ಎಲ್ಲ ಅವಧಿಯಲ್ಲೂ ಕೂಡ transfers ಆಗಿದೆ ಅದರ ಬಗ್ಗೆ ಈಗ ಚರ್ಚೆ ಬೇಡ

ಅಧ್ಯಕ್ಷರು ಆಂಜನೇಯ ಅವರೇ ನೀವು ಕುಳಿತುಕೊಳ್ಳಿ ಅವರು ಮಾತನಾಡಲಿ, ಕೊನೆಯ ಹಂತದಲ್ಲಿದ್ದಾರೆ

ಶ್ರೀ ಕೆ ಜಯಪ್ರಕಾಶ್ ಹೆಗ್ಡೆ ಕುಡಿಯುವ ನೀರಿನ ಬಗ್ಗೆ ಈ ಸದನದಲ್ಲಿ ಬಹಳಷ್ಟು ಚರ್ಚೆಯಾಗಿದೆ ಶಾಸಕರಿಗೆ ಅಧಿಕಾರ ಕೊಡಲಿಕ್ಕೆ ಬರುವುದಿಲ್ಲ ಎಂದು ಹೇಳಿದರು Task force ಅನ್ನು ಮಾಡಿದುದ್ದನ್ನು ಬರಾಕಾಸ್ತ್ ಮಾಡಿಲ್ಲ ನಂತರ, ಅಧಿಕಾರಿಗಳದ್ದೊಂದು Monitoring Cell ಎಂದು ಮಾಡಿದ್ದೀರಿ ಅದು ಆಗುತ್ತದೆಯೇ? ಶಾಸಕರುಗಳಿಗೆ ಅಧಿಕಾರವನ್ನು ಕೊಡಲಿಕ್ಕೆ ಆಗದಿದ್ದರೆ, ಅಧಿಕಾರಿಗಳಿಗೆ ಅಧಿಕಾರವನ್ನು ಕೊಡಲಿಕ್ಕೆ ಆಗುತ್ತದೆಯೇ ಎನ್ನುವುದು ನನ್ನ ಪ್ರಶ್ನೆ ಅನೇಕ ಕಡೆಗಳಲ್ಲಿ ಇನ್ನೂ ಸಾಲವನ್ನೇ ತೀರಿಸಿಲ್ಲ ಆ ಹಣವನ್ನು ಕೊಡುವಂಥ ವ್ಯವಸ್ಥೆ ಆಗಬೇಕು ಕುಡಿಯುವ ನೀರಿನ ವ್ಯವಸ್ಥೆಯನ್ನು ಜಾರಿಗೆ ತರುವಂಥಾದ್ದು ಮತ್ತು ಅದನ್ನು

XXX ಅಧ್ಯಕ್ಷರ ಅಪ್ಪಣೆ ಮೇರೆಗೆ ಈ ಪದಗಳನ್ನು ಕಡತದಿಂದ ತೆಗೆದು ಹಾಕಲಾಗಿದೆ

ನಡೆಸಿಕೊಂಡು ಹೋಗುವಂಥ ವ್ಯವಸ್ಥೆಯಲ್ಲಿ ಗ್ರಾಮ ಪಂಚಾಯಿತಿಯವರು ಒಳ್ಳೆಯ ಕೆಲಸವನ್ನು ಮಾಡಿದ್ದಾರೆ ಆದರೆ ಅದನ್ನು ತೆಗೆದು, ಈಗ ಜಾರಿಗೆ ತರುವಂಥಾದ್ದನ್ನು ಜಿಲ್ಲಾ ಪಂಚಾಯತಿಗೆ ಕೊಟ್ಟು, ಅದರ ವಿಸ್ತರಣೆ ಕಾಮಗಾರಿ maintenance ಅನ್ನು ಗ್ರಾಮ ಪಂಚಾಯಿತಿಗೆ ಕೊಟ್ಟಿದ್ದು, ಅವರ ಜುಟ್ಟನ್ನು ಇವರ ಹತ್ತಿರ, ಇವರ ಜುಟ್ಟನ್ನು ಅವರ ಹತ್ತಿರ ಕೊಟ್ಟು ಯಾವ ಕೆಲಸವನ್ನೂ ಸರಿಯಾಗಿ ಮಾಡದಿದ್ದ ಹಾಗೆ ಮಾಡಿದ್ದಾರೆ ಅದನ್ನು ಯಾವುದಾದರೂ ಒಂದು ವ್ಯವಸ್ಥೆಗೆ ಕೊಡಬೇಕು ಎಂದು ಹೇಳುತ್ತೇನೆ ಅಧಿಕಾರ ವಿಕೇಂದ್ರೀಕರಣ ವ್ಯವಸ್ಥೆಯಲ್ಲಿ ಗ್ರಾಮ ಪಂಚಾಯತಿಯ ಮೇಲೆ ಕ್ರಮ ತೆಗೆದುಕೊಳ್ಳಲು ತಾಲ್ಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿಗೆ ಅವಕಾಶವಿರಬಾರದು ಒಬ್ಬರ ಮೇಲೆ ಒಬ್ಬರಿಗೆ ಏನು ಹಿಡಿತವಿದೆ, ಅದನ್ನು ತಪ್ಪಿಸುವಂಥ ವ್ಯವಸ್ಥೆ ಆಗಬೇಕು ಎಂದು ಹೇಳುತ್ತೇನೆ ಇಲ್ಲದಿದ್ದರೆ, ಪ್ರತಿಯೊಂದು ಗ್ರಾಮ ಪಂಚಾಯಿತಿಯ ಕೆಲಸದಲ್ಲಿ ಜಿಲ್ಲಾ ಪಂಚಾಯಿತಿ ಯವರು ಹಸ್ತಕ್ಷೇಪ ಮಾಡುತ್ತಾರೆ, ತಾಲ್ಲೂಕು ಪಂಚಾಯಿತಿಯವರೂ ಹಸ್ತಕ್ಷೇಪ ಮಾಡುತ್ತಾರೆ ಇದನ್ನು ನಾವು ನೋಡುತ್ತಿದ್ದೇವೆ ತಾಲ್ಲೂಕು ಪಂಚಾಯಿತಿಗಳಿಗೆ ಕೆಲಸ ಕಡಿಮೆ ಇದೆ ಇದ್ದುದ್ದನ್ನೇ ಸ್ವಲ್ಪ ಹಂಚಿ ಹಾಕಿ ಎಂದು ನಾನು ಹೇಳುತ್ತಿದ್ದೇನೆ ನಮ್ಮಲ್ಲಿ Engineering Divisionನಲ್ಲಿ Engineers ಇಲ್ಲ ಅವರು ನಮ್ಮ ಭಾಗಕ್ಕೆ ಏಕೆ ಬರುವುದಿಲ್ಲ ಎಂದು ನನಗೆ ಗೊತ್ತಿಲ್ಲ ತೋಟಗಾರಿಕಾ ಮಿಷನ್ ಎಂದು ಇದ್ದು ಅದರಲ್ಲಿ ಹಣ ಬಂದಿದೆ ಆದರೆ ಸರಿಯಾದ ರೀತಿಯಲ್ಲಿ ಕೆಲಸವಾಗುತ್ತಿಲ್ಲ ಅದರಲ್ಲಿ 17 ಜಿಲ್ಲೆಗಳನ್ನು select ಮಾಡಿದ್ದಾರೆ ಆ ಹಣವನ್ನು ಯಾವ ರೀತಿಯಲ್ಲಿ ವಿನಿಯೋಗ ಮಾಡಬೇಕು ಎನ್ನುವಂಥಾದ್ದು ಆಗುತ್ತಿಲ್ಲ ನಮ್ಮ ಜಿಲ್ಲೆಗಳಲ್ಲಿ ನಮ್ಮನ್ನು ಒಂದು ಸಭೆಗೂ ಕರೆದಿಲ್ಲ ಅಲ್ಲಿ ಏನಾಗುತ್ತಿದೆ ಎಂದು ನಮಗೆ ಗೊತ್ತಿಲ್ಲ ತೋಟಗಾರಿಕೆ ಮತ್ತು ಕೃಷಿಯನ್ನು ತೆಗೆದುಕೊಂಡರೆ, ತೋಟಗಾರಿಕೆಯ revenue is 40% of the revenue from agriculture ಅದಕ್ಕೆ ಉತ್ತೇಜನವನ್ನು ಕೊಡಬೇಕು ಈಗ ಎಲ್ಲರೂ ಕೃಷಿಯಿಂದ ತೋಟಗಾರಿಕೆಗೆ shift ಮಾಡುತ್ತಿದ್ದಾರೆ ಭತ್ತ ಬೆಳೆಯುವುದು, ರಾಗಿ ಬೆಳೆಯುವುದು ಇವುಗಳನ್ನೆಲ್ಲ ಕಡಿಮೆ ಮಾಡಿದ್ದಾರೆ ಏಕೆಂದರೆ labour expensive ಆಗಿದೆ ನಮ್ಮ ಕಡೆಯಲ್ಲಂತೂ ಸಾಧ್ಯವೇ ಇಲ್ಲ ಅದಕ್ಕೋಸ್ಕರ ಬದಲಾವಣೆಯನ್ನು

ಮಾಡಿಕೊಳ್ಳುತ್ತಿದ್ದಾರೆ ತೋಟಗಾರಿಕಾ ಇಲಾಖೆಯವರು ಇನ್ನೂ ಹೆಚ್ಚು ಕೆಲಸವನ್ನು ಮಾಡುವಂಥ ವ್ಯವಸ್ಥೆಯನ್ನು ಮಾಡಬೇಕೆಂದು ಹೇಳುತ್ತೇನೆ

ಇನ್ನು ಮೀನುಗಾರಿಕೆಯ ಬಗ್ಗೆ ಸ್ವಲ್ಪ ಮಾತನಾಡುತ್ತೇನೆ New Indian Express ನಲ್ಲಿ ಒಂದು article ಬಂದಿದೆ "Harbours crave for Government attention" ಎಂದು ಬಂದಿದೆ ಬೇರೆ ಎಲ್ಲ ವ್ಯವಸ್ಥೆಗಿಂತ ಮುಂಚೆ ನೀವು dridging ಅನ್ನು ಮಾಡಿ ಎಂದು ಪ್ರತಿಯೊಂದು ಮೀನುಗಾರಿಕೆ ಬಂದರನ್ನು dridging ಮಾಡಿ ಅಂತ ಅವರು ಕೇಳುತ್ತಾರೆ ಏಕೆಂದರೆ, ಮಳೆಗಾಲದಲ್ಲಿ ಅಪಘಾತವಾಗಿ ಅವರು ಸತ್ತ ಮೇಲೆ ನೀವು ಪರಿಹಾರ ಕೊಡುವುದರ ಬದಲು ಮೊದಲೇ dridging ಅನ್ನು ಮಾಡಿ ಅಪಘಾತವಾಗು ವುದನ್ನು ತಪ್ಪಿಸಿ ಈ ರೀತಿ ಮಾಡುವುದರ ಮುಖಾಂತರ ಮೀನುಗಾರರ ಜೀವವನ್ನು ರಕ್ಷಣೆ ಮಾಡಬೇಕು ಎಂದು ತಮ್ಮ ಹತ್ತಿರ ಕೇಳುತ್ತೇನೆ ಮೊನ್ನೆ ನಾವು ನಿಮ್ಮ ಸಭೆಗೆ ಬಂದಿದ್ದೆವು ಅವರು ನಿಮ್ಮ ಮುಂದೆ ಅನೇಕ ಬೇಡಿಕೆಗಳನ್ನು ಇಟ್ಟಿದ್ದಾರೆ ಬೇರೆ ಎಲ್ಲದಕ್ಕೂ tax ಅನ್ನು ತೆಗೆದಿದ್ದೀರಿ Electronic gadgets ನದು ಇನ್ನೂ ತೆಗೆದಿಲ್ಲ Fish finder, GPS navigators, ಅದರ tax ಅನ್ನು ತೆಗೆಯಬೇಕೆಂದು ಹೇಳುತ್ತೇನೆ

ಶಿಕ್ಷಣದ ಬಗ್ಗೆ ಹೇಳುವುದಾದರೆ, ನಿನ್ನೆ ಚರ್ಚೆಯಾಯಿತು ಸಿಲಬಸ್ ಅನ್ನು ಬದಲಾವಣೆ ಮಾಡಬೇಕಾಗುತ್ತದೆ ಇತ್ತೀಚೆಗೆ ಏನು relevant ಇದೆ ಆ ಸಿಲಬಸ್ ಅನ್ನು ತರಬೇಕಾಗುತ್ತದೆ Specialization ಬೇಕಾಗುತ್ತದೆ ಕಾಮರ್ಸ್‌ನಲ್ಲಾಗಲೀ ಆರ್ಟ್ಸ್‌ನಲ್ಲಾಗಲೀ, ಸೈನ್ಸ್‌ನಲ್ಲಾಗಲೀ ಡಿಗ್ರಿ ಲೆವೆಲ್‌ನಲ್ಲಿ Specialization ಮಾಡುವಂಥ ವ್ಯವಸ್ಥೆಯಾಗಬೇಕು ನಿನ್ನೆ ಮಾನ್ಯ ಹೊರಟ್ಟಿಯವರು ಹೇಳಿಕೆಯನ್ನು ಕೊಟ್ಟಿದ್ದಾರೆ, Pre Universityಯಲ್ಲಿ ಉಪನ್ಯಾಸಕರ ನೇಮಕಾತಿಗೆ C E T ಯನ್ನು ಮಾಡುತ್ತೇವೆ ಎಂದು ಹೇಳಿದ್ದಾರೆ ಒಂದು ವೇಳೆ C E T ಯನ್ನು ತರುವುದಾದರೆ, ಈಗಾಗಲೇ ಪ್ರಾರಂಭವಾಗಿರುವ ನೇಮಕಾತಿ ಪ್ರಕ್ರಿಯೆಯನ್ನು ನಿಲ್ಲಿಸಬೇಕಾಗುತ್ತದೆ ನಮ್ಮ ಕಾಲೇಜುಗಳಲ್ಲಿ ಎಷ್ಟು ಹುದ್ದೆಗಳು ಖಾಲಿ ಇವೆ ಎನ್ನುವುದನ್ನು counselingನಲ್ಲಿ notify ಮಾಡಿಲ್ಲ Notify ಮಾಡಿದರೆ ನಮ್ಮ ಭಾಗದ ಶಿಕ್ಷಕರು ಅದನ್ನು ಕೇಳುತ್ತಾರೆ, ಅಲ್ಲಿ fill up ಆಗುತ್ತದೆ ದಯವಿಟ್ಟು ಅದನ್ನು ಮಾಡುವಂಥ ವ್ಯವಸ್ಥೆಯನ್ನು ಮಾಡಬೇಕೆಂದು ನಾನು ತಮ್ಮ ಮುಖೇನ

ಹೇಳುತ್ತೇನೆ ಇನ್ನು, ಹೌಸಿಂಗ್ ವಿಚಾರದಲ್ಲಿ ಒಂದು ಪ್ರಶ್ನೆ ಎಲ್ಲದರಲ್ಲಿ ಬಡ್ಡಿಯನ್ನು ಮನ್ನಾ ಮಾಡುತ್ತಾರೆ ಆಶ್ರಯ ಮನೆಗಳನ್ನು ಕೊಟ್ಟು ಎಷ್ಟೋ ವರ್ಷವಾಯಿತು, ಅನೇಕ ಮನೆಗಳ ಹಣವನ್ನು ವಾಪಸ್ಸು ಕಟ್ಟಲಿಕ್ಕಿಲ್ಲ ಎಂದು ಹೇಳುತ್ತಿದ್ದರು ಕೊನೆಯ ಪಕ್ಷ ಅದರ ಬಡ್ಡಿಯನ್ನಾದರೂ ಮನ್ನಾ ಮಾಡಿ, ಅಸಲನ್ನು ಕಟ್ಟುವಂಥ ವ್ಯವಸ್ಥೆಯನ್ನು ಮಾಡಿ ಸರ್ಕಾರ ಮನೆಯನ್ನು ಕಟ್ಟಿಸಿಕೊಡುತ್ತೇವೆ ಎಂದು ಹೇಳಿ

ಶ್ರೀ ಮಲ್ಲಿಕಾರ್ಜುನ ಖರ್ಗೆ ನಾವು ರೈತರ ಬೆಳೆ ಸಾಲ 25 ಸಾವಿರ ರೂಪಾಯಿಗಳನ್ನು ಮನ್ನಾ ಮಾಡಿ ಬಿಟ್ಟಿದ್ದೇವೆ ಇಲ್ಲಿ ಬಡವರು, ನಿರ್ಗತಿಕರು, ಕೂಲಿಕಾರರು, siteless, houselessಗೆ ಕೊಡುತ್ತಿರುವುದನ್ನು ಮನ್ನಾ ಮಾಡಿದರೆ ನಿಮಗೆ ಏನು ಗಂಟು ಹೋಗುತ್ತದೆ?

ಶ್ರೀ ರಾಮಚಂದ್ರಗೌಡ ನೀವು ಇದ್ದಾಗ ಅದನ್ನು ಮಾಡಲಿಲ್ಲವಲ್ಲ

ಶ್ರೀ ಮಲ್ಲಿಕಾರ್ಜುನ ಖರ್ಗೆ ಇನ್ನೊಂದು Chance ಕೊಡಿ ಮಾಡುತ್ತೇನೆ, ಆಗ ನೋಡಿ ಸರ್ಕಾರಿ ಜಮೀನಿನ ಒತ್ತುವರಿ ಬಗ್ಗೆ amendment ನಾನು ಮಾಡಿ ಕೊಟ್ಟಿದ್ದು ಯಾರ ಕಾಲದಲ್ಲಿ ಒತ್ತುವರಿ ಯಾಗಿದೆ ಎಂದು ನೋಡಿ ಭೂ ಸುಧಾರಣಾ ಕಾನೂನಿನಲ್ಲಿ 300 Land Tribunal ಮಾಡಿದಂಥವನು ನಾನೇ ಸುಮ್ಮನೆ ಹೇಳಿಕೊಳ್ಳುವುದು ಬೇಡ

ಶ್ರೀ ಕೆ ಜಯಪ್ರಕಾಶ ಹೆಗ್ಡೆ ಆ ವ್ಯವಸ್ಥೆ ಈಗ ಹೋಯಿತಲ್ಲ

ಶ್ರೀ ಹೆಚ್ ಡಿ ಬಸವರಾಜು ಈಗ Chance ಕೊಡುವುದು ಬೇಡ ಈಗ ನಿಮಗೆ ಜ್ಞಾನೋದಯವಾಗಿದೆ ಅದರಿಂದ ನಮ್ಮನ್ನು ಕೇಳುತ್ತಿದ್ದೀರಿ

(ಗೊಂದಲ)

ಶ್ರೀ ಹೆಚ್ ಡಿ ಬಸವರಾಜು ಮಾನ್ಯ ಜಯಪ್ರಕಾಶ್ ಹೆಗ್ಡೆಯವರೆ, ದಯವಿಟ್ಟು ಒಂದು ನಿಮಿಷ ಕುಳಿತುಕೊಳ್ಳಿ ನಿಮ್ಮ ಪರವಾಗಿಯೇ ಮಾತನಾಡುತ್ತಿದ್ದೇನೆ ನೀವು ಕೊಟ್ಟಂಥ ಸಲಹೆ ನಿಜಕ್ಕೂ ಶ್ಲಾಘನೀಯ ಎಲ್ಲರೂ ಪ್ರಶಂಸೆ ಮಾಡುವಂಥದ್ದು ಇವತ್ತು ವಿರೋಧ ಪಕ್ಷದಲ್ಲಿ ಕೂಡ ಜ್ಞಾನೋದಯವಾಗಿ ಮಾನ್ಯ ಖರ್ಗೆಯವರು ಕೂಡ ಇದನ್ನು ಮಾಡಿ ಎಂದು ಹೇಳುತ್ತಿದ್ದಾರೆ ಆದ್ದರಿಂದ, ನಾನು ಸರ್ಕಾರವನ್ನು ಒತ್ತಾಯ ಮಾಡುತ್ತಿದ್ದೇನೆ ಖಂಡಿತವಾಗಿ ಕೂಡ ಒಳ್ಳೆಯ ಹೆಸರು ತರುವಂಥದ್ದು ಆಶ್ರಯ ಮನೆಗಳಿಗೆ ಯಾರ್ಯಾರು ಸಾಲವನ್ನು ಪಡೆದಿದ್ದಾರೆ, ಅದನ್ನು ದಯವಿಟ್ಟು ಮನ್ನಾ ಮಾಡಬೇಕು, ಈ ರಾಜ್ಯದಲ್ಲಿ ಹೊಸ ಇತಿಹಾಸವನ್ನು ಬರೆಯಬೇಕು

ಅಧ್ಯಕ್ಷರು ಬಸವರಾಜ್‌ರವರೆ, ತಾವು ಕುಳಿತುಕೊಳ್ಳಿ

ಶ್ರೀ ಹೆಚ್ ಡಿ ಬಸವರಾಜು ಮಾನ್ಯ ಅಧ್ಯಕ್ಷರೆ, ರೈತರ ಬಗ್ಗೆ ಮಾತನಾಡುವಾಗ ನಾವೆಲ್ಲ ಎದ್ದು ನಿಂತುಕೊಳ್ಳುವುದಿಲ್ಲವೇ ಸರ್ ಬಡವರ ಬಗ್ಗೆ ವಿಷಯ ಚರ್ಚೆಗೆ ಬಂದಾಗ ನಾವೇಕೆ ಎದ್ದು ನಿಂತು ಮಾತನಾಡಬಾರದು? ನಾವು ಎಲ್ಲರನ್ನೂ ಕೇಳುತ್ತೇವೆ ಸರ್ ನೀವು ನಿಂತುಕೊಂಡು ಇದಕ್ಕೆ ಒತ್ತಾಯ ತೆಗೆದುಕೊಂಡು ಬನ್ನಿ ಬಡವರ ಪರವಾಗಿ ನೀವಿದ್ದೀರಾ, ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರ

(ಗೊಂದಲ)

ಅಧ್ಯಕ್ಷರು ಹೆಗ್ಡೆಯವರು ಮಾತನಾಡುತ್ತಿದ್ದಾಗ ನೀವು ಮಧ್ಯೆ ಎದ್ದು ನಿಂತು ಮಾತನಾಡಿದರೆ ಹೇಗೆ? ನೀವು ಕುಳಿತುಕೊಳ್ಳಿ

(ಗೊಂದಲ)

ಶ್ರೀ ಹೆಚ್ ಡಿ ಬಸವರಾಜು ಈ ಸರ್ಕಾರವನ್ನು ಒತ್ತಾಯ ಮಾಡಬೇಕಾಗಿದೆ ಹೆಗ್ಡೆಯವರ ಜೊತೆ ನಮ್ಮದು ಸಹ ಸಹಮತಿ ಇದೆ ದಯವಿಟ್ಟು ಮಾಡಬೇಕೆಂದು ನಾನು ಸರ್ಕಾರವನ್ನು ಕೈಮುಗಿದು ಕೇಳಿಕೊಳ್ಳುತ್ತಿದ್ದೇನೆ

ಶ್ರೀ ಕೆ ಜಯಪ್ರಕಾಶ್ ಹೆಗ್ಡೆ ಆಶ್ರಯ, ಭಾಗ್ಯಜ್ಯೋತಿಯನ್ನು ಸಹ ಮನ್ನಾ ಮಾಡಬೇಕೆಂದು ಹೇಳುತ್ತಾ, ರೈತರ ಸಾಲ ಮನ್ನಾ ಮಾಡಿದ್ದಾರೆ, ಸಂತೋಷ

ಶ್ರೀ ವಾಟಾಳ್ ನಾಗರಾಜ್ ಮಾನ್ಯ ಅಧ್ಯಕ್ಷರೆ,

ಅಧ್ಯಕ್ಷರು ದಯಮಾಡಿ ಕುಳಿತುಕೊಳ್ಳಿ ಅವರದಾಯಿತು ಈಗ ನಿಮ್ಮದೇನು?

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ ಮಧ್ಯೆ ಮಧ್ಯೆ ಇವೆಲ್ಲ ಇದ್ದರೆ ಸ್ವಲ್ಪ ಸಂತೋಷ ಇರುತ್ತದೆ ಜೊತೆಗೆ ತಮಗೂ ಸಂತೋಷವಾಗುತ್ತದೆ

ಅಧ್ಯಕ್ಷರು ವಾಟಾಳ್‌ರವರೆ, ಇನ್ನೂ ಸಹ ಇಲ್ಲಿ 10–12 ಜನ ಶಾಸಕರು ಮಾತನಾಡುವವರಿದ್ದಾರೆ ಇವತ್ತು ಚರ್ಚೆ ಮುಗಿಯಬೇಕು ಏನ್ರೀ ಮಾಡುವುದು? ಇದೇನಿದು, ನಿಮಗೆ ಅರ್ಥವಾಗುವುದಿಲ್ಲವೇ?

ಶ್ರೀ ವಾಟಾಳ್ ನಾಗರಾಜ್ ಇವೆಲ್ಲ ಮಧ್ಯೆ ಬಂದರೆ ಅದಕ್ಕೊಂದು ಶೋಭೆ ಬರುತ್ತದೆ ದಯವಿಟ್ಟು ಅವಕಾಶ ಕೊಡಿ

ಅಧ್ಯಕ್ಷರು ಶೋಭೆ ಇಲ್ಲ ಏನೂ ಇಲ್ಲ

ಶ್ರೀ ವಾಟಾಳ್ ನಾಗರಾಜ್ ಯಡಿಯೂರಪ್ಪನವರು ಸಾಲ ಮನ್ನಾ ಮಾಡಿದರು ಸಾಲ ಮನ್ನಾ ಮಾಡಬೇಕೆಂದು ನಿಮ್ಮ ಇಚ್ಛೆ ಇತ್ತು ಆ ರೈತರ ಸಲುವಾಗಿ ಹಿಂದೆ ಎಲ್ಲ ಹೋರಾಟ ಮಾಡಿದ್ದಿರಿ ಆದರೆ ಈಗ, ಅಕ್ಟೋಬರ್ 3 ರಂದು ದೊಡ್ಡ ಇತಿಹಾಸ ನಿರ್ಮಾಣವಾಗತಕ್ಕಂಥ ಅವಕಾಶ ಬರುತ್ತಿದೆ ಆವತ್ತು ಏನಾಗುತ್ತದೆ ಎನ್ನುವುದು ಅದು ಬೇರೆ ವಿಚಾರ ಆದರೆ, ಮಾನ್ಯ ಹೆಗ್ಡೆಯವರು ಈಗ ಏನು ಹೇಳಿದರೆಂದರೆ, ಭಾಗ್ಯಜ್ಯೋತಿ, ಕುಟೀರಜ್ಯೋತಿ, ಆಶ್ರಯ ಮನೆಗಳಿಗೆ ಸಾಲ ಮನ್ನಾ ಮಾಡುತ್ತೇವೆಂದು ನಿಮ್ಮ ಉತ್ತರದಲ್ಲಿ ಹೇಳಿ 3ನೇ ತಾರೀಖು ಆದಮೇಲೆ ಏನೇನು ಇತಿಹಾಸ ಆಗುತ್ತದೆ ಎಂದು ನಂತರ ನೋಡೋಣ ಈಗ ಹೇಳಿಬಿಡಿ ಈಗ ಹೇಳಿದರೆ ಏನಾಗುತ್ತದೆಂದರೆ, ಇದು ಬೇರೆ ವಿಚಾರ ಆಗುತ್ತದೆ

ಶ್ರೀ ಗೋಪಾಲಕೃಷ್ಣ ಬೇಳೂರು ಯಾವಾಗ ನೋಡಿದರೂ ಈ ಸಭೆಯಲ್ಲಿ ಅಕ್ಟೋಬರ್ 3ರ ದಿನವನ್ನೇ ಪ್ರಸ್ತಾಪ ಮಾಡುತ್ತಾರಲ್ಲಾ

ಶ್ರೀ ಬಿ.ಎಸ್ ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು ಮತ್ತು ಹಣಕಾಸು ಮಂತ್ರಿಗಳು) ಮಾನ್ಯ ಅಧ್ಯಕ್ಷರೆ, ಮುಂದೆ ಅಧಿಕಾರ ಬಿಟ್ಟು ಕಾರ್ಯಕ್ರಮ ಘೋಷಣೆ ಮಾಡಿ ಯಾರ ತಲೆ ಮೇಲೋ ಭಾರ ಹೇರುವಂಥದ್ದಾಗಿದ್ದರೆ ನೀವು ಹೇಳಿದಂತೆ ಈಗ announce ಮಾಡಿ ಓಡಿ ಹೋಗಬಹುದು ಗಟ್ಟಿಯಾಗಿ ಇಲ್ಲ ಇರಬೇಕೆಂದಿದ್ದೇವೆ ಅದಕ್ಕೋಸ್ಕರ ಸಾಧಕ ಬಾಧಕ ನೋಡಬೇಕಾಗುತ್ತದೆ

ಶ್ರೀ ವಾಟಾಳ್ ನಾಗರಾಜ್ ಸರ್, ನನಗೆ ಬಹಳ ಸಂತೋಷ

ಅಧ್ಯಕ್ಷರು . ವಾಟಾಳ್‌ರವರೆ, ಆಯಿತು, ಸಾಕು ಎಷ್ಟು ಬೇಕೋ ಅಷ್ಟು ಮಾತ್ರ ಇದ್ದರೆ ಚೆಂದ

ಶ್ರೀ ವಾಟಾಳ್ ನಾಗರಾಜ್ ನೀವು ದೀರ್ಘಕಾಲ ಇದ್ದೀರೆನ್ನುವ ಭರವಸೆಯನ್ನು, ಮಾತನ್ನು ಪ್ರಪ್ರಥಮವಾಗಿ ಇವತ್ತು ಬಾಯಿಬಿಟ್ಟಿದ್ದೀರಿ ನಮಗೆ ಬಹಳ ಸಂತೋಷ ಆದರೆ, ನಿಮ್ಮ ಮುಖ್ಯಮಂತ್ರಿಗಳು ಡೆಲ್ಲಿಯಲ್ಲಿ ಒಂದು ಹೇಳುತ್ತಾರೆ, ಇಲ್ಲಿ ಬಂದು ನಮಗೆ ಗೊತ್ತಿಲ್ಲವೆಂದು ಹೇಳುತ್ತಾರೆ ಮೈಸೂರಿನಲ್ಲೊಂದು ಹೇಳುತ್ತಾರೆ

(ಗೊಂದಲ)

ಅಧ್ಯಕ್ಷರು ನಾಗರಾಜ್‌ರವರೆ, ಜಾಸ್ತಿ ಆಯಿತು ಯಾವುದೋ ಒಂದು ವಿಚಾರವನ್ನು ಒಂದು ಸಲ ಪ್ರಸ್ತಾಪ ಮಾಡಿದರೆ ಅದಕ್ಕೆ ಗೌರವವಿರುತ್ತದೆ ಸುಮ್ಮನೆ ಅದನ್ನೇ ಎತ್ತಿಕೊಂಡು ಹೇಳುವುದು ಸರಿಯಲ್ಲ

ಹೆಗ್ಡೆಯವರೆ, ಮಾತನಾಡುವುದಿದ್ದರೆ ಮಾತನಾಡಿ ಇಲ್ಲದಿದ್ದರೆ ನಾನು ಬೇರೆಯವರನ್ನು ಮಾತನಾಡುವುದಕ್ಕೆ ಕರೆಯುತ್ತೇನೆ

(ಗೊಂದಲ)

ಶ್ರೀ ಕೆ ಜಯಪ್ರಕಾಶ್ ಹೆಗ್ಡೆ ಮನ್ನಾವನ್ನು ಮಾಡಿದ್ದಾರ ಸಂತೋಷ ಆದರೆ, ಒಟ್ಟಾಗಿ ಸಾಲವನ್ನು ಕೊಡಲಿಕ್ಕೆ ಆಗುತ್ತಿಲ್ಲ ನೀವು ಬೇಕಾದರೆ ವಿಚಾರಣೆ ಮಾಡಿಸಿ 750 ಕೋಟಿ ರೂಪಾಯಿಗಳನ್ನು ಮಾತ್ರ ಕೊಟ್ಟಿದ್ದರಿಂದ ಕಳೆದ ಸಲ ಯಾರು ಸಾಲವನ್ನು ತೆಗೆದುಕೊಂಡಿಲ್ಲವೋ ಅವರಲ್ಲಿ ಕೆಲವರಿಗೆ ಮಾತ್ರ ಸಿಕ್ಕಿದ್ದು ಬಿಟ್ಟರೆ, ಯಾರಿಗೆ ಸಾಲ ಮನ್ನಾ ಆಗಿದೆ, ಅವರಿಗೆ ಸಹಕಾರ ಸಂಘಗಳು ಸಾಲವನ್ನು ಕೊಡುತ್ತಿಲ್ಲ ಈಗ ಕೃಷಿ ಪ್ರಕ್ರಿಯೆ ಎಲ್ಲ ಮುಗಿಯುತ್ತಾ ಬಂತು ನೀವು ಇನ್ನೂ ಸಾಲ ಕೊಡದಿದ್ದರೆ ಹೇಗೆ? ಈ ಸಮಯ ಬಿಟ್ಟರೆ ಇನ್ಯಾವಾಗ ರೈತರಿಗೆ ಸಾಲ ಬೇಕು? ಆ ಸಮಸ್ಯೆ ಪರಿಹಾರ ಮಾಡಬೇಕೆಂದು ಹೇಳುತ್ತಾ, ಈ ಶಿಕ್ಷಣ, ಕ್ರೀಡೆ ಮತ್ತು cultural ಇಲಾಖೆ ಇವು ಒಂದಕ್ಕೊಂದು Co-ordinate ಮಾಡಿಕೊಳ್ಳದೇ ಇದ್ದರ ಬಹಳ ಕಷ್ಟವಾಗುತ್ತದೆ Sports ಗೆ ಶಿಕ್ಷಣ ಇಲಾಖೆಯಲ್ಲಿ ತಾಲ್ಲೂಕು ಮಟ್ಟದಲ್ಲಿ ಒಂದು ಕಾರ್ಯಕ್ರಮ ಮಾಡಿದರೆ ನಮಗೆ ಏಳೂವರೆ ಸಾವಿರ ರೂಪಾಯಿಗಳನ್ನು ಕೊಡುತ್ತಾರೆ

ಶ್ರೀ ಬಿ ಎಸ್ ಯಡಿಯೂರಪ್ಪ ಮಾನ್ಯ ಅಧ್ಯಕ್ಷರೆ, ಒಂದು ಸಂಗತಿಯನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ ಏಕೆಂದರೆ ನಮ್ಮ ರಾಜ್ಯದ ಜನತೆಗೆ ಗೊತ್ತಾಗಬೇಕು ನಾಳೆ ಉತ್ತರ ಕೊಡುವಾಗ ಹೇಳುವುದು ಬೇರೆ ಪ್ರತ್ಯೇಕವಾಗಿ ಅವರು ಪ್ರಶ್ನೆ ಮಾಡಿದ್ದರಿಂದ ಮಧ್ಯದಲ್ಲಿ ನಾನು ಒಂದು ಮಾತು ಹೇಳುವುದಕ್ಕೆ ಇಚ್ಛೆಪಡುತ್ತೇನೆ 2007--08ರಲ್ಲಿ ಈ ಜುಲೈ ಕೊನೆಯೊಳಗೆ 1544 ಕೋಟಿ ರೂಪಾಯಿಗಳನ್ನು ನಾವು ಸಾಲ ಕೊಟ್ಟಿದ್ದೇವೆ 5,46,814 ರೈತರಿಗೆ ನಾವು ಸಾಲ ಕೊಟ್ಟಿದ್ದೇವ ಕಳೆದ ವರ್ಷ ಇದೇ ಅವಧಿಯಲ್ಲಿ 315 ಕೋಟಿ ರೂಪಾಯಿಗಳನ್ನು ಸಾಲ ಅಂದರೆ ಈ ವರ್ಷದಲ್ಲಿ ಕೊಟ್ಟಿದ್ದಕ್ಕಿಂತ ಕಡಿಮೆ ಇತ್ತು ಆದರೆ ಆವಾಗ 3,11,668 ಜನರಿಗೆ ಸಾಲ ಕೊಟ್ಟಿದ್ದೆವು ಅಂದರೆ, ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಜುಲೈ ಕೊನೆಯವರೆಗೆ ಸಾಲ ಕೊಟ್ಟಿದ್ದೇವೆ ಇದನ್ನು ಹೆಚ್ಚು ಜನ ಉಪಯೋಗ ಮಾಡಿಕೊಂಡಿದ್ದಾರೆ, ಎಷ್ಟೆಷ್ಟು ಮನ್ನಾ ಆಗಿದೆ, ಯಾರ್ಯಾರಿಗೆ ಅನುಕೂಲವಾಗಿದೆ ಈ ಎಲ್ಲ ವಿವರಗಳನ್ನು ನಾನು ಉತ್ತರ ಕೊಡುವ ಸಮಯದಲ್ಲಿ ಹೇಳುತ್ತೇನೆ ಆದರೆ, ಮೇಲೆ ಮೇಲೆ ಇವತ್ತು ಸಹಕಾರ

ಸಂಘಗಳಿಂದ ಸಾಲ ಮನ್ನಾ ಆಗಿರುವುದರಿಂದ, ಮತ್ತು ನಾವು ಕೇವಲ 750 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದರಿಂದ ಸಾಲ ಸಿಕ್ಕುತ್ತಿಲ್ಲವೆನ್ನುವುದು ಸತ್ಯಕ್ಕೆ ದೂರವಾದದ್ದು ಕಳೆದ ವರ್ಷಕ್ಕೆ ಹೋಲಿಸಿದರೆ ಹೆಚ್ಚು ಜನರಿಗೆ ಸಾಲ ಕೊಟ್ಟಿದ್ದೇವೆ, ಕಳೆದ ವರ್ಷಕ್ಕಿಂತ ಈ ವರ್ಷ 300 ಕೋಟಿಗಿಂತ ಹೆಚ್ಚು ನಾವು ಕೊಟ್ಟಿದ್ದೇವೆ ಇಷ್ಟು ದಾಖಲೆಗೆ ಹೋಗಲಿ ಎಂದು ನಾನು ಹೇಳುತ್ತಿದ್ದೇನೆ ಬೇರೆ ಏನೂ ಕಾರಣವಲ್ಲ

ಶ್ರೀ ಕೆ ಜಯಪ್ರಕಾಶ್ ಹೆಗ್ಡೆ ಅದನ್ನು ಯಾವ ರೀತಿಯಾದರೂ ಪರಿಹರಿಸಬೇಕು ಇಲ್ಲದಿದ್ದರೆ ನೀವು ಒಂದು figure ಅನ್ನು ಕೊಡುತ್ತೀರಿ, ಅಲ್ಲಿ ಸ್ಥಳೀಯವಾದ ಸಮಸ್ಯೆ ಬೇರೆಯೇ ಇದೆ ರೈತರಿಗೆ ಸಾಲ ಸಿಗುತ್ತಿಲ್ಲ ಅದರ ಬಗ್ಗೆ ನೀವು ಮಾಹಿತಿಯನ್ನು ತರಿಸಿಕೊಳ್ಳಿ ಅದರ ಜೊತೆಗೆ ನಾನು ಹೇಳುತ್ತಿದ್ದದ್ದು ಏನೆಂದರೆ, Primary and Higher Educationನವರು ಏಳೂವರೆ ಸಾವಿರ ರೂಪಾಯಿಗಳನ್ನು ಕೊಟ್ಟು sports ಮಾಡಿ ಎಂದು ಹೇಳುತ್ತಾರೆ ಯೋಜನೆ, ಕ್ರೀಡಾ ಇಲಾಖೆಯವರು ಮತ್ತು ಶಿಕ್ಷಣ ಇಲಾಖೆಯವರು ಹೊಂದಾಣಿಕೆ ಮಾಡಿಕೊಳ್ಳಬೇಕು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯವರು, ಶಿಕ್ಷಣ ಇಲಾಖೆಯವರು ಹೊಂದಾಣಿಕೆ ಮಾಡಿಕೊಂಡು ಕಾರ್ಯಕ್ರಮ ಮಾಡಲಿಕ್ಕೆ ಪ್ರವಾಸೋದ್ಯಮ ಇವೆಲ್ಲವನ್ನೂ ಒಟ್ಟಿಗೆ ಮಾಡಿಕೊಂಡಾಗ ಸ್ವಲ್ಪ ಹೊಂದಾಣಿಕೆ ಯಾಗುತ್ತದೆ ನಿಮಗೆ funds, allocation ಕೂಡ ಜಾಸ್ತಿ ಬೇಕು, ಅದರ ಜೊತೆಗೆ ಹೊಂದಾಣಿಕೆಯನ್ನು ಮಾಡಿಕೊಳ್ಳದಿದ್ದರೆ ಎಲ್ಲ ಕಾರ್ಯಕ್ರಮಗಳನ್ನು ಮಾಡಲಿಕ್ಕೆ ಶಿಕ್ಷಕರು ಹೋಗಿ ಭಿಕ್ಷೆಯನ್ನು ಬೇಡುವಂಥ ಪರಿಸ್ಥಿತಿ ನಿರ್ಮಾಣವಾಗಿದೆ ಅದನ್ನು ಹೋಗಲಾಡಿಸಲಿಕ್ಕೆ ನೀವು ಮೂರೂ ಇಲಾಖೆಯವರು ಹೋದಾಣಿಕೆಯನ್ನು ಮಾಡಿಕೊಂಡು ಕೆಲಸ ಮಾಡಬೇಕೆಂದು ಹೇಳುತ್ತಿದ್ದೇನೆ ಏಕೆಂದರೆ, ಒಳ್ಳೊಳ್ಳೆಯ ಕಾರ್ಯಕ್ರಮವಿದೆ, ಅದು ಪ್ರತಿಭಾ ಕಾರಂಜಿ ಒಳ್ಳೆಯ ಕಾರ್ಯಕ್ರಮ, ಈ ಕ್ರೀಡೆಗಳನ್ನು ಮಾಡಿಸುವಂಥದ್ದು ಒಳ್ಳೆಯ ಕಾರ್ಯಕ್ರಮ, ಅದರ ಜೊತೆಗೆ trimester ಅನ್ನು ತೆಗೆದು semester ಮಾಡಿದ್ದು ಒಳ್ಳೆಯದು ಆದರೆ, ನಾನು ಹೇಳುವುದೇನೆಂದರೆ ಈ ಪ್ರತಿಭೆ ಗುರುತಿಸಲಿಕ್ಕೆ ವರ್ಷಕ್ಕೊಂದು ಪರೀಕ್ಷೆ ಮಾಡಿದರೆ ಸಾಕು trimester, semester ಎಂದು ಮಧ್ಯ ಮಧ್ಯದಲ್ಲಿ ಪರೀಕ್ಷೆ ಮಾಡಿ ಮಕ್ಕಳಿಗೆ ಬಹಳ ಸಮಸ್ಯೆಯಾಗಿ ಹೋಗಿದೆ ಅದರ ಜೊತೆಗೆ ಅಕ್ಷರ ದಾಸೋಹ ಇದೆ ಶಿಕ್ಷಕರಿಗೆ ಅಡಿಗೆ

ನೋಡಿಕೊಳ್ಳುವುದು, ತರಕಾರಿ ತರುವುದು ಕೆಲಸ ಆಗಿದೆಯೋ ಹೊರತು ಅಕ್ಷರ ದಾಸೋಹಕ್ಕೂ ಕೂಡ ಪ್ರತ್ಯೇಕ ವ್ಯವಸ್ಥೆ ಆಗಬೇಕಾಗುತ್ತದೆ ಬದಲಾವಣೆಯನ್ನು ಮಾಡಿ ಅದಕ್ಕೊಂದು ವ್ಯವಸ್ಥೆಯನ್ನು ಮಾಡದಿದ್ದರೆ ಶಿಕ್ಷಕರು ಪಾಠ ಮಾಡುವುದೋ ಅಥವಾ ಅಡಿಗೆಯನ್ನು ಮಾಡುವುದೋ ಎನ್ನುವ ಸಮಸ್ಯೆಯಲ್ಲಿದ್ದಾರೆ ಅಕ್ಷರ ದಾಸೋಹದಲ್ಲಿ ಅಡಿಗೆ ಮಾಡುವುದಕ್ಕೆ ಕುಕ್ ಇದ್ದಾರೆ, ಆದರೆ, ಆ ವ್ಯವಸ್ಥೆ ಸರಿಯಿಲ್ಲದಿದ್ದರೆ ಕ್ರಮ ತೆಗೆದುಕೊಳ್ಳುವುದು ಶಿಕ್ಷಕರ ಮೇಲಲ್ಲವೇ? ಆ ಬದಲಾವಣೆ ಆಗಬೇಕೆಂದು ನಾನು ಹೇಳುತ್ತಾ, ಈ ನಿರ್ವಹಣಾ ಬಜೆಟ್ ಅನ್ನು ನಾನು ಓದಿದೆ ಹಣವನ್ನು ಖರ್ಚು ಮಾಡದಿರುವುದು ಎಲ್ಲವನ್ನೂ ನಾನು ಹೇಳುವುದಿಲ್ಲ ಅರಣ್ಯ ಇಲಾಖೆ ಮತ್ತು ಬೇರೆ ಬೇರೆ ಇಲಾಖೆಗಳ ಬಗೆಗಿನ ಅಂಕಿಅಂಶಗಳನ್ನು ನಾನು ತಂದಿದ್ದೇನೆ ಬಹಳಷ್ಟು ಹಣವನ್ನು ಖರ್ಚು ಮಾಡದೇ ಅದು ಹಾಗೆಯೇ ವಾಪಸ್ಸು ಹೋಗಿದೆ ಕೆಲವಕ್ಕೆ ಕೇಂದ್ರದಿಂದ ಅನುಮೋದನೆ ಕೊಡಲಿಲ್ಲ ಅನುಮೋದನೆ ಏಕೆ ಕೊಡಲಿಲ್ಲ? ರಾಜ್ಯ ಸರ್ಕಾರದಿಂದ ಹೋಗಿ ಕೇಳಲಿಲ್ಲವೇ? ಕೇಂದ್ರ ಸರ್ಕಾರ ಕೊಡಲಿಲ್ಲವೇಕೆ? ಹಣ ವಾಪಸ್ಸು ಹೋಗುವಂತೆ ಪರಿಸ್ಥಿತಿ ನಿರ್ಮಾಣ ಮಾಡಿದ್ದರೆ ಆ ಇಲಾಖೆಗಳ ಅಧಿಕಾರಿಗಳ ತಪ್ಪಾಗುತ್ತದೆ ಇಲಾಖೆಗಳ ಸಂಬಂಧಪಟ್ಟ ಮಂತ್ರಿಗಳ ತಪ್ಪಾಗುತ್ತದೆ ಏಕೆಂದರೆ, ಅವರು review ಮಾಡಿಲ್ಲವೆಂದಾಯಿತು ಅವರು review ಮಾಡಬೇಕು ಮತ್ತು ಕೆಲಸ ಆಗದಿದ್ದರೆ ಆಗಲಿಲ್ಲವೆಂದು ಕೇಳಬೇಕು ನಿನ್ನೆ ಒಂದು ಚರ್ಚೆಯಾಯಿತು ಮಾನ್ಯ ಶ್ರೀರಾಮರೆಡ್ಡಿಯವರು ಮಾತನಾಡುವಾಗ growth and development ಬಗ್ಗೆ ಚರ್ಚೆಯಾಯಿತು Development is qualitative, growth is quantitative ಅದನ್ನು ಆಲೋಚನೆ ಮಾಡಬೇಕು ಅದಕ್ಕೆ ನಾನು ಅವರಿದ್ದಿದ್ದರೆ ಹೇಳುತ್ತಿದ್ದೆ, War is different from battle Growth development ಬೇರೆ Development ಆಗದೆ growth ಬರುವುದಿಲ್ಲ Growth ಆಗದೆ development ಬರುವುದಿಲ್ಲ ಎರಡೂ ಸಹ ಒಂದಕ್ಕೊಂದು ಹೊಂದಿಕೊಂಡು ಇರುತ್ತದೆ ಆದರೆ meaning defferent ಎಂದು ಅವರು ಅರ್ಥಮಾಡಿಕೊಳ್ಳಬೇಕೆಂದು ಹೇಳುತ್ತಾ, ಕಳೆದ ಸಲ ನಾವು ISKON ಬಗ್ಗೆ ಚರ್ಚೆ ಮಾಡಿದ್ದೆವು ಅದರ ಬಗ್ಗೆ ಸರ್ಕಾರ ಏನು ಕ್ರಮವನ್ನು ತೆಗೆದುಕೊಂಡಿದೆ? ಆವತ್ತು ಕ್ರಮವನ್ನು ತೆಗೆದುಕೊಳ್ಳುತ್ತೇವೆಂದು ಹೇಳಿದ್ದಾರೆ ಆದರೆ, ಕ್ರಮ ತೆಗೆದುಕೊಂಡಿಲ್ಲ

ಆಮೇಲೆ ಕಾಮತ್‌ರ ಒಂದು ಬೇಡಿಕ, ತಮ್ಮ ಸದನದಲ್ಲಿ ಚರ್ಚೆಯಾದದ್ದು, ಪತ್ರಿಕೆಗಳಲ್ಲಿ ಬರುವಾಗ ಎಲ್ಲಾ ವಿಷಯಗಳನ್ನು ಅವರಿಗೆ ಬರೆಯುವುದಕ್ಕಾಗುವುದಿಲ್ಲ, Pages ಸಾಕಾಗುವುದಿಲ್ಲ ಆದರೆ, ಶಾಸಕರು ಮಾತ್ರ ಏನೂ ಮಾತನಾಡಲಿಲ್ಲ ಎಂದು ಒಂದು ಕಡೆ ಚರ್ಚೆಯಲ್ಲಿ ನನಗೆ ಪ್ರಶ್ನೆಯನ್ನು ಕೇಳಿದರು ನೀವು ತಮಾಷೆಯನ್ನು ಮಾಡಿಕೊಂಡು ಕುಳಿತಿರುತ್ತೀರಿ ಎಂದು ಹೇಳಿದರು ಅದು ಆಗಬಾರದು ಕೆಲವೊಮ್ಮೆ ತಮಾಷೆಯನ್ನು ಮಾಡಿದ್ದು ಮಾತ್ರ ಪತ್ರಿಕೆಯಲ್ಲಿ ಬರುವುದು ಬಿಟ್ಟರೆ ಬೇರೆ ಬರುವುದಿಲ್ಲವೆನ್ನುವಂಥ ಭಾವನೆ ಅನೇಕ ಶಾಸಕರದು ಇದೆ ನಾನು ಸರ್ಕಾರವನ್ನು ಕೇಳಿಕೊಳ್ಳುವುದೇನೆಂದರೆ, Session ನಡೆಯುವಾಗ Subsidize ಮಾಡಿ ಆಯಾ ಕ್ಷೇತ್ರದ ಜನರಿಗೆ ಅವರ ಪ್ರತಿನಿಧಿಗಳು ಏನು ಚರ್ಚೆಯನ್ನು ಮಾಡಿದ್ದಾರೆ, ಏನು ಬೇಡಿಕೆಯನ್ನು ಇಟ್ಟಿದ್ದಾರೆಂದು ಗೊತ್ತಾಗುವಂಥ ಪರಿಸ್ಥಿತಿ ನಿರ್ಮಾಣವಾಗಬೇಕು ಇಲ್ಲದಿದ್ದರೆ ಪತ್ರಿಕೆಯನ್ನು ಅವರದು quality ಕಡಿಮೆಯಾಗಿದೆ ಎಂದು ಆಲೋಚನೆ ಮಾಡುವಂದದ್ದು ಆಗುತ್ತದೆ ಮತ್ತೊಂದು ಛಾಪಾ ಕಾಗದ ಹಗರಣವಾಗ ಬಹುದು ಎಂದು ಲೋಕಾಯುಕ್ತರಾದ ಸಂತೋಷ್ ಹೆಗ್ಡೆಯವರು ಹೇಳಿರುವುದು ಪತ್ರಿಕೆಯಲ್ಲಿ ಬಂದಿದೆ ಅವರು ಹೇಳಿಕೆ ಕೊಟ್ಟು ತೆಲಗಿ ಪ್ರಕರಣ ಮರುಕಳಿಸಬಹುದೆನ್ನುವಂಥ ಮಾತನ್ನು ಹೇಳಿದ್ದಾರೆ ಛಾಪಾ ಹಗರಣದ ರೂವಾರಿ ತೆಲಗಿ ಪ್ರಕರಣ ಇತ್ಯರ್ಥವಾಗುವ ಮುನ್ನವೇ ಮತ್ತೊಂದು ಛಾಪಾ ಕಾಗದ ಹಗರಣ ರಾಜ್ಯದಲ್ಲಿ ನಡೆಯಲಿದೆ ಎಂದು ಲೋಕಾಯುಕ್ತ ನ್ಯಾಯಮೂರ್ತಿ ಸಂತೋಷ್ ಹೆಗ್ಡೆಯವರು ಭವಿಷ್ಯ ನುಡಿದಿದ್ದಾರೆ ಬ್ಯಾಂಕ್ ಮೂಲಕ Stamp paperಗಳ ಮಾರಾಟ ಛಾಪಾ ಕಾಗದ ಹಗರಣಕ್ಕೆ ನಾಂದಿ ಹಾಡಲಿದೆ ಎಂದರು ಬ್ಯಾಂಕ್‌ಗಳಲ್ಲಿ ಮಾರಾಟವಾಗುತ್ತಿರುವ Stamp paperಗಳ ಲೆಕ್ಕ ಬಾಕಿ ಸೇರಿದಂತೆ ಸಂಬಂಧಿಸಿದ ಯಾವುದೇ ಮಾಹಿತಿ ಸ್ಪಷ್ಟವಾಗಿ ಸರ್ಕಾರಕ್ಕೆ ದೊರೆಯದೇ ಬೇಕಾಬಿಟ್ಟಿಯಾಗಿ ಮುದ್ರಣ ಮಾಡಿಕೊಂಡು ಮಾರಾಟ ಮಾಡುವಂಥ ಪ್ರಕರಣಗಳನ್ನು ಈಗಾಗಲೇ ಸರ್ಕಾರಕ್ಕೆ ತೋರಿಸಲಾಗಿದೆ" ಎಂದು ಹೇಳಿರುವುದು ಪತ್ರಿಕೆಯಲ್ಲಿ ಬಂದಿದೆ ಇದು ಉಪ ಮುಖ್ಯಮಂತ್ರಿಗಳಿಗೆ ಸಂಬಂಧಪಟ್ಟಿದ್ದು ನೀವು ಇದನ್ನು ಗಮನಿಸಬೇಕು ಅದರ ಬಗ್ಗೆ ಸಹ ಅವರು ಏನೇನು ಹೇಳಿದ್ದಾರೆ, ಸ್ವಲ್ಪ ವಿಸ್ತಾರವಾಗಿ ಸದನಕ್ಕೆ ಮಾಹಿತಿ ಕೊಡಬೇಕೆಂದು ಅಧ್ಯಕ್ಷರ ಮೂಲಕ ಹೇಳುತ್ತಾ, ನಾವು ಇದಕ್ಕೆ

ಸಂಪೂರ್ಣವಾಗಿ ಬೆಂಬಲವನ್ನು ಕೊಡಲಿಕ್ಕಾಗುವುದಿಲ್ಲವೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ

ಶ್ರೀ ದಿನೇಶ್ ಗುಂಡೂರಾವ್ Seniors ಎಲ್ಲ ಮಾತನಾಡಿ ಆದಮೇಲೆ ನಮಗೂ ಮಾತನಾಡುವುದಕ್ಕೆ ಹತ್ತು ಹತ್ತು ನಿಮಿಷ ಅವಕಾಶ ಕೊಡಬೇಕು

ಅಧ್ಯಕ್ಷರು ಅವರೆಲ್ಲ ಕುಳಿತುಕೊಂಡರೆ ನಿಮಗೆ ಅವಕಾಶ ಕೊಡುತ್ತೇನೆ ನನ್ನದೇನಿದೆ?

ಶ್ರೀ ನೆ ಲ ನರೇಂದ್ರ ಬಾಬು ಸದನದಲ್ಲಿ ನಾವೂ ಇದ್ದೇವೆ

(ಗೊಂದಲ)

ಅಧ್ಯಕ್ಷರು ರಮೇಶ್‌ಕುಮಾರ್‌ರವರೆ, ಹತ್ತು ಹದಿನೈದು ನಿಮಿಷದಲ್ಲಿ ಗಂಭೀರವಾದ ವಿಚಾರವೇನಾದರೂ ಇದ್ದರೆ ಹೇಳಿ ಮುಗಿಸಿಬಿಡಿ

ಶ್ರೀ ಐವಾನ್ ನಿಗ್ಲಿ ನಮಗೂ 2 ನಿಮಿಷ ಅವಕಾಶ ಕೊಡಿ

ಶ್ರೀ ಕೆ ಆರ್ ರಮೇಶ್‌ಕುಮಾರ್ ನಿಮಗೆ ಆಸಕ್ತಿ ಇದ್ದರೆ ಮುಂದುವರೆ ಸುತ್ತೇನೆ, ನಿಮಗೆಲ್ಲ ಕೇಳುವುದಕ್ಕೆ ಬೇಸರವಾಯಿತೆಂದರೆ ನಿಲ್ಲಿಸುತ್ತೇನೆ

ಅಧ್ಯಕ್ಷರು ನಮ್ಮದೇನಿಲ್ಲ ಸ್ವಾಮಿ ಎಲ್ಲ ನಿಮ್ಮವರದೇ

ಶ್ರೀ ಕೆ ಆರ್ ರಮೇಶ್ ಕುಮಾರ್ ಅವರೆಲ್ಲ ನನ್ನೊಟ್ಟಿಗೆ ಇದ್ದಾರೆ ನೀವೊಬ್ಬರು ಇರಬೇಕು

ಅಧ್ಯಕ್ಷರು ನಮಗೆ ಅವಕಾಶ ಕೊಡಿ ಎಂದು ಹೇಳಿದರು, seniorsಗೆ ಅವಕಾಶ ಕೊಟ್ಟಿದ್ದು ಸಾಕು ಎಂದರು

ಶ್ರೀ ಕೆ ಆರ್ ರಮೇಶ್‌ಕುಮಾರ್ (ಶ್ರೀನಿವಾಸಪುರ) ನಮ್ಮ ಸದನದಲ್ಲಿ ಚರ್ಚೆಯಾಗದೇ ಬೇಡಿಕೆಗಳು pass ಆಗಿರುವ ಸಂದರ್ಭಗಳಿವೆ ಆದರೆ, ಒಟ್ಟಿಗೆ ಇಷ್ಟೊಂದು demand ತೆಗೆದುಕೊಂಡು ಚರ್ಚೆ ಮಾಡಿ pass ಮಾಡಿರತಕ್ಕಂಥದ್ದು ನನ್ನ ತಿಳುವಳಿಕೆ ಪ್ರಕಾರ ಇದು ಮೊದಲನೇ ಸಲವೆಂದು ತೋರಿತ್ತದೆ ಸಮಯದ ಅಭಾವ, ಅನೇಕ ಗಹನವಾದಂತಹ ವಿಚಾರಗಳಿವೆ, ಯಾವುದನ್ನು ಪ್ರಸ್ತಾಪ ಮಾಡಬೇಕೋ, ಯಾವುದನ್ನು ಬಿಡಬೇಕೋ ಗೊತ್ತಾಗುವುದಿಲ್ಲ ನಮ್ಮ ಕಲಾಪಗಳ ಪರಿಮಿತಿಯೊಳಗೆ question hourನಲ್ಲಿ ನಾವು ಹಾಕಿರುವ ಪ್ರಶ್ನೆ Starred ಆಗಿದ್ದರೆ ಕೆಲವು supplementary ಕೇಳಬಹುದು ಆಗಿಂದಾಗೆ ಉದ್ಭವವಾಗುವ ಪ್ರಮುಖ

ವಿಚಾರಗಳ ಬಗ್ಗೆ ನಿಯಮ 69ರಡಿಯಲ್ಲಿ ಚರ್ಚೆಗ ತೆಗೆದುಕೊಳ್ಳುತ್ತೇವೆ Calling attentionನಲ್ಲಿ question ಮಾಡಿದವರಿಗೆ ಮಾತ್ರ, attension raise ಮಾಡಿದವರಿಗೆ ಮಾತ್ರ Clarification ಕೇಳುವುದಕ್ಕೆ ಅವಕಾಶವಿದೆ ಹೀಗಾಗಿ, ಬಹಳ limited opportunities ಸದಸ್ಯರಿಗೆ ಇರುತ್ತದೆ ಅದು ನನಗಾಗಲಿ ಬೇರೆಯವರಿಗಾಗಲಿ ಇವರು ಒಂದು ವರ್ಷಕ್ಕೆ ಇಷ್ಟು ಹಣ ಬೇಕೆಂದು ಕೇಳಿದ್ದಾರೆ ಸಾಮಾನ್ಯವಾಗಿ ನಾವು ಸ್ವಂತಕ್ಕೆ ಯಾವುದಾದರೂ donation ಕೊಡುವುದಿದ್ದರೆ ನೂರು ಸಲ ಯೋಚನ ಮಾಡುತ್ತೇವೆ 100 ರೂ 200 ರೂ ಕೊಡುವುದಕ್ಕೆ ಹಿಂದೆ ಮುಂದ ಎಲ್ಲ ವಿಚಾರಿಸಿ ಕೇಳಿ ಲಾಭ ಏನು ನಷ್ಟ ಏನು ಎಂದು ನೋಡಿ ಕೊಡುತ್ತೇವೆ ಜನರ ಪರ ವಹಿಸಿಕೊಂಡು ಅವರ ನಂಬಿಕೆಯ ವಾರಸುದಾರರಾಗಿ ನಾವಿಲ್ಲಿ ನಿಂತುಕೊಂಡು ಸಾವಿರಾರು ಕೋಟಿ ರೂಪಾಯಿಗಳಿಗೆ ಮಂಜೂರಾತಿ ಕೊಡಬೇಕಾಗಿದೆ ನೀವು ಅದಕ್ಕೆ ಅರ್ಹರೋ, ಅಲ್ಲವೋ, ಲಾಯಕ್ ಅಲ್ಲವೋ, ಲಾಯಕ್ ಇದ್ದೀರೋ ಎಂದು ನಾವೆಲ್ಲ ನೋಡಿ ನಾಲ್ಕು ಮಾತು ಹೇಳಿ ಆಮೇಲೆ ನಮ್ಮ ಅಭಿಪ್ರಾಯ ಹೇಳಬೇಕಾಗುತ್ತದೆ ಈಗ ಒಬ್ಬ ಹುಡುಗ exam ಬರೆಯುತ್ತಾನೆ ಅವನು ಕೆಲವುದರಲ್ಲಿ pass ಆಗಿರುತ್ತಾನೆ, ಇನ್ನು ಕೆಲವುದರಲ್ಲಿ fail ಆಗಿರುತ್ತಾನೆ Total ಮಾಡಿದಾಗ ತಾನೆ ಅವನು pass or fail ಎಂದು ಗೊತ್ತಾಗುವುದು ಕೆಲವು ಇಲಾಖೆಗಳು ಕೆಲವು ವಿಚಾರಗಳಲ್ಲಿ ಸರ್ಕಾರ pass ಆಗಿರಬಹುದು Overall ನಲ್ಲಿ fail ಆಗಿದ್ದರೆ ನಾವು ಹೇಗೆ ಅವರಿಗೆ ಮಂಜೂರಾತಿ ಕೊಡುವುದು? ಬೆಳಗಾಂನಲ್ಲೂ ನಾನು ಈ ವಿಚಾರ ಹೇಳಿದ್ದೆ ಮೊದಲಿಗೆ ಒಂದು ರೀತಿ Finance Minister ಅನ್ನು appoint ಮಾಡುವ ಪದ್ಧತಿ ಇತ್ತು ಆಮೇಲೆ ವೀರೇಂದ್ರ ಪಾಟೀಲ್‌ರವರು ಇದ್ದಾಗ ರಾಜಶೇಖರ ಮೂರ್ತಿಯವರು Finance Minister ಆದಾಗ ಅದಕ್ಕೆ ಸ್ವಲ್ಪ ಹೆಚ್ಚಿನ ಪ್ರಾಶಸ್ತ್ಯ ಬಂತು ಮತ್ತೆಲ್ಲೋ ಒಂದು ಕಡೆಗೆ ಮುಖ್ಯಮಂತ್ರಿಗಳೇ Finance Ministryಯನ್ನು ತಮ್ಮ ಹತೋಟಿಯಲ್ಲಿಟ್ಟುಕೊಳ್ಳುವ ಕಾಲ ಬಂತು ಅದರಲ್ಲಿ ಬುದ್ಧಿವಂತಿಕೆ ಇದೆಯೋ, ದೂರಾಲೋಚನೆ ಇತ್ತೋ ನನಗೆ ಇವತ್ತಿಗೂ ಅರ್ಥವಾಗುತ್ತಿಲ್ಲ ಶ್ರೀಮಾನ್ ಯಡಿಯೂರಪ್ಪನವರಿಗೆ ಸಂಪುಟ ಸೇರುವ ಅವಕಾಶ ಸಿಕ್ಕಿದಾಗ ನಾನು ಭಾವಿಸಿದ್ದೇನೆಂದರೆ, ನಿಮ್ಮ ಸ್ವಭಾವವನ್ನು, ನೀವು ಇಲ್ಲಿ ಕೆಲಸ ಮಾಡುತ್ತಿದ್ದ ರೀತಿಯನ್ನು ನೋಡಿ

ಬಹುಶಃ ನೀವು agriculture ಖಾತೆಯನ್ನು ಕೇಳುತ್ತೀರಿ ಅದಿಲ್ಲವೆಂದರೆ Home ಖಾತೆಯನ್ನು ಕೇಳುತ್ತೀರಿ ಎಂದು ತಿಳಿದುಕೊಂಡಿದ್ದೆ ಇವರು agriculture and home portfolio ಅನ್ನೂ ಕೇಳಲಿಲ್ಲ Finance Minister ಗೆ knowledge of economics ಇರಬೇಕು, ದೊಡ್ಡ background ಇರಬೇಕು ಎಂದು ಹೇಳುತ್ತಾರೆ ನನ್ನ ಪ್ರಕಾರ simple ಆಗಿ ಕೂಡುವುದು ಕಳೆಯುವುದು ಅಷ್ಟೆ ನಾವು ತೀರಾ ತೆಗೆದುಹಾಕುವ ಹಾಗೆ ಬಹಳ ಲಘುವಾಗಿ ಅಥವಾ ಹೀನವಾಗಿ ಮಾತನಾಡುವ ರೀತಿಯಲ್ಲಿ ನೀವು ಕೆಲಸ ಮಾಡಲಿಲ್ಲ ನೀವು Finance Minister ಆಗಿ ಕೆಲಸ ನಿರ್ವಹಿಸುವಾಗ your heart has ruled your mind That is a good thing ನಿಮ್ಮ ಹೃದಯ ನಿಮ್ಮ ಬುದ್ಧಿಯ ಮೇಲೆ ತನ್ನ ಪ್ರಭಾವವನ್ನು ಬೀರಿದೆ ನಿಮ್ಮ ಮನಸ್ಸಿನಲ್ಲಿ ನಿಮ್ಮದೇ ಆದ ಹಿನ್ನೆಲೆಯಲ್ಲಿ ಕೆಲವೆಲ್ಲ ರಾಜಕೀಯ ಜೀವನದಲ್ಲಿ ಬಹಳ ಪ್ರಾಬಲ್ಯವಾದ ಸ್ಥಾನವನ್ನೇನು ಆಕ್ರಮಿಸಿಕೊಂಡಿದ್ದವು ಅವುಗಳಿಗೆ ಪ್ರಾಶಸ್ತ್ಯ ಕೊಟ್ಟು ನನಗೆ ಕಥೆ ಗೀತೆ ಹೇಳಬೇಡಿ ಆಗಬೇಕೆಂದು ಹಠ ಹಿಡಿದು ಮಾಡಿರುವುದು ಬಹುಶಃ ನೀವು ಆ ಮನೋಭಾವನೆಯಿಂದ ಬಂದಿದ್ದೀರಿ ಮೆಚ್ಚಬೇಕಾಗುತ್ತದೆ ಒಬ್ಬ ರಾಜಕಾರಣಿ ತನಗೆ ಜೀವನದಲ್ಲಿ ಅವಕಾಶ ಸಿಕ್ಕಿದಾಗ ತಾನು ಏನೆಲ್ಲ ಪ್ರತಿಪಾದಿಸಿಕೊಂಡು ಬಂದಿರುತ್ತಾನೆ ಅದಕ್ಕೆ ಬದ್ಧನಾಗಿ ನಿಲ್ಲುವವನೇ ನಂಬಿಕಸ್ಥ To that extent ನಿಮಗೆ ನಾನು compliment ಮಾಡುತ್ತೇನೆ ಆದರೆ, ಅದಕ್ಕೆಲ್ಲ ಪರಿಸರ ಹೊಂದಿಕೊಂಡ ಹಾಗೆ ಇರಬೇಕು ನಿಮ್ಮ colleagues, political atmosphere, bureaucratic setup ಇವೆಲ್ಲವೂ ಕೂಡ they should be complementary to each other ಪ್ರಜಾಪ್ರಭುತ್ವದಲ್ಲಿ ಅಭಿಪ್ರಾಯ ಬೇಧ ಇರುತ್ತದೆ ನೀವು ಮಠಮಾನ್ಯಗಳಿಗೆ ಹಣ ಕೊಟ್ಟಿದ್ದು ನನಗೆ ಒಪ್ಪಿಗೆ ಆಗದಿರಬಹುದು, ನಿಮ್ಮ ಹಿನ್ನಲೆ ನಿಮ್ಮ ಆಲೋಚನೆಗೆ ಅದು ಸರಿ ಎಂದು ನಿಮಗೆ ಅನಿಸುತ್ತದೆ ನಿಮಗೆ ಅವಕಾಶ ಬಂದಿದೆ ನೀವು ಮಾಡುವ ಸ್ಥಿತಿಯಲ್ಲಿದ್ದೀರಿ, ನೀವು ಮಾಡಿದೀರಿ ನಮ್ಮ ಹಕ್ಕು ಅದು ಸರಿಯಲ್ಲವೆಂದು ಹೇಳುವುದು ಅಷ್ಟೇ ಹೊರತು ಅದನ್ನು ಮೀರಿ ಮುಂದೆ ಹೋಗುವುದಕ್ಕೆ ನಮಗೆ ಸಾಧ್ಯವಿಲ್ಲ ಬೇಡಿಕೆಗಳಿಗೆ ಸಂಬಂಧಿಸಿದಂತೆ ನಾನು ತಮ್ಮಲ್ಲಿಂದ ಪ್ರಾರಂಭ ಮಾಡೋಣವೆಂದು ಯೋಚನೆ ಮಾಡಿದ್ದೆ ಮೊದಲನೆಯದಾಗಿ

ವಿಧಾನ ಮಂಡಲದ ವ್ಯಾಪ್ತಿಗೆ ಬರುವ ಕರ್ತವ್ಯಗಳು, ಅಲ್ಲಿ ನಾವು ಮಾಡಬೇಕಾಗಿರುವ ಕೆಲವು ಅಗತ್ಯ ಸುಧಾರಣೆಗಳು, ನಮ್ಮ ಶಾಸಕರ ಭವನವನ್ನು ತಾವು ನೋಡಿದ್ದೀರಿ ತಾವು ಅಲ್ಲೇ ಇರುತ್ತೀರಿ ನನಗೆ ಅರ್ಥವೇ ಆಗುವುದಿಲ್ಲ ಅಷ್ಟೊಂದು ಕಾರುಗಳು ಅಲ್ಲಿ ಬಂದು ನಿಂತಿರುತ್ತವೆ ಅವು ಯಾವುವು? 224 ಜನ ಶಾಸಕರು ಮತ್ತು ಮೇಲ್ಮನೆ ಸದಸ್ಯರು ಸೇರಿದರೆ 300 ಶಾಸಕರಾಗುತ್ತಾರೆ ಅವರಲ್ಲಿ Speaker Deputy Speaker, Chairman, Chief whip, opposition leader, ಮಂತ್ರಿಗಳು, ಸ್ವಂತ ಮನೆ ಇರತಕ್ಕಂಥವರು ಇವರೆಲ್ಲರೂ 40–50 ಜನರನ್ನು ಕಳೆದರೆ ಉಳಿದವರೆಲ್ಲರೂ ಕಾರು ಇರುವವರು ಅಥವಾ ಇದ್ದರೂ ಕಾರನ್ನು ಇಲ್ಲಿಗೆ ತರತಕ್ಕಂಥವರಲ್ಲ ಅಲ್ಲಿ ಬಂದು ನಿಲ್ಲುವ ಕಾರುಗಳೂ ಯಾವುವು? ಏಕೆ ಬರುತ್ತವೆ? ನಾವು ಯಾರು? ಅವರ್ಯಾರು? ಅಲ್ಲಿ ನೀವು ಯಾವುದೊಂದನ್ನೂ ಅರ್ಥ ಮಾಡಿಕೊಳ್ಳುವುದಕ್ಕಾಗುವುದಿಲ್ಲ ಅದು ಹೇಗಿರುತ್ತದೆಂದರೆ ಗಾಂಧಿ ನಗರದಲ್ಲಿ ಬರ್ಮಾಬಜಾರ್ ಇದೆ ಬರ್ಮಾಬಜಾರ್‌ಗೂ, legislators'hostel ನ ವಾತಾವರಣಕ್ಕೂ ಅಂಥ ದೊಡ್ಡ ವ್ಯತ್ಯಾಸವೇನೂ ಇರುವುದಿಲ್ಲ

ಅಧ್ಯಕ್ಷರು ಈಗ ಏನಾಗಿದೆ ಎಂದರೆ, ಮೊದಲು ಶಾಸಕರನ್ನು ನೋಡುವುದಕ್ಕೆ ಜನ ಸಾಮಾನ್ಯರು ಬರುತ್ತಿದ್ದರು, ಈಗ ದೊಡ್ಡದೊಡ್ಡವರು ಬರುತ್ತಾರೆ, ಕಾರು ಇರುವವರೇ ಬರುತ್ತಾರೆ, ಆದುದರಿಂದ ಅವರೆಲ್ಲ ಕಾರುಗಳನ್ನು ತೆಗೆದುಕೊಂಡು ಬರುತ್ತಾರೆ ಎಲ್ಲಾ ಅಲ್ಲಿ ದೊಡ್ಡ ದೊಡ್ಡವರು ಬಂದು ಆಕ್ರಮಿಸಿಕೊಂಡುಬಿಟ್ಟಿದ್ದಾರೆ

ಶ್ರೀ ಕೆ ಆರ್ ರಮೇಶ್ ಕುಮಾರ್ ಯಾರು ದೊಡ್ಡವರು ಎನ್ನುವುದಕ್ಕೆ ಬೀಚಿಯವರು ಬಯೋಗ್ರಾಫಿಯಲ್ಲಿ ಒಂದು ಕಡೆ ಬರೆಯುತ್ತಾರೆ ನಾನು ಆ ಕತೆ ಎಲ್ಲಾ ಹೇಳಿದರೆ ಇಲ್ಲಿ ಬಹಳ ಸಮಯ ಆಗಿ ಬಿಡುತ್ತದೆ ನನಗೆ ಸಮಸ್ಯೆ ಎಲ್ಲಿ ಬರುತ್ತದೆಂದರೆ, ಒಬ್ಬ ಶಾಸಕ ನಿಜವಾಗಲೂ ಕೂಡ ಶಾಸಕರ ಭವನದಲ್ಲಿ ಅವರಿಗೆ ಕೊಡುವ ಆಶ್ರಯವನ್ನೇ ಅವಲಂಬಿಸಿದ್ದು, ಅವರಿಗೆ ಬೆಳಿಗ್ಗೆ ಅಧಿವೇಶನಕ್ಕೆ ಬರಬೇಕಾದರೆ ಅಜೆಂಡಾ ನೋಡಿಕೊಂಡು, ತಾನು ಪ್ರೀಪೇರ್ ಆಗಿ ಬರಬೇಕಾಗಿದ್ದರೆ, ಲೈಬ್ರರಿಗೆ ಹೋಗಬೇಕಾದರೆ, ನೋಟ್ಸ್ ಮಾಡಿಕೊಳ್ಳಬೇಕಾದರೆ, ಓದುವುದಕ್ಕೆ ಬರೆಯವುದಕ್ಕೆ, ಇವತ್ತು ನಮ್ಮ ಎಲ್‌ಹೆಚ್ ಇರುವ ವಾತಾವರಣದಲ್ಲಿ ಸಾಧ್ಯವೇ? ಈಗ ತಾವು ಹೇಗೋ ಶಾಸಕರಿಗೆ ಪಾಸ್ ಕೊಟ್ಟಿದ್ದೀರಿ ವಾಹನಗಳಿಗೆ ಆ ಎಂಎಲ್‌ಎ ಎನ್ನುವ

ಬೋರ್ಡನ್ನು ಹಾಕಿಕೊಳ್ಳುತ್ತೇವೆ ಯಾವ ವೆಹಿಕಲ್ಸ್‌ಗೆ ನಿಮ್ಮ ಪಾಸ್ ಇರುವುದಿಲ್ಲವೋ, ನೀವು ಅದನ್ನು monogram or emblem ಎನ್ನುತ್ತೀರೋ ನೀವು ಅದನ್ನು ಏನೆಂದು ಕರೆಯುತ್ತೀರೋ ನನಗೆ ಗೊತ್ತಿಲ್ಲ ಆ ಕಾರ್ಡ್ ಇಲ್ಲದೇ ಇದ್ದರೆ ನೀವು ಅಂಥ ವೆಹಿಕಲ್ಸ್‌ಗಳನ್ನು ಒಳಗೆ ಬಿಡುವುದು ಬೇಡ ಅವರು ಯಾರೇ ಆಗಿರಲಿ, ಎಲ್ಲಿಯಾದರೂ ನಿಲ್ಲಿಸಿಕೊಳ್ಳಲಿ ಸಂಜೆ 8 ಗಂಟೆಯಾದ ನಂತರ ವಿಸಿಟರ್ಸ್ ಬರುವುದನ್ನು ಸ್ಟಾಪ್ ಮಾಡಬೇಕು ಇರುವವರನ್ನು merciless ಆಗಿ ಹೊರಗೆ ಕಳುಹಿಸಬೇಕು ಬೆಳಿಗ್ಗೆ 8 ಗಂಟೆ ಮೇಲೆ ಬರಲಿ ತೊಂದರೆಯಿಲ್ಲ ಅವರು ಸ್ನಾನ ಮಾಡಿ ತಿಂಡಿ ತಿಂದು ರೆಡಿಯಾಗಿರುತ್ತಾರೆ

ಅಧ್ಯಕ್ಷರು If it is the wish of the House, ಬೇಕಾದರೆ ನಾಳೆಯಿಂದಲೇ ಮಾಡಬಹುದು

ಶ್ರೀ ಕೆ ಆರ್ ರಮೇಶ್‌ಕುಮಾರ್ ತಾವು, you are the Speaker You are the custodian of the entire precincts ಎಲ್ಲಾ ವರ್ಗಗಳಲ್ಲೂ ಎಲ್ಲಾ ವಲಯಗಳಲ್ಲೂ ಕೆಲವು ಸಣ್ಣಪುಟ್ಟ ವಿಚಾರಗಳಲ್ಲಿ ತಪ್ಪು ಮಾಡತಕ್ಕಂಥ ಜನ ಯಥೇಚ್ಚವಾಗಿರುತ್ತಾರೆ ಪೊಲಿಟಿಷನ್‌ಗಳು ಏನು ಅಂದರೆ, whether it is gram panchayat ಸದಸ್ಯರಾಗಲಿ, ರಾಷ್ಟ್ರಪತಿಯಾಗಲಿ, ನಾವು ಜನರ scrutinyಗೆ ಹೋಗುತ್ತೇವೆ ಉಳಿದವರು ಯಾರು ಜನರ scrutinyಗೆ ಹೋಗುವುದಿಲ್ಲ ಹೀಗಾಗಿ ನಮ್ಮ ಬಗ್ಗೆ ಲಘುವಾಗಿ ಮಾತನಾಡಿದರೆ ಕೇಳುವವರ ಕಿವಿಗೆ ಬಹಳ ಹಿತವಾಗಿರುತ್ತದೆ ನಮ್ಮ ಬಗ್ಗೆ ಗೊತ್ತಿದ್ದು ಗೊತ್ತಿಲ್ಲದೇ ಇರುವವರು ಎಲ್ಲರೂ ಕೂಡ ಬಹಳ ಲಘುವಾಗಿ ಮಾತನಾಡುತ್ತಾರೆ ಈಗ ಯಾರು ಒಳ್ಳೆಯವರು ಯಾರು ಕೆಟ್ಟವರು, ನಮಗೆ ಗೊತ್ತಿಲ್ಲ ಎಲ್ಲರೂ ಕೆಟ್ಟವರೆಂದು ಹೇಳುವುದಕ್ಕೆ ಆಗುವುದಿಲ್ಲ ನಾವು ಯಾರ ಪರವಾಗಿ ವಕಾಲತ್ತು ವಹಿಸುವುದು? ಒಂದು ವೇಳೆ ಅಲ್ಲಿ ನಡೆಯಬಾರದ್ದು ಏನಾದರೂ ನಡೆದರೆ, ಅಥವಾ ನಡೆದಿದೆ ಎಂದು ಪತ್ರಿಕೆಯಲ್ಲಿ ಬರೆದರೆ ನಾವು ಯಾರ ಪರ ವಕಾಲತ್ತು ವಹಿಸುವುದು? ಕಾರುಗಳು ನನ್ನಾಸೆ ಈ ಅಂಬಾಸಿಡರ್ ಕಾರುಗಳಿವೆ, ಅದರಲ್ಲಿ ತಾವು ಒಂದು ದಿವಸ ಕುಳಿತುಕೊಂಡು ಒಂದು ಗಂಟೆ ಪ್ರಮಾಣ ಮಾಡಿ ಅವು ಒಂದು ಹಂತ ತಲುಪಿದ ಮೇಲೆ ಅವುಗಳನ್ನು ಹರಾಜು ಹಾಕಿ ಮಾರಿ ಬೇರೆ ವೆಹಿಕಲ್ಸ್ ತೆಗೆದುಕೊಂಡು ಇಟ್ಟುಕೊಳ್ಳುವುದು ಒಳ್ಳೆಯದು ಅಥವಾ ಎಂಎಲ್‌ಎಗೆ

ಸ್ವಂಥ ಕಾರು ಇದ್ದು, ಡ್ರೈವರ್ಸ್ ಅಲ್ಲಿರಲಿ ಫೈವ್‌ಸ್ಟಾರ್ ಹೋಟೆಲ್‌ನಲ್ಲಿದ್ದಂತೆ ಬರುತ್ತಾರೆ ಕೀ ತೆಗೆದುಕೊಳ್ಳುತ್ತಾನೆ, ತೆಗೆದುಕೊಂಡು ಹೋಗಿ ಪಾರ್ಕ್ ಮಾಡುತ್ತಾನೆ ಬರುವಾಗ ತಂದು ಇವರ ಕೈಗೆ ಕೊಡುತ್ತಾನೆ ಇದಕ್ಕೆ ಏಕೆ ನಮಗೆ ದೊಡ್ಡ ಹಣ ಬೇಕು? ಕ್ಯಾಂಟೀನ್‌ಗಳಂತೂ ಸಾಧ್ಯವೇ ಇಲ್ಲ ಅಲ್ಲಿದ್ದವರು ಕೂಡ ಹೊರಗಡೆಯಿಂದ ತರಿಸಿಕೊಂಡು ತಿನ್ನುತ್ತಾರೆ ಏಕೆ ಕ್ಯಾಂಟೀನ್ ಸುಧಾರಿಸುವು ದಿಲ್ಲವೆಂದರೆ, ಅಧಿವೇಶನ ಇದ್ದಾಗ ಶಾಸಕರು ಇರುತ್ತಾರೆ, ಶಾಸಕರು ಇದ್ದಾಗ ವಿಸಿಟರ್ಸ್ ಬರುತ್ತಾರೆ, ಆಗ ಅವರಿಗೆ ಒಂದು ಸ್ವಲ್ಪ ವ್ಯಾಪಾರವಾಗುತ್ತದೆ ಬೇರೆ ಟೈಂನಲ್ಲಿ ಅಷ್ಟಕಷ್ಟೇ ವ್ಯಾಪಾರ, ಅದಕ್ಕವರು ಬ್ಯಾಲೆನ್ಸ್ ಮಾಡಿಕೊಳ್ಳಬೇಕು ಹೀಗಾಗಿ ಅವನು ಬ್ಯಾಲೆನ್ಸ್ ಮಾಡಿಕೊಳ್ಳ ಬೇಕಾಗಿದ್ದರೆ, ಹೇಗೆ ಮಾಡಬೇಕು? ಯಾವ ಪಿರಿಯೆಡ್‌ನಲ್ಲಿ ಬ್ಯೂಸಿನೆಸ್ ಇರುವುದಿಲ್ಲ ಅದನ್ನು ಈಗಲೇ ಕವರ್ ಮಾಡಬೇಕು ನೀವು ಸ್ಟ್ರೆಂಥ್‌ನ್ನು ರೆಗ್ಯೂಲೆಟ್ ಮಾಡಿದರೆ, ಆಶೂರ್ಡ್ ಬ್ಯೂಸಿನೆಸ್ ಇದ್ದರೆ, ಕ್ಯಾಂಟೀನ್‌ನವನಿಗೆ ನೀವು ಕೊಡುವ ಫೆಸಿಲಿಟೀಸ್ ಇಂಪ್ರೂವ್ ಆದರೆ, ಬಾಡಿಗೆ ಮತ್ತೊಂದು ಮಗದೊಂದು ಇಕ್ವಿಪ್‌ಮೆಂಟ್ಸ್, ಕೊಟ್ಟರೆ ಸಬ್ಸ್‌ಡೈಸ್ ರೇಟ್‌ನಲ್ಲಿ ಮಾಡಿ ಎಂದು ಹೇಳಬಹುದು ಈಗ ತಾವು ಪಾರ್ಲಿಮೆಂಟ್‌ನಲ್ಲಿದ್ದಿರಿ ನಾನಂತೂ ಪಾರ್ಲಿಮೆಂಟಿಗೆ ಇನ್ನೂ ಹೋಗಲಿಕ್ಕಾಗಿಲ್ಲ ಸೆಂಟ್ರೆಲ್ ಹಾಲ್‌ನಲ್ಲಿ ರೈಲ್ವೆರವರ ಕ್ಯಾಂಟೀನ್ ನಡೆಯುತ್ತಿಲ್ಲವೇ? ಚೆನ್ನಾಗಿ ನಡೆಯುತ್ತಿಲ್ಲವೇ? ಏಕೆ ನಡೆಯುತ್ತಿದೆ? ಇಲ್ಲಿ ನಡೆಯದೇ ಇರುವುದಕ್ಕೆ ಏನು ಕಾರಣ? ಎಲ್ಲೋ ಒಂದು ಕಡೆಗೆ ತಾವು ಸ್ವಲ್ಪ ಮನಸ್ಸು ಮಾಡಿದರೆ ಅದು ಸಾಧ್ಯವಾಗುವುತ್ತದೆ ಮತ್ತೊಂದು ಈ ಚೈನಾ ಟೂರ್ ಬಗ್ಗೆ ಬರೆದು ಕಳುಹಿಸಿದಿರಿ ತಮ್ಮಲ್ಲಿ ವಿನಂತಿಸಿ ಕೊಳ್ಳುತ್ತೇನೆ ನಮ್ಮ Statutory Committee ಯಾವುದು ಇವೆ ಇವು, ಎಲ್ಲಾ ಕೂಡ constitutional ಆಗಿ ರಚನೆಯಾಗಿರತಕ್ಕಂಥದ್ದು ಇವುಗಳಿಗೆ ನಿಗದಿತವಾದ ಜವಾಬ್ದಾರಿ ಇದೆ Statutory Committees ಬೇರೆ ರಾಜ್ಯಗಳಿಗೆ ಟೂರ್ ಮಾಡುವ ಸಂದರ್ಭದಲ್ಲಿ ಸ್ವಲ್ಪ ಮಟ್ಟಿಗೆ excursion, picnic ಎನ್ನುವುದಾದರೂ ಕೂಡ ಸಾಕಷ್ಟು learning ಆಗುತ್ತಿತ್ತು ಶಿಕ್ಷಣ ಪಡೆದುಕೊಳ್ಳುತ್ತಿದ್ದೆವು ಈಗ ಬಹುಶಃ ಅದಕ್ಕೆ ಖರ್ಚಾಗುವಂಥ ಹಣವನ್ನು ಸೇವ್ ಮಾಡಿ, ಒಂದು ಫಾರಿನ್ ಟೂರ್ ಎಂದು ಮಾಡಿದರೆಂದು ಕಾಣುತ್ತದೆ ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳು ತ್ತೇನೆ, Statutory Committees State tours ಹೋಗತಕ್ಕಂಥದ್ದನ್ನು ಕೈ

ಬಿಡತಕ್ಕಂಥದ್ದು ಒಳ್ಳೆಯದು ಅಲ್ಲವೇನು, ಫಾರಿನ್ ಟೂರ್ಸ್‌ಗೆ ಹೋಗಬಯಸ-ತಕ್ಕಂಥವರಿಗೆ, ತಮ್ಮ ಕಾರ್ಯಾಲಯದಿಂದ ತಾವು ಏನು ಮಾಡಬಹುದು ಎಂದರೆ ಕೇಂದ್ರ ಸರ್ಕಾರದೊಡನೆ ಸಂಪರ್ಕ ಮಾಡಿ, ನಮಗೇನು ಅಂದರೆ ನಮ್ಮವರು ಅಲ್ಲಿಗೆ ಹೋದಾಗ courtesies extend ಮಾಡಿದರೆ ಸಾಕು ಅವರೇನು ನಮಗೆ ಏರ್ ಟಿಕೇಟ್ ಕೊಡುವುದು ಬೇಡ, ಅಕಾಮ್‌ಡೇಷನ್ ಕೊಡುವುದು ಬೇಡ, ಫುಡ್ ಕೊಡುವುದು ಬೇಡ ಪಾರ್ಲಿಮೆಂಟ್ ಶೆಷನ್ ಇದ್ದರೆ ನಮಗೆ ವಿಟ್ನೆಸ್ ಮಾಡುವುದಕ್ಕೆ ಅವಕಾಶ ಅಥವಾ ಅಲ್ಲಿಯ ಆಫೀಸ್ ಬೇರರ್ಸ್ ಮೀಟ್ ಮಾಡುವುದಕ್ಕೆ ಅವಕಾಶ, ಇಂಥದ್ದಕ್ಕೆ ಸ್ಮಾಲ್ ಥಿಂಗ್ಸ್‌ಗೆ ಎಂಬೆಸಿಯವರು ಬಂದು ನಮ್ಮನ್ನು ರೀಸಿವ್ ಮಾಡಿಕೊಳ್ಳುವುದು ಇಷ್ಟು ಮಾಡಿದರೆ ಸಾಕು I think MLAs ಇವತ್ತಿನ ಪರಿಸ್ಥಿತಿಗೆ ಹೊಂದಿಕೊಂಡು ಸ್ವಂತ ಕಾಂಟ್ರಿಬ್ಯೂಷನ್ ಕೊಡಬೇಕು ಎಂದರೆ ಹೋಗುತ್ತಾರೆ, ಅದೇನು ದೊಡ್ಡ ಕಷ್ಟವೇನಲ್ಲ ನನಗೆ ಗೊತ್ತಿರುವ ಹಾಗೆ argument sake argument ಮಾಡಲೇಬೇಕೆಂದರೆ ಇಲ್ಲ ನಿಜವಾಗಲೂ ಹೋಗಬೇಕೆಂದು ಬಯಸಿ ದವರಿಗೆ, ಹೋಗಬೇಕೆಂದು ಮನಸ್ಸು ಮಾಡಿಕೊಂಡರೆ, ದೊಡ್ಡ ಕಷ್ಟ ಏನು ಆಗುವುದಿಲ್ಲ So, Statutory Committees with the Country tour ಮಾಡುವುದನ್ನು ನಾವು ಬಿಟ್ಟು ಕೊಡತಕ್ಕಂಥದ್ದು ಅಷ್ಟು ಒಳ್ಳೆಯದಲ್ಲ ತಾವು ಅದರ ಬಗ್ಗೆ ಪುನರಾಲೋಚನೆ ಮಾಡಬೇಕೆಂದು ತಮ್ಮಲ್ಲಿ ಮನವಿ ಮಾಡುತ್ತೇನೆ ಇನ್ನು ಲೋಕಾಯುಕ್ತ ಬಗ್ಗೆ ಹೇಳುವುದಾದರೆ ಅವರು ನಮ್ಮ ಆಸ್ತಿ-ಪಾಸ್ತಿಗಳ ಬಗ್ಗೆ ವಿವರ ಕೇಳುವುದಕ್ಕೆ ನಮ್ಮದೇನೂ ಆಕ್ಷೇಪವಿಲ್ಲ We are accountable ಈ ಹೌಸ್ ಲೋಕಾಯುಕ್ತ Act ಅನ್ನು ಪಾಸ್ ಮಾಡಿದೆ ಆದುದರಿಂದ we are all duty-bound ಆದರೆ ಅವರ ಪದ್ಧತಿ ಹೇಗೆ ಹೋಗುತ್ತಿದೆ ಎಂದರೆ, ಮೊದಲು ಕೆಲವರು ಫೈಲ್ ಮಾಡುತ್ತಿದ್ದರು, ಕೆಲವರು ಫೈಲ್ ಮಾಡುತ್ತಿರಲಿಲ್ಲ ಅಲ್ಲಿಂದ ಒಂದು ಸ್ಟೇಜ್ ಇಂಪ್ರೂವ್ ಆಯಿತು ಈಗ ಫೈಲ್ ಮಾಡಲೇ ಬೇಕು ಇಲ್ಲಾಂದ್ರೆ ಹೆಸರು ನೋಟಿಫೈ ಮಾಡುತ್ತೇವೆ, ಕ್ರಮ ತೆಗೆದುಕೊಳ್ಳುತ್ತೇವೆ, ಅದು ಇದು ಎಂದಾಗಿದೆ ಈಗ ಪ್ರೆಸೆಂಟ್ ಲೋಕಾಯುಕ್ತ ಬಂದ ಮೇಲೆ, ಚೂರು ಬಿಸಿ ಮುಟ್ಟಿಸಿದರು ಹೀಗಾಗಿ ಎಲ್ಲರೂ ರಿಟರ್ನ್ಸ್ ಫೈಲ್ ಮಾಡಬೇಕೆಂದು ಆಯಿತು ನಂತರ ಇನ್ನೊಂದು ಸ್ಟೆಪ್ ಮುಂದೆ ಹೋಗಿದ್ದಾರೆ ಇಷ್ಟು ಜನರದ್ದು incomplete information ಎಂದು ಪತ್ರಿಕೆಗಳಿಗೆ ಕೊಡುತ್ತಾರೆ ಪತ್ರಿಕೆಯಲ್ಲಿ, ಟಿ ವಿ ಯಲ್ಲಿ ಬರುವ ರೀತಿ

(B) 25225

ಅವರು circulate ಮಾಡತಕ್ಕಂಥದ್ದು, ನಮಗೆ ಬರುವ ಮೆಸೇಜ್, ಈ ಮೂರು ಹೇಗೆ ಇವೆ ಎಂದರೆ, ಏನೋ ಶಾಸಕರೆಲ್ಲರೂ ಕಳ್ಳ ಖದೀಮರು, ನಿರ್ಬಂಧಕ್ಕೆ ಏನೋ ಕಾಟಚಾರಕ್ಕೆ ಕೊಡಬೇಕು ಅದಕ್ಕೆ ಒಂದು ಲೆಕ್ಕ ತೆಗೆದು ಬಿಸಾಕಿದ್ದಾರೆ, ಲೋಕಾಯುಕ್ತ ಬಹಳ ಪವಿತ್ರ ಗಂಗೆ, ಎಲ್ಲಾರನ್ನು ಹಿಡಿದು ಹಾಕಿ ಬಿಟ್ಟಿದ್ದಾರೆ, ಪತ್ರಿಕೆಯವರು ಇವರಿಗೆ ಹಾಕಿಕೊಂಡು ಚಚ್ಚುತ್ತಿದ್ದಾರೆ, ಇವರಿಗೆ ಆಗಬೇಕೆನ್ನುವ ಒಂದು ವಾತಾವರಣವನ್ನು ಸೃಷ್ಟಿ ಮಾಡಿದ್ದಾರೆ ಈಗ ನನಗೊಂದು ಕ್ಲಾರಿಫಿಕೇಶನ್ ಪತ್ರ ಬಂದಿದೆ ಉಂಗುರ ಎಂದು ಹೇಳಿದ್ದೀರಿ, ಆ ಉಂಗುರದ ತೂಕ ಎಷ್ಟು? ಅದರ ಅಂದಾಜು ಬೆಲೆ ಎಷ್ಟು? ಸರ ಎಂದು ಹೇಳಿದ್ದೀರಿ, ಆ ಸರದ ತೂಕ ಎಷ್ಟು? ಅದರ ಅಂದಾಜು ಬೆಲೆ ಎಷ್ಟು? ಸಧ್ಯಕ್ಕೆ ನಾನು ಎಮ್ಮೆ, ಕುರಿಗಳ ಲೆಕ್ಕ ಕೊಟ್ಟಿದ್ದೆ ಅದನ್ನು ಕೇಳಿಲ್ಲ ಅದನ್ನು ಬಿಟ್ಟು ಬಿಟ್ಟಿದ್ದಾರೆ ಲದ್ದಿ ಎಷ್ಟು ಹಾಕುತ್ತದೆ? ಲದ್ದಿ ಬೆಲೆ ಎಷ್ಟು ಎಂದು ಕೇಳಿಲ್ಲ ನಾನು ಏನು ಹೇಳುತ್ತೇನೆಂದರೆ earnestness on the part of Legislator, to submit himself to this proposition of being accountable, ಅದು establish ಆಗಬೇಕು ಈಗ with due respect to my all colleagues

ಶ್ರೀ ಜೆ ಸಿ ಮಾಧುಸ್ವಾಮಿ ಮಾನ್ಯ ಅಧ್ಯಕ್ಷರೆ, S B account ನಲ್ಲಿ ಹಣ ಎಷ್ಟಿದೆ ಎಂಬುದರ ಬಗ್ಗೆ ನಮಗೆಲ್ಲಾ ನೋಟೀಸ್ ಕಳುಹಿಸಿದ್ದಾರೆ ಎಸ್ ಬಿ ಅಕೌಂಟ್‌ನಲ್ಲಿ ಬ್ಯಾಲೆನ್ಸ್ ಇವತ್ತು ಒಂದಿರುತ್ತದೆ ಮತ್ತೆ ನಾಳೆ ಬೆಳಿಗ್ಗೆ ಒಂದಿರುತ್ತದೆ ಎಸ್ ಬಿ ಅಕೌಂಟ್‌ನ ಮಾಹಿತಿ ಕೊಟ್ಟಿದ್ದೇವೆ ಆದರೆ, ಯಾವ ದಿನಾಂಕದಿಂದ ಮಾಹಿತಿ ಬೇಕೆಂದು ಸಹ ಅವರು ಕೇಳಿಲ್ಲ ಅಂದರೆ, ಮಾರ್ಚ್, ಜೂನ್ ಅಥವಾ ಡಿಸೆಂಬರ್ ತಿಂಗಳ ಕೊನೆಯವರೆಗಿನ ಮಾಹಿತಿ ಕೊಡಬೇಕೆಂದು ಹೇಳಿಲ್ಲ ಎಸ್ ಬಿ ಅಕೌಂಟ್‌ನಲ್ಲಿ ನಾವು ಇವತ್ತು ಹಣ ಕಟ್ಟಿರುತ್ತೇವೆ ನಾಳೆ ದಿವಸ ಮತ್ತೆ ಡ್ರಾ ಮಾಡಿಕೊಂಡಿರುತ್ತೇವೆ What is to be given to lokayuktha? ಇಷ್ಟೇ ಕಾರಣಕ್ಕೋಸ್ಕರ ನಮಗೆ ಅವರು ನೋಟೀಸ್ ಕೊಡುತ್ತಿದ್ದಾರೆ ಎಫ್ ಡಿ ಎಷ್ಟಿದೆ ಎಂದು ಮಾಹಿತಿ ಕೇಳಿದರೆ ಅದಕ್ಕೆ ಸಂಬಂಧಪಟ್ಟಂಥ ಮಾಹಿತಿಗಳನ್ನು ಕೊಡುತ್ತೇವೆ ನಾವೇನು ಈ ರಾಜ್ಯದಲ್ಲಿ ಕದ್ದು ಓಡುತ್ತಿಲ್ಲಾ? ನಮ್ಮ ಎಸ್ ಬಿ ಅಕೌಂಟ್‌ನಲ್ಲಿ ಬ್ಯಾಲೆನ್ಸ್ ಬಗ್ಗೆ ಅವರು ಚೆಕ್ ಮಾಡಿಕೊಳ್ಳಬಹುದು ಅದನ್ನು ಬಿಟ್ಟು ಎಸ್ ಬಿ ಅಕೌಂಟ್ ನಂಬರ್ ಕೊಟ್ಟಿದ್ದೀರಿ ಆದರೆ, ಸದರಿ ಅಕೌಂಟ್‌ನಲ್ಲಿ ಹಣ ಎಷ್ಟಿದೆ

ಎಂಬುದರ ಬಗ್ಗೆ ಮಾಹಿತಿ ಕೊಟ್ಟಿಲ್ಲವೆಂದು ಕೇಳುತ್ತಾರೆ ನಾನು ಇವತ್ತು ಮಾಹಿತಿ ಕೊಟ್ಟಿರುತ್ತೇನೆ ನಾಳೆ ಬೆಳಿಗ್ಗೆ ಡ್ರಾ ಮಾಡುತ್ತೇನೆ ಆದ್ದರಿಂದ, ಇದನ್ನು ಇಟ್ಟುಕೊಂಡು ಅವರೇನು ಮಾಡುತ್ತಾರೆಂಬುದು ಅರ್ಥವಾಗ ಬೇಕಲ್ಲವೇ?

ಶ್ರೀ ಬಿ ಶಿವರಾಂ ಮಾನ್ಯ ಅಧ್ಯಕ್ಷರೆ, ಏಪ್ರಿಲ್ 1 ರಿಂದ ಮಾರ್ಚ್ 31ನೇ ತಾರೀಖಿನವರೆಗೆ ಮಾಹಿತಿ ಕೊಟ್ಟಿರುತ್ತೇವೆ ಈಗ ಇದ್ದಕ್ಕಿದ್ದ ಹಾಗೆ ಡಿಸೆಂಬರ್ ತಿಂಗಳ ಮಾಹಿತಿ ಕೊಡಿ ಎಂದು ಹೇಳುತ್ತಿದ್ದಾರೆ ಮತ್ತೆ ಚಾರ್ಟರ್ಡ್ ಅಕೌಂಟ್‌ನವರ ಸ್ಟೇಟ್‌ಮೆಂಟ್‌ನ್ನು ಸಹ ಸಬ್‌ಮಿಟ್ ಮಾಡಿದ್ದೇವೆ ಮತ್ತೆ ಎಸ್ ಬಿ ಅಕೌಂಟ್‌ನಲ್ಲಿ ನೀಡಿರುವ ಮಾಹಿತಿಯಲ್ಲಿ ಅವತ್ತಿನ ಫಿಗರ್ ಇದೆ ಈಗ ಡಿಸೆಂಬರ್ 31ನೇ ತಾರೀಖಿನ ದಿವಸ ಎಷ್ಟಿದೆ ಎಂಬುದರ ಬಗ್ಗೆ ಮಾಹಿತಿ ಕೊಡಿ ಎಂದು ಈಗ ಕೇಳುತ್ತಿದ್ದಾರೆ ಮತ್ತೆ ಎಸ್ ಬಿ ಅಕೌಂಟ್‌ನ ನಂಬರ್ ಕೊಡಿ ಎಂದು ಈ ರೀತಿಯಾಗಿ ಕೇಳುತ್ತಾ ಬಂದರೆ ಹೇಗೆ? ನಾವು 18 ವರ್ಷಗಳಿಂದ ನಿರಂತರವಾಗಿ ಇದೇ ರೀತಿಯಾದ ಮಾಹಿತಿಯನ್ನು ಕೊಟ್ಟುಕೊಂಡು ಬಂದಿದ್ದೇವೆ ಇಲ್ಲಿಯವರೆಗೆ ಈ ಪ್ರಶ್ನೆ ಉದ್ಭವಿಸಿರಲಿಲ್ಲ

ಶ್ರೀ ಜೆ ಸಿ ಮಾಧುಸ್ವಾಮಿ S B account again a public document ಆದ್ದರಿಂದ, ಅವರೇ ಅಕೌಂಟ್‌ನ್ನು ತೆಗೆಸಿ ನೋಡಿಕೊಳ್ಳಲಿ ಬೇಡವೆಂದು ಯಾರು ಹೇಳಿದ್ದಾರೆ? Bank transaction ಬಗ್ಗೆ ನೋಟೀಸ್ ಕೊಟ್ಟರೆ ಹೇಗೆ?

ಅಧ್ಯಕ್ಷರು ಇದರ ಬಗ್ಗೆ ಹೆಚ್ಚಿಗೆ ಚರ್ಚೆ ಬೇಡ

ಶ್ರೀ ಜೆ ಸಿ ಮಾಧುಸ್ವಾಮಿ ಎಸ್ ಬಿ ಅಕೌಂಟ್‌ನ ಬ್ಯಾಲೆನ್ಸ್ ಕೊಟ್ಟಿಲ್ಲವೆಂದು ಅವರು ಹೇಳುವುದಿಲ್ಲ ಇಂಥಿಂಥವರು ಇನ್‌ಕಂಪ್ಲೀಟ್ ಮಾಹಿತಿಯನ್ನು ಕೊಟ್ಟಿದ್ದಾರೆಂದು ಮತ್ತು all 265 have filed incomplete records with lokayuktha ಎಂದು ವಿಷಯವೆಲ್ಲ ಪತ್ರಿಕೆಗಳಲ್ಲಿ ಮತ್ತು ಟಿ ವಿ ಯಲ್ಲಿ ಬಂದರೆ ನಮ್ಮ ಗತಿ ಏನು ಸಾರ್?

ಶ್ರೀ ಕೆ ಆರ್ ರಮೇಶ್ ಕುಮಾರ್ ಮಾನ್ಯ ಅಧ್ಯಕ್ಷರೆ, ಇಲ್ಲಿ ನಮಗೆಲ್ಲಾ ಚೇರ್‌ಗಳನ್ನು ಹಾಕಿದ್ದಾರೆ ಮತ್ತೆ ತಮಗೊಬ್ಬರಿಗೆ ಮಾತ್ರ ಅಲ್ಲಿ ಚೇರ್ ಹಾಕಿದ್ದಾರೆ ನಮ್ಮಲ್ಲಿ ಯಾರು honest, dishonest ಎಂದು ನೋಡುವುದಕ್ಕೆ ನಮಗೇನು ನೀವು ಇಲ್ಲಿ ಸ್ಕ್ಯಾನಿಂಗ್ ಮಿಷಿನ್ ಇಟ್ಟಿದ್ದೀರಾ? ಅದವಾ ಬೇರೆ

ಬೇರೆ ಬಣ್ಣದ ಸರ್ಟಿಫಿಕೇಟ್ ಏನಾದರೂ ಕೊಡುತ್ತೀರಾ? ಅಕ್ಕಿ ಕೊಡುವುದಕ್ಕೆ ಊರಿನಲ್ಲಿ ಕೊಡತಕ್ಕಂಥ APL and BPL ಕಾರ್ಡ್ ರೀತಿಯಲ್ಲಿ ತಾವೇನಾದರು ನಮಗೆ ಕೊಟ್ಟಿದ್ದೀರಾ? Unless proved otherwise, we are all honest ನಮಗೆ ಮತ್ತು ತಮಗೆ ಹಾಗೂ ಸಾರ್ವಜನಿಕರಿಗೂ ಸಹ ಗೊತ್ತಿರುವ ಹಾಗೆ ಕೆಲವರು ಸತತವಾಗಿ ಸಾರ್ವಜನಿಕ ಜೀವನದಲ್ಲಿ ಅಧಿಕಾರಕ್ಕೆ ಬಂದ ಮೇಲೆ ಅವರ ಖಾಸಗಿ ಜೀವನದಲ್ಲಿ ಎಷ್ಟು ಮಹತ್ವದ ಬದಲಾವಣೆಗಳಾಗಿವೆಂದು ಮತ್ತು ಅವರು ಮೊದಲು ಹೇಗಿದ್ದರು, ಈಗ ಹೇಗಾಗಿದ್ದಾರೆಂದು ಹಾಗೂ ನಮ್ಮ ಕಣ್ಣಿಗೆ ಕಾಣುವಂಥ ಯಾವುದೇ ಉದ್ಯೋಗವನ್ನು ಮಾಡಿದವರಲ್ಲ ಮತ್ತೆ ಸಂಪಾದನೆ ಮಾಡಿದವರಲ್ಲ ಮತ್ತೆ ಹೊಲ, ಮನೆ, ಫ್ಯಾಕ್ಟರಿ ಇದ್ದವರಲ್ಲ ಮತ್ತೆ ವ್ಯಾಪಾರ ಮಾಡಿದವರಲ್ಲ ಆದರೂ ಕೂಡ ಇಷ್ಟೊಂದು ಹೇಗಾಯಿತು? ನಿರ್ಲಜ್ಜಿತರ ಜೊತೆಗೆ ಅಷ್ಟೋ ಇಷ್ಟೋ ಉಗರಿನಷ್ಟು ಲಜ್ಜೆ ಇಟ್ಟುಕೊಂಡಿರುವವರನ್ನು ಕ್ಲಬ್ ಮಾಡಿ ಈ ರೀತಿಯಾದ ಹಿಂಸೆಗೆ ಒಳಪದಿಸತಕ್ಕಂಥದು this is a very rigorous punishment ನಾವೆಲ್ಲಾ ಜೈನಮತಕ್ಕೆ ಸೇರಿಕೊಂಡು ದಿಗಂಬರವಾಗಿ ಗೋಮಟೇಶ್ವರನ ಪಂಕ್ತಿಗೆ ಸೇರಿಕೊಳ್ಳುತ್ತೇವೆ ಆಗ ಇವರು ನಮ್ಮನ್ನು ಏನು ಮಾಡುತ್ತಾರೆ? ನಾವು ಹಿಂದು, ಬೌದ್ಧ, ಕ್ರಿಶ್ಚನ್, ಅಲ್ಲ ನಾವು ನೇರವಾಗಿ ಗೋಮಟೇಶ್ವರನ ಜಾತಿಗೆ ಸೇರಿಕೊಂಡುಬಿಡುತ್ತೇವೆ ಆಗ ಇವರು ಏನು ಮಾಡುತ್ತಾರೆ? I am compelled to speak to them in this fashion ಅವರು ಅರ್ಥ ಮಾಡಿಕೊಳ್ಳಬೇಕು ಅವರಿಗೆ ಗೊತ್ತಿರುವ ಹಾಗೆ, those who have amassed wealth, Shameless ಆಗಿ ಅವರ ಹೊತೆ ಹೋಗಿ ಡಯಾಸ್ ಹಂಚಿಕೊಳ್ಳುತ್ತಾರೆ ಮೇಲೆ ಹೋಗಿ ಪೋಸ್ ಕೊಡುತ್ತಾರೆ ಜನರಿಗೆ ಇದರ ಕಲ್ಪನೆ ಇರುತ್ತದೆ

ಅಧ್ಯಕ್ಷರು ಡೆಮಾಕ್ರಸಿಯಲ್ಲಿ ಇದೆಲ್ಲಾ ಸ್ವಾಭಾವಿಕ ಯಾರೊಬ್ಬ ದರೋಡೆಕೋರ ಇರುತ್ತಾನೆ ಆತ ಯಾರೆಂದು ನಿಮಗೆ ಗೊತ್ತಿರುವುದಿಲ್ಲ ನಿಮ್ಮ ಹುಟ್ಟಿದ ಹಬ್ಬದ ಕಾರ್ಯಕ್ರಮಕ್ಕೆ ಬಂದು ನಿಮಗೆ ಹಾರ ಹಾಕಿರುತ್ತಾನೆ ಆತ ಎಲ್ಲಿಯಾದರೂ ಸಿಕ್ಕಿಕೊಂಡಾಗ ಇವರದೆಲ್ಲಾ ಸಂಪರ್ಕವಿತ್ತೆಂದು ಫೋಟೋ ತೋರಿಸುತ್ತಾರೆ ಡೆಮಾಕ್ರಸಿಯಲ್ಲಿ ಈ ರೀತಿಯಾದವೆಲ್ಲಾ ಇರುತ್ತದೆ ಆದ್ದರಿಂದ ಇವುಗಳ ಬಗ್ಗೆ ಏನು ಮಾಡುವುದಕ್ಕೆ ಆಗುವುದಿಲ್ಲ ಆದ್ದರಿಂದ, ಪ್ರತಿಯೊಬ್ಬರು ಆತ್ಮಶೋಧನೆ ಮಾಡಿಕೊಂಡು ಸಾರ್ವಜನಿಕ

ಜೀವನದಲ್ಲಿರಬೇಕು ಆದರೆ, ಇವತ್ತಿನ ದಿವಸ ಏನಾಗಿದೆಂದರೆ, ಯಾರ ಹತ್ತಿರ ಎಷ್ಟು ಕೋಟಿ ರೂಪಾಯಿಗಳಿವೆಂದು ಮತ್ತು ಎಷ್ಟು ಮತಗಳಿವೆಂದು ರಾಜಕೀಯ ಪಕ್ಷಗಳು ಹುಡುಕುತ್ತವೆ ನಾವು Political forumನಲ್ಲಿ ಮಾತನಾಡಿ ಅಲ್ಲಿ ಫೈಟ್ ಮಾಡಿಕೊಳ್ಳಬೇಕು ಈ ಎಲ್ಲಾ ಅನಾಹುತಕ್ಕೆ ರಾಜಕೀಯ ವ್ಯವಸ್ಥೆ ಮತ್ತು Political parties ಕಾರಣ

ಶ್ರೀ ಕೆ ಆರ್ ರಮೇಶ್‌ಕುಮಾರ್ ಮಾನ್ಯ ಅಧ್ಯಕ್ಷರೆ, ನೀವು ಹೇಳುತ್ತಿರುವುದು 100ಕ್ಕೆ 100ರಷ್ಟು ನಿಜ ಆದರೆ, ನೀವು ಸ್ವಲ್ಪ ಮಾತನಾಡಲೆಂದು ಈ ವಿಷಯವನ್ನು ಪ್ರಸ್ತಾಪ ಮಾಡಿದೆ ನಾವು ದುಡ್ಡಿರುವವರಿಗೆ ಟಿಕೆಟ್ ಕೊಡುತ್ತೇವೆ ಮತ್ತೆ ನಾವು ದುಡ್ಡು ಮಾಡುತ್ತೇವೆ ಬೇರೆಯವರು ದುಡ್ಡು ಮಾಡಿದರೆ ಮಾತನಾಡುವುದಿಲ್ಲ ನಾವು ಮಾಡಿದರೆ ಮಾತನಾಡುತ್ತಾರೆ, ಏಕೆಂದರೆ, ನಾನು ಹೇಳಿದ ಹಾಗೆ ಜನರ ಬಳಿ ನಾವು ಮತಕ್ಕೋಸ್ಕರ ಹೋಗುತ್ತೇವೆ ಈಗ IAS ಅಧಿಕಾರಿಗಳು ಕ್ಯಾಂಪೇನ್ ಮಾಡಿಕೊಂಡು Excise Commissioner post ಬೇಕೆಂದು canvass ಮಾಡಿ ತೆಗೆದುಕೊಂಡರೆ ಆತ ದೇಶವೆಲ್ಲವನ್ನು ಉದ್ಧಾರ ಮಾಡಿಬಿಡುತ್ತಾನೆಯೇ? ಅಥವಾ Industrial Area Devlopment Boardಗೆ Executive Officer ಆಗಿ ಹೋಗಬೇಕು

ಅಧ್ಯಕ್ಷರು ಮಾನ್ಯ ರಮೇಶ್‌ಕುಮಾರ್‌ರವರೆ, ನಾವು ಹಿಂದೆ ಸಣ್ಣ ಹುಡುಗರಾಗಿದ್ದಾಗ ಅಂದರೆ ಕಾಲೇಜು ಓದುವ ದಿವಸಗಳಲ್ಲಿ IAS ಅಧಿಕಾರಿಗಳ ಬಗ್ಗೆ ಏನು ತಿಳಿದುಕೊಂಡಿದ್ದೇವೆಂದರೆ, ಅವರು ಆಡಳಿತದಲ್ಲಿ ಬಹಳ ಪರಿಪೂರ್ಣರು, ಶಕ್ತರು, ದಕ್ಷರು ಎಂದು ಬೇರೆಯವರು ಹೇಳುತ್ತಿದುದ್ದನ್ನು ನಾವು ಕೇಳುತ್ತಿದ್ದೆವು ಕೆಲವರಷ್ಟೇ womanisers ಇದ್ದಾರೆ ಆದರೆ, ಈಗ ಏನಾಗಿದೆಂದರೆ, ಆ ವರ್ಗದ ಬಗ್ಗೆ ಏನು ಹೇಳಬೇಕೆಂಬುದೇ ಗೊತ್ತಾಗುವುದಿಲ್ಲ

ಶ್ರೀ ಕೆ ಆರ್ ರಮೇಶ್ ಕುಮಾರ್ We have some execellent people even to this date ನಾನು ಇಲ್ಲವೆಂದು ಹೇಳುವುದಿಲ್ಲ

ಅಧ್ಯಕ್ಷರು ರಾಜಕಾರಣಿಗಳಲ್ಲಿ ಏನಾಗಿದೆ ಎಂದರೆ, ಕಾನೂನು, ನಿಯಮ ಇರಲಿ ಅಥವಾ ಬಿಡಲಿ ಅವರ ಮಾತನ್ನು ಕೇಳುತ್ತಾರೆ ಅವರೇ ಬೆಸ್ಟ್ ಎನ್ನತಕ್ಕಂಥ ಭಾವನೆ ಬೆಳೆದಿದೆ ಅದಕ್ಕೆ ತಕ್ಕಂತೆ ಅವರೂ ಸಹ

ಇದ್ದಾರೆ IAS ಅಧಿಕಾರಿಗಳು ಮೇಲಿಂದ ಏನು ಉದುರಿಲ್ಲ ಈ ಸಮಾಜದಲ್ಲಿಯೇ ಇರತಕ್ಕಂಥವರು ಒಳಿತು ಮತ್ತು ಕೆಡಕನ್ನು ಮಾಡುತ್ತಿದ್ದಾರೆ

ಶ್ರೀ ಕೆ ಆರ್ ರಮೇಶ್‌ಕುಮಾರ್ ಈ ಸದನಕ್ಕೆ ಗುಬ್ಬಿ ಕ್ಷೇತ್ರದಿಂದ ಗಟ್ಟಿ ಚಂದ್ರಶೇಖರ್ ಆಯ್ಕೆಯಾಗಿ ಬಂದಿದ್ದರು ಅವರು ಆ ಕಡೆ ಕುಳಿತುಕೊಂಡು ಸಹಕಾರ ಇಲಾಖೆಯ ಬೇಡಿಕೆಗಳ ಬಗ್ಗೆ 3 ನಿಮಿಷ ಮಾತನಾಡಿದರು ಅವರು ಏನು ಹೇಳಿದರೆಂದರೆ, ಮಾನ್ಯ ಅಧ್ಯಕ್ಷರೆ, ನಾನು ಎರಡನೇ ಟರ್ಮ್‌ಗೆ ಆಯ್ಕೆಯಾಗಿ ಬಂದಿದ್ದೇನೆ ನೀವು ರಾಜೀನಾಮೆ ಕೊಟ್ಟು ಯಾವುದಾದರು ಸೊಸೈಟಿ ಕಾರ್ಯದರ್ಶಿಯಾಗಿ ಎಂದು ನನ್ನ ಹೆಂಡತಿ ಗಲಾಟೆ ಮಾಡುತ್ತಿದ್ದಾಳೆ ನನ್ನ ಪಕ್ಕದ ಮನೆಯಲ್ಲಿ ಸೊಸೈಟಿಯ ಕಾರ್ಯದರ್ಶಿಯೊಬ್ಬರು ಇದ್ದಾರೆ ಆತನ ಹೆಂಡತಿಯ ಹತ್ತಿರ 6 ಎಳೆ ಚೈನ್ ಮತ್ತು ಎರಡು ಪೆಟ್ಟಿಗೆ ತುಂಬಾ ಸೀರೆ ಇದೆ ಮತ್ತೆ ಬೆಂಗಳೂರಿನಲ್ಲಿ 3 ಸೈಟ್ ಇವೆ, ನಿಮ್ಮ ಮುಖಕ್ಕೆ ಒಂದು ಸೈಟ್ ಇಲ್ಲವೆಂದು ನನ್ನ ಹೆಂಡತಿ ಚುಚ್ಚಿ ಮಾತನಾಡುತ್ತಾಳೆ ಆದ್ದರಿಂದ, ನನಗೆ ಏನಾದರು ಮಾಡಿ ಸೊಸೈಟಿ ಕಾರ್ಯದರ್ಶಿ ಕೆಲಸ ಕೊಡಿಸಿ ಮಾನ್ಯ ಅಧ್ಯಕ್ಷರೆ ಎಂದು ಈ ಸದನದಲ್ಲಿ ಅವರು ಭಾಷಣ ಮಾಡಿದ್ದರು ಅವರ ಹಾಸ್ಯದಲ್ಲಿ ಎಷ್ಟು ಮೀನಿಂಗ್ಸ್‌ನ್ನು ಕನ್ವೇ ಮಾಡಿದ್ದಾರೆ ಸಹಕಾರ ಇಲಾಖೆ ಬೇಡಿಕೆ ಮೇಲೆ ಮಾತನಾಡುವಾಗ ಈ ಮಾತನ್ನು ಅವರು ಹೇಳಿದರು This House has to transact business on these lines ನಾವು ಅವುಗಳ ಬಗ್ಗೆ ಮೆಲುಕು ಹಾಕಬೇಕು, ನಮ್ಮನ್ನು ನಾವು ಆತ್ಮಶೋಧನೆಗೆ ಒಳಪಡಿಸಿಕೊಳ್ಳಬೇಕು ಮತ್ತೆ ಟೀಕೆಗೆ ಒಳಪಡಬೇಕು ನಮ್ಮನ್ಯಾರಾದರೂ ಟೀಕೆ ಮಾಡಿದರೆ ಅದನ್ನು ಸ್ವೀಕಾರ ಮಾಡುವುದಕ್ಕೆ ನಾವು ಸಿದ್ಧರಿರಬೇಕು ನಮ್ಮದು independent judiciary ಇದೆ Between Executive and Legislature there is a clear demarcation Justice V R Krishna Iyer ರವರು former judge of the Supreme Court, who is considered to be one of the giants amongst intellectuals has said, "The myth is the courts of law administer justice The truth is they are agents of injustice" ನ್ಯಾಯಾಲಯಗಳಲ್ಲಿ ನ್ಯಾಯ ಸಿಗುತ್ತದೆಂದು ನಮಗೆ ಭ್ರಮೆಯಂತೆ ಸತ್ಯ ಏನೆಂದರೆ, ಅವು ಅನ್ಯಾಯಗಳನ್ನು ಡಿಸ್ಟ್ರಿಬ್ಯೂಟ್ ಮಾಡತಕ್ಕಂಥ ಏಜೆನ್ಸಿಗಳಂತೆ ಇದನ್ನು ನಾನು ಹೇಳಿರತಕ್ಕಂಥ ಮಾತಲ್ಲ ಜಸ್ಟೀಸ್ ಕೃಷ್ಣ ಅಯ್ಯರ್‌ರವರು ಹೇಳಿರತಕ್ಕಂಥದು ಆದ್ದರಿಂದ,

ನಾನು ಕೇಳುವುದೇನೆಂದರೆ, A judge is also a human being like you and me ಅವರಿಗೆ ಹೆಂಡತಿ, ಮಕ್ಕಳು, ಮೊಮ್ಮಕ್ಕಳು, ಆಸೆ ಮತ್ತು ಎಲ್ಲಾ ರೀತಿಯಾ ಆಮಿಷಗಳೆಲ್ಲಾ ಇರುತ್ತವೆ IAS ಅಧಿಕಾರಿಗಳಿಗೆ ಮತ್ತೆ ಇತರೇ ಅಧಿಕಾರಿಗಳಿಗೆ confidential report ಬರೆಯುತ್ತಾರೆ ನಮಗೆ ನಿಮಗೆ ಯಾವುದೇ ರೀತಿಯ confidential report ಇಲ್ಲ ನಾವು ನೇರವಾಗಿ ಜನಗಳ ಹತ್ತಿರ ಹೋಗಿ ಕೇಳುತ್ತೇವೆ ಅದು ಒಳ್ಳೆಯದು, ಕೆಟ್ಟದೋ ಒಟ್ಟಿನಲ್ಲಿ ಗಾಳಿ ಬೀಸಿದಾಗ ಕೆಲವರು ಹೊರಟು ಹೋಗುತ್ತಾರೆ, ಅಂದರೆ, ಕೆಲವರು ಒಳ್ಳೆಯವರು, ಕೆಟ್ಟವರು ಹೋಗುತ್ತಾರೆ, ಕೆಲವರು ಬರುತ್ತಾರೆ ತಾವು ಕೂಡ ಹೋಗಿದ್ದೀರಿ, ಮತ್ತೆ ನಾನೂ ಸಹ ಹೋಗಿದ್ದೇನೆ ಮತ್ತೆ ಕೆಲವು ಸಲ ಇಲ್ಲಿಗೆ ಬಂದಿದ್ದೇವೆ ಆದರೆ, ಜಡ್ಜಸ್ Thet are not infallible ಅವರ official conduct ಅನ್ನು evaluate ಮಾಡತಕ್ಕಂಥ ಒಂದು ಸಿಸ್ಟಮ್ ಅನ್ನು ನಾವು ಡಿವೈಸ್ ಮಾಡದೇ ಹೋದರೆ they will constitute a separate class by themselves They may become the priesthood ಹಿಂದೆ ಪೌರೋಹಿತ್ಯ ಶಾಹಿಗಳೆಂದು ಇರುತ್ತಿದ್ದರು ಪೌರೋಹಿತ್ಯ ಶಾಹಿಗಳೆಂದರೆ, ಅವರ ಮೇಲೆ ಯಾರು ಇಲ್ಲ ಅವರನ್ನು ಯಾರು ಪ್ರಶ್ನೆ ಮಾಡುವ ಹಾಗೆ ಇಲ್ಲ ರಾಜಾಧಿರಾಜರು ಮೊದಲುಗೊಂಡು ಅವರಿಗೆ ಸಾಷ್ಟಾಂಗ ನಮಸ್ಕಾರ ಮಾಡಬೇಕು ಅವನು ಒಳ್ಳೆಯವನಾದರೂ ಆಯಿತು, ಅವನು ಕೆಟ್ಟವನಾದರೂ ಆಯಿತು ಪೌರೋಹಿತ ಎಂದರೆ ಅದು ಅಲ್ಲಿಗೆ ಮುಗಿದು ಹೋಯಿತು So, ಈ ಎಲ್ಲಾ ಹಂತದ ನ್ಯಾಯಾಧೀಶರುಗಳನ್ನು I will not talk about the Supreme Court It is beyond our jurisdiction Evaluate ಮಾಡುವುದಕ್ಕೆ, I think this House should apply its mind, should make use of its authority and should resort Let us see what happens Otherwise, ಏನಾಗುತ್ತದೆ? ನಮ್ಮಿಂದ ಅವರು ಅಸ್ಪೃಶ್ಯರು ಆಗಿ ಉಳಿದು ಬಿಡುತ್ತಾರೆ ಇಲ್ಲದಿದ್ದರೆ ಅವರು ಮಾಡತಕ್ಕಂಥ ಎಲ್ಲಾ ತಪ್ಪುಗಳಿಂದ ಅವರು ಯಾವುದೇ ವಿಧವಾದಂಥ criticismಗೆ ಒಳಗಾಗದಂತೆ analysis ಒಳಗಾಗದಂತೆ, they will constitute a separate class Medieval times ನಲ್ಲಿ ಇರತಕ್ಕಂಥ ಸಾಧನಗಳು ಈಗ ಇಲ್ಲ ಆವತ್ತು Fax ಇಲ್ಲ, Mobile Phone ಇಲ್ಲ, Printer ಇರಲಿಲ್ಲ, STD Phones ಇರಲಿಲ್ಲ,

ಇವೆಲ್ಲಾ ಕಷ್ಟ ಆದರೆ ಇವತ್ತು ಅವೆಲ್ಲಾ ಇವೆ why there has been so much of pendency? Sir, delay breeds corruption and justice delayed is justice denied We have been sanctioning money to the departments of Law and justice as well I know that this House is not completent by virtue of the Constitution to discuss about the salaries you give to the Judges and to your kind authority You are all, charged account ನಲ್ಲಿ ಬಂದು ಬಿಡುತ್ತೀರಿ That is an honour conferred on you, not right An honour is different and right is different If an honour is conferred on your authority, and you don't raise to conduct yopur self defeating that honour, status and stature Then, what is the option open to me? ಈಗ ನಾವು ಯಾವ ಸ್ಥಿತಿಗೆ ಬಂದು ತಲುಪಿದ್ದೇವೆಂದರೆ, ಯೋಗ್ಯಸ್ಥರ ಯೋಗ್ಯ ಜಾಗಕ್ಕೆ ಹೋಗುತ್ತಾರೆ ಎನ್ನತಕ್ಕಂಥ ಧೈರ್ಯ ತಮಗೂ ಇಲ್ಲ ನಮಗೂ ಇಲ್ಲ ಕಾರಣಾಂತರಗಳಿಂದ ಯೋಗ್ಯತೆ ಇಲ್ಲದವನು ದೊಡ್ಡ ಸ್ಥಾನಕ್ಕೆ ಹೋಗಿ ಬಿಟ್ಟರೆ ಅವನು ತನ್ನ ಹಿಂದಿನ ಕೆಲಸಗಳನ್ನು ಅಲ್ಲಿ ಹೋಗಿ ಮುಂದುವರೆಸಿ ಬಿಟ್ಟರೆ, ಆ ಸ್ಥಾನಕ್ಕೆ ನಾವು ಕವಚವನ್ನು ಕಟ್ಟಿ ಬಿಟ್ಟಿದ್ದೇವೆ ಮಾತನಾಡುವುದಕ್ಕೆ ಬರುವುದಿಲ್ಲ ಅನುಭವಿಸುವುದು ಹೇಗೆ? It is for this reason Sir, I appeal to you, before we raise our hands and allow the grants of the Law and Justice Department to be carried away, let them see and apply their mind Atleast up to the level of District Judges, Let them interact with the High Court Can such a body be Constituted? See, they are like us Any thing can happen ನಮಗೆ ಅನೇಕ ಘಟನೆಗಳು ಗೊತ್ತಿವೆ ಅವೆಲ್ಲಾ ಇಲ್ಲಿ ಹೇಳತಕ್ಕಂಥದ್ದು ಸರಿ ಹೋಗುವುದಿಲ್ಲ Prosecutors ಬಗ್ಗೆ ಹೇಳುವುದಾದರೆ, Directorate of Prosecution ಇದೆ ಅವರಿಗೆ ಎಲ್ಲಾ ಜಿಲ್ಲೆಗಳಲ್ಲಿ Prosecutors ಅನ್ನು appointment ಮಾಡಿದ್ದಾರೆ Prosecution ಅವರ ಪರವಾಗಿ ಅವರು appear ಆಗಬೇಕು ಅದು ಅವರ ಕೆಲಸ ಕೆಲವು ವಿಶೇಷ ಸಂದರ್ಭಗಳಲ್ಲಿ ಸರ್ಕಾರ Special Prosecutors ಅನ್ನು appoint ಮಾಡುತ್ತದೆ ಒಬ್ಬ Special Prosecutor ಆಗಿ appoint ಆದವನು, 30–60 hearingsಗೆ ಮೂರು ಕಾಸಿನ

ವ್ಯವಹಾರವನ್ನು transact ಮಾಡದೇ, adjournmentಗಳನ್ನು ತೆಗೆದು ಕೊಂಡು ಬಂದು, ತನ್ನ daily appearance fees, sitting fees ಎಂದು ಸರ್ಕಾರದಿಂದ claim ಮಾಡಿ ಸರ್ಕಾರದಿಂದ ತೆಗೆದುಕೊಂಡು ಬಿಡುತ್ತಾರೆ Apart from the Directorate, ನಾವು ಇವರನ್ನು ವಿಶೇಷ ಸಂದರ್ಭಗಳಲ್ಲಿ ಇವರಿಗೆ ಜವಾಬ್ದಾರಿಯನ್ನು ಕೊಡುತ್ತೇವೆ ಸರ್ಕಾರ ಹಣ ಭರಿಸಬೇಕಾ ಗುತ್ತದೆ ಸರ್ಕಾರ ಮಾಡಬಾರದೆಂದು ನಾನು ಹೇಳುವುದಿಲ್ಲ, ಕೆಲವು ಸಾರಿ ಅವರು ನಮಗೆ ಬೇಕಾಗುತ್ತಾರೆ ಆದರೆ ಕೆಲವೊಬ್ಬರು ಇದೆ ಒಂದು ಉದ್ಯೋಗವೆಂದು ಹಿಡಿದುಕೊಂಡು ಬಿಟ್ಟಿದ್ದಾರೆ It is a racket And in some cases, ಹೈಕೋರ್ಟಿನವರು ಸರ್ಕಾರದ ಮುಖಕ್ಕೆ ಉಗಿಳಿದ್ದಾರೆ ಎಂದು ಹೇಳಿದರೆ, ಅವಾಚ್ಯವಾಗುವುದಿಲ್ಲ, ಅಸಂಸದೀಯವಾಗುವುದಿಲ್ಲ ಇದಕ್ಕಿಂತ ಗೌರಯುತವಾದಂಥ ಭಾಷೆ ಕನ್ನಡದಲ್ಲಿ ಉಪಯೋಗ ಮಾಡುವುದು ಸಾಧ್ಯವಿಲ್ಲ ಮತ್ತೆ ಯಾವ ರೀತಿ nexus ಇರುತ್ತದೆಂದರೆ, In a particular case, 21 ಸಲ judge ಸಾಕ್ಷಿಗಳನ್ನು court ಮುಖಾಂತರ ಕರೆಸುವುದಕ್ಕೆ ಪ್ರಯತ್ನ ಮಾಡುತ್ತಾರೆ ತಾವು, you are a Lawyer ಸಮನ್ಸ್ ಕೊಡುತ್ತಾರ ಸಮನ್ಸ್‌ಗೆ ಅವರು ಬರುವುದಿಲ್ಲ Area Inspectorಗೆ Warrant ಕೊಡುತ್ತಾರೆ Appear ಆಗುವುದಿಲ್ಲ Non-bailable warrant ಕೊಡುತ್ತಾರೆ, Inspector ಕೈಯಿಂದ ಆಗಲಿಲ್ಲವೆಂದು S P ಗೆ ಕೊಡುತ್ತಾರೆ S P ಕೈ ಯಿಂದ ಆಗಲಿಲ್ಲವೆಂದು ಹೇಳಿ, range ಐ G ಗೆ ಕೊಡುತ್ತಾರೆ Accused ಅನ್ನು ಕರೆದುಕೊಂಡು ಬರುವುದಕ್ಕೆ ಅಲ್ಲ, witnessesನ್ನು ಕರೆದುಕೊಂಡು ಬರುವುದಕ್ಕೆ I can give the case No I can give the file No I don't want to do it ಮಾನ್ಯ ಯಡಿಯೂರಪ್ಪನವರ, 21 ಸಲ Sessions Judge Court ನಿಂದ Inspector ನಿಂದ ಹಿಡಿದು I G ವರೆಗೆ ಹೋಗಿ Non-bailable warrant issue ಮಾಡಿ ಸಾಕ್ಷಿಗಳು ಸಿಗುವುದಿಲ್ಲವೆಂದು ಹೇಳತಕ್ಕಂಥ ನಿಮ್ಮ ಸರ್ಕಾರಕ್ಕೆ ನೀವು ಬೇಡಿಕೆಗಳನ್ನು ಇಟ್ಟಿದ್ದೀರಲ್ಲಾ ನಾವು ಮಂಜೂರು ಮಾಡಿ ಕೊಡಬೇಕೇ? ಅದಕ್ಕೆ ನೀವು ಯೋಗ್ಯರೇ, ಅರ್ಹರೇ ವ್ಯವಹಾರ ಸ್ವಂತಕ್ಕೆ ಕೇಳಿ ಏನು ಬೇಕಾದರೂ ಕೊಡೋಣ ಅದು ಬೇರ ವಿಷಯ Does your Government deserve? Sir, this is why I said,

ಇಷ್ಟೊಂದು ವಿಷಯಗಳು ಇದ್ದಾವೆ ಯಾವುದನ್ನು ಮಾತನಾಡುವುದು ಯಾವುದು ಬಿಡುವುದು ನಾವು total evolution ಮಾಡಿದಾಗ ನೀವು ಫೇಲಾಗುತ್ತೀರಿ

(ಈ ಹಂತದಲ್ಲಿ ಮಾನ್ಯ ಉಪಾಧ್ಯಕ್ಷರು ಪೀಠವನ್ನು ಅಲಂಕರಿಸಿದರು)

Yes, ನೀವು ರೇಖಾಗಣಿತದಲ್ಲಿ First Class ಆದರೆ ಬೀಜಗಣಿತ ದಲ್ಲಿ ಫೇಲಾಗಿದ್ದೀರಿ, Over all Mathematics paperನಲ್ಲಿ ನೀವು ಪಾಸಾಗಲಿಲ್ಲ You have failed I am taking here one department or the other Mr Cheluvaraya Swamy is here One of the most revenue yielding departments to treasury ಸರ್ ನಮ್ಮ ಪುಣ್ಯ ಅತ್ಯಂತ ನಿಷ್ಟುರವಾಗಿ ಒಬ್ಬ ನಿಜವಾದ ವಿರೋಧ ಪಕ್ಷದ ಮುಖಂಡ ಮಾಡಬೇಕಾದ ಕೆಲಸವನ್ನು ಇತ್ತೀಚಿನ ದಿನಗಳಲ್ಲಿ ನಿರ್ವಹಣೆ ಮಾಡಿದವರು ನಮ್ಮ ಕಡೆ ಕುಳಿತಿದ್ದಾರೆ ಬಹುಶಃ ಈ ಸದನದಲ್ಲಿಯೇ ಅದು ಇತಿಹಾಸ 1967 ರಿಂದ ಈ ಸದನದಲ್ಲಿ ಬಹುಶಃ ಎಲ್ಲಾ ಏಳು ಬೀಳುಗಳನ್ನು ನೋಡಿದವರು ವಾಟಾಳ್ ನಾಗರಾಜ್‌ರವರು ಮತ್ತೊಂದು ಕಡೆಗೆ, ಶ್ರೀರಾಮರೆಡ್ಡಿಯವರು, though he is coming for the second time, he is a confirmed Communist ಅವರು ಮಾತನಾಡುವಾಗ ನಾವು ಪ್ರತಿಸಲ ಅತ್ಯಂತ ಶ್ರದ್ಧೆಯಿಂದ ಕೇಳುತ್ತೇವೆ there are senior like Mr Rajendran and Jayaprakash Hegde, Here is man who has presented the state budget for record number of times Nobody had that privilege in Karnataka till today ನಾನು ಇವರ ಮಧ್ಯೆ ಎದ್ದು ನಿಂತು ಮಾತನಾಡಬೇಕಾದರೆ, ಭಯದಿಂದ ಮಾತನಾಡಬೇಕಾಗುತ್ತದೆ ಮತ್ತು ಶ್ರದ್ಧೆಯಿಂದ ಮಾತನಾಡಬೇಕಾಗುತ್ತದೆ ಮಾನ್ಯ ಚೆಲುವರಾಯಸ್ವಾಮಿ ಯವರದ್ದು ಅತ್ಯಂತ ಹೆಚ್ಚು ಆದಾಯವನ್ನು ಕೊಡತಕ್ಕಂಥ ಇಲಾಖೆ ಕಾಂಟ್ರಾಕ್ಟ್ ಕ್ಯಾರೇಜಸ್‌ಗೆ ನೀವು ಪರ್ಮಿಟ್‌ನ್ನು ಕೊಡುತ್ತಿದ್ದೀರಿ ದೇವರಾಜ್ ಅರಸುರವರು ಮುಖ್ಯಮಂತ್ರಿಗಳಾಗಿದ್ದಾಗ ಅಜೀಜ್‌ಸೇಠ್‌ರವರು Transport Minister ಆಗಿದ್ದರು ಆಚಾರವಿಲ್ಲದಂತೆ ಎಲ್ಲಿ ನೋಡಿದರೂ ಈ ಕಂಟ್ರಾಕ್ಟ್ ಕ್ಯಾರೇಜಸ್ ಬಸ್‌ಗಳು ಬಂದು ಬಿಟ್ಟಿತು ಒಬ್ಬರಿಗೂ ಗೊತ್ತಾಗಲಿಲ್ಲ, ಇದ್ದಕ್ಕಿದ್ದಂತೆ ದಿಢೀರ ಕಾರ್ಯಾಚರಣೆ ಮಾಡಿ Over night, they took

over all the contract carriages ಆಮೇಲೆ ಅದರಲ್ಲಿ ಇರತಕ್ಕಂಥ ಕೆಲಸ ಕಾರ್ಮಿಕರೆಲ್ಲರನ್ನೂ ಕೂಡ They were all taken to service They were not left out What is a Contract carriage? What is an inter-State Stage carriage permit?

(12-30 PM)

Inter State carriage ಅವನು ಎರಡು ಕಡೆಯಲ್ಲೂ ಕೂಡ ಟ್ಯಾಕ್ಸ್‌ನ್ನು ಕಟ್ಟುತ್ತಾನೆ Before your pocket scheme was announced, counter signature ಆಗಿರುವಂತಹದ್ದು valid permit ಇಟ್ಟುಕೊಂಡಿರುವವರು ಒಂದುಕಡೆ ಇರುತ್ತಾರೆ ಮತ್ತೊಂದು ಕಡೆಗೆ KSRTC ಯಿಂದ ನೀವು ಮತ್ತು neighboring state ನವರು ಇಬ್ಬರು ಕುಳಿತುಕೊಂಡು ಮಾತನಾಡಿ ಅವರಿಗೆ ಎಷ್ಟು route, ನಿಮಗೆಷ್ಟು route ಎಂದು ಮಾತನಾಡಿಕೊಂಡು mutual ಆಗಿ ಕೆಲವು ಚೆನ್ನಾಗಿ major routes ನಲ್ಲಿ ನೀವು ಅಪ್ಲೈ ಮಾಡುತಕ್ಕಂತದ್ದು ಈಗ ನಮ್ಮಲ್ಲಿ ಎಲ್ಲವನ್ನು nationalize ಮಾಡಿದ್ದೀರಿ Nationalize ಮಾಡಿದ ಮೇಲೆ private ನವರು ಬರುವುದಕ್ಕೆ ಸಾಧ್ಯವಿಲ್ಲ ನಾವು ತಮ್ಮ ಆಫೀಸಿನಲ್ಲಿ ನಮ್ಮ ಆಫೀಸರನ್ನು ಕರೆಸಿ KSRTC ಯವರಿಗೆ ಕೆಲವು ಹಳ್ಳಿಗಳಿಗೆ ಬಸ್ಸುಗಳು ಹೋಗುತ್ತಿಲ್ಲ, ದಯಮಾಡಿ ಬಸ್ಸುಗಳ ವ್ಯವಸ್ಥೆಯನ್ನು ಮಾಡಿ, Private ಬಸ್ಸುಗಳು ಬರುತ್ತಿಲ್ಲವೆಂದು ಹೇಳಿದೆವು ನೀವು ಮಾನ್ಯ ದೇವರಾಜ ಅರಸುರವರ ಕಾಲದಲ್ಲಿ ಮಾಯವಾಗಿ ಹೊರಟು ಹೋಗಿದ್ದಂತಹ contract carriage permits ನ್ನು ಏಕಾಏಕಿ ಈಗ introduce ಮಾಡಿದ್ದಿರಲ್ಲಾ, ಈ ಬಗ್ಗೆ ಕಾನೂನಿನಲ್ಲಿ ಏನಾದರೂ ಬದಲಾವಣೆಯಾಯಿತೇ, ಯಾರಾದರೂ ತಿದ್ದುಪಡಿಯನ್ನು ಮಾಡಿದ್ದೀರಾ, ಏನು ಈ ಸದನದ ಒಪ್ಪಿಗೆಯನ್ನು ಪಡೆದುಕೊಂಡಿದ್ದೀರಾ, ಅಥವಾ ಸಾರ್ವಜನಿಕರಿಂದ ನಿಮಗೆ ಏನಾದರೂ ಬೇಡಿಕೆಯೂ ಬಂದಿತ್ತಾ? What is a contract carriage permit? ನಾನು ಇಂತಹ ದಿವಸ ಇಂತಹ ಟ್ರಿಪ್‌ನ್ನು ಈ ಊರಿನಿಂದ ಇಂತಹ ಕಡೆಗೆ ಕರೆದುಕೊಂಡುಹೋಗುತ್ತಿದ್ದೇನೆ ಮದುವೆಗೋ, ಜಾತ್ರೆಗೋ, ಮತ್ತೊಂದು ಕಡೆಗೋ, ಸ್ಕೂಲ್, ಕಾಲೇಜುಗಳಿಗೆ ಕರೆದುಕೊಂಡು ಹೋಗಿ ಕರೆದುಕೊಂಡು ಬರುತ್ತೇನೆ ನಾನು ಇಷ್ಟಪಟ್ಟಿದ್ದೇನೆ ಅದಕ್ಕೋಸ್ಕರ ತಾವು Special permitನ್ನು issue ಮಾಡಿ ಡೈಲಿ KSRTC

buses, Inter State Stage carriages permits ಮಧ್ಯೆ ನೀವು main road ಮತ್ತು National Highwayನಲ್ಲಿ ಇವತ್ತು contract carriages ಬಿಟ್ಟಿದ್ದಿರಲ್ಲಾ, ಇದಕ್ಕೆ ತಮಗೆ ಏನಂತ ಹೇಳಬೇಕು? ಜನರ ಕಷ್ಟ ಮತ್ತು ಬವಣೆಯನ್ನು ಅರಿತು ಸರ್ಕಾರದ ಹೃದಯ ಕರಗಿಹೋಗಿ ಇಂತಹ ಸರ್ಕಾರ ಹಿಂದೆಂದು ಬಂದಿರಲಿಲ್ಲ Contract Carriage busಗಳನ್ನು ಯಥೇಚ್ಛವಾಗಿ ಬಿಟ್ಟು ಪ್ರಯಾಣಿಕರಿಗೆ ಅನುಕೂಲ ಮಾಡಿದ್ದೇವೆಂದು ಹೇಳಿ ನಿಮ್ಮದೆಲ್ಲಾ ಒಂದು Statue ಮಾಡಿಸೋಣವೇ? ಅಥವಾ ನಾಚಿಕೆ, ಮಾನ, ಮರ್ಯಾದೆ ಏನು ಇಲ್ಲದೇ ಸದನದ ಗಮನಕ್ಕೂ ಕೂಡ ತರದೇ, ಇಂತಹಕ್ಕಂತಹ ಎಲ್ಲಾ ನಿಯಮಗಳನ್ನು ಬದಿಗೊತ್ತಿ, ನಿಮ್ಮ ಕಂಕಳು ನೆಕ್ಕುವವರಿಗೆ, ಕಾಲು ಒತ್ತುವವರಿಗೆ ಬದುಕುವುದಕ್ಕೆ ಅವಕಾಶ ಮಾಡಿಕೊಡುವುದಕ್ಕೆ KSRTC ಯನ್ನು ನಾಶ ಮಾಡಿ ರಾಜ್ಯದ ಆದಾಯವನ್ನು ನಾಶ ಮಾಡಿ, tax ಕಟ್ಟತಕ್ಕಂತಹ Stage carriage permits ಅವರನ್ನು ಕೊಂದುಬಿಟ್ಟು ನಿಮ್ಮ ಖುಷಿಗೆ ಬಂದಂತೆ ನೀವು contract carriages ಕೊಟ್ಟಿದ್ದೀರೆಂದು ಆಪಾದನೆಯನ್ನು ಮಾಡಬೇಕೇ? ಒಂದು ವೇಳೆ ನೀವು ಹಾಗೆ ಮಾಡಿದ್ದರೆ ನಿಮ್ಮ ಡಿಮ್ಯಾಂಡ್‌ನ್ನು ಪಾಸು ಮಾಡಿಕೊಡಬೇಕೇ?

ಶ್ರೀ ಜೆ ಸಿ ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ) ಮಾನ್ಯ ಉಪಾಧ್ಯಕ್ಷರೆ, ಟ್ಯಾಕ್ಸಿಗಳು, ಟೆಂಪೋಗಳು, ನೀವು ಒಂದೊಂದು ರೋಡ್‌ಗಳಲ್ಲಿ ನೋಡಬೇಕೆಂದರೆ 15 ರಿಂದ 20 ಸೀಟುಗಳನ್ನು ಹಾಕಿಕೊಂಡು Traxನಲ್ಲಿ, Sumoನಲ್ಲಿ, ಎಲ್ಲಾ ಕಡೆ ಓಡಾಡುತ್ತಿವೆ ಈ ಬಗ್ಗೆ ನಾವು 10 ಸಾರಿ ಮಾತನಾಡಿದ್ದೇವೆ ಸತ್ತವರಿಗೆ ರಕ್ಷಣೆ ಇಲ್ಲ, Insurance coverage ಇಲ್ಲ, door ಹಾಕುವುದಿಲ್ಲ, ಮಾನ್ಯ ಚಲುವರಾಯಸ್ವಾಮಿಯವರು ಏನು ನಡೆಯುತ್ತಿದೆ? ತಾವು ಒಂದು ಸಾರಿ ನಮ್ಮ ಕಡೆ ಬಂದು ನೋಡಿ ತುಮಕೂರು ಕಡೆ ಎಲ್ಲಿ ನೋಡಿದರೂ ಆ ಟೆಂಪೋದವರೇ ಕಾಣುತ್ತಾರೆ KSRTC ಗೆ ಹೇಗೆ ಅಂದರೆ ದುಡ್ಡು

(ಗೊಂದಲ)

ಶ್ರೀ ಜೆ ಸಿ ಮಾಧುಸ್ವಾಮಿ ಅಕಸ್ಮಾತ್ ಏನಾದರೂ ಆಕ್ಸಿಡೆಂಟ್ ಆದರೆ 2 ದಿವಸ ಅನುಭವಿಸುತ್ತಾರೆ ಆಮೇಲೆ complete ಆಗಿ ರೋಡ್ ತುಂಬಾ ಟೆಂಪೋಗಳೇ, ಟ್ಯಾಕ್ಸಿಗಳೇ, ಇರುತ್ತದೆ ಆಮೇಲೆ ಈಗ ನೀವು Luggage

Auto ತಂದಿದ್ದಿರಲ್ಲಾ, ಅವರು 15–20 ಸೀಟುಗಳನ್ನು ಹಾಕಿಕೊಂಡು ರೋಡ್ ಮೇಲೆ ಓಡಿಸುತ್ತಿರುತ್ತಾರೆ

ಶ್ರೀ ಜಿ ವಿ ಶ್ರೀರಾಮರೆಡ್ಡಿ (ಬಾಗೇಪಲ್ಲಿ) ಮಾನ್ಯ ಉಪಾಧ್ಯಕ್ಷರೆ, ನಾನು ಬಾಗೇಪಲ್ಲಿಯಲ್ಲಿ ದಿನ ಬೆಳಿಗ್ಗೆ 5 ಗಂಟೆಗೆ ವಾಕಿಂಗ್ ಹೋಗುತ್ತೇನೆ KSRTC ಬಸ್‌ಗಳು 6 ಗಂಟೆಗೆ ಬಿಡುತ್ತವೆ ಆ ಬಸ್‌ನಲ್ಲಿ ಒಬ್ಬರು ಇರುವುದಿಲ್ಲ ಎಲ್ಲಾ ಖಾಲಿ ಇರುತ್ತದೆ ಅದರ ಹಿಂದುಗಡೆ ಜೀಪುಗಳು ಹಾಗೂ ಟೆಂಪೋಗಳು ಬರುತ್ತದೆ ಒಂದು ಜೀಪ್ ಅಂದರೆ Maximum 7–8 ಜನ ಹಾಕಬಹುದು ಅಷ್ಟೆ ಆದರೆ 25–30 ಜನರು ಅದರ ಟಾಪ್ ಮೇಲೆ ಎಲ್ಲಿ ಕೈ ಹಿಡಿದುಕೊಳ್ಳುವುದಕ್ಕೆ ಸಾಧ್ಯವೋ, ಎಲ್ಲಿ ಜಾಗ ಸಿಗುತ್ತದೆಯೊ ಅಲ್ಲಿ ನೇತಾಡಿಕೊಂಡು ಬರುತ್ತಿರುತ್ತಾರೆ ನಾನು ಪೋಲೀಸ್‌ನವರನ್ನು ಕರೆದು 2–3 ಸಾರಿ ಅಲ್ಲಿಗೆ ಕಳುಹಿಸಿದೆ, ತಾವು ಹೋಗಿ ಅಲ್ಲಿ ನೋಡಿ ಯಾರಾದರೂ ಬಿದ್ದು ಸತ್ತು ಹೋಗಿಬಿಟ್ಟರೆ ನಿಮ್ಮ ತಲೆಗೆ ಬರಬಹುದು, ಅದನ್ನು ನಿಲ್ಲಿಸಿ ಎಂದು ಹೇಳಿ ಕಳುಹಿಸಿದೆ ಪೋಲೀಸ್‌ನವರು ಸಹ ನಿಲ್ಲಿಸುವುದಿಲ್ಲ, ಇದರಿಂದ ಏನು ಹೊಡೆತವೆಂದರೆ ಜನರ ಪ್ರಾಣಕ್ಕೆ ರಕ್ಷಣೆ ಇಲ್ಲ, KSRTC ಗೆ ಬರುವಂತಹ ಎಲ್ಲಾ ಆದಾಯ Complete ಆಗಿ ಅವರಿಗೆ ಹೋಗುತ್ತದೆ ನಾನು Depot Manager ರವರನ್ನು ಕರೆಸಿ, ಏನಪ್ಪಾ ಹಳ್ಳಿಗಳಿಗೆ ಬಸ್ಸನ್ನು ಹಾಕಬೇಕೆಂದು ನಾನು ಬಾಗೇಪಲ್ಲಿಯಲ್ಲಿ Depot ಮಾಡಿಸಿದರೆ ಹಳ್ಳಿಯಲ್ಲಿ ಬಸ್ ಹೋಗುವುದಿಲ್ಲ ಏಕೆಂದರೆ ಅಲ್ಲಿ ಹಣ ಬರದೇ ಲಾಸ್ ಆಗುತ್ತದೆ, ಅದಕ್ಕೋಸ್ಕರ ಬಸ್ಸುಗಳನ್ನು ಕಳುಹಿಸುವುದಿಲ್ಲವೆಂದು ಹೇಳುತ್ತಾರೆ ಏತಕ್ಕಾಗಿ ಲಾಸ್ ಆಗುತ್ತದೆಂದರೆ KSRTC Bus ಹೊರಡುವ ಸಮಯಕ್ಕೆ 5 ನಿಮಿಷ ಮೊದಲು ಈತನು ಜೀಪನ್ನು, ಟೆಂಪೋವನ್ನು, ಟ್ರಾಕ್ಸ್‌ನ್ನು ಓಡಿಸಿಕೊಂಡು ಅಲ್ಲಿಗೆ ಬರುತ್ತಾರೆ ಜನರಿಗೆ ಏನು 5–10 ಪೈಸೆ ಕಡಿಮೆಯಾದರೆ ಸಾಕು ಅವರು KSRTC ಬಸ್ ಅನ್ನು ಹತ್ತದೇ ಇದರಲ್ಲಿ ಹತ್ತಿ ನೇತಾಡಿಕೊಂಡು ಬರುತ್ತಾರೆ ನಮ್ಮ KSRTC Busನಲ್ಲಿ ಆದಾಯ ಬರದೇ ನಷ್ಟವಾಗುತ್ತ ದೆಂದರೆ ಅದನ್ನು ನಾನು ಒಪ್ಪುವುದಿಲ್ಲ Department ನವರು ಮಾಡಿರುವಂತಹ ಕಾನೂನುಗಳಿಂದ ನಷ್ಟವಾಗುತ್ತಿದೆ ಅದು ಬಿಟ್ಟು ಬೇರೆ ಏನು 'ಇಲ್ಲ ಮಾನ್ಯ ಸದಸ್ಯರಾದ ಶ್ರೀ ರಮೇಶ್‌ಕುಮಾರ್ ರವರು Contract Carriages ಬಗ್ಗೆ ಹೇಳಿದರು ಕೆಲವರು Contract ತೆಗೆದುಕೊಂಡಿರುವವರು

rural roadsನಲ್ಲಿ ಬರುತ್ತೇವೆಂಬ ಕಾರಣಕ್ಕಾಗಿಯೇ ಅವರಿಗೆ ಪರ್ಮಿಟ್‌ನ್ನು ಕೊಟ್ಟಿರುವುದು ಉದಾಹರಣೆಗೆ ಮುಳಬಾಗಿಲುನಿಂದ ಬೆಂಗಳೂರಿಗೆ ಬರಬೇಕಾದರೆ ಅವನು ಕೆಜಿಎಫ್, ಮಾಲೂರು, ಹಳ್ಳಿಗಳನ್ನು ಸುತ್ತಿಕೊಂಡು ಬರುತ್ತೇನೆಂದು ಹೇಳಿ ಅವನು ಲೈಸೆನ್ಸ್‌ನ್ನು ತೆಗೆದುಕೊಂಡಿದ್ದು ಈ ರೀತಿಯಾಗಿ ಅವನು ತೋರಿಸಿರುತ್ತಾನೆ ಆದರೆ ಅವನು NH-4ನಲ್ಲಿ straight ಆಗಿಯೇ ಬರುತ್ತಾನೆ ಅವನನ್ನು ಯಾರು ಸಹ ಕೇಳುವುದಿಲ್ಲ ಇದರಲ್ಲಿ ಅಧಿಕಾರಿಗಳು ಶಾಮೀಲು, ಪೊಲೀಸ್‌ನವರು ಸಹ ಶಾಮೀಲಾಗಿರುತ್ತಾರೆ ಇದರಲ್ಲಿ ಎಲ್ಲರೂ ಸಹ ಶಾಮೀಲಾಗಿರುತ್ತಾರೆ ಅವನು ಪರ್ಮಿಟ್ ಪ್ರಕಾರ, ಲೈಸೆನ್ಸ್ ಪ್ರಕಾರ ಬಸ್‌ನ್ನು ಓಡಿಸುವುದಿಲ್ಲ ಅದರಿಂದ ಏನಾಗುತ್ತಿದೆ ಎಂದರೆ, KSRTC ಇವತ್ತು ಲಾಭದಲ್ಲಿದೆ, ನಾವು ಸಂತೋಷಪಡುತ್ತೇವೆ ಏಕೆಂದರೆ Public Sector ಲಾಭದಲ್ಲಿದೆ ಆದರೆ ಇದರ ಮೂರು ಪಟ್ಟು ಲಾಭ ಬರುವುದಕ್ಕೆ ಅವಕಾಶವಿದೆ 10 ಪಟ್ಟು ಸಹ ಲಾಭ ಬರುವುದಕ್ಕೂ ಕೂಡ ಅವಕಾಶವಿದೆ Provided, ಇವೆಲ್ಲವನ್ನೂ ನಿಲ್ಲಿಸಿದರೆ ಇವರೆಲ್ಲರೂ ಯಾರು? ಇವರೆಲ್ಲರೂ ಸಹ ದರೋಡೆಕೋರರೇ ಅದಕ್ಕಾಗಿ ಅದನ್ನು ನಿಲ್ಲಿಸುವಂತಹ ವ್ಯವಸ್ಥೆಯನ್ನು ತಾವು ಮಾಡಿಸಬೇಕು

ಶ್ರೀ ಎಸ್ ರಾಜೇಂದ್ರನ್ (ಕೆಜಿಎಫ್) ಮಾನ್ಯ ಉಪಾಧ್ಯಕ್ಷರೆ, 106 Buses, K G F Permit ಇಲ್ಲದ ಬಸ್ಸುಗಳು ನಂಬರ್ ಹಾಕಿ System ಆಗಿ ಕೊಟ್ಟರೆ ಆ ARTO ಹೇಳುತ್ತಾನೆ ನಾನು ಇರುವುದು ಒಬ್ಬನೇ ಸ್ವಾಮಿ, ನಾನು ಏನು ಮಾಡುವುದಕ್ಕಾಗುವುದಿಲ್ಲವೆಂದು Straight ಆಗಿ ಹೇಳಿ ಬಿಡುತ್ತಾನೆ ಏನು ಸ್ವಾಮಿ ನಾನು ಇರುವುದು ಒಬ್ಬನೇ ಸ್ವಾಮಿ ನಾನು ಏನು ಮಾಡುವುದಕ್ಕಾಗುತ್ತದೆ? ಇಂತ ಅಧಿಕಾರಿಗಳನ್ನು ಇಟ್ಟುಕೊಂಡು ನಾವು ನಿಮ್ಮ ಮೇಲೆ ಜೋರು ಮಾಡಿದರೆ ಏನು ಪ್ರಯೋಜನ, ನೀವು ಯೋಚನೆ ಮಾಡಿ

ಶ್ರೀ ಎನ್ ಚಲುವರಾಯಸ್ವಾಮಿ (ಸಾರಿಗೆ ಸಚಿವರು) ಮಾನ್ಯ ಉಪಾಧ್ಯಕ್ಷರೆ, ಬಹಳ ಆವೇಶದಿಂದ ಹೇಳುವಾಗ ಸ್ವಲ್ಪ ಮಧ್ಯೆ intervene ಆಗಿ ಹೇಳಬೇಕಾಗುತ್ತದೆ Contract carriage ಬಗ್ಗೆ ಹೇಳಿದರು ಅದರ ಬಗ್ಗೆ ನಾವು ಅಧಿಕಾರಕ್ಕೆ ಬಂದ ಮೇಲೆ ಬಹಳಷ್ಟು ಹತೋಟಿಯಲ್ಲಿ ಅದನ್ನು ಇಟ್ಟಿದ್ದೇವೆ ಎಂದು ನಾನು ಹೇಳುತ್ತೇನೆ ಅದರ ಬಗ್ಗೆ ಮಾಹಿತಿಯನ್ನು ತರಿಸಿ ನಾಳೆ ಹೇಳುತ್ತೇನೆ ಇವತ್ತು ನಾನು ಆ ಬಗ್ಗೆ ಮಾಹಿತಿಯನ್ನು ಇಟ್ಟುಕೊಂಡಿಲ್ಲ

ಬಹುಶಃ ಮಂಗಳೂರು ಕಡೆ ಅಥವಾ ಬೆಂಗಳೂರು ಕಡೆ ನಡೆಯುತ್ತಿರುವುದು KSRTC ಹಿತವನ್ನು ಬಿಟ್ಟು ನಾವು ಕೊಡುವುದಕ್ಕೆ ಹೋಗಿಲ್ಲ 2–3 ಬಾರಿ ಬಹುಶಃ ಮಾನ್ಯ ಶ್ರೀನಿವಾಸಗೌಡರು ಸದನದಲ್ಲಿ ಇಲ್ಲ ಯಾವುದೋ ಒಂದು ವಿಚಾರದಲ್ಲಿ ಅವರು ಹೇಳಿದಾಗಲೂ ಸಹ ನಾವು ಅದನ್ನು ಪರಿಶೀಲನೆ ಮಾಡಿ ಇದು ಆಗುವುದಿಲ್ಲವೆಂದು ಸ್ಪಷ್ಟತೆಯನ್ನು ಪಡಿಸಿದ್ದೇನೆ ಆದರೂ ಸಹ ನಮ್ಮ ಅಧಿಕಾರಿಗಳು ಕಾನೂನು ಬಿಟ್ಟು Private bus ನ ಹಿತಾಸಕ್ತಿಯನ್ನು ಕಾಪಾಡುವು ದರಲ್ಲಿ ಇದ್ದರೆ ಖಂಡಿತವಾಗಿಯೂ ಅದರ ಬಗ್ಗೆ ಕ್ರಮವನ್ನು ತೆಗೆದುಕೊಳ್ಳುತ್ತೇವೆ ನಾಳೆ ಈ ಬಗ್ಗೆ ಮಾಹಿತಿಯನ್ನು ಸಹ ಕೊಡುತ್ತೇನೆ ಜೊತೆಗೆ ಯಾವ ಕಾರಣಕ್ಕೂ ಸಹ ಹಿಂದೆ ಯಾವ ರೀತಿಯಾಗಿ Contract carriage system ಅನ್ನು ತಂದು ನಾವು ಇಲಾಖೆಯಲ್ಲಿ ಬಿಗಿ ಹಿಡಿತವನ್ನು ಇದ್ದು ಅದನ್ನು ಇವತ್ತು ಸಹ ಮುಂದುವರೆಸಿಕೊಂಡು ಹೋಗುತ್ತಿದ್ದೇವೆ ಇನ್ನು ಹಿಡಿತವನ್ನು ಭದ್ರ ಮಾಡುವುದಕ್ಕೆ ಹೋಗುತ್ತಿದ್ದೇವೆ Private Vanಗಳು, ಟ್ಯಾಕ್ಸಿಗಳು ಮತ್ತು ಆಟೋಗಳು, ಇದನ್ನು ದಯಮಾಡಿ ಅಧಿಕಾರಿಗಳು, ಮಂತ್ರಿಗಳು ಸರ್ಕಾರ ಅಷ್ಟೇ ಅಲ್ಲಾ, ನಾನು ಎಷ್ಟೋ ಕಡೆಗಳಲ್ಲಿ ಆಕ್ಸಿಡೆಂಟ್ ಆದಾಗ ನಮ್ಮ KSRTC ಯಲ್ಲಿ ಹೊಸ ಹೊಸ ಯೋಜನೆಗಳನ್ನು ಸಹ ತಂದಿದ್ದೇವೆ ಬಸ್ಸಿನ ಒಳಗಡೆ ಪ್ಯಾಸೆಂಜರ್ ಆಕಸ್ಮಿಕವಾಗಿ heart attack ಆಗಿ ಸತ್ತರೂ ಕೂಡ 1 ಲಕ್ಷ ರೂಗಳನ್ನು ಕೊಡುವಂತಹದ್ದು, Insuranceನಲ್ಲಿ 3 ಲಕ್ಷ ರೂಗಳನ್ನು ಕೊಡುವಂತಹದ್ದು, ಇವೆಲ್ಲಾ ಅನೇಕ ಸ್ಕೀಮ್‌ಗಳನ್ನು ಸಹ ತಂದಿದ್ದೇವೆ Insurance apply ಆಗುತ್ತದೆ ಈ ತರಹ ಆಕ್ಸಿಡೆಂಟ್ ಆದರೆ ಯಾರು ಅಹ ಬರುವುದಿಲ್ಲ ಅವರ ಕುಟುಂಬಕ್ಕೂ ಸಹ ಏನು ಸಿಗುವುದಿಲ್ಲ ನಿಮ್ಮ ಪ್ರಾಣವೂ ಸಹ ಹೋಗುತ್ತದೆ, ಇವೆಲ್ಲವೂ ಬೇಡವೆಂದು ಹೇಳಿದರೂ ಸಹ ಅಲ್ಲಿರುವಂತಹ ಜನಪ್ರತಿನಿಧಿಗಳೇ ಒತ್ತಡವನ್ನು ತರುವುದು, ನಾನು ಹೇಳುವಂತಹದ್ದು ನೀವೆಲ್ಲರೂ ಹೇಳುತ್ತಾರೆಂದು ಹೇಳುವುದಿಲ್ಲ ನನಗೆ ನೇರವಾಗಿ ಫೋನ್ ಮಾಡಿ ನಾನು ಬಿಡಿಸಿರುವಂತಹ ನಿದರ್ಶನಗಳನ್ನು ನೋಡಿದ್ದೇನೆ ಒಟ್ಟಾರೆ ನಾವು ಸಣ್ಣಪುಟ್ಟ ಹಿತಾಸಕ್ತಿಯನ್ನು ಬಿಟ್ಟು, larger interest ಕಡೆಗೆ ಗಮನವನ್ನು ಹರಿಸಿದರೆ ಖಂಡಿತವಾಗಿ ಅದಕ್ಕೆ ಸುಖ ಇರುತ್ತದೆ ಕಾರ್ಯಕರ್ತರು ಯಾವುದೋ ಒಂದು ಆಟೋವನ್ನು ಹಿಡಿದುಕೊಂಡರೆ, ಅವನನ್ನು ಬಿಟ್ಟುಬಿಡಪ್ಪ,

ಇದೊಂದು ಸಾರಿ ಇರಲಿ, ನಾಳೆ ಹೇಳೋಣವೆಂದು ಹೇಳುವುದು, ಇದರ ಬಗ್ಗೆ ನಾವು ಮತ್ತು ನೀವು ಆಡಳಿತ ಪಕ್ಷದವರು ಮತ್ತು ವಿರೋಧ ಪಕ್ಷದವರು ಎಲ್ಲರೂ ಸಹ ಒಪ್ಪಿಗೆಯನ್ನು ಕೊಡುವುದಾದರೆ ಖಂಡಿತವಾಗಿ ನಾಳೆ ಒಂದು ದಿವಸಕ್ಕೆ ನಿಲ್ಲಿಸಬಹುದು, ನಾವೆಲ್ಲರೂ ಒಂದು ಸಾರಿ ಅವಕಾಶವನ್ನು ಮಾಡಿಕೊಟ್ಟಾಗ ಅಧಿಕಾರಿಗಳು ಅವರ ಹಕ್ಕನ್ನು ಬೇರೆ ಬೇರೆ ದಾರಿಯಲ್ಲಿ ದುರುಪಯೋಗ ಮಾಡಿಕೊಳ್ಳುತ್ತಾರೆ ಇದರ ಬಗ್ಗೆ ನಾವೆಲ್ಲರೂ ಸೇರಿ ಒಂದು ತೀರ್ಮಾನವನ್ನು ತೆಗೆದುಕೊಳ್ಳಬೇಕಾಗುತ್ತದೆ

ಶ್ರೀ ಜಿ ವಿ ಶ್ರೀರಾಮರೆಡ್ಡಿ ನೀವು ಏನು ಮಾಡಬೇಕಾಗಿಲ್ಲ Unauthorized ಆಗಿ ಅಲ್ಲಿ ಓಡಿಸುತ್ತಾರೆ ಟೆಂಪೋ, ಜೀಪ್‌ಗಳು, ಅದಕ್ಕೆ ಯಾವ permit ಇಲ್ಲ ಯಾವ ಲೈಸೆನ್ಸ್ ಇಲ್ಲ, ಏನು ಇಲ್ಲ, Rural Areaದಲ್ಲಿ ಓಡುತ್ತಿದೆಯಲ್ಲಾ ಅವರು ಎಲ್ಲಿ ಪರ್ಮಿಟ್‌ನ್ನು ತೆಗೆದುಕೊಂಡಿದ್ದಾರೆ ಎಲ್ಲರೂ ಸಹ ಪರ್ಮಿಟ್ ತೆಗೆದುಕೊಂಡಿರುವುದಿಲ್ಲ ನೀವು ಅದನ್ನು ನಿಲ್ಲಿಸಿದರೆ ಇವತ್ತು ನಿಮ್ಮ ಅಧಿಕಾರಿಗಳಿಗೆ ಕಷ್ಟ ಯಾರೂ ಜನಪ್ರತಿನಿಧಿಗಳು ಮಧ್ಯಪ್ರವೇಶ ಮಾಡಬಾರದು, ಎಂಬುದನ್ನು ನಾನು ಒಪ್ಪುತ್ತೇನೆ ಅವರುಗಳು ಮಧ್ಯ ಪ್ರವೇಶ ಮಾಡಿದರೆ ನೀವು ಅದನ್ನು ಒಪ್ಪಬೇಡಿ ನೀವು larger interest ಎಂದು ಹೇಳಿದಿರಲ್ಲಾ ನೀವು ರಾಜ್ಯದ ಹಿತದೃಷ್ಟಿಯನ್ನು ನೋಡಬೇಕು ಅದು larger interest ಯಾರೋ ಒಬ್ಬರು ಮತ್ತು ಇಬ್ಬರು ಹೇಳುವಂತಹ interest ಅಲ್ಲ ನಿಮ್ಮ ಅಧಿಕಾರಿಗಳಿಗೆ ನೀವು ಹೇಳಬೇಕು ತಕ್ಷಣ ಅವುಗಳು ನಾಳೆಯಿಂದ ಓಡಬಾರದು ಎಂದು ಹೇಳಬೇಕು ಅದು ಹೇಗೆ ಓಡುತ್ತದೆ ನೋಡೋಣ ಅದರ ಬಗ್ಗೆ ಕ್ರಮವನ್ನು ತಾವು ತೆಗೆದುಕೊಳ್ಳಿ

ಶ್ರೀ ಎಂ ಟಿ ಬಿ ನಾಗರಾಜು (ಹೊಸಪೇಟೆ) R T O, Police ನವರಿಗೆ ತಿಂಗಳಿಗೆ ಮಾಮೂಲು ಕೊಟ್ಟಿಬಿಟ್ಟರೆ ಪರ್ಮಿಟ್ ಇಲ್ಲದೇ ನೂರಾರು, ಸಾವಿರಾರು ವೆಹಿಕಲ್ಸ್ ಓಡುತ್ತಿವೆ ಪೋಲೀಸಿನವರು, ಆರ್ ಟಿ ಒ ನವರು ತಿಂಗಳಿಗೆ 5,000–00 10,000–00 ಅಥವಾ 10,000–00 ಕೊಟ್ಟು ವಾಹನಗಳನ್ನು ಕೆಲವರು ಓಡಿಸಿಕೊಂಡು ಬರುತ್ತಿದ್ದಾರೆ

ಶ್ರೀ ಕೆ ಆರ್ ರಮೇಶ್ ಕುಮಾರ್ (ಶ್ರೀನಿವಾಸಪುರ) ಸನ್ಮಾನ್ಯ ಸಾರಿಗೆ ಸಚಿವರು ಎದ್ದು ಮಧ್ಯ ಪ್ರವೇಶ ಮಾಡಿ ತಮ್ಮ ಅಭಿಪ್ರಾಯವನ್ನು ಹೇಳಿದ್ದಾರೆ ಸನ್ಮಾನ್ಯ ಮುಖ್ಯಮಂತ್ರಿಗಳು ತಮ್ಮ ಸ್ಥಾನವನ್ನು ಅಲಂಕರಿಸಿದ್ದಾರೆ ನಮಗೂ ಖುಷಿಯಾಗಿದೆ ಸನ್ಮಾನ್ಯ ಕುಮಾರಸ್ವಾಮಿಯವರು ಮುಖ್ಯಮಂತ್ರಿಗಳಾದ

ಮೇಲೆ ತಾವು ಸಾರಿಗೆ ಇಲಾಖೆ ವಹಿಸಿಕೊಂಡ ಮೇಲೆ ನಿಮ್ಮ ಅಧಿಕಾರಿಗಳನ್ನು ಕರೆದು ಕೇಳಿ ಎಷ್ಟು Contract Carriagesಗೆ permits ಕೊಟ್ಟಿದ್ದೀರಿ, ಏತಕ್ಕೆ ಕೊಟ್ಟಿದ್ದೀರಿ? ನನ್ನ ಗಮನಕ್ಕೆ ತಂದಿರಾ?, ಮುಖ್ಯಮಂತ್ರಿಗಳ ಗಮನಕ್ಕೆ ತಂದಿರಾ? ಎಂದು ಕೇಳಿ ಒಂದು ದಿವಸ, ಎರಡು ದಿವಸವೇ ಅಥವಾ ಒಂದು ವಾರದ ನಂತರ Contract carriages permit terminate ಆಗಬೇಕು ನಿರಂತರವಾಗಿ ಪ್ರತಿನಿತ್ಯ ರೆಗ್ಯುಲರ್ ನ್ಯಾಷನಲೈಸ್ಡ್ ರೂಟ್ಸ್‌ನಲ್ಲಿ ವಾಹನಗಳು ಓಡಾಡುವುದು ಆಗುತ್ತಿದೆ ಎನ್ನತಕ್ಕಂಥ ಮಾತು ಸದನದಲ್ಲಿ ಪ್ರಸ್ತಾಪವಾಗಿದೆ ಇದು ನಿಜವೇ, ಸುಳ್ಳೇ? ಹಾಗಿದ್ದರೆ ಇದಕ್ಕೆ ಯಾರು ಕಾರಣರೆಂದು ತಾವು ಉತ್ತರ ಕೊಡುವಾಗ, ಇದರಲ್ಲಿ ಇಷ್ಟು ಪರ್ಮಿಟ್ಸ್ ಇವೆ, ಇಂತಿಂಥವರು ಪರ್ಮಿಟ್ ಹೋಲ್ಡರ್ಸ್, ಇಂಥವರು ಕೊಟ್ಟಿರುವುದು, ಅಚಾತುರ್ಯ ನಡೆದಿದೆ ನಾವು ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿದರೆ ನಾನು ತೃಪ್ತಿಪಡುತ್ತೇನೆ ಇಲ್ಲ, ಒಂದು ವೇಳೆ ನನ್ನ ಮಾಹಿತಿ ತಪ್ಪು ಇತ್ತು ಎಂದರೆ ನನಗೇನೂ ದೊಡ್ಡಸ್ಥಿಕೆ ಇಲ್ಲ, ನಿಮ್ಮ information wrong ಎಂದು ಹೇಳಿದರೆ ನಾನು ಬೇಷರತ್ತಾಗಿ ಎದ್ದು ಈ ಸದನದಲ್ಲಿ ಕ್ಷಮೆ ಕೋರುತ್ತೇನೆ ಏಕೆಂದರೆ ನಾವು ಕಲಾಪ ಮಾಡುವಾಗ ಒಂದು ಗೌರವಯುತವಾದಂದ ಒಪ್ಪಂದ ಇರಬೇಕು

ಶ್ರೀ ಎನ್ ಚೆಲುವರಾಯಸ್ವಾಮಿ (ಮಾನ್ಯ ಸಾರಿಗೆ ಸಚಿವರು) ನಾಳೆಯೇ ಆ ಬಗ್ಗೆ ಎಲ್ಲಾ ಮಾಹಿತಿ ತರಿಸಿ, ತಪ್ಪಾಗಿದ್ದರೆ ಅವರ ಮೇಲೆ ಕ್ರಮ ತೆಗೆದುಕೊಂಡು ಅದನ್ನು ಸರಿಪಡಿಸುತ್ತೇನೆ. ಇಲ್ಲವಾದರೆ ತಮ್ಮ ಗಮನಕ್ಕೆ ತರುತ್ತೇನೆ

ಶ್ರೀ ಕೆ ಆರ್ ರಮೇಶ್‌ಕುಮಾರ್ ಮಾನ್ಯ ಅಧ್ಯಕ್ಷರೇ, ಬಹಳ ಸಂತೋಷ, Home minister ಬಂದರು, ಏಕೆಂದರೆ ನಾನು ಆಗಲೇ Law ಬಗ್ಗೆ ಮಾತನಾಡುವಾಗ ತಾವು ಸದನದಲ್ಲಿರಲಿಲ್ಲ I was holding my opinion about the Home department ನಾನು Law ಬಗ್ಗೆ ಮಾತನಾಡುತ್ತಾ simplify ಮಾಡಿ ಹೇಳುತ್ತೇನೆ With due respect to the Judiciary and judicial Officers, ಅವರೂ ಕೂಡ ನಮ್ಮಂತೆ ಮನುಷ್ಯರು, ಅವರಿಗೂ ಕೂಡ ನಮ್ಮಲ್ಲಿ ಎಲ್ಲರಲ್ಲಿ ಇರಬಹುದಾದಂದ ದೌರ್ಬಲ್ಯಗಳು ಇರಲಿಕ್ಕೆ ಸಾಕು ಬೇರೆ ಕ್ಷೇತ್ರಗಳಲ್ಲಿ ಇರತಕ್ಕಂಥವರದು ಒಂದು critical

analysesಗೆ analyse ಮಾಡಲಿಕ್ಕೆ ಕಾನೂನಿನಲ್ಲಿ ಅವಕಾಶ ಇದೆ ಇವರ ವಿಷಯದಲ್ಲಿ ಅದಕ್ಕೆ ಅವಕಾಶವಿಲ್ಲ ಆದುದರಿಂದ at least up to the level of district judges, ನೀವು ಒಂದು body ಅನ್ನು constitute ಮಾಡಬೇಕು ಅವರ official conduct ಅನ್ನು critical ಆಗಿ analyse ಮಾಡಿ ಅವರ ಆಚಾರ ವಿಚಾರಗಳ ಬಗ್ಗೆ ನಿಗಾ ಮತ್ತು ಗಮನ ಇಡತಕ್ಕಂಥ ಒಂದು ವ್ಯವಸ್ಥೆ ಆಗಬೇಕು ಅದಿಲ್ಲದೇ ಹೋದರೆ they become a separate class, ನಾನು ಹೇಳಿದೆ, they will constitute the priesthood ಪುರೋಹಿತರಿಗೆ ಯಾರೂ ಪ್ರಶ್ನೆಯೇ ಮಾಡಿರಲಿಲ್ಲ ರಾಜನ ಮೊದಲ್ಗೊಂಡು ಎಲ್ಲರೂ ಅವರ ಕಾಲಿಗೆ ಬೀಳುತ್ತಿದ್ದರು ಹಾಗಾಗಬಾರದು They should not do that ಎಂದು ಹೇಳಿದೆ About the special prosecutors, ಕೆಲವರ ಕೆಲವು ಸಂದರ್ಭಗಳಲ್ಲಿ Special Prosecutors ಆಗಿ ಬರುತ್ತಾರೆ Government ಮಾಡಬಹುದು, ತಪ್ಪೇನಿಲ್ಲ, I don't question the competence ಆದರೆ 30, 40 hearing ನಲ್ಲಿ attendance ಹಾಕಿ ಬರುತ್ತಾರೆ They get the matter adjourned and they claim the fees ಇದು ಒಂದು ರೀತಿ ರಾಕೆಟ್ ತರಹ ಕಾಣುತ್ತದೆ ಇದಕ್ಕೆ ಅವಕಾಶ ಇರಬಾರದು Just not out of context, ಮಾನ್ಯ ಮುಖ್ಯಮಂತ್ರಿಗಳು ಕೇಳಬೇಕು ಇದು ಬಹಳ interesting ಆಗಿದೆ ಮೈಸೂರು ಮಹಾರಾಜರ ಕಾಲದಲ್ಲಿ ಸರ್ ಎಂ ವಿಶ್ವೇಶ್ವರಯ್ಯನವರು ದಿವಾನರಾಗಿದ್ದರು ಒಬ್ಬರು ಅಡ್ವೋಕೇಟ್ ಜನರಲ್ ಅವರನ್ನು ಅಪಾಯಿಂಟ್ ಮಾಡಬೇಕಾಗಿತ್ತು ಪ್ಯಾನೆಲ್ ಅನ್ನು ತರಿಸುತ್ತಾರೆ ಆ ಪ್ಯಾನೆಲ್‌ನಲ್ಲಿ first name ನಂಜನಗೂಡಿನ ವರದರಾಜ ಐಯ್ಯಂಗಾರ್ ಎಂಬ ವಕೀಲರು ಹೆಸರು ಇರುತ್ತದೆ Undoubtedly, he was the most suitable person ವರದರಾಜ ಐಯ್ಯಂಗಾರ್‌ರವರಿಗೆ ಏನಾಗುತ್ತದೆಂದರೆ ನಂಜನಗೂಡಿನಲ್ಲಿ ಅವರು ಒಂದು ದಿನಸಿ ಅಂಗಡಿಯಲ್ಲಿ ಸಾಮಾನು ತರಿಸುತ್ತಿರುತ್ತಾರೆ ಲೆಕ್ಕ ಇರುತ್ತದೆ, ಸಾಲ ತೀರುವಳಿಯಾಗಿರುವುದಿಲ್ಲ ಅಂಗಡಿ ಮಾಲೀಕ ಇವರ ಮೇಲೆ ಹಣ ವಸೂಲಿಗಾಗಿ ದಾವೆ ಹೂಡುತ್ತಾರೆ ಆದರೆ ಅದು ಡಿಸ್‌ಮಿಸ್ ಆಗುತ್ತದೆ ಕಾರಣವೇನೆಂದರೆ ಪ್ರಕಾಶ್‌ರವರೆ ಆ ದಾವೆ ಏತಕ್ಕೆ ಡಿಸ್‌ಮಿಸ್ ಆಯಿತು ಎಂದರೆ, it was

barred by limitation of time In time ನಲ್ಲಿ ದಾವೆಯನ್ನು ಫೈಲ್ ಮಾಡಲಿಲ್ಲವೆಂದು ಹೇಳಿ ಅವರು ಅದನ್ನು ವಜಾ ಮಾಡುತ್ತಾರೆ ನೋಟ್ಸ್‌ನಲ್ಲಿ ಅದು ಬಂದಿರುತ್ತದೆ ವಿಶ್ವೇಶ್ವರಯ್ಯನವರು ಆತ ಎಷ್ಟೇ ಕ್ಯಾತ, ಬುದ್ಧಿವಂತ ವಕೀಲರಾದರೂ ಕೂಡ ಒಂದು ದಿನಸಿ ಅಂಗಡಿಯಲ್ಲಿ ಸಾಮಾನು ತರಿಸಿ ಅವರ ಸಾಲದ ವಿಚಾರದಲ್ಲಿ ಮಾಲೀಕ ಹಾಕಿದ್ದಂಥ ದಾವೆ limitation periodನೊಳಗೆ ಹಾಕಲಿಲ್ಲವೆಂದು ಹೇಳಿ ವಜಾ ಆಗಿದೆಯೇ ಹೊರತು, ವಕೀಲರು ಸಾಲ ಕೊಟ್ಟರೆ, ಇಲ್ಲವೇ ಎಂಬ ವಿಚಾರ issue ಆಗಿಲ್ಲ ಬುದ್ಧಿವಂತಿಕೆ ಬೇರೆ, ಪ್ರಮಾಣಿಕತೆ ಬೇರೆ ರಾಜ್ಯದ ಹಿತದೃಷ್ಟಿಯಿಂದ ಬುದ್ಧಿವಂತ, ಪ್ರಾಮಾಣಿಕವಾದ ವ್ಯಕ್ತಿ ಬೇಕಾಗುತ್ತಾರೆ ಎಂದು ನೋಟಿಂಗ್ ಮಾಡುತ್ತಾರೆ His Highness who was earlier in favour of Varadaraja Iyenger everses his decision based on the advise rendered to him by Sir M Visveshwaraiah This is just a information I am passing on to you Now you know how we appoint Government advocates, How we appoint the Advocate Generals, How we appoint the Public Prosecurors? Sir, justice suffers if the discrection is not properly used ಆಮೇಲೆ ಏನಾಗುತ್ತದೆಂದರೆ, ಎಲ್ಲೋ ಒಂದು ಕಡೆಗೆ ಇವರು ಒಬ್ಬೊಬ್ಬರೆ ಇವರು ಒಳಗೆ ಹೋಗಿ ಈ ವ್ಯವಸ್ಥೆಯಲ್ಲಿ ಸೇರಿಕೊಂಡು ಇಡೀ ವ್ಯವಸ್ಥೆ ಶಿಥಿಲಗೊಳ್ಳುತ್ತದೆ I don't get the name of the person, ತಮಗೆ ಏನಾದರೂ ಗೊತ್ತಿದ್ದರೆ ಹೇಳಬೇಕು Journalists ask the Chief Justice in Great Britain whom do you prefer to be Judge' ಎಂದು ಒಂದು vacancy fill up ಮಾಡಲಿಕ್ಕಾಗಿ ಇವರನ್ನು ಕೇಳುತ್ತಾರೆ ಅವರು ಬಹಳ ಸರಳವಾಗಿ ಹೇಳುತ್ತಾರೆ "Of Course, a Gentleman, and one who knows bit of Law " To be a judge, what is required is to be a Gentleman and bit of Law Knowledge ಇದ್ದರೆ ಸಾಕು, ಎಲ್ಲಿಂದ wheel ಎಲ್ಲಿಗೆ ಬಂದಿದೆ We are not totally helpless, Sir We can exercise our authority Now we are trying to be very cautions when we pass remarks or use liberty to express our views here You are a rare Politician ನಾವು ಎಷ್ಟೇ accuse ಮಾಡಬಹುದು,

ಗಲಾಟೆ ಮಾಡಬಹುದು, ಏನೆಲ್ಲಾ ಮಾಡಿದರೂ ಕೂಡ ಇವತ್ತು ಬರುತ್ತಿರುವಂಥ ಮೆಟಲ್ ಬೇರ, ಇನ್ನು ಮುಂದಕ್ಕೆ ಇವೆಲ್ಲಾ ಇರುವುದಿಲ್ಲ ಮೊನ್ನೆ ಕನಸಿನ ವಿಚಾರವಾಗಿ ವಾಟಾಳ್ ನಾಗರಾಜ್‌ರವರು ಹೇಳಿದಂತೆ ಲಾಂಗ್‌ಗಳು, ಚಾಕುಗಳು, ಡ್ಯಾಗರ್‌ಗಳು ಬರುವ ಸಂಭವ ಹೆಚ್ಚಾಗುತ್ತವೆ ಬಹುಶಃ you are on your wat out ಇಂಥ ಸನ್ನಿವೇಶದಲ್ಲಿ You must have courage to make some bold decisions ಸಾಮಾನ್ಯ ಜನರಿಗೆ ನ್ಯಾಯಾಂಗದಲ್ಲಿ ವಿಶ್ವಾಸ ಹುಟ್ಟಿಸತಕ್ಕಂಥ ರೀತಿಯಲ್ಲಿ ಕಾನೂನು ಇಲಾಖೆ, ನೀವು ಕೆಲಸ ಮಾಡಬೇಕು Masses should restore confidence in Judiciary We are just raising pur hands and giving you the grants Excepting that we don't question about this salaries and wages that is being paid to be Judges of the High Court and other things, this House is complete to discus all other things, Sir, Home department, ಬಗ್ಗೆ ಹೇಳುವುದಾದರ, ತಾವು ಅಧಿಕಾರಕ್ಕೆ ಬಂದ ಮೇಲೆ chain snatching ಎಷ್ಟಾದವು? ಈ ರಿಯಲ್ ಎಸ್ಟೇಟ್‌ನವರು ಸುಫಾರಿ ಕೊಟ್ಟು ಕೊಲ್ಲುವ ಪ್ರಕರಣಗಳು ಎಷ್ಟಾಗಿವೆ? ರೌಡಿಗಳು ಪರಸ್ಪರ ಹೊಡೆದಾಡಿಕೊಂಡು ಸತ್ತಿರುವ ಪ್ರಕರಣಗಳು ಎಷ್ಟಾಗಿವೆ? ಜೈಲಿನಲ್ಲಿ ಹೊಡೆದಾಟ ಆಗಿರುವುದು ಎಷ್ಟಾಗಿವೆ? ಒಂದು ನಾಗರೀಕ ಸರ್ಕಾರ, ಎಚ್ಚರವಾಗಿರುವಂಥ ಸರ್ಕಾರ, ಜನರಿಗೆ ನಮ್ಮ ಬದ್ಧತೆ ಇದೆಯೆಂದು ಡಿಕ್ಲೇರ್ ಮಾಡಿಕೊಳ್ಳುವಂಥ ಸರ್ಕಾರ ನಿಷ್ಠುರವಾಗಿದ್ದರೆ ನೀವು ನಮ್ಮ ಮುಂದೆ ಇಟ್ಟಿರತಕ್ಕಂಥ ಎಲ್ಲಾ ಬೇಡಿಕೆಗಳಿಗೂ ನಮ್ಮ ಸಹಮತವನ್ನು ವ್ಯಕ್ತಪಡಿಸ ಬೇಕಾಗಿದ್ದರೆ ಈ backgroundನಲ್ಲಿ ದಯಮಾಡಿ ತಮ್ಮ ಅಧಿಕಾರಿಗಳ ಹತ್ತಿರ figures ತೆಗೆದುಕೊಂಡು ಅವರಿದ್ದಾಗ ಇಷ್ಟು ಆಗಿದೆ? ಈಗ ಕಡಿಮೆಯಾಗಿದೆ ಎಂದು ನನಗೆ ratio, proportion theory ಹೇಳಲಿಕ್ಕೆ ಹೋಗಬೇಡಿ ಎಲ್ಲರೂ ಕೋವಿ ಹಿಡಿದುಕೊಂಡು ಓಡಾಡುವುದಕ್ಕೆ ಆಗುವುದಿಲ್ಲ ಇವರಿಗೇ ಏಕೆ ಕೋವಿ ಕೊಡುತ್ತೇವೆ? ಇವರಿಗೇ ಏಕೆ ಯೂನಿಫಾರಂ ಕೊಡುತ್ತೇವೆ? ಆ ದಪ್ಪನೆಯ ಬೂಟ್, ಲಾಠಿ ಕೊಡುತ್ತೇವೆಂದರೆ ಕಾನೂನನ್ನು ಕೈಗೆ ತೆಗೆದುಕೊಂಡವರಿಗೆ ಇವರು ಬುದ್ಧಿ ಹೇಳಬೇಕು ಎಂದು ಆ ತರಹ ಇವರು ಬುದ್ಧಿ ಹೇಳಿದಂತಹ ಪ್ರಸಂಗಗಳು ಎಷ್ಟು? ಸಾರ್, ಮೆಣಸಿನಹಾಡಿಯ ಕೇಸು ನಾವು ರೈಸ್ ಮಾಡಿದೆವು, ತಾವು

ರಿಪ್ಲೈ ಮಾಡಿದಿರಿ ಈಗ ಇದೆಲ್ಲಾ ಆದ ಮೇಲೆ ಮೊನ್ನೆ ಟಿ ವಿ ಯಲ್ಲಿ that boy has appeared Deceased ರಾಮೇಗೌಡರ ಮಗ ಪ್ರತ್ಯಕ್ಷ ಆಗಿದ್ದಾನೆ ಅವನು ಏನೇನು ಆಯಿತು ಎಂದೆಲ್ಲಾ ಹೇಳುತ್ತಾನೆ ಇನ್ನೂ ಬಾಯಿ ಬಿಡುವುದಕ್ಕೆ ಆಗದೇ ಇರತಕ್ಕಂಥ 13 ವರ್ಷದ ಹುಡುಗ ಆ ಭಯದ ಮಂಪರಿನಲ್ಲಿಯೇ ಒದರಿಕೊಂಡು ಒದರಿಕೊಂಡು ಏನೇನಾಯಿತು ಎಂದು ಹೇಳುತ್ತಾನೆ ನಿಮ್ಮ ರಿಪ್ಲೈನಲ್ಲಿ ಏನು ಬೇಕಾದರೂ ಉತ್ತರ ಕೊಟ್ಟುಕೊಂಡು ನಿಮ್ಮ demands carry ಮಾಡಿಕೊಂಡು ಹೋಗಿ Fate ಎನ್ನತಕ್ಕದ್ದು ಆಗುತ್ತದೆ ಆದರೆ As M P Prakash ಹೊರಗೆ ಹೋದರೆ, As Kumaraswamy ಅವರು ಹೊರಗೆ ಹೋದರೆ, As Yediyurappa ಅವರು ಹೊರಗೆ ಹೋದರೆ, ನಿಮ್ಮ ಮನಸ್ಸಿಗೆ ಈ ಪ್ರಶ್ನೆ ಎದುರಾದಾಗ, ನಿಮಗೆ ಏನು ಅನಿಸಬಹುದು? ಎಲ್ಲಿದೆ Civil Rights? Civil Rights ಎಲ್ಲಿದೆ? ಇವರು ಆ ಹುಡುಗನ ಬಗ್ಗೆ ಏನೂ ಹೇಳಲೇ ಇಲ್ಲ ಅವನು ನಾಪತ್ತೆ ಆಗಿದ್ದಾನೆಂದು ಇತ್ತು ಇದು ಆಕಸ್ಮಿಕವಾಗಿ ಇವತ್ತು ನೀವು ಸರ್ಕಾರದಲ್ಲಿದ್ದೀರಿ, ಈ ಹೊಣೆ ನಿಮ್ಮ ಮೇಲೆ ಬಿದ್ದು ಬಿಟ್ಟಿದೆ ನಮ್ಮ ಸದನ ಹೇಗೆ ಆಗಿ ಬಿಟ್ಟಿದೆ ಎಂದರೆ ಇಲ್ಲಿ ಕುಳಿತುಕೊಳ್ಳತಕ್ಕವರು ಆಕ್ಷೇಪಣೆ ಮಾಡುವುದು, ಅಲ್ಲಿ ಕುಳಿತುಕೊಂಡಿರತಕ್ಕವರು ಆಕೇಪಣೆಯನ್ನು ತಳ್ಳಿ ಹಾಕುವುದು ಅಲ್ಲಿ ಖಾಯಂ ಆಗಿ ಕುಳಿತುಕೊಳ್ಳ ತಕ್ಕಂಥವರು ಆಕ್ಷೇಪಣೆಯನ್ನು ತಳ್ಳಿ ಹಾಕಿ ಎಂದು ಬರೆದು ಕಳಿಸುವವರು This should not happen Sir, this should not happen ರಾಜಕಾರಣಿಗೆ ಹೃದಯ ಇರಬೇಕಾಗುತ್ತದೆ ಅಧಿಕಾರಿಗೆ ಮೆದುಳು ಒಂದಿದ್ದರೆ ಸಾಕು, ಅವನಿಗೆ ಹೃದಯ ಬೇಕಾಗಿಲ್ಲ ನಮಗೆ ಹೃದಯ ಸತ್ತು ಹೋಗಿಬಿಟ್ಟರೆ ಆಮೇಲೆ ಪ್ರಜಾಪ್ರಭುತ್ವದಲ್ಲಿ ತಿರುಳೇನಿದೆ ಮಾನ್ಯ ಪ್ರಕಾಶ್ ಅವರೇ? ಎಷ್ಟೊಂದು ಅಲ್ಲಿ ಬರ್ಬರವಾಗಿ ನಡೆದುಕೊಂಡಿದ್ದಾರೆ ಅದೇ ಕೆಲಸವನ್ನು ಇವರು ಬೆಂಗಳೂರಿನಲ್ಲಿರತಕ್ಕಂಥ ಈ ರಿಯಲ್ ಎಸ್ಟೇಟ್‌ನವರಿಗೆ, ರೌಡಿಗಳಿಗೆ encounter ಎಂದು ಮಾಡಿ ತೆಗೆದು ಬಿಸಾಕಿ ಬಿಟ್ಟು ನಮಗೆಲ್ಲಾ ಕೊಟ್ಟರೆ ತೋಟದಲ್ಲಿ ಗೊಬ್ಬರಕ್ಕೆ ಹಾಕಿಕೊಳ್ಳುತ್ತೇವಲ್ಲ ಜನ ನಿಮ್ಮನ್ನು ಮೆಚ್ಚುತ್ತಾರೆ ನಾನು ಎರಡನೇ ಸಲ ಶ್ರೀ ಬಿ ರಾಚಯ್ಯನವರ ವಿಚಾರವನ್ನು ಈ ಸದನದಲ್ಲಿ ಹೇಳುವುದು ಮಾನ್ಯ ಕುಮಾರಸ್ವಾಮಿಯವರೇ ಅಲ್ಪಾವಧಿ ಅವಧಿಗೆ ಮಾನ್ಯ

ರಾಮಕೃಷ್ಣ ಹೆಗಡೆಯವರು ಮುಖ್ಯಮಂತ್ರಿಗಳು ಆಗಿದ್ದಾಗ Home Minister ಆಗಿದ್ದರು ಕೀರ್ತಿ ಯಾರ್ಯಾರೋ ತೆಗೆದುಕೊಂಡರು ಶ್ರೀ ರಾಚಯ್ಯನವರಷ್ಟು ದಿಟ್ಟತನದಿಂದ ಹೋಮ್ ಮಿನಿಸ್ಟರ್ ಗಿರಿಯನ್ನು ನಡೆಸಿದವರು ಮತ್ತೊಬ್ಬರು ಇಲ್ಲ Hats off to that man ಮಾನ್ಯ ಚನ್ನಬಸಪ್ಪನವರದ್ದೆಲ್ಲಾ ದಂತ ಕತೆಗಳಾಗಿ ಹೋಯಿತು Home Minister, ಎಲ್ಲಿಗೆ ಬಂತು ಅಂದರೆ ಕಡೆಗೆ ಬಹಳ ಪ್ರಯೋಗಗಳು ಆಯಿತು ಮಾನ್ಯ ಹೆಗಡೆಯವರ ಮೇಲೆ ನಡೆದು ಅವರನ್ನು ಗೌರವಯುತವಾಗಿ ಅಲ್ಲಿಂದ ವರ್ಗಾಯಿಸಿ ಅವರನ್ನು ಎಜುಕೇಶನ್ ಡಿಪಾರ್ಟ್‌ಮೆಂಟ್‌ಗೆ ಹಾಕಿ, ಪಕ್ಷದ ಒಳಗೆ ಭುಗಿಲೆದ್ದಂತಹ ಒಂದು ಸಮಸ್ಯೆಯನ್ನು ಸಮತೋಲನ ಮಾಡಿಕೊಳ್ಳಬೇಕಾಯಿತು ಹೋಮ್ ಮಿನಿಸ್ಟರ್ ಆದವರಿಗೆ ರಾಚಯ್ಯನವರಿಗೆ ಇರತಕ್ಕಂಥ ಒಂದು ದಿಟ್ಟತನ ಇಲ್ಲದೇ ಹೋದರೆ ಆ ಇಲಾಖೆಗೆ ಏನೊಂದು ದೊಡ್ಡ ಗೌರವ ಬರುವುದಿಲ್ಲ ಮಾನ್ಯ ಪ್ರಕಾಶ್ ಅವರೇ ನಾನು ಆಗಲೇ ಹೇಳಿದೆ ತಾವು ಇರಲಿಲ್ಲ Inspectorರಿಂದ ಹಿಡಿದು I G ರವರೆಗೆ, Sessions Court witnesses ಕರೆದುಕೊಂಡು ಬನ್ನಿ ಎಂದು ಹೇಳಿ 21 ಬಾರಿ Non-bailable Warrant ಅನ್ನು ಇಶ್ಯೂ ಮಾಡಿದರೆ Police Officers are incapable of Producing the Witnesses Do they deserve to be in service? Please tell me Do you know, why thay do not trace? ಇಲ್ಲಿಂದ ಪೋನ್ ಹೋಗುತ್ತದೆ ಈ ಕೇಸ್‌ನಲ್ಲಿ ಈ witnesses ಅನ್ನು ನೀವು ಹೆಚ್ಚು coercive steps ಮಾಡುವುದಕ್ಕೆ ಹೋಗಬೇಡಿ ಎಂದು ಫೋನ್ ಹೋಗುತ್ತದೆ Justice Kabin ಅವರು ಇದೇ ಕೇಸ್‌ಲ್ಲಿ ಅಪೀಲ್ ಪ್ರಿಫರ್ ಮಾಡಿದಾಗ, ಹೈಕೋರ್ಟ್‌ನಲ್ಲಿ observe ಮಾಡುತ್ತಾರೆ Police coercive steps ತೆಗೆದುಕೊಂಡು ಪ್ರೊಡ್ಯೂಸ್ ಮಾಡುವುದಕ್ಕೆ ಆಗಲಿಲ್ಲ ಎಂದ ಮೇಲೆ, 'it is the Home Commissioner who should be made answerable ಎಂದು observation ಮಾಡುತ್ತಾರೆ 30–40 ಹಿಯರಿಂಗ್‌ಗೆ ಅಪಿಯರ್ ಆಗಿ business transact ಮಾಡದೇ sitting fees, lawyers fees ಎಂದು ಕೇಳತಕ್ಕ Prosecutorಗಳು Non-bailable warrant issue ಆದರೂ ಕೂಡ ವಿಟ್ನೆಸಸ್‌ಗಳನ್ನು ಹಾಜರು ಮಾಡುವುದಕ್ಕೆ ಆಗದೇ ಇರತಕ್ಕಂಥ Inspectors, I G ಗಳು ಆ ಹುಡುಗ ಅಲ್ಲಿ ಸಾಕ್ಷಿಯಾಗಿ

ಹೇಳುತ್ತಿದ್ದಾನೆಂದರೂ ಕೂಡ ಅದೆಲ್ಲಾ ಸುಳ್ಳು ಎಂದು ಹೇಳಿ ಹಾಡು ಹಗಲೇ ಕಗ್ಗೊಲೆ ಮಾಡಿರತಕ್ಕಂಥ ಅಧಿಕಾರಿಗಳ, ಇವರೆಲ್ಲರ ಮುಖ್ಯಸ್ಥರಾಗಿ ನೀವು, ನಿಮ್ಮ ಬೇಡಿಕ ನಮ್ಮ ಮುಂದೆ ಇದೆ, ನಾವು ಮಂಜೂರು ಮಾಡಬೇಕೋ? ವಿರೋಧ ಮಾಡಬೇಕೋ? ಏನು ಮಾಡೋಣವಂದು ಮಾನ್ಯ ಶಂಕರ್ ಮೂರ್ತಿಯವರೇ ನೀವೇ ಹೇಳಿ

ಶ್ರೀ ಜಿ ವಿ ಶ್ರೀರಾಮರೆಡ್ಡಿ ಅವರು ವಿರೋಧ ಮಾಡಬೇಕಾ? ನೀವು ಒಳ್ಳೆಯ ಕತೆ ಹೇಳಿದಿರಿ

ಶ್ರೀ ಕೆ ಆರ್ ರಮೇಶ್‌ಕುಮಾರ್ ಅಲ್ಲರೀ, ಪ್ರತಿ ಒಬ್ಬ ಮನುಷ್ಯನಿಗೂ ಒಳಗಡೆ ಒಂದು ಹೃದಯ ಎನ್ನುವುದು ಇರುತ್ತದೆ

ಶ್ರೀ ಜಿ ವಿ ಶ್ರೀರಾಮರೆಡ್ಡಿ ಒಳಗಡೆ ಇರತಕ್ಕದ್ದನನ್ನು ಅವರು ಇಲ್ಲಿ ಹೇಳುವುದಕ್ಕೆ ಆಗುವುದಿಲ್ಲ

ಶ್ರೀ ಜೆ ಸಿ ಮಾಧುಸ್ವಾಮಿ ಅವರು 25 ವರ್ಷಗಳಿಂದ ವಿರೋಧ ಮಾಡಿ ಅಭ್ಯಾಸ ಆಗಿ ಹೋಗಿ ಬಿಟ್ಟಿದೆ ಅವರು ಹೇಳುವುದೇ ವಿರೋಧ ಮಾಡಿ ಎಂದು

ಶ್ರೀ ಕೆ ಆರ್ ರಮೇಶ್‌ಕುಮಾರ್ ಸಾರ್, Wohra Commission Report ತಮ್ಮ ಮುಂದೆ ಇದೆ ಧರ್ಮವೀರ ಕಮಿಷನ್ ರಿಪೋರ್ಟ್ ಇದೆ Police morale ಅನ್ನು ಕೂಡ ಎಲ್ಲೋ ಒಂದು ಕಡೆ ನಾವು ಹೆಚ್ಚಿಸಬೇಕಾಗಿದೆ ಜನರಲ್ ಆಗಿ ನಾವು ಪೊಲೀಸ್ ಅವರನ್ನು ಅಟ್ಯಾಕ್ ಮಾಡುವ ಒಂದು fancy ಮಾಡಿಕೊಂದಿದ್ದೇವೆ No, I do not agree with it Police Morale ಅನ್ನು ನಾವು ಕಡಿಮೆ ಮಾಡಿದರೆ ನಾಳೆ ನಮಗೇನಾದರೂ ಆಪತ್ತು ಬಂದರೆ, ನಾವು ಸ್ವಂತಕ್ಕೆ ಕೋವಿ ತೆಗೆದುಕೊಂಡು ಹೋಗುವುದಕ್ಕೆ ಆಗುತ್ತದಾ? We have to bank on Police ಇರತಕ್ಕಂಥ ವೈಫಲ್ಯಗಳನ್ನು ಮುಚ್ಚಿಕೊಂಡು, ನಾವು ಸಮರ್ಥನೀಯವಾದಂತಹ ಪೊಲೀಸ್ ಇಲಾಖೆಯನ್ನು ಬಲ ಪಡಿಸತಕ್ಕಂಥದ್ದೇ ಪರ್ಯಾಯವೇ ಹೊರತು, ನಾವು ಈ ವ್ಯವಸ್ಥೆಯನ್ನೇ ಒಪ್ಪಿಕೊಂಡಾಗ, we cannot think of anarchy ಎಲ್ಲಿ ಅವರು ಫೇಲ್ ಆಗುತ್ತಾರೆ? ಈಗ ಲಾರಿ ಚಾರ್ಜ್ ಆಗುತ್ತದೆ ಬಹಳ ಹೆಚ್ಚು ಎಂದರೆ Inspector ಹೋಗುತ್ತಾರೆ Dy S P ಜೀಪ್ ಕೂಡ ಇರುವುದಿಲ್ಲ ಒದೆ ತಿನ್ನುವುದಕ್ಕೆ ಹೋಗಬೇಕಾಗಿದ್ದರೆ it is the Constable and the

Head Constable ಇನ್ನು ಎಸ್ ಪಿ, IG D G rank ನವರು field ಗೆ ಹೋಗುವ ಕಾಲ ಹೋಗಿ ಯಾವ ಸಮಯ ಆಯಿತೋ ನನಗೆ ಗೊತ್ತೇ ಇಲ್ಲ ಆದರೆ ನೀವು ನೋಡಿ ಒಬ್ಬ I G, D G ಇದ್ದಾಗ Law and Order position ಈ ರಾಜ್ಯದಲ್ಲಿ ಹೇಗೆ ಇತ್ತು? ಈಗ 26-28 ಜನರನ್ನೋ ಮಾಡಿದ್ದೀರಿ Computerಗೆ ಒಬ್ಬ, CRE Cellಗೆ ಒಬ್ಬ, CoDಗೆ ಒಬ್ಬ, Uniform maintenanceಗೆ ಒಬ್ಬ, Uniform ತೆಗೆದು ಹಾಕುವುದಕ್ಕೆ ಒಬ್ಬ, ನಾವೆಲ್ಲಾ ಮಲಗುತ್ತೇವೆ, ಏಳುತ್ತೇವೆ ಎಂದು intelligence ಹೇಳುವುದಕ್ಕೆ ಒಬ್ಬ All people put together, ಈ ರಾಜ್ಯದಲ್ಲಿ ಕಾನೂನು ಮತ್ತು ಸೌಹಾರ್ದತೆಯನ್ನು ಕಾಪಾಡತಕ್ಕಂಥ ವಿಚಾರದಲ್ಲಿ ಇವರ ಕಾಂಟ್ರಿಬ್ಯೂಷನ್ ಏನು? ಇವರಿಗೆ ಈ ಪೋಸ್ಟನ್ನು ಇನ್ ಕ್ರೀಸ್ ಮಾಡಿ ಇವರಿಗೆ ಕೊಡತಕ್ಕ ಸಂಬಳವನ್ನು per contra ನೀವು Constabulary ಅನ್ನು chose ಮಾಡಿ, ಅವರಿಗೆ better incentives ಅನ್ನು ಕೊಟ್ಟು, Constables ಅವರನ್ನು ಇನ್ ಕ್ರೀಸ್ ಮಾಡಿ, field staffಗೆ ಸ್ವಲ್ಪ ಹೆಚ್ಚಿಗೆ ಪವರ್ ಕೊಟ್ಟಿದ್ದರೆ Probably, scenario ಸ್ವಲ್ಪ ಬದಲು ಆಗುತ್ತಿತ್ತು

ಶ್ರೀ ಜೆ ಸಿ ಮಾಧುಸ್ವಾಮಿ · 13% ಅಲ್ಲವಾ ಸಾರ್ ನಮ್ಮ Constable cadreನಲ್ಲಿ ಖಾಲಿ ಇರುವ ಹುದ್ದೆ 11 ಸಾವಿರಕ್ಕೆ 4 ಸಾವಿರ ಚಿಲ್ಲರೆ ಹುದ್ದೆಗಳು ಖಾಲಿ ಇದೆ ಎಂದು ಹೇಳಿ ಎಲ್ಲಾ Constable ಗಳಿಗೆ ಪ್ರಮೋಷನ್ ಕೊಟ್ಟಿರಿ ಆಫೀಸರ್ಸ್ ಮಾಡಿದಿರಿ Constable ಗಳನ್ನು ಮಾಡಲಿಲ್ಲ ಹಳೆಯ ಸ್ಟೇಶನ್‌ಗಳಿಗೆ 11 ಜನ, 12 ಜನರನ್ನು ಇಟ್ಟಿದ್ದಿರಿ important station ಗಳಿಗೆ ಆಮೇಲೆ ಬಂದ 30-40 ಜನಕ್ಕೆ ಪೊಲೀಸ್ ಸ್ಟೇಶನ್ ಕೊಟ್ಟು ಬಿಟ್ಟು ಎಲ್ಲಾ ಆಫೀಸರ್ ಅವರ ಮನೆಯ ಮುಂದೆ ದನ ಕಾಯುವುದಕ್ಕೆ, ಹಾಲು ಕರೆಯುವುದಕ್ಕೆ ಅವರ ಮನೆಗೆ ತರಕಾರಿ ತರಲು Constable ಗಳನ್ನು ಹಾಕಿ ಬಿಟ್ಟು, ಬರೇ ಒಂದು ಚಿಕ್ಕನಾಯಕನಹಳ್ಳಿ, ಬಳ್ಳಾರಿಗೆ ನೀವು Constable ಗಳನ್ನು ತೋರಿಸಿದ್ದೀರಾ? 4 ಸಾವಿರ ಹುದ್ದೆಗಳು ಖಾಲಿ ಇವೆ

ಶ್ರೀ ಎಸ್ ರಾಜೇಂದ್ರನ್ ಒಂದು ಲಕ್ಷ ಸ್ಯಾಲರಿ ತೆಗೆದುಕೊಳ್ಳುವ SPಗೆ ಅವರು ಗಾರ್ಡನ್ ನೋಡುವುದಕ್ಕೆ, ಮನೆ ನೋಡುವುದಕ್ಕೆ, ಅವರ

ಮಕ್ಕಳನ್ನೂ ನೋಡಲಿಕ್ಕೆ Constables ಅವರ ಟೋಟಲ್ ಸ್ಯಾಲರಿ ನೋಡಿದರೆ ಒಂದು ಲಕ್ಷ ರೂಪಾಯಿ ಇದೆ ನನ್ನ ಊರಿನ ಎಸ್ ಪಿ ಗೆ ಖರ್ಚು ನಮ್ಮ ಊರಿಗ ಗಾಡಿ ಬಂದಿದೆ ಜೀಪ್ ಬಂದಿದೆ, ಅದು ಬೆಂಗಳೂರಿನಲ್ಲಿಯೇ ಇರುತ್ತದೆ ಅವರ ಮಕ್ಕಳು ಬರುವುದಕ್ಕೆ ಹೋಗುವುದಕ್ಕೆ ಅಲ್ಲಿ ಎರಡು ಡ್ರೈವರ್‌ಗಳು Two drivers for one S P in Bangalore It is so shameful and thay talk about justice ನಮ್ಮನ್ನು ಕಾಪಾಡಿಕೊಳ್ಳಿ ನಾವು ಕಳ್ಳರನ್ನು ಹಿಡಿದುಕೊಡುತ್ತೇವೆ ಎನ್ನುತ್ತಾರೆ ಇಂತಹ ಕಳ್ಳರನ್ನು ನಾವು ಹಿಡಿಯದೇ ಇರುವವರು

ಶ್ರೀ ಕೆ ಆರ್ ರಮೇಶ್‌ಕುಮಾರ್ ಸಾರ್, ಒಂದು ವೇಳೆ ಅಷ್ಟು ಜನ IPS Cadre ನಿಮಗೆ ಅಗತ್ಯ ಇಲ್ಲ, ಅಂದರೆ ಸರಂಡರ್ ಮಾಡಿ Youth servicesಗೆ, Universityಗೆ ಇದಕ್ಕೆಲ್ಲ ನೀವು ಹಾಕಿಕೊಳ್ಳಬಹುದು Why are they so fond of being in civil dress and they are so weary and tired of uniform? We want to know ಆ ಬಟ್ಟೆಯಲ್ಲಿ ಏನಾದರೂ ಅಲರ್ಜಿ ಇದೆಯಾ? ಮತ್ತೆ ಅವರೆಲ್ಲಾ ಹೇಳಿದಂತೆ ಒಬ್ಬೊಬ್ಬ Higher Officers ಮನೆಗಳಲ್ಲಿ ಅದೇನೋ ಕರೆಯುತ್ತಾರೆ, orderlies ಎಂದು ಕರೆಯುತ್ತಾರೆ ಸಾರ್, ದೊಡ್ಡ ಆಫೀಸರ್ಸ್ ಮನೆಯಲ್ಲಿ ಮಕ್ಕಳಿಗೆ ಶೂ ಪಾಲಿಷ್ ಮಾಡುವುದು, ಅವರ ಅಂಡರ್ ಗಾರ್ಮೆಂಟ್ಸ್ ಒಗೆಯುವುದು ಎಲ್ಲವನ್ನೂ ಇವರೇ ಮಾಡಬೇಕು ಇವರಿಗೇನೂ ಸ್ವಾಭಿಮಾನ ಇರುವುದಿಲ್ಲವೇ? You are killing his self respect right under the nose of your own officer ಅವರು Valiant ಆಗಿ ಹೊರಗಡೆ ಬಂದು ಬಂದೂಕು ಎತ್ತಿಕೊಂಡು Law and order ನಿಭಾಯಿಸುವುದಕ್ಕೆ ಬರಬೇಕು ಒಂದು ಕಡೆ, You subject him to such humiliation as second grade citizens On the other hand, you want him to come back and fight How do you match this? ಈಗ ಓದು, ಬರಹ ಇಂತಿಷ್ಟು ಆದಾಯವಿದ್ದರೆ, ಸಿಇಟಿಗೆ ಫೀಸ್ ಕಟ್ಟಬೇಕು, ಇಂತಿಷ್ಟು ಆದಾಯವಿದ್ದರೆ, COMED-Kಗೆ ಫೀಸ್ ಕಟ್ಟಬೇಕೆಂದು ಒಂದು order ಮಾಡಿದರು ಈಗ Constable ಮಗ ಇರುತ್ತಾನೆ ಆತ CETಗೆ ಮಿಸ್ ಆಗುತ್ತಾನೆ, ಆತ B E ಗೆ ಹೋಗಬೇಕಾಗುತ್ತದೆ ಆತನಿಗೆ, ಆತನ ಹೆಂಡತಿಗೆ, ಕುಟುಂಬದವರಿಗೆ ಆಸೆ

ಇರಬಾರದೇ? ಆತ constable, orderly ಯಾಗಿಯೇ ಇರಬೇಕೇ? ಆತ ಇಷ್ಟೆಲ್ಲಾ He should be prepared to lay down his life ಆತ ಮಾಡುತ್ತಾನೋ, ಇಲ್ಲವೋ, ಅದು ಬೇರೆ ಪ್ರಶ್ನೆ, ಆದರೆ, ಪ್ರಾಣ ತ್ಯಾಗ ಮಾಡಲು ಭಯ ಪಡದೇ ಇರತಕ್ಕಂಥ ಸೌಕರ್ಯವನ್ನು ಅಂದರೆ ಆತನಿಗೆ infrastructure ಒದಗಿಸಿಕೊಡಿ, ಆತನ service matterನಲ್ಲಿ education ವಿಚಾರದಲ್ಲಿ ಹೇಗೆ ಇವತ್ತು ಮಿಲಿಟರಿಯವರಿಗ ಮಾಡುತ್ತೇವೋ, ಹಾಗೆ ಅನುಕೂಲ ಮಾಡಿ ನೀವು ಎಲ್ಲಾ ವ್ಯವಸ್ಥೆಯನ್ನೂ ಒದಗಿಸಿದರೆ, ಆತನಿಗೆ ಎಲ್ಲಿಯೋ ಒಂದು ಕಡೆ ಸ್ವಾಭಿಮಾನ ಬರುತ್ತದೆ, ಆತ ನಾಲ್ಕಾರು ಕಾಸಿಗೆ ಕೈ ಚಾಚುವುದು ತಪ್ಪುತ್ತದೆ Suppose, an IPS Officer can go out and socialize with the criminals in the evening in a club and have a beautiful scotch and take his fortune and come back home, that is gentleman, sophistication If a Constable stops a truck on the road and collects Rs 10, what do you say for that?

ಶ್ರೀ ಜೆ ಸಿ ಮಾಧುಸ್ವಾಮಿ ಸರ್, IPS Officerಗಳು ಆಗುವವರು mines trading ಮಾಡುತ್ತಿದ್ದಾರ They are involved in trading mines ರಿಪೋರ್ಟ್‌ಗಳನ್ನು ತರಿಸಿ ಈಗ trading ಯಾರು ಮಾಡುತ್ತಿದ್ದಾರೆ? ನಿಮ್ಮ ಅಧಿಕಾರಿಗಳೇ ಬರೀ ಲಾರಿಗಳನ್ನು ತಡೆಯುವುದಲ್ಲ, ಅವರು ಟ್ರೇಡಿಂಗ್‌ಗೂ ಬಂದಿದ್ದರೆ ಬಂಡವಾಳ ಹಾಕಿದ್ದಾರೆ, ಮೈನ್ಸ್ ಮಾಡುತ್ತಿದ್ದಾರೆ ಈಗ ಅವರು ದಂಧೆಗೆ ಇಳಿದಿದ್ದಾರೆ

ಶ್ರೀ ಕೆ ಆರ್ ರಮೇಶ್‌ಕುಮಾರ್ ಮಾನ್ಯ ಮುಖ್ಯಮಂತ್ರಿಗಳಿಗೆ ಚಿಕ್ಕ ವಯಸ್ಸು On many occasions ಧೈರ್ಯವಾಗಿ ಮಾತನಾಡಿ ಬಿಡುತ್ತಾರೆ He does not care for consequences That is the advantage of being young ಧರ್ಮಸಿಂಗ್ ಸಾಹೇಬರಿದ್ದರೆ, ನೂರು ಸಲ ಯೋಚನೆ ಮಾಡಿ ಒಂದು ಮಾತು ಹೇಳುತ್ತಿದ್ದರು ಇಲ್ಲದಿದ್ದರೆ, ಹೇಳುತ್ತಿರಲಿಲ್ಲ, with their experiences ನೀವೇನು ಮಾಡುತ್ತೀರಿ? ಧಟ್ಟನೆ ಹೇಳಿ ಬಿಡುತ್ತೀರಿ ಸರ್, ನೀವು ಹೇಳಬೇಕು 'DCP(West) ಆಗಬೇಕು, DCP ಇಂತಹ Trafficಗೆ ಆಗಬೇಕು, ನಾನು Check postಗೆ Inspector ಆಗಬೇಕು' ಹೀಗೆ ನಿಮ್ಮ ಹತ್ತಿರ ಎಷ್ಟು ಜನರು ಕ್ಯಾನ್‌ವಾಸ್ ಮಾಡಿಸುತ್ತಿದ್ದಾರೆ? IPS ಎಷ್ಟು

ಜನರು ನಿಮ್ಮ ಹತ್ತಿರ recommendation ಗೆ ಬರುತ್ತಾರೆಂಬುದನ್ನು ಹೇಳಿ ಸರ್? ಯಾರ್ಯಾರನ್ನು ಹಿಡಿದುಕೊಂಡು ಬರುತ್ತಾರೆಂದು ಹೇಳಿ ಸರ್ ಬರುತ್ತಾರೆಯೇ? ಇಲ್ಲವೇ? ಹೇಳಿ ಸರ್ Do they deserve to be in service? Constableಗೂ ಕೆಳಗಡೆ ಇರತಕ್ಕಂಥವರು ಮೇಲಕ್ಕೆ ಬರತಕ್ಕಂಥವರು up to the level of ASI and SI, ಈ ಪರಿಸ್ಥಿತಿ ಇದೆ ನಾನು ತಮಗೆ appeal ಮಾಡಿಕೊಳ್ಳುತ್ತೇನೆ, You will remain in history ಪ್ರತಿ Districtನಲ್ಲಿ ಇವರಿಗೊಂದು Residential School ನಿರ್ಮಿಸಿ, Boysಗೆ ಬೇರೆ, Girlsಗೆ ಬೇರೆ Residential Schools ನಿರ್ಮಿಸಿ ಅವರಿಗೊಂದು ಆಸ್ಪತ್ರೆಯ ವ್ಯವಸ್ಥೆ ಮಾಡಿ ಅವರಿಗೆ separate ಆಗಿ Engineering, Medical College open ಮಾಡಿ ಹೇಗೆ ನಾವು military canteenನಲ್ಲಿ ಅವರಿಗೆ tax ತೆಗೆದು, Subsidized pricesನಲ್ಲಿ ಪದಾರ್ಥಗಳನ್ನು ಕೊಡುತ್ತೇವೆ ರೀತಿ ಅವರಿಗೂ ಕೊಡಿ Give them all incentives and extract from them ನಾವು ಅವರಿಗೆ ವಾತಾವರಣ ಕಲ್ಪಿಸುವುದಿಲ್ಲ, ಧೈರ್ಯ ತುಂಬುವುದಿಲ್ಲ ಅವರ ಬದುಕನ್ನು ಉತ್ತಮ ಗೊಳಿಸುವುದಿಲ್ಲ, ಸಾಮಾಜಿಕವಾಗಿ ಅವರಿಗೆ ಯಾವುದೇ ಮರ್ಯಾದೆಯೂ ಇಲ್ಲ ಈಗ ಗಿರಿಜನರ ಪ್ರಶ್ನೆ

ಶ್ರೀ ವಾಟಾಳ್ ನಾಗರಾಜ್ ಈಗ ಮೀಸಲು ಪೊಲೀಸ್ ಇದೆ ಅವರ ಮನೆ, ಜೀವನ, ಬದುಕುವುದು, ಶೌಚಾಲಯ, ಮೂತ್ರ ವಿಸರ್ಜಿಸುವುದು, ಎಲ್ಲವೂ ವ್ಯಾನಿನಲ್ಲೇ!! ಮೈಸೂರು ಮೃಗಾಲಯ ಇದೆಯಲ್ಲ, ಅದೇ ರೀತಿ ನಾವು ಅವರನ್ನು ಇಟ್ಟಿದ್ದೇವೆ ಅದಕ್ಕೊಂದು ವ್ಯಾನ್ ಆ ವ್ಯಾನಿನೊಳಗೆ ದಿನದ 24 ಗಂಟೆಗಳೂ ಅವರುಗಳು ಅಲ್ಲಿಯೇ ಇರಬೇಕು ಅವರ ಕೈಯಲ್ಲೊಂದು ದೊಣ್ಣೆ 'ಲಾರಿ ಚಾರ್ಜ್' ಎನ್ನುವವರೆಗೂ ಅವರು ಕೆಳಗಿಳಿಯುವಂತಿಲ್ಲ 'ಲಾರಿ ಚಾರ್ಜ್' ಎಂದ ತಕ್ಷಣವೇ ಅವರು ತಂದೆಗೆ ಬೇಕಾದರೂ ಹೊಡೆಯುತ್ತಾರೆ, ನ್ಯಾಯಾಧೀಶರಿಗೆ ಬೇಕಾದರೂ ಹೊಡೆಯುತ್ತಾರೆ ಯಾರಿಗೆ ಬೇಕಾದರೂ ಹೊಡೆಯುತ್ತಾರೆ ಮಂತ್ರಿಗಳಿಗೂ ಬೇಕಾದರೂ ಹೊಡೆಯುತ್ತಾರೆ

ಶ್ರೀ ಸಿದ್ದರಾಮಯ್ಯ ಅವರನ್ನು ವ್ಯಾನಿನೊಳಗೆ ಕೂಡಿ ಹಾಕಿರುತ್ತಾರಲ್ಲ ಹೊರಗಡೆ ಬಂದ ತಕ್ಷಣ ಪ್ರಾಣಿಗಳೂ ಹಾಗೇ

ಶ್ರೀ ವಾಟಾಳ್ ನಾಗರಾಜ್ ವನ್ಯ ಮೃಗಗಳು, ಮೈಸೂರು ಮೃಗಾಲಯದಲ್ಲಿ ಹುಲಿ, ಸಿಂಹ, ಕರಡಿ, ಇವೆಲ್ಲಾ ಪ್ರಾಣಿಗಳಿವೆಯಲ್ಲ, ಅವುಗಳು ನೋಡಲು ಚೆನ್ನಾಗಿರುತ್ತವೆ, ಅವುಗಳನ್ನು ನಾವು ಬೋನಿನೊಳಗೆ ಇಟ್ಟಿದ್ದೇವೆ ಅವುಗಳನ್ನು ಬೋನಿನಿಂದ ಹೊರಗಡೆ ಬಿಟ್ಟ ತಕ್ಷಣ ಅವುಗಳು ಯಾರನ್ನು ಬೇಕಾದರೂ ತಿಂದು ಬಿಡುತ್ತವೆ ಇವರು ನಮಗೆ ಆಹಾರ ಹಾಕತಕ್ಕಂಥವರು ಅಥವಾ ಇವರು ನಮ್ಮ ಅರಣ್ಯ ಮಂತ್ರಿ, ಇವರು ನಮ್ಮ ಅರಣ್ಯ ಇಲಾಖೆ ಅಧಿಕಾರಿ ಎಂದು ಅವುಗಳು ಯಾರನ್ನೂ ನೋಡುವುದಿಲ್ಲ ತಿಂದು, ತಿಂದು, ತಿಂದು ಆಮೇಲೆ ಬೋನಿನೊಳಗೆ ಹೋಗಿ ಬಿಡುತ್ತದೆ ಆ ಪ್ರಕಾರ 24 ಗಂಟೆಗಳ ಕಾಲ ಆ ಪೊಲೀಸ್ ವಾಹನದಲ್ಲಿ, ಬೋನಿನಲ್ಲಿ ಅವರನ್ನು ನಾವು ಇಟ್ಟಿದ್ದೇವೆ ಅವರಿಗೆ timings ಏನು? ಇಲ್ಲಿ ವಿಧಾನಸೌಧದ ಮುಂದಿರುವ ಅಂಬೇಡ್ಕರ್ ಪ್ರತಿಮೆ ಹತ್ತಿರ ಅವರು ವ್ಯಾನಿನಲ್ಲಿ ಕಾಯುತ್ತಿರುತ್ತಾರೆ ನಾನು ಪ್ರತಿ ದಿನವೂ ಇಲ್ಲಿ ತಿರುಗಾಡುತ್ತಿರುತ್ತೇನೆ ಏನು ಸಮಾಚಾರ? ಎಂದರೆ, ಏನಿಲ್ಲ ಸ್ವಾಮಿ, ಸುಮ್ಮನೆ ಒಳಗಡೆ ಕುಳಿತ್ತಿದ್ದೇವೆ ಎನ್ನುತ್ತಾರೆ ಅವರುಗಳು ಪೋಲೀಸ್ ವ್ಯಾನಿನೊಳಗೆ ಕುಳಿತಿದ್ದರೆ, ಒಂದಕ್ಕೆ ಎರಡಕ್ಕೆ, ಮೂರಕ್ಕೆ ಜಾಗವಿಲ್ಲ! ಅವರುಗಳ ಹಣೆ ಬರಹವೇನು? ದೇವರೇ ಕಾಪಾಡಬೇಕು ಇಲ್ಲಿ ಮುಖ್ಯಮಂತ್ರಿಗಳು, ಉಪ ಮುಖ್ಯಮಂತ್ರಿಗಳು ಮತ್ತು ಗೃಹ ಮಂತ್ರಿಗಳು, ಹೀಗೆ ಮೂರು ಮುಖ್ಯಮಂತ್ರಿಗಳು ಕುಳಿತಿದ್ದೀರಿ ನೀವುಗಳು ಒಂದು ಹೊಸ ಅಧ್ಯಾಯನವನ್ನು ಆರಂಭಿಸಿ ನಿಮ್ಮ ಕಾಲದಲ್ಲಿ Police Constable ಮತ್ತು ASI, ಇವರಿಬ್ಬರನ್ನು ನರಕದಿಂದ ಪಾರು ಮಾಡಿ ಈ ಪುರೋಹಿತರುಗಳು ಹೇಳುತ್ತಾರಲ್ಲ, ಸತ್ತ ತಕ್ಷಣ ಅವರು ನೇರವಾಗಿ ನರಕಕ್ಕೆ ಹೋಗುತ್ತಾರೆಂದು ಇವರಿಗೆ ನರಕವೇನೂ ಇರುವುದಿಲ್ಲ ಅವರಿಗೆ ಇಲ್ಲಿಯೇ ನರಕ ಪೋಲೀಸರಿಗೆ ಎಲ್ಲಿಯಾದರೂ ನರಕವೆಂಬುದಿದ್ದರೆ, ಸಾಯುವುದಕ್ಕಿಂತಲೂ ಬದುಕಿರುವಾಗ ರಿಸರ್ವ್ ಪೋಲೀಸಿನವರಿಗೆ ಇಲ್ಲಿಯೇ ನರಕ ಅನಂತರ, ಕಂಟ್ರೋಲ್ ರೂಂ ಕೇಳಿ, ಕೇಳಿ ಅವರಿಗೆ ಕಿವಿಯೇ ಹೊರಟು ಹೋಗಿದೆ ದಿನವೂ ಅವರು ಕಂಟ್ರೋಲ್ ರೂಂನಲ್ಲಿ ಕಿವಿ ಹತ್ತಿರ ಹಿಡಿದುಕೊಂಡಿರಬೇಕು ಯಾರು? ಚಾರ್ಲಿ ಎಲ್ಲಿ ಹೋಯಿತು? ಚಾರ್ಲಿ ಎಲ್ಲಿ ಹೋಯಿತು? ಎಂದು ಹೇಳುತ್ತಿರುತ್ತಾರೆ ಆತ ರಾತ್ರಿ ಮಲಗಿದ್ದರೂ ಚಾರ್ಲಿ, ಚಾರ್ಲಿ ಎನ್ನುತ್ತಿರುತ್ತಾನೆ, ಅವನಿಗೆ ಹುಚ್ಚು ಹಿಡಿದು ಬಿಡುತ್ತದೆ ರಾತ್ರಿ ಅವನು ಮನೆಗೆ ಹೋಗಿ ಮಲಗಿದ್ದಾಗಲೂ ಅವನ ಹೆಂಡತಿ ಇದೇನ್ರಿ,

ಚಾರ್ಲಿ ಚಾರ್ಲಿ ಚಾರ್ಲಿ ಎನ್ನುತ್ತೀರಲ್ಲ ಏಕೆ? ಎನ್ನುತ್ತಾರೆ ಏಳ್ರಿ ಮೇಲೆ ನಿಮಗೇನಾಯ್ತು? ಚಾರ್ಲಿ ಯಾರ್ರಿ? ಎನ್ನುತ್ತಾರೆ 2 ಗಂಟೆ, 3 ಗಂಟೆ ರಾತ್ರಿಯಲ್ಲಿ ಅವರು ಈ ರೀತಿ ಕನವರಿಸುತ್ತಿರುತ್ತಾರೆ ಇದೇನಿದು ಹುಚ್ಚು? ಅವರಿಗೆ ಆ ಕಂಟ್ರೋಲ್ ರೂಮಿನ ಹುಚ್ಚು ಹಿಡಿದು ಬಿಟ್ಟಿದೆ ಅನಂತರ, ಸಂಚಾರಿ ಪೋಲೀಸರು ಅವರು ಬಹಳಷ್ಟು ದಿನ ಬದುಕುವಂತಿಲ್ಲ ಅವರಿಗೆ ಸೊಂಟ ಬಿದ್ದು ಹೋಗಿದೆ ನಾವು ಕಾರಿನಲ್ಲಿ ಓಡಾಡುತ್ತೇವೆ ಯಡಿಯೂರಪ್ಪ ನವರೆ, ಇದರಲ್ಲಿ ಹಾಸ್ಯ ಇರಬಹುದು ಆದರೆ, ವಸ್ತುಸ್ಥಿತಿಯನ್ನು ನೀವು ನೋಡಬೇಕು ಅವರಿಗೆ ಬಹಳಷ್ಟು ದಿನ ಸೊಂಟ ಇರುವುದಿಲ್ಲ ಅದಕ್ಕೆ ನೀವೇನಾದರೂ ವ್ಯವಸ್ಥೆ ಮಾಡಬೇಕು ನೀವು ಟೋಪಿ ಕೊಟ್ಟಿರುವುದನ್ನು ನೋಡಬೇಕು ನಾನು ಅದನ್ನು ತರಲಿಲ್ಲ ಪರಿಶುದ್ಧವಾದ ತಲೆಗೆ ಟೋಪಿ ಹಾಕಿಕೊಂಡರೆ ಏನು ಇದು ಹಣೆಬರಹ? ಇವೆಲ್ಲದರ ಬಗ್ಗೆ ತಾವು ಸಮಗ್ರವಾಗಿ ಚಿಂತಿಸಿ, ಸಾಧ್ಯವಾದರೆ ಎಲ್ಲರನ್ನೂ ಕರೆಯಿರಿ ವಿರೋಧ ಪಕ್ಷದವರೆಲ್ಲರನ್ನೂ ಕರೆದು, ಏನು ಮಾಡೋಣ, ಇವರ ಪರಿಸ್ಥಿತಿಯನ್ನು ನಾವು ಏನು ಮಾಡಿ ಯಾವ ರೀತಿ ಸುಧಾರಿಸಬಹುದು ಎಂಬುದರ ಬಗ್ಗೆ ಕ್ರಮ ಕೈಗೊಳ್ಳಿ ಪೋಲೀಸ್ ಇಲಾಖೆಯಲ್ಲಿ ಉನ್ನತ ಹುದ್ದೆಯಲ್ಲಿರುವವರಿಗೆ ಯಾವುದೇ ಪ್ರಶ್ನೆ ಇಲ್ಲ ಸಾಮಾನ್ಯವಾಗಿರುವವರಿಗೆ, ಅದರಲ್ಲೂ ಕೆಲವರಿಗೆ ಒಂದು ನಯಾ ಪೈಸೆಯೂ ಸಿಗುವುದಿಲ್ಲ ಅಂತಹ ಜಾಗಗಳಿವೆ ಅವರಿಗೆ ಕಾಫಿ ಸಿಗುವುದಿಲ್ಲ ಬೀಡಿ ಸಿಗುವುದಿಲ್ಲ ಏನೆಂದರೆ ಏನೂ ಸಿಗುವುದಿಲ್ಲ ಅವರು ಒಂದು ತರಹ ಈ ತರಹ ಅನೇಕ ಪೋಲೀಸ್ ಸಿಬ್ಬಂದಿ ಇದ್ದಾರೆ ಅವರಿಗೆ ಅಲ್ಲಿಯೇ ಶಿಕ್ಷೆ ತಮಗೆ ಈಗಾಗಲೇ ಗೊತ್ತಿದೆ, ತಾವು ಎಲ್ಲವನ್ನೂ ನೋಡಿದ್ದೀರಿ, ಹಿಂದೆ-ಮುಂದೆ, ಒಳಗಡೆ, ಹೊರಗಡೆ, ಹೋಗಿರುವುದು, ಮಾಡಿರುವುದು, ಪ್ರತಿಯೊಂದನ್ನೂ ನೋಡಿದ್ದೀರಿ ಈ ಬಗ್ಗೆ ನೀವು ಪ್ರಾಮಾಣಿಕ ಚಿಂತನೆ ಮಾಡಲಿಲ್ಲವೆಂದರೆ, ಮಾನ್ಯ ರಮೇಶ್‌ಕುಮಾರ್‌ರವರೆ, ಈ ಹಿಂದೆಯೂ ನಾನು ಅನೇಕ ಸಲ ಹೇಳಿದ್ದೇನೆ ಎಷ್ಟೋ ಮಕ್ಕಳಿಗೆ ನಮ್ಮ ತಂದೆ ಯಾರೆಂಬುದೇ ಗೊತ್ತಿರುವುದಿಲ್ಲ ಅವರುಗಳು ಮನೆಗೆ ಹೋಗುವುದಕ್ಕಾಗುವುದಿಲ್ಲ ಅವರು ಬೆಳಿಗ್ಗೆ 5 00 ಗಂಟೆಗೆ ಮಕ್ಕಳು ಏಳುವ ಮುನ್ನವೇ ಹೊರಗೆ ಬಂದು ಬಿಟ್ಟಿರುತ್ತಾರೆ ರಾತ್ರಿ ಮಕ್ಕಳು ಮಲಗಿರುವಾಗ ಮನೆಗೆ ಹೋಗುತ್ತಾರೆ ಅವರುಗಳ ಗತಿ ಏನಾಗಬೇಕು? ಆದುದರಿಂದ, ಇದು ಅತ್ಯಂತ ದುರಂತಮಯ ಸಂಗತಿ ಅವರುಗಳಿಗೆ ಬಡ್ತಿ ಕೊಟ್ಟಿಲ್ಲ, ವ್ಯವಸ್ಥೆ ಕೊಟ್ಟಿಲ್ಲ, ಇವೆಲ್ಲಾ ಸಮಸ್ಯೆಗಳಿವೆ ಆದುದರಿಂದ, ದಯಮಾಡಿ ಅವರುಗಳ

ಬಗ್ಗೆ ಸಮಗ್ರ ಚಿಂತನೆಯಾಗಬೇಕು ಧರ್ಮವೀರ, ಅವರು ಒಂದು ಒಳ್ಳೆಯ ವರದಿ ಕೊಟ್ಟಿದ್ದಾರೆ ತಾವು ನೋಡಿದ್ದೀರಿ ಅದರ ಜೊತೆಗೆ, ಮತ್ತೆ ನೀವೇ ಒಂದು ಹೊಸ ಚಿಂತನೆ ಮಾಡಬೇಕೆಂದು ತಮ್ಮಲ್ಲಿ ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತಿದ್ದೇನೆ ವೀರೇಂದ್ರ ಪಾಟೀಲರ ಕಾಲದಲ್ಲಿ ಅವರಿಗೆ ಪ್ಯಾಂಟ್ ಕೊಟ್ಟರು

ಶ್ರೀ ಜೆ ಸಿ ಮಾಧುಸ್ವಾಮಿ ಕ್ಯಾಬಿನೆಟ್‌ನಲ್ಲಿ ನಮ್ಮ Home Minister ಸ್ಥಿತಿ ಕೂಡ ಹಾಗೇ ಇದೆಯೇನೋ ಎಂಬ ಬಗ್ಗೆ ನಮಗೆ ಅನುಮಾನವಿದೆ

ಶ್ರೀ ಎಂ ಪಿ ಪ್ರಕಾಶ್ ಸನ್ಮಾನ್ಯ ಅಧ್ಯಕ್ಷರೆ, ಇದು ಅನುಕಂಪ ತೋರಿಸುವ ನೆಪದ ಮೂಲಕ ತಮ್ಮ ಆ ಭಾವನೆಯನ್ನು ನಾನು ಹೇಳಬಾರದು ಅದನ್ನು ಅಭಿವ್ಯಕ್ತಿಗೊಳಿಸುವುದಕ್ಕೆ, ಅಂದರೆ, You are a spineless man sitting in this position ಎಂದು ನೀವು ಹೇಳುವುದಾಗಿದ್ದರೆ, ಸ್ವಾಮಿ, ಈಗ ಯಾವ ಕಾಲದಲ್ಲಿ ಇದು ಇರಲಿಲ್ಲ? Reutilization of police foeces ಮಾಡಿದ್ದು ಯಾವಾಗ? ಮತ್ತು ಈ ಎಲ್ಲಾ ಕೆಲಸ-ಕಾರ್ಯಗಳನ್ನು ಅವರು ಗೊತ್ತಾಗಿಯೇ ಮಾಡಿಕೊಂಡಿರುವಂಥಾದ್ದು ಬೆಳಗ್ಗೆ 8 00 ಗಂಟೆಗೆ ನಮ್ಮ ಮನೆ ಮುಂದೆ ಜನರು ನಿಂತುಕೊಳ್ಳುತ್ತಾರೆ ರಾತ್ರಿ 10 00 ಗಂಟೆಯಾದರೂ ಅವರು ಬಿಟ್ಟು ಹೋಗುವುದಿ ಲ್ಲವೆಂದು ಒಬ್ಬ ರಾಜಕಾರಣೀ, ಒಬ್ಬ ಎಂಎಲ್ಎ ಹೇಳುವುದಾಗಿದ್ದರೆ, ಅವರೇನು ನಮಗೆ ಮಂಗಳಾರತಿ ಎತ್ತಿ, ದೇಶ ಸೇವೆಗೆ ನೀನು ಬಾರಪ್ಪ ಎಂದು ಕರೆದಿದ್ದರೆ? On our own volition we have come and entered into this field and it is our responsibility to bear with that sort of a hardship

ಶ್ರೀ ಎಂ ಪಿ ಪ್ರಕಾಶ್ ಇದರ ಜೊತೆಗೆ ಅವರಿಗೆ ಏನು ಸುಧಾರಣೆ ಮಾಡಬೇಕೋ ಅದನ್ನು ಮಾಡಬೇಕೇ ವಿನಹ ವೈರ್‌ಲೆಸ್‌ನ್ನು ಕಿವಿಯಲ್ಲಿ ಇಟ್ಟುಕೊಂಡಿರುತ್ತಾರೆ ಎಂದರೆ, ತಾವು ಮೊಬೈಲನ್ನು ಹಗಲೂ ರಾತ್ರಿ ಕಿವಿಯಲ್ಲಿ ಇಟ್ಟುಕೊಳ್ಳುತ್ತೀರಲ್ಲ ನೀವು ಹೀಗೆ ಹೇಳುವುದಲ್ಲ It is a duty cast upon them I am not a Spineless man ನೀವು ಆ ರೀತಿಯಲ್ಲಿ ನಮ್ಮನ್ನು ಪದೇ ಪದೇ ಚಿತ್ರಿಸಲು ಪ್ರಯತ್ನ ಮಾಡಿದರೆ ಅದು ನಿಮ್ಮ ಬಗ್ಗೆ reflection ಆಗುತ್ತದೆಯೇ ವಿನಹ ನನ್ನ ಬಗ್ಗೆ ಆಗುವುದಿಲ್ಲ I will also answer all these questions when I reply ನಾವು ಏನೇನು

ಮಾಡಿದ್ದೇವೆ, 6 ತಿಂಗಳಿನಿಂದ ಏನೇನು ಮಾಡಿದ್ದೇವೆ 5 ವರ್ಷದಿಂದ ಏನೇನಾಗಿತ್ತು, ಮೊದಲೆಲ್ಲಾ ಏನಾಗಿತ್ತು, ಈ advocate ಈ ವ್ಯವಸ್ಥೆ ನಾವು ಅವರು ಎಲ್ಲರು ಮಾಡಿರುವುದೇನು, ನಾವು ಮಾತನಾಡತಕ್ಕ ಮನುಷ್ಯರು ಯಾವ ರೀತಿಯಲ್ಲಿ ಅದರ ಬಗ್ಗೆ ಎಷ್ಟು ಪ್ರಾಮಾಣಿಕವಾಗಿ ನಡೆದುಕೊಂಡಿದ್ದೇವೆ, ಬೇರೆಯವರು ಯಾವ ರೀತಿ ಪ್ರಾಮಾಣಿಕವಾಗಿ ನಡೆದುಕೊಳ್ಳುತ್ತಿದ್ದಾರೆ ಅದರ ಬಗ್ಗೆ ಕೂಡ ನಾನು ಸ್ಪಷ್ಟವಾಗಿ ಉತ್ತರ ಕೊಡಲು ತಯಾರಿದ್ದೇನೆ

ಶ್ರೀ ಕೆ ಆರ್ ರಮೇಶ್‌ಕುಮಾರ್ ತಾವು Spineless ಎಂದು ನಾವು ಎಂದೂ ಹೇಳುವುದಿಲ್ಲ ನಮಗೆ ಆ ಅಭಿಪ್ರಾಯವೇ ಇಲ್ಲ Spine ಇದೆಯೆಂದು ತಾವು ತೋರಿಸಬೇಕು ಎಂಬುದಷ್ಟೇ ನಮ್ಮ ಆಸೆ ಮತ್ತು ಇನ್ನೂ ಏನೂ ಇಲ್ಲ Justice Ashok Desai, former judge of the Supreme Court, "Judging the Judges" ಎಂದು ಹೇಳಿ ಒಂದು article ಬರೆಯುತ್ತ ಒಂದು Sentence ಬರೆಯುತ್ತಾರೆ "The Cowardice of the honest will lead to the rascals ruling" ಎಂದು ಅದು ಈ ಸಂದರ್ಭಕ್ಕೆ ಅನ್ವಯಿಸುವುದಿಲ್ಲ So honest ಆಗಿರತಕ್ಕವರು Cowardice ಆಗಿದ್ದರೂ ಕೂಡ assert ಮಾಡಿಕೊಳ್ಳದಿದ್ದರೂ ಕೂಡ ಏನಾಗಬಹುದು? ಇದು ನಿಮ್ಮ ಡಿ ಜಿ ಯವರಿಗೆ ಅನ್ವಯಿಸಬಹುದು, ತಮಗೆ ಅನ್ವಯಿಸಬಹುದು

ಶ್ರೀ ಎಂ ಪಿ ಪ್ರಕಾಶ್ ಅವಕಾಶ ಇಲ್ಲದವನು ಮಾತ್ರ ಪ್ರಾಮಾಣಿಕ ಅವಕಾಶ ಕೊಟ್ಟರೆ ಎಲ್ಲರನ್ನೂ ಪರೀಕ್ಷೆ ಮಾಡಿ ನೋಡಿದ್ದೇವೆ ಅವಕಾಶ ಇಲ್ಲದವನು ಮಾತ್ರ ಬಹಳ ದೊಡ್ಡ ಪ್ರಾಮಾಣಿಕ ಎಂದು ಹೇಳುತ್ತಾರೆ ಈಗ ಎಲ್ಲಿಯವರೆಗೆ ಬಂದಿದೆ ಎಂದರೆ a honest person is one who takes money and do his job A dishonest person is one who takes money but doesn't do anything

ಶ್ರೀ ಕೆ ಆರ್ ರಮೇಶ್‌ಕುಮಾರ್ I compliment you and salute to you

ಶ್ರೀ ಕೆ ಜಯಪ್ರಕಾಶ್ ಹೆಗ್ಡೆ ಅವಕಾಶ ವಂಚಿತರು ಬಹಳಷ್ಟು ಜನರು ಇದ್ದಾರೆ ಅವಕಾಶ ಸಿಕ್ಕಿದಾಗ ಅವರು ಏನು ಮಾಡುತ್ತಾರೆ ಎಂಬುದು ಬಹಳ ಮುಖ್ಯ

ಶ್ರೀ ಕೆ ಆರ್ ರಮೇಶ್ ಕುಮಾರ್ I don't contradict that That is exactly the position For argument sake argument ಮಾಡತಕ್ಕ ಸ್ವಭಾವದವನು ನಾನಲ್ಲ I will agree with you That is the position ನಾವು ಅಲ್ಲಿಗೆ ಬಂದು ನಿಂತಿದ್ದೇವೆ ನಿನ್ನೆ ಟಿ ವಿ ಯಲ್ಲಿ ಸಂಜೆ ಹೇಳುತ್ತಿದ್ದರು ಇಂಡೋ ಪಾಕ್ ಕ್ರಿಕೇಟ್ ಮ್ಯಾಚ್ finals watch ಮಾಡಲು ಬಂದ ಕೆಲವರು ಮತ್ತು Student visa ಮೇಲೆ ಬಂದ ಕೆಲವು ಇರಾನಿಯನ್ಸ್, ಪಾಕೀಸ್ತಾನದವರು, ಬಾಂಗ್ಲಾ ದೇಶದ ಸುಮಾರು 40ಕ್ಕೂ ಮೇಲ್ಪಟ್ಟು ಜನ They are not traceable ಅಂತ ಅವರು ಈ ರಾಜ್ಯಕ್ಕೆ ಬಂದರು, ಯಾವ ವೀಸಾವನ್ನು ತಂದರೋ ಗೊತ್ತಿಲ್ಲ Records ಪ್ರಕಾರ they have not gone Back ಇದಕ್ಕೆ ನಿನ್ನೆ ಎಲ್ಲ ಮೊನ್ನೆ ನೀವು home minister ಆದಿರಿ ನೀವು ಇದಕ್ಕೆ ಕಾರಣ ಅಥವಾ ಕುಮಾರಸ್ವಾಮಿಯವರು ಕಾರಣ ಎಂದು ನಾನು ಹೇಳಲು ಆಗುತ್ತಿದೆಯೇ? ನಾವು ನೀವು fail ಆದರೆ, ಯಾವುದೋ ಒಂದು ಊರಿಗೆ ಹೇಳಿದ ಕೆಲಸ ಮಾಡಿಕೊಡದಿದ್ದರೆ, ಇನ್ನು ಯಾವುದೋ ಒಂದು ಕಾರಣಕ್ಕೆ ನಮ್ಮ ಮೇಲೆ black flag demonstration ಇನ್ನೊಂದು ಮತ್ತೊಂದು, ಎಲ್ಲಾ ಪೇಪರ್‌ರವರು ಬರೆಯುವುದು, ಎಲ್ಲಾ ಶೂರರು ಮಾತನಾಡುವವರು, ನಮ್ಮನ್ನು ಸೋಲಿಸುವುದೋ ಗೆಲ್ಲಿಸುವುದೋ ಏನೋ ಒಂದು ಮಾಡುತ್ತಾರೆ ನಾವು ಆ ರೀತಿ ಗೆದ್ದು ಬರಬೇಕಾದರೆ ಮಾಡಬಾರದ ಪಜೀತಿಯನ್ನೆಲ್ಲ ಮಾಡಿ ಪಡಿಪಾಟಲು ಪಟ್ಟುಕೊಂಡು ಎದ್ದೆವೋ ಬಿದ್ದೆವೋ ಎಂದು ಬರುತ್ತೇವೆ ಈ ಬ್ಯೂರೋಕ್ರಸಿ ಇದೆಯಲ್ಲ ಇವರೆಲ್ಲ ಆವತ್ತಿನಿಂದ ಇವತ್ತಿನವರೆಗೆ police department ನಲ್ಲಿ continuous ಆಗಿ ಇದ್ದಾರಲ್ಲ What are thay doing? I am trying to separate them from you for a minute Are thay not responsible? Please tell me honestly? If 40 of these people who came on a visa to this country from different foreign countries have not gone back to their respective Pleaces, what should we think? ಮತ್ತೆ ನಾವು ನೋಡುತ್ತಿದ್ದೇವೆ, ಒಂದಲ್ಲಾ ಒಂದು ರೀತಿಯಲ್ಲಿ ಬೆಂಗಳೂರಿನಲ್ಲಿ terrorist activities ಗೆ ಉತ್ತೇಜನ ಸಿಗುತ್ತಿದೆ, ಅದಕ್ಕೆ ಸಂಬಂಧವಿರತಕ್ಕವರನ್ನು ಇಲ್ಲಿ ಹಿಡಿಯುತ್ತಿದ್ದಾರೆ ಅದರ ಮೂಲ ಇಲ್ಲಿದೆ ಇಂದ ಸನ್ನಿವೇಶದಲ್ಲಿ 40 ಜನ

ನಾಪತ್ತೆಯಾಗಿದ್ದಾರೆ, ಆದರೆ ಇವರೆಲ್ಲಾ ಇಲಾಖೆಯಲ್ಲಿ ಇದ್ದಾರಲ್ಲ? ಆವತ್ತು ಸಿ ಆರ್ ಇ ಸೆಲ್‌ನಲ್ಲಿ ಇದ್ದವರು ಇವತ್ತು ಇಂಟಲಿಜೆನ್ಸ್‌ಗೆ ಬಂದಿರಬಹುದು, ಆವತ್ತು ಇಂಟಲಿಜೆನ್ಸ್‌ನಲ್ಲಿದ್ದವರು ಇವತ್ತು ಸಿ ಓ ಡಿ ಗೆ ಹೋಗಿರಬಹುದು ಸಿ ಓ ಡಿ ಯಲ್ಲಿದ್ದವರು administrationಗೆ ಬಂದಿರಬಹುದು but they are all there in the department ಇವರ ಕರ್ತವ್ಯ ಏನಾಯಿತು? ಅದನ್ನು ಯಾರು ಮಾನೀಟರ್ ಮಾಡಬೇಕು ದಯಮಾಡಿ ಹೇಳಿ? ತಾವು ಅದನ್ನು ಮಾಡಬೇಕೋ ಬೇಡವೋ? ಅದನ್ನು ನಾವು ಹೇಳುತ್ತಿದ್ದೇವೆ ಈ ವೈಫಲ್ಯಕ್ಕೆ ಅವರಂತೂ they have forgotten their responsibility ಇಷ್ಟೆಲ್ಲಾ ಮಾಡಿದರೂ ಅವರಿಗೆ scrutiny ಎಂಬುದು ಇಲ್ಲ ಅವರಿಗೆ time bound promotion ಸಿಕ್ಕೇ ಸಿಗುತ್ತದೆ ಡೆಹರಾಡೂನ್‌ನಿಂದ ಐ ಪಿ ಎಸ್ ತೆಗೆದುಕೊಂಡು ಬಂದವರು he joined service as A S P , Dy SP and S P and DGP ಯಾರೋ ಒಬ್ಬರು ಇಲ್ಲವೇ ಇಬ್ಬರು ನತದೃಷ್ಟರು additional D G ಆಗಿ ಮನೆಗೆ ಹೋಗುವವರು ಉಳಿದವರೆಲ್ಲರೂ D G ಆಗಿಯೇ ಹೋಗುತ್ತಾರೆ ಕೆ ಎಸ್ ಪಿ ಎಸ್ ನಿಂದ ಬಂದವರೂ D G ಹೊರಗೆ ಹೊರಟು ಹೋಗುತ್ತಾರೆ ಬಹಳ ಹೆಚ್ಚು ಎಂದರೆ confidential report ಅದು ಇದು ಎಂದು ಯಾರನ್ನೋ ಒಬ್ಬರನ್ನು ಹಿಡಿದುಕೊಂಡು ಏನು ಬೇಕಾದರು ಮ್ಯಾನೇಜ್ ಮಾಡುತ್ತಾರೆ ಈ ರಾಜ್ಯದ, ದೇಶದ ಗತಿ ಏನು? ಅವರು ಆಡಳಿತ ನಡೆಸುತ್ತಾರೆ ನಾವು ಪರಿಪಾಲನೆ ಮಾಡುತ್ತೇವೆ ರಾಜ್ಯದ ಪರಿಪಾಲನೆಯ ಜವಾಬ್ದಾರಿಯನ್ನು ಹೊತ್ತುಕೊಂಡಿರುವ ನಾವು ಆಡಳಿತಗಾರರಾದ ಇವರು ಎಲ್ಲಿ ಎಡವಿದ್ದಾರೆ ಎಂದು ಗಮನಿಸದಿದ್ದರೆ ನಮ್ಮದು ತಪ್ಪಾಗುವುದಿಲ್ಲವೇ? ಅದಕ್ಕಾಗಿ ನಾವು ಆ ವಿಷಯಕ್ಕೆ ಬಂದಾಗ ತಮ್ಮ ಬೇಡಿಕೆಯನ್ನು ಮಂಜೂರು ಮಾಡಿಕೊಡಬೇಕೇ? ನಮ್ಮ ಜೀವಗಳನ್ನು ಅಪಾಯದಲ್ಲಿ ಇಟ್ಟುಕೊಂಡು ರಾಜ್ಯದ ಸಮಗ್ರತೆಯನ್ನು ಅಪಾಯದಲ್ಲಿ ಇಟ್ಟುಕೊಂಡು ಈ ರೀತಿ ಭಯೋತ್ಪಾದನೆ ಮತ್ತೊಂದಕ್ಕೆ ಪ್ರೋತ್ಸಾಹ ಕೊಡತಕ್ಕವರೆಲ್ಲ ನಾಪತ್ತೆಯಾಗಿ ರಾಜ್ಯದಲ್ಲಿ ಇನ್ನೂ ಇದ್ದಾರೆ ಎಂದು ಅಧಿಕೃತವಾಗಿ ವರ್ತಮಾನ ಬರುತ್ತಿದ್ದು, ಯಾರು ಎಲ್ಲಿ ಎಡವಿದರು, ಯಾರ ಕೈ ಬಲಪಡಿಸಬೇಕಾಗಿತ್ತು, ಯಾರ ವಿಚಾರದಲ್ಲಿ ಎಚ್ಚೆತ್ತುಕೊಳ್ಳಬೇಕಾಗಿತ್ತು ಎಂಬುದಲ್ಲಿ ನೀವು ಎಡವಿದಾಗ ನಾವು ನಿಮ್ಮ ಬೇಡಿಕೆಯನ್ನು ಮಂಜೂರು

ಮಾಡಿಕೊಡಬೇಕೇ? That is all the question you have to convince us ನಾವೆಲ್ಲರೂ ಸೇರಿ yes ಎಂದು ಹೇಳುತ್ತೇವೆ ನಾವು ಬೇಡ ಎಂದ ಮಾತ್ರಕ್ಕೆ ಇದೇನು ಆಗುವುದಿಲ್ಲ ಆದರೆ ನಾವು ತಮಗೆ ಹೇಳುತ್ತೇನೆ numerical strength ಇದೆ ಎಂದು demands pass ಮಾಡಿಕೊಂಡು ಹೋಗುತ್ತೇವೆ ಎನ್ನುವುದಾದರೆ this debate has no meaning If the observations of various members in this House have to be taken for what it is worth, them the Government should address this while replying Then, I think, this House has served its purpose of being in existence ತಮಗೆ ಗಿರಿಜನರ ಸಮಸ್ಯೆಯ ಬಗ್ಗೆ ಹೇಳುತ್ತೇನೆ ಇವರೇನು ಹೊಸದಾಗಿ ಕಾಡಿನ ಒಳಕ್ಕೆ ಹೋದರೆ? ನಾವು ಮಾತನಾಡಿ ಕೊಳ್ಳೋಣ ನಾವು ಈಗ ಹೊಸದಾಗಿ ಕಾಡಿನ ಒಳಕ್ಕೆ ಹೋಗುತ್ತಿದ್ದೇವೆ ನಾವು ಈಗ ಹೊಸದಾಗಿ ಇದು ರಾಷ್ಟ್ರೀಯ ಉದ್ಯಾನವನ, ಅದು ಇದು ಎಂದು ಕಾನೂನನ್ನು ಮಾಡಿದ್ದೇವೆ ಅವರು ಅನದಿಕಾಲದಿಂದಲೂ ಅಲ್ಲೇ ಇದ್ದಾರೆ ಸೂರ್ಯನ ಬೆಳಕನ್ನೇ ಅವರು ನೋಡಲಿಲ್ಲ ಅಪರಿಮಿತವಾದ ಬೆಳಕನ್ನು ನಾವು ಕಂಡಿದ್ದೇವೆ ಪರಿಮಿತವಾದ ಬೆಳಕನ್ನು ಅವರು ಕಂಡಿದ್ದಾರೆ ಅಲ್ಲಿರತಕ್ಕ forget produce ಅದನ್ನೋ ಇದನ್ನೋ ಮಾರಿಕೊಂಡು ಯಾವಾಗಲೋ ಒಂದು ಸಲ ಹೊರಕ್ಕೆ ಬಂದು ಮಾಮೂಲಾಗಿ forestನ ಒಳಕ್ಕೆ ಹೋಗಿದ್ದಾರೆ ಅವರಿಗೆ ಓದು, ಬರಹ, ಬಟ್ಟೆ ನಮ್ಮ ರೀತಿ ಸಂಸ್ಕೃತಿ ಇಲ್ಲ ಕಡೆಯ ಪಕ್ಷ ಅವರು ತಮ್ಮ ಜೀವನದಲ್ಲಿ ಒಂದು ಜಿಲೇಬಿ, ಮೈಸೂರ್ ಪಾಕ್‌ನ್ನು ತಿಂದಿದ್ದಾರೋ ಗೊತ್ತಿಲ್ಲ

ಶ್ರೀ ಎಂ ಪಿ ಪ್ರಕಾಶ್ - ಬಹಳ ಒಳ್ಳೆಯ ಮಾತಾದ ಅಪರಿಮಿತವಾದ ಬೆಳಕು, ಪರಿಮಿತವಾದ ಕತ್ತಲು ಎಂದು ಹೇಳಿದ್ದೀರಿ ಇದಕ್ಕೆ ಅಲ್ಲಮಪ್ರಭು ಬಹಳ ಒಳ್ಳೆಯ ಒಂದು ವಚನ ಹೇಳುತ್ತಾನೆ "ಅಪರಿಮಿತವಾದ ಬೆಳಕಿನಲಿ ಪರಿಮಿತವಾದ ಕತ್ತಲೆಯ ಕಂಡೆ, ಬೆಳಕೂ ಅದೇ, ಕತ್ತಲೆಯೂ ಅದೇ, ಆನೆಯೂ ಸಿಂಹವೂ ಕಲೆತು ಉಂಡುಹೋದಕಂಡೆ ಇದು ಚೋದ್ಯವೋ" ಎಂದು ಇದೆ ಅಪರಿಮಿತವಾದ ಬೆಳಕು ಪರಿಮಿತವಾದ ಕತ್ತಲು, ಇದರಿಂದ ಹೊರಗೆ ಬರತಕ್ಕದ್ದೇ ಈ ಸಮಸ್ಯೆಗೆ ನಮ್ಮದೆಲ್ಲರ ಉತ್ತರ ತೆಗೆದು ಕೊಳ್ಳಬೇಕಾಗಿದೆ

ಶ್ರೀ ಕೆ ಆರ್ ರಮೇಶ್‌ಕುಮಾರ್ ನನಗೆ ಕನ್ನಡ ಭಾಷೆ ಸೀಮಿತ ವರ್ಯ ಅಲ್ಲಮಪ್ರಭು, ಬಸವೇಶ್ವರ ಇವನ್ನೆಲ್ಲ ಓದಿ quote ಮಾಡುವಷ್ಟು ಚೈತನ್ಯ ನಾನು ಇನ್ನೂ ಗಳಿಸಿಕೊಂಡಿಲ್ಲ I must be very honest ಅವರು ಹೇಳಿದ ಮಾತುಗಳು ನನಗೆ ಅರ್ಥವಾಯಿತು ಆದರೆ ನಾನು ಹೇಳುತ್ತಿರುವ Context ಬೇರೆ ಗಿರಿಜನರು ಯಾರಿದ್ದಾರೆ ಇವರು ಹೊಸದಾಗಿ ಕಾಡಿನ ಒಳಕ್ಕೆ ಹೋಗಲಿಲ್ಲ ಅವರು ಅನಾದಿಕಾಲದಿಂದಲೂ ಅಲ್ಲೇ ಇದ್ದಾರೆ, ಅವರ ಬದುಕೇ ಅದಾಗಿದೆ ಅವರ ಜಗತ್ತೇ ಅದಾಗಿದೆ ನಾವು ಎಂದೂ bother ಮಾಡಲಿಲ್ಲ ಇವತ್ತು ನಾವು ಹೊಸ ಹೊಸ ಯೋಜನೆಗಳನ್ನು, ಶಾಸನಗಳನ್ನು ರೂಪಿಸುತ್ತಿದ್ದೇವೆ ಅದನ್ನು ಅನುಷ್ಠಾನಗೊಳಿಸಬೇಕಾದರೆ ಎಲ್ಲೋ ಒಂದು ಕಡ ಬುದ್ಧಿವಂತಿಕೆಯಿಂದ ಅವರ ಮನವೊಲಿಸಿ ಗೆದ್ದುಕೊಂಡು ನೀವೂ ಬೆಳಕಿಗೆ ಬನ್ನಿ, ಮುಖ್ಯವಾಹಿನಿಗೆ ಬನ್ನಿ ಎಂದು ಹೇಳತಕ್ಕ ಪ್ರಯತ್ನ ಮಾಡುವುದನ್ನು ಬಿಟ್ಟು ನಾವು ಏಕ್ದಂ ಕೋವಿಯನ್ನು ಹಿಡಿದುಕೊಂಡು ಬರುತ್ತೀರೋ ಇಲ್ಲವೇ ಸುಡುತ್ತೇವೆ ಎಂದು ಹೋದರೆ ಅವರು ಏನು ಅಪರಾಧ ಮಾಡಿದ್ದಾರೆ? ನಕ್ಸಲೈಟ್ ಸಪೋರ್ಟ್ ಮಾಡುತ್ತಾರೆ ಅನ್ನತಕ್ಕಂಥ ಪ್ರಶ್ನೆಯಲ್ಲ That's a different area altogether We can take up on some other occasion Human rights ಪ್ರಶ್ನೆ ಇಲ್ಲಿದೆ Is it fair? You have gone into his territory, you are the trespasser, you are the source of nuisance and disturbance He has been peacefully living there for centuries and centuries ನಿಮ್ಮಲ್ಲಿ locus standi ಇಲ್ಲ All right, ರಾಷ್ಟ್ರೀಯ ಉದ್ಯಾನವನ ಮಾಡಬೇಕು, ಮಾಡಿ ಅವರನ್ನು ಕರೆದು rehabilitate ಮಾಡುತ್ತೇವೆ, ಇಂಥಿಂದದ್ದು ಇದೆ, ಎಲ್ಲೆಲ್ಲಿ ಅವರಿಗೆ ಏನೇನು ಕೊಟ್ಟಿದ್ದೀರಿ ಎಂಬುದನ್ನು ಹೇಳಬೇಕು ಸಾರ್, ಇದು ಹೀಗೆಯೇ ಬೆಳೆದುಕೊಂಡು ಹೋದರೆ, suppression is met by counter suppression ಆಂಧ್ರದಲ್ಲಾಗಲೀ, ಇಲ್ಲಾಗಲೀ, barring a few cases, ಯಡಿಯೂರಪ್ಪನವರೆ, ಎಷ್ಟು ಜನ IG ಗಳು, DIG ಗಳು, SPಗಳು ನತ್ತಿದ್ದಾರೆ ಲೆಕ್ಕ ತೆಗೆದುಕೊಳ್ಳಿ Constables ಎಷ್ಟು ಜನ ಸತ್ತಿದ್ದಾರೆ ಎಂಬುದನ್ನು ಲೆಕ್ಕ ಹಾಕಿಕೊಳ್ಳಿ ಸಾಯುವವನು ಅವನು, fieldಗೆ ಹೋಗುವವನು ಅವನು ಇವರೇನಿದ್ದರೂ ಮೇಲೆ ಕುಳಿತು Instructions

ಕೊಡುವವರು Fieldಗೆ ಹೋಗತಕ್ಕಂಥವರು ಯಾರೋ ಒಬ್ಬರೋ ಇಬ್ಬರೋ ಇರಬಹುದು ಇವರು ಜಾಣರು ಆದರೆ ಇವರಿಗೆಲ್ಲಾ ಭದ್ರತೆ, ಎಲ್ಲಾ ವಿಧವಾದಂತಹ ಪುರಸ್ಕಾರ ಸಿಗುತ್ತದೆ ಆದರೆ ಪ್ರಾಣದ ಮೇಲೆ ಆಸೆ ಬಿಟ್ಟು field ಗೆ ಹೋಗತಕ್ಕಂಥವರಿಗೆ ಯಾವ ಭದ್ರತೆಯೂ ಇಲ್ಲ ನಮ್ಮ ತಪ್ಪು ನೀತಿಗಳಿಂದಾಗಿ ಅನಾದಿ ಕಾಲದಿಂದಲೂ ಕಾಡಿನಲ್ಲಿ ಇರತಕ್ಕಂಥ ಅವರ ಜೀವ, ಪಾಪ! ಹೊಟ್ಟೆಪಾಡಿಗಾಗಿ ಉದ್ಯೋಗಕ್ಕೆ ಸೇರಿಕೊಂಡಿರತಕ್ಕಂಥ constables, ಇಬ್ಬರೂ ಒಂದೇ ವರ್ಗಕ್ಕೆ ಸೇರಿದವರು They constitute the same class I am talking about the class The Girijans and the Constables who are fighting each other, they constitute a same class ನಾವು ಒಂದೇ ವರ್ಗದ ಅವರಿಬ್ಬರಿಗೆ ಜಗಳ ಹಚ್ಚಿಬಿಟ್ಟಿದ್ದೇವೆ ಇಲ್ಲ ಅವನು ಸಾಯಬೇಕು, ಇಲ್ಲವೇ ಇವನು ಸಾಯಬೇಕು We are enjoing it this is very unfortunate Sir I think even now it is not late ಮಾನ್ಯ ಮುಖ್ಯಮಂತ್ರಿಗಳು, ಮಾನ್ಯ ಉಪ ಮುಖ್ಯಮಂತ್ರಿಗಳು, ತಾವು ಎಲ್ಲರೂ ಇದ್ದೀರಿ Apply your minds Get them for discussion Reasoning ಅನ್ನು ಅವರಿಗೆ ಹೇಳಿ ಇದೆಲ್ಲಾ ಪ್ರಯತ್ನಗಳನ್ನು ನೀವು ಮಾಡಿ ಎಲ್ಲಾ fail ಆದಾಗ ultimately ಇಲ್ಲ we are hell-bent on taking arms to our hands ಎಂದು ಅವರು ಹೇಳಿದಾಗ, ಅದು ನಿಮಗೆ ಮನವರಿಕೆ ಆದಾಗ All right, ಈ ಸಮಾಜದಲ್ಲಿ ಶಾಂತಿ ಕಾಪಾಡಬೇಕಾಗುತ್ತದೆ, Government can its option Without that ಮಾಡಿದರೆ ಬಹುಶಃ I think Sir, you will go down in history by being a Socialist, by being a Lohiait, by being an advocate of civil liberties and despite all these adjectives you carry over your head, you are also an a bettor for this crime that is being committed on these innocent people You would end up yourselves in the annals of history as an unforgettable person, for whatever it is As a friend, as a well wisher, as an admirer, I am sure you will not give way for that That is my appeal to you And about tha improvement of the living conditions of the constables, ನಾನು ಮತ್ತೆ ಮತ್ತೆ stress ಮಾಡಲಿಕ್ಕೆ ಹೋಗುವುದಿಲ್ಲ ಯಾವುದೋ ಒಂದು

ಕಾಲದಲ್ಲಿ ನಿಯಮಗಳನ್ನು ಮಾಡಿದ್ದಾರೆ ಸಾರ್, ಒಂದು UDR ಆಗುತ್ತದೆ ಎಂದಿಟ್ಟುಕೊಳ್ಳಿ ವಿಕ್ಟೋರಿಯಾ ಆಸ್ಪತ್ರೆಗೆ dead body ತಗೆದುಕೊಂಡು ಬರಬೇಕಾಗಿದ್ದರೆ, ಮಾನ್ಯ ಪ್ರಕಾಶ್‌ರವರೇ, you know the condition? ನೀವು ಹಣ ಎಷ್ಟು ಇಟ್ಟಿದ್ದೀರಿ, ಹೇಳಿ ದಯಮಾಡಿ ನಿಮ್ಮ officers ಹತ್ತಿರ ಸ್ವಲ್ಪ ಕೇಳಿ ತಿಳಿದುಕೊಂಡು ಹೇಳಿ ಆ ಚಾಪೆಯಲ್ಲಿ un-claimed body ಯನ್ನು ಸುತ್ತಿ ತೆಗೆದುಕೊಂಡು ಹೋಗುವುದಕ್ಕೆ ಎಷ್ಟು ಹಣ ಕೊಡುತ್ತಾರೆ? ಮಾನ್ಯ ಮುಖ್ಯಮಂತ್ರಿಗಳೇ, ಇವರು ಕೊಡುವ ದುಡ್ಡು ಏನೂ ಸಾಕಾಗುವುದಿಲ್ಲ City Market Inspector ಆ ದುಡ್ಡನ್ನು ವಸೂಲು ಮಾಡಲೇಬೇಕು ಅಯ್ಯೋ! ನಮಗೆ ಇದೊಂದು ದೊಡ್ಡ ಕಾಟ ಸ್ವಾಮಿ, ಚಾಪೆ ತರಿಸುವುದು, ಅದೂ ಇದೂ ಮಾಡುವುದು, ಇದೇ ದೊಡ್ಡ ಉದ್ಯೋಗವಾಗುತ್ತಿದೆ ಎಂದು ಅಲ್ಲಿದ್ದವರು ನಮಗೆ ಹೇಳುತ್ತಾರೆ ಏಕೆ ಈ ತರಹ? SP ಗಳಿಗೆ districts ಅದೆಂತದೋ ಒಂದು fund ಇಟ್ಟಿರುತ್ತಾರೆ ಅದರ ಹೆಸರು ನನಗೆ ಪೂರ್ಣವಾಗಿ ಗೊತ್ತಿಲ್ಲ I never been able to be in the Ministry ಅದಕ್ಕೆ 'ಸೀಕ್ರೆಟ್ ಫಂಡ್' ಎಂದೇನೂ ಕರೆಯುತ್ತಾರೆ I don't know ಈ Secret Funds ಏತಕ್ಕೆ? ಇದೇಕೆ ಸೀಕ್ರೆಟ್? ಈ ಹಣವನ್ನು ಎಲ್ಲಿ ಖರ್ಚು ಮಾಡುತ್ತಾರೆ? ಇದಕ್ಕೆ voucher ಕೊಡುವವರು ಯಾರು? ಲೆಕ್ಕ ಕೊಡುವವರು ಯಾರು? ಆಡಿಟ್ ಮಾಡುವವರು ಯಾರು? ಯಾರ್‍ಯಾರು ಎಷ್ಟು ಖರ್ಚು ಮಾಡುತ್ತಾರೆ? ಯಾವುದಕ್ಕೆ ಮಾಡುತ್ತಾರೆ? ನಾವೇನೂ ಅವರ ಸೀಕ್ರೆಸಿಯನ್ನು explode ಮಾಡಿ ಎಂದು ಕೇಳುತ್ತಿಲ್ಲ ನಾವೇನಾದರೂ ಅವರ ಸೀಕ್ರೆಸಿಯನ್ನು ಕೇಳುತ್ತಿದ್ದೇವೆಯೇ? ನಾವೇನೂ ಅದನ್ನು ಕೇಳುತ್ತಿಲ್ಲ ದುಡ್ಡು ಅಂದಾಜು ಎಷ್ಟು ವೆಚ್ಚವಾಗುತ್ತದೆ ಎನ್ನುವುದರ ಲೆಕ್ಕವಾದರೂ ಸಿಗಬೇಕಲ್ಲವೇ? ಈಗ ಮಾನ್ಯ ಸಭಾಧ್ಯಕ್ಷರಿಗೆ ನಾವು ಕೊಡತಕ್ಕಂಥ ಹಣವನ್ನು ಈ ಸದನದಲ್ಲಿ ಚರ್ಚೆ ಮಾಡುವಂತಿಲ್ಲ ಹಾಗೆಯೇ Governor and Judgesಗೆ ಕೊಡುವುದನ್ನು ಇಲ್ಲಿ ಪ್ರಶ್ನೆ ಮಾಡುವಂತಿಲ್ಲ ಏಕೆಂದರೆ ಸಂವಿಧಾನಬದ್ಧವಾಗಿ ಅವುಗಳು ಬಹಳ ದೊಡ್ಡ ಸ್ಥಾನಗಳು ಇವರು ಸಂವಿಧಾನದ ಪ್ರತಿನಿಧಿಗಳು, ಇವರನ್ನು ಗೌರವಿಬೇಕು ಎಂದು 'Charged' ಎಂದು ಮಾಡುತ್ತೇವೆ ಇದು ಯಾವುದು? ಇದು Charged ಆಗುತ್ತದೆಯೇ? Is it charged account? It is not Charged account

They are answerable to this House I have a right to know ಇವರು ಎಷ್ಟು ಜನ honest, ಎಷ್ಟು ಜನ dishonest ಎಂದು ಇದರಿಂದ ಇದರಲ್ಲಿ ಗೊತ್ತಾಗಿ ಬಿಡುತ್ತದೆ ಸಾಯಂಕಾಲ ನೀವು ಏನಾದರೂ dress Change ಮಾಡಿಕೊಂಡು ಮಫ್ತಿಯಲ್ಲಿ Century Club, Best Club, ಇನ್ನೊಂದು 2-3 Clubಗಳಿಗೆ ತಿರುಗಿ ಬಿಟ್ಟರೆ, ಎಲ್ಲಾ ಹಾಗೆಯೇ ಲಾಟ್ ಲಾಟಾಗಿ ನಿಮಗೆ ಸಿಗುತ್ತಾರೆ ಯಾರಿಗೆ ಈ 40 ಜನ ತಪ್ಪಿಸಿಕೊಂಡವರನ್ನು ಹಿಡಿಯಲಿಕ್ಕೆ ಆಗಲಿಲ್ಲವೋ, ಯಾರಿಗೆ ಅಲ್ಲಿ ವಿವೇಚನೆ use ಮಾಡಲಿಕ್ಕೆ ಆಗಲಿಲ್ಲವೋ, ಯಾರಿಗೆ crime ತಡೆಯಲಿಕ್ಕೆ ಆಗಲಿಲ್ಲವೋ, ಇವರೆಲ್ಲರನ್ನೂ ನೀವು ಸಾಯಂಕಾಲ ಕಾಣಬಹುದು, ಇಲ್ಲಿ ಸಿಗುತ್ತಾರೆ They are all very efficient, alert and very capable only after the Sunset ಇವರೆಲ್ಲಾ nocturnal beings Biological ಆಗಿ ನಾವು ಮಾತನಾಡುವುದಾದರೆ, Earthworm is a nocturnal being ಇವರೆಲ್ಲರೂ ಕೂಡ they work in burrows They don't work during day light Sun is an enemy to them After the sunset they become very active I appeal to your Sir, to exercise authority over these nocturnal beings and discipline the Department Dy SP ಗಳಿಗೆ ಹೊಟ್ಟೆ ಬಂದಿರುತ್ತದೆ, ಅದನ್ನು ನೋಡಲಿಕ್ಕಾ ಗುವುದಿಲ್ಲ, ತುಂಬಾ ಅಸಹ್ಯಕರವಾಗಿ ಕಾಣುತ್ತದೆ It is not that he who is ugly, it is his dress ಕನಿಷ್ಟ, ಹೊಟ್ಟೆ ಇದ್ದವನಿಗೆ, ಬೆಲ್ಟ್ ಹಾಕಿಕೊಂಡು ಈಚೆ ಬರತಕ್ಕಂಥವನಿಗೆ, ಟಮ್ಮಿ ಕಾಣಿಸಿಕೊಳ್ಳುವವನಿಗೆ executive post ಕೊಡುವುದಿಲ್ಲ, increment cut ಮಾಡುತ್ತೇವೆ, ಆಮೇಲೆ ಅವನನ್ನು serviceಯಿಂದ ತೆಗೆಯುತ್ತೇವೆ ಎಂದು ಮಾಡಿ ಎಷ್ಟು ಅಸಹ್ಯವಾಗಿ ಕಾಣುತ್ತದೆ! ಕೆಲವು ಸಲ ನೋಡಲಿಕ್ಕೇ ಆಗುವುದಿಲ್ಲ ಆಮೇಲೆ VIP's tour, ಅದೂ, ಇದೂ ಇದ್ದಾಗ, ತಾವು ಯಾವಾಗಲಾದರೂ ಬರುತ್ತೇವೆ ಎಂದು ಹೇಳಿದಾಗ, ಅವರು ಜೀಪ್ ಇಳಿಯುವುದು, ಓಡುವುದನ್ನು ನೋಡಲಿಕ್ಕಾಗುವುದಿಲ್ಲ ಅವರಿಗೆ ಓಡುವುದಕ್ಕೇ ಆಗುವುದಿಲ್ಲ, ಹೊಟ್ಟೆ ಒಂದು ಕಡೆಗೆ ಇರುತ್ತದೆ, ನೀವು ಮುಂದಕ್ಕೆ ಹೋಗುತ್ತಿರುತ್ತೀರಿ, ಜನ ಬರುತ್ತಿರುತ್ತಾರೆ, ಇದೆಲ್ಲಾ ತಮಾಷೆಗಾಗಿ ಕಾಣುತ್ತದೆ

ಶ್ರೀ ವಾಟಾಳ್ ನಾಗರಾಜ್ ರಾಜಕಾರಣಿಗಳ ಹೊಟ್ಟೆ ದಪ್ಪ ಇರುವುದಿಲ್ಲವೇ? ಅದನ್ನು ಅವರು ಇಳಿಸಿದರೆ ಚೆನ್ನಾಗಿ ಕಾಣುತ್ತಾರೆ ತಾವು ಅದರ ಬಗ್ಗೆಯೂ ಹೇಳಬೇಕು

ಶ್ರೀ ಕೆ ಆರ್ ರಮೇಶ್‌ಕುಮಾರ್ ಇವರಿಗೆ ಮನೆಯಲ್ಲಿ ಅನಾನುಕೂಲ 24 ಗಂಟೆಯೂ ವಾಕಿಂಗ್ ಮಾಡಿಕೊಂಡು ಸ್ವಲ್ಪ ಟ್ರಿಮ್ ಆಗಿದ್ದಾರೆ ನಮಗೆ ಬೇರೆ ಕೆಲಸಗಳಿರುತ್ತವೆ ಆದ್ದರಿಂದ ನಮಗೆ ಅಷ್ಟೋ ಇಷ್ಟೋ ಹೊಟ್ಟೆ ಬಂದಿದೆ ನಮಗ್ಯಾಕೆ ತೊಂದರೆ ಮಾತಲಿಕ್ಕೆ ಹೋಗುತ್ತೀರಿ? ಇವರಿಗೆ ಹೊಟ್ಟೆ ಇಲ್ಲವೆಂಬ ಕಾರಣಕ್ಕಾಗಿ ಇದನ್ನು ಪ್ರಸ್ತಾಪಿಸಿದ್ದಾರೆ ಒಂದು ವೇಳೆ ಇವರಿಗೆ ಹೊಟ್ಟೆ ಬಂದು ಬಿಟ್ಟರೆ ಹೇಗೆ?

ಶ್ರೀ ವಾಟಾಳ್ ನಾಗರಾಜ್ ಒಂದು ವೇಳೆ ಹೊಟ್ಟೆ ಬರುವುದಾಗಿದ್ದರೆ, ಅದು ನಮಗಲ್ಲ ಸುಮ್ಮನೆ ಏಕೆ ಆ ರೀತಿ ಹೇಳುತ್ತೀರಿ?

ಶ್ರೀ ಕೆ ಆರ್ ರಮೇಶ್‌ಕುಮಾರ್ ಇದರಲ್ಲೆಲ್ಲಾ, ನಾನು. ಮುಖ್ಯ ಮಂತ್ರಿಗಳು ಮತ್ತು ಸುಮಾರು ಜನ ಬೇರೆ ಗುಂಪಿನವರಿದ್ದೇವೆ ನಿಮ್ಮ ಹಾಗೆ ಬದುಕಲಿಕ್ಕೆ ನಮಗೆ ಈ ಜನ್ಮದಲ್ಲಿ ಸಾಧ್ಯವಿಲ್ಲ ಹಾಗೆ ಬದುಕುವುದಾದರೆ ಏಕೆ ಬದುಕಬೇಕು? ನಿಮ್ಮ ತರಕ ಬದುಕುವುದಾದರೆ, ನನಗೆ ಬದುಕೇ ಬೇಡ

ಶ್ರೀ ವಾಟಾಳ್ ನಾಗರಾಜ್ ಮಾನ್ಯ ಮುಖ್ಯಮಂತ್ರಿಗಳು ಗಂಭೀರವಾಗಿ ಕುಳಿತಿದ್ದಾರೆ ಅವರನ್ನು ಏಕೆ ಎಳೆಯುತ್ತಿದ್ದೀರಿ? ಅವರು ಮತ್ತು ನಾವೆಲ್ಲಾ ಒಂದೇ ಗುಂಪಿನವರು ಎಂದು ಹೇಗೆ ಹೇಳುತ್ತಿದ್ದೀರಿ? ನೀವು ಆ ರೀತಿ ಹೇಳಲಿಕ್ಕೆ ಸಾಧ್ಯವಿಲ್ಲ

ಶ್ರೀ ಕೆ ಆರ್ ರಮೇಶ್‌ಕುಮಾರ್ ಈಗ ಅವರು ಮಾತನಾಡುವಾಗ ನಾವು ಮತ್ತು ಕುಮಾರಸ್ವಾಮಿಯವರು ಒಂದೇ ಗುಂಪು ಎಂದು ಹೇಳುವುದಕ್ಕಾಗುತ್ತದೆಯೇ? ನಾನು ಗೌರವಯುತವಾಗಿ ನನ್ನನ್ನು ಅವರ ದರ್ಜೆಗೆ ಏರಿಸಿಕೊಂಡಿದ್ದೇನೆ, ಅವರು ಇಲ್ಲವೆಂದು ಹೇಳುವುದಕ್ಕಾಗುವುದಿಲ್ಲ ಪೇಪರ್‌ನಲ್ಲಿ ಈ ಬಗ್ಗೆ ಬರೆದರೆ, 'ನೋಡಯ್ಯ, ನಾನು ಮತ್ತು Chief Minister equal' ಎಂದು ಊರಿನಲ್ಲಿ ಹೇಳಿಕೊಳ್ಳುವಂತಹ ಒಂದು ಸಣ್ಣ ಪ್ರಯತ್ನವನ್ನು ನಾನು ಮಾಡಿದರೆ, ನೀವು ಅದಕ್ಕೂ ಕಲ್ಲು ಹಾಕುವುದೇ? ಇವರು ಎಂತಹ ಜನ ನೋಡಿ?

ಶ್ರೀ ವಾಟಾಳ್ ನಾಗರಾಜ್ ಮಾನ್ಯ ಉಪಾಧ್ಯಕ್ಷರೆ,

ಉಪಾಧ್ಯಕ್ಷರು ಮಾನ್ಯ ನಾಗರಾಜ್‌ರವರೆ, ಅವರು ಮುಗಿಸಿಬಿಡಲಿ

ಶ್ರೀ ವಾಟಾಳ್ ನಾಗರಾಜ್ ಒಂದು ನಿಮಿಷ ತಾವು ಸ್ವಲ್ಪ ರಸವತ್ತಾಗಿರುವುದನ್ನು ಕೇಳಬೇಕು ಒಂದೇ ತರಹ ಕುಳಿತುಕೊಂಡು ಬಿಟ್ಟರೆ ನಿಮ್ಮ ಗತಿಯೇನು? ಈಗ ಹೊಟ್ಟೆ ಪ್ರಶ್ನೆ ಬಂದಾಗ, ರಾಜಕಾರಣಿಗಳು, ಅಧಿಕಾರಿಗಳು ಎಲ್ಲರೂ ಒಂದೇ ಬರೇ ಪೊಲೀಸ್‌ನವರ ಬಗ್ಗೆಯೇ ಹೇಳುವುದು ಬೇಡ ರಾಜ್ಯದಲ್ಲಿರುವ ಬೇರೆ ಬೇರೆ ಅಧಿಕಾರಿಗಳಿಗೂ ಹೊಟ್ಟೆ ಇದೆ ಹೊಟ್ಟೆ ಬರದಂತೆ ವ್ಯಾಯಾಮ ಮಾಡಿ ಯಾವ ರೀತಿಯಾಗಿ ಆರೋಗ್ಯವನ್ನು ಕಾಪಾಡಿಕೊಳ್ಳಬೇಕು? ಬೆಳಿಗ್ಗೆ ಎದ್ದು ನಾವು ಏನು ಕೆಲಸವನ್ನು ಮಾಡಬೇಕು? ರಾತ್ರಿ ಏನು ಕೆಲಸ ಮಾಬೇಕು? ಎಂಬುದನ್ನೆಲ್ಲಾ ನೀವು ಹೇಳುವುದು ಬೇಡವೇ? ಅದೆಲ್ಲವನ್ನೂ ಬಿಟ್ಟು ಇನ್ನೇನನ್ನೋ ನೀವು ಹೇಳುವುದಕ್ಕೆ ಹೊರಟರೆ ಹೇಗೆ?

ಶ್ರೀ ಕೆ ಆರ್ ರಮೇಶ್ ಕುಮಾರ್ ಮಾನ್ಯ ಅಧ್ಯಕ್ಷರೇ, ಎಷ್ಟು ಟೈಮ್ ಕೊಡುತ್ತೀರಿ, ಇಷ್ಟನ್ನು Home Department ಬಗ್ಗೆ ಹೇಳಿ ಒಂದೇ ಒಂದು ರೆಫರೆನ್ಸ್ ನನ್ನ ಕ್ಷೇತ್ರಕ್ಕೆ ಸೀಮಿತವಾಗಿ ಹೇಳಬಯಸುತ್ತೇನೆ ಏಕೆಂದರೆ ಈ ವೇದಿಕೆಯನ್ನು ದುರ್ಬಳಕೆ ಮಾಡಿಕೊಂಡ ಹಾಗಾಗುತ್ತದೆ ಮೂರು ಘಟನೆಗಳನ್ನು ನಾನು ಇಲ್ಲಿ ಪ್ರಸ್ತಾಪ ಮಾಡಿದ್ದೇನೆ ಮೂರು ಘಟನೆಗಳಲ್ಲಿ ನೊಂದಂತಹವರು ದಲಿತ ವರ್ಗದವರಿಗೆ ಸೇರಿದವರು ಎರಡು ಕೇಸ್‌ನಲ್ಲಿ ಅವರು ಮೃತ ಪಟ್ಟಿದ್ದಾರೆ ತಂದೆ, ತಾಯಿ, ಹೆಂಡತಿ, ರಕ್ತ ಹಂಚಿಕೊಂಡವರು ಘಟನೆ ನಡೆದಾಗ ಸ್ಥಳದಲ್ಲಿದ್ದರು, ಇಂತಿಂಥಹವರು ಮಾಡಿದರೆಂದು ಕೋರ್ಟ್‌ಗೆ FIR ಕೂಡ ಹೋಗಿತ್ತು ನಿಮ್ಮ ಅಧಿಕಾರಿಗಳು ಇವರ ಹತ್ತಿರ ಹೇಳಿಕೆಗಳನ್ನು ಬರೆಸಿಕೊಂಡು ಅದನ್ನು ತೆಗೆದು Charge Sheetನಲ್ಲಿ ಬೇರೆ ಬರೆಸಿಕೊಂಡು ಯಾರು ನಿಜವಾದ ಅಪರಾಧಿಗಳಿದ್ದಾರೆ ಅವರು ವಿರಾಜಮಾನರಾಗಿ ಬೀದಿಯಲ್ಲಿ ಓಡಾಡುತ್ತಿದ್ದಾರೆ ಇವರು ಮನೆಗಳಲ್ಲಿ ಗೋಳಾಡುತ್ತಿದ್ದಾರೆ ನಮಗೆ ಮ್ಯಾಜಿಸ್ಟ್ರೇಟ್ ಹತ್ತಿರ ಅಪೀಲು ಮಾಡಿಕೊಳ್ಳುವುದು ಮಾಡುತ್ತೇವೆ ಸರ್ಕಾರಕ್ಕೆ ಒಂದು ಸಲಹೆ ನಿಮಗೆ ಮನಸ್ಸಿದ್ದರೆ ಇವುಗಳನ್ನೆಲ್ಲ ತರಿಸಿ ಪುನರ್ ವಿಮರ್ಶೆ ಮಾಡುತ್ತೇವಂದು ನೀವು ಭರವಸೆ ಕೊಟ್ಟರೆ, ಸಾಕ್ಷ್ಯಾಧಾರಗಳನ್ನು ನಾನು ಒದಗಿಸಿಕೊಡುತ್ತೇನೆ ಇಲ್ಲ, we are not bothered, they have already penalized ಎಂದು ಹೇಳಿದರೆ ಲೀಗಲ್ ಆಗಿ ನಾನು ಏನು ಮಾಡಬೇಕೋ ಮಾಡಿಕೊಳ್ಳುತ್ತೇನೆ ಆದರೆ ನಾವೆಲ್ಲರೂ ಕೂಡ ಒಂದು ಜವಾಬ್ದಾರಿ ಸ್ಥಾನದಲ್ಲಿ ಇದ್ದಾಗ ಒಂದು

ಹೆಣ್ಣುಮಗಳು ಬಂದು. ನನ್ನ ಗಂಡನಿಗೆ ನನ್ನ ಕಣ್ಣು ಎದುರಿಗೆ ಕೊಂದು ಹಾಕಿದರು ಇಂತಿಂಥವರೇ ಎಂದು ಹೇಳಿ, ಹೆತ್ತವರು ನನ್ನ ಮಗು ಹೀಗಾಯಿತು ಎಂದು ಹೇಳಿ, ಜನ್ಮ ಕೊಟ್ಟ ತಂದೆ ಬಂದು ಹೇಳಿ, ಸ್ಥಳದಲ್ಲಿ ಇದ್ದವರು ಅವರ ಹೇಳಿಕೆಗಳನ್ನು ದಿಕ್ಕರಿಸಿ ಕೆಲಸ ಮಾದುವ ಅಧಿಕಾರಿಗಳನ್ನು ನೀವು ರಕ್ಷಣೆ ಮಾಡುತ್ತೀರಿ ಎಂದರೆ, ನಿಮಗೆ ಮತ್ತು ನಿಮ್ಮ ಕುಟುಂಬಕ್ಕೆ ದೇವರು ಒಳ್ಳೆಯದು ಮಾಡಲಿ ಎಂದು ಅಷ್ಟೇ ಹೇಳುತ್ತೇನೆ ನಮ್ಮ ಗೋಳು ನಮಗೆ ಇರಲಿ ಅಧಿಕಾರ ಏನೂ ಶಾಶ್ವತ ಅಲ್ಲ, ಆದರೆ ಮನಸ್ಸನ್ನು ನೀವು ಸಾರ್ಥಕವಾಗಿ ಈ ವಿಚಾರದಲ್ಲಿ ಬಳಸಬೇಕು ನಿಮ್ಮ ಇಡೀ ಇಲಾಖೆ, Sir, right from the office of the Home Commissioner, the whole thing is dead They are not alive at all They don't respond to any petition They can't even think If such things happen in their house, how would they react? Will they keep quiet? ಅಧಿಕಾರ ಇವತ್ತು ಬರುತ್ತದೆ, ನಾಳೆ ಹೋಗುತ್ತದೆ This is not right And I don't blame any of you personnel ತಾವು ಇದನ್ನು ಮಾಡಿಸಿದಿರಿ ಎಂದು ನಾನು ಆಪಾದನೆ ಮಾಡುವುದಿಲ್ಲ ನಿಮ್ಮ ಬೆನ್ನು ಹಿಂದೆ ಈ ರೀತಿ ನಡೆಯುತ್ತಿರುತ್ತವೆ ನಿಮ್ಮ ಗಮನಕ್ಕೆ ತೆಗೆದುಕೊಂಡು ಬಂದಾಗ ನೀವು ಕ್ರಮ ತೆಗೆದುಕೊಳ್ಳಬೇಕು ಇದನ್ನು ನಿಮ್ಮ ವಿವೇಚನೆಗೆ ಬಿಡುತ್ತೇನೆ I will stop there I will not proceed further

Sir, ಇನ್ನು Agriculture Department ಮಾನ್ಯ ಬಂಡೆಪ್ಪನವರೇ ನಿಮ್ಮ ಕೃಷಿ ಇಲಾಖೆ ಏಕೆ ಇದೆ ಎಂದು ನಮಗೆ ಗೊತ್ತಾಗುತ್ತಿಲ್ಲ ನಿಮ್ಮ Director, Joint Director, Assistant Director ಇವರೆಲ್ಲಾ ಇದ್ದಾರಲ್ಲಾ ಇವರ ಕೆಲಸವೇನು? ನಾನು ರೈತ ನನ್ನ ಬದುಕಿಗೆ, ನನ್ನ ಜೀವನಕ್ಕೆ ನಮ್ಮ ಹೆಸರಿನಲ್ಲಿ ಇವರು ಇರುವುದಕ್ಕೆ ಏನು ಸಂಬಂಧ? Agriculture University ಬೇರೆ ನನ್ನ ಬೆಳೆ ಹೆಚ್ಚು ಸಟ್ಟು ಉತ್ಪಾದನೆ ಮಾಡಲಿಕ್ಕೆ ನಿಮ್ಮ ಇಲಾಖೆಯಿಂದ ಸಹಾಯ ಏನಾದರೂ ಇದೆಯಾ? ಬರತಕ್ಕಂತಹ ಖಾಯಿಲೆಗಳಿಗೆ ನಿಮ್ಮ ಬಳಿ ಔಷಧಿ ಏನಾದರೂ ಇದೆಯಾ? ಬಿತ್ತನೆ ಬೀಜದ ತಳಿ ಸುಧಾರಿಸುವುದಕ್ಕೆ ನಿಮ್ಮ ಹತ್ತಿರ ಏನಾದರೂ ಉತ್ತರ ಇದೆಯಾ? ಗೊಬ್ಬರ ಸಿಗುತ್ತಾ? Waste land development ಹೇಗೆ ಮಾಡಬೇಕೆಂದು

ಉತ್ತರ ಹೇಳುತ್ತೀರಾ? Recharging of underground water ಹೇಗೆ ಆಗಬೇಕೆಂದು ನಿಮ್ಮ ಬಳಿ ಏನಾದರೂ ಉತ್ತರ ಇದೆಯಾ? Director, Additional Director, Chief Director, Deputy Chief Director, Super Director, less Super Director, more Super Director, ಏಕೆ ಬಾಯಿ ಬಡಿದುಕೊಳ್ಳುವುದಕ್ಕೆ? ಕಡೇ ಪಕ್ಷ ನಮ್ಮ ಜಮೀನುಗಳಿಗೆ fencing ಹಾಕತಕ್ಕಂತಹ ಒಂದು ಕತ್ತಾಳೆ ತಳಿ ಅನ್ನು ನಿಮ್ಮವರ ಕೈಯಿಂದ ಸುಧಾರಣೆ ಮಾಡಿಸುವುದಕ್ಕೆ ಸಾಧ್ಯವಾಗಲಿಲ್ಲ ನಾವು ಅದೇ ಕತ್ತಾಳೆ fencing ಹಾಕಿಕೊಳ್ಳಬೇಕು, ಇಲ್ಲದಿದ್ದರೆ ಬಾರ್ ಇರುವ iron fencing ಹಾಕಿಕೊಳ್ಳಬೇಕು ನಿಮ್ಮ ಇಲಾಖೆಯಿಂದ ನಮಗೆ ಏನು ಪ್ರಯೋಜನ ಇದೆ? ಇವರೇನಾದರೂ ಮಾರುಕಟ್ಟೆ ಸುಧಾರಿಸಿದ ಸ್ಥಿತಿಯಲ್ಲಿದ್ದಾರಾ? ಅಥವಾ ಮಾರುಕಟ್ಟೆ ಹೀಗಿದೆ ಹೊಸ ಹೊಸ ತಳಿಗಳು ಬಂದಿವೆ ಹೀಗೆ ಮಾಡಿ ಎಂದು ಹೇಳುವ ಸ್ಥಿತಿಯಲ್ಲಿದ್ದರಾ? ಇಷ್ಟು ದೊಡ್ಡ ಇಲಾಖೆ ಇಟ್ಟಿದ್ದಾರೆ, ನನಗೇನನ್ನಿಸುತ್ತದೆ ಎಂದರೆ, ಈ ಇಲಾಖೆಯನ್ನು wind up ಮಾಡಿ ಬಿಡುವುದು ಒಳ್ಳೆಯದು ಯಾರೋ ಕೆಲವರನ್ನು ಮಾತ್ರ ಇಟ್ಟುಕೊಳ್ಳತಕ್ಕಂಥಾದ್ದು ಆ ಹಣವನ್ನು ಬೇರೆ ಯಾವುದಾದರೂ ರೀತಿಯಲ್ಲಿ ಸದ್ವಿನಿಯೋಗ ಮಾಡಿ ಇವರ ಯೂನಿವರ್ಸಿಟಿ ಇದೆ ಏನು ಮಾಡುವುದು ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳ, ನಾವು ಬಾಯಿ ಬಡಿದುಕೊಳ್ಳುವುದಕ್ಕೆ ನಮಗೆ ಎರಡೆರಡೇ ಕೈಗಳಿರುವುದು ನಾವು ಬಾಡಿಗೆಗೆ ಒಂದು ಡಜನ್ ಕೈ ತೆಗೆದುಕೊಂಡು ಬಾಯಿ ಬಡಿದುಕೊಳ್ಳಬೇಕು ಸಾಲದ್ದಕ್ಕೆ ಹಾರ್ಟಿಕಲ್ಚರ್ ಯೂನಿವರ್ಸಿಟಿ ಬೇರೆ ಮಾಡುತ್ತಿದ್ದಾರೆ ಮಾಡಿ ಹಾರ್ಟಿಕಲ್ಚರ್‌ಗೆ ಒಂದು ಯೂನಿವರ್ಸಿಟಿ ಮಾಡಿ, ಹಾರ್ಟಿಕಲ್ಚರ್‌ನಲ್ಲಿ ನಿಂಬೆ ಹಣ್ಣು ಜಾಸ್ತಿ ಬರುತ್ತದೆ, ನಿಂಬೆ ಹಣ್ಣಿಗೆ ಒಂದು ಯೂನಿವರ್ಸಿಟಿ, ಕೊತ್ತಂಬರಿಗೆ ಒಂದು ಯೂನಿವರ್ಸಿಟಿ ಸೌತೆಕಾಯಿಗೆ ಒಂದು ಯೂನಿವರ್ಸಿಟಿ, ಬೆಂಡೇಕಾಯಿಗೆ ಒಂದು ಯೂನಿವರ್ಸಿಟಿ ಮಾಡಿ ಏಕೆಂದರೆ, You can appoint all your henchmen or Vice Chancellor Agriculture as comprehensive subject, included Sericultute, Co-opoeration, Horticulture, Animal Husbandry, Forestry, Fisheries, ಇವೆಲ್ಲವೂ ಸೇರಿ Comprehensive ಆಗಿ Agriculture ಇದು ನಿಮಗೆ ಬೇಕಲ್ಲವಾ? Have more number of Agriculture Universities ಯಾರು ಬೇಡವೆಂದರು? ಬಾಗಲಕೋಟೆ–

ಯಲ್ಲಿಯೇ ಮಾಡಿ ನಮ್ಮದೇನೂ ಆಕ್ಷೇಪಣೆ ಇಲ್ಲ Call it Agriculture University Why do you call it Horticulture University? Horticulture University? ಮಾಡಿ ಇವರು ಏನು ಮಾಡುತ್ತಾರೆ? Horticulture College ಮಾಡಿದ್ದೀರಿ Admissions ಇಲ್ಲ ನನ್ನ ಕ್ಷೇತ್ರದ ಪಕ್ಕದಲ್ಲಿ ಚಿಂತಾಮಣಿಯಲ್ಲಿ Sericulture College ಮಾಡಿದ್ದೀರಿ Staff ಇಲ್ಲ ಮೂಡಿಗೆರೆಗೆ ಹೋಗಿ Horticulture College ಏನಾಗಿದೆ ಎಂದು ನೋಡಿಕೊಂಡು ಬನ್ನಿ ನಿಮಗೆ ಅಧಿಕಾರ ಸಿಕ್ಕಿದೆ, ನಿಮ್ಮ ಮಾತು ನಡೆಯಬೇಕು, ನಿಮ್ಮ ಮನೆಯವರು ಯಾರೋ ಒಬ್ಬರು ವೈಸ್ ಛಾನ್ಸಲರ್ ಆಗಬೇಕು, ಅದಕ್ಕೆ ಒಂದು ಯೂನಿವರ್ಸಿಟಿ ಮಾಡಿಕೊಳ್ಳುತ್ತೀರಾ? ಏನು ಇವರದು ಸಾಧನೆ? ಈ ಯೂನಿವರ್ಸಿಟಿಗಳೆಲ್ಲಾ ಸೇರಿ ಏನು ಸಾಧನೆ ಮಾಡಿದ್ದಾರೆ? ಎಷ್ಟು ದುಃಖ ಆಗುತ್ತದೆ ಅಧ್ಯಕ್ಷರೆ, ಬಹುತೇಕ ಜನ ಈ ರಾಜ್ಯದಲ್ಲಿ ವಾಸ ಮಾಡತಕ್ಕಂತಹವರು, ನಮ್ಮನ್ನು ಈ ಸದನಕ್ಕೆ ಕಳುಹಿಸತಕ್ಕಂತಹವರು, ರೈತಾಪಿ ಜನ ಅವರ ಬದುಕಿಗೆ ನಿಕಟವಾದ ಸಂಪರ್ಕ ಇರುವಂತಹ ಈ ಎಲ್ಲಾ ಇಲಾಖೆಗಳು ಈ ಇಲಾಖೆಗಳ ಒಂದೊಂದು ಪರಿಸ್ಥಿತಿಯನ್ನು ನಾವು ತೆಗೆದುಕೊಂಡಾಗ ಕರ್ಮ ಎಂದು ಹೇಳಬೇಕು ನನಗೆ ಕರ್ಮ, ಫಿಲಾಸಫಿಯಲ್ಲಿ ನಂಬಿಕೆ ಇಲ್ಲದೇ ಹೋದರೂ ಕೂಡ Fisheries inland fisheries improve ಮಾಡುವುದಕ್ಕೆ ಏನೇನು ಮಾಡಿದ್ದೀರಿ? ಅದೇ ರಾಹು, ಅದೇ ಕಟ್ಲ, ಅದೇ ಕಾಮನ್ ಕಾರ್, ನಾಲ್ಕನೇ variety ಇವತ್ತಿಗೂ ಬರಲಿಲ್ಲ ರಾಹು, ಕಟ್ಲ ಮತ್ತು ಕಾಮನ್ ಕಾರ್ ಬಿಟ್ಟು ನಾಲ್ಕನೇ ವೆರೈಟಿ ಇವರು ಇವತ್ತಿನವರೆಗೂ ಮಾಡಲಿಲ್ಲ ಸಮುದ್ರದಲ್ಲಿ ನೀವು fish ಬೆಳೆಸಬೇಕಾಗಿಲ್ಲ

ಶ್ರೀ ಜಯಪ್ರಕಾಶ್ ಹೆಗ್ಡೆ ಕೆ ಮಾನ್ಯ ರಮೇಶ್‌ಕುಮಾರ್‌ರವರೇ ಮೊದಲು, Seed production ರಾಜ್ಯದಲ್ಲಿ ಜಾಸ್ತಿಯಾಗುತ್ತಿತ್ತು ಇವತ್ತು ಇಲ್ಲ ಆಂಧ್ರದಿಂದ ತಂದು ಇಲ್ಲಿಯದು ಎಂದು ಮಾರಾಟ ಮಾಡುತ್ತಾರೆ Hatcheries ಎಲ್ಲಾ close ಆಗಿದೆ ಹೆಚ್ಚಿನ Hatcheries close ಆಗಿದೆ ಮೈಸೂರಿನ Fedaration ಕೂಡ close ಆಗುತ್ತದೆ ಎಂದು ಕಾಣುತ್ತದೆ ಅದು ಏನಾದರೂ improve ಮಾಡುವುದಕ್ಕಾಗುತ್ತದಾ? Federation ಗಳೆ ಈಗ close ಆಗುತ್ತಿವೆ

ಶ್ರೀ ಆರ್ ಶ್ರೀನಿವಾಸ್ ನೀವು ಹೇಳಿದರೆ ಪರವಾಗಿಲ್ಲ ಮಾನ್ಯ ರಮೇಶ್ ಕುಮಾರ್‌ರವರಿಗೆ ಇದರ ಜಾತಿ ಬಗ್ಗೆ ಹೇಗೆ ಗೊತ್ತಾಗಿದೆ ಎಂದು ವಿವರ ಹೇಳಬೇಕು

ಶ್ರೀ ಕೆ ಆರ್ ರಮೇಶ್‌ಕುಮಾರ್ ಮಾನ್ಯ ಅಧ್ಯಕ್ಷರೆ, ಇವರು ಶುದ್ಧ vegetarian ನಾನು ಎಲ್ಲವನ್ನು ಕ್ಲೀನಾಗಿ ಭಕ್ಷ್ಯ ಮಾಡುತ್ತೇನೆ ಮೀನು, ಹಂದಿ, ಕೋಳಿ ಮತ್ತು ಮೇಕೆ ತಿನ್ನುತ್ತೇನೆ ದನ ಒಂದು ತಿನ್ನುವುದಿಲ್ಲ, ನಿಮ್ಮನ್ನು ತಿನ್ನುವುದಿಲ್ಲ ನಾನು ನನ್ನ ತೋಟದಲ್ಲಿ ಮೀನು ಬೆಳೆಸುತ್ತಿದ್ದೇನೆ Fisheries Departmentಗೆ ಜೀಪುಗಳು ವ್ಯಾನುಗಳು, ಫೋನ್‌ಗಳು, ಏಕೆ ಇವೆಲ್ಲಾ? ಮೂಡಿಗೆರೆ ಕಾಲೇಜು ಖಾಲಿ ಮಂಗಳೂರು ಕಾಲೇಜು ಖಾಲಿ, ಬೆಂಗಳೂರಿನಿಂದ ಹೋದವರೆಲ್ಲಾ ವಾಪಸ್ ಬೆಂಗಳೂರಿಗೆ ಪೋಸ್ಟಿಂಗ್ಸ್ ಮಾಡಿಸಿಕೊಂಡು ಬರುತ್ತಾರೆ Animal Husbandry Department, Veterinary Department, ಏಕೆ ಬೇಕು? ಮಾನ್ಯ ರೇವು ನಾಯಕ್‌ರವರು ಕಾಣುತ್ತಿಲ್ಲ ಒಳ್ಳೆಯ ಮನುಷ್ಯ Compliment ಮಾಡಬೇಕು ಪಾಪ ಅಂತಹವರಿಗೆ ಕರೆದುಕೊಂಡು ಬಂದು cabinet ಮಂತ್ರಿ ಮಾಡಿದ್ದೀರಿ ನಿಜವಾಗಿಯೂ ಇದೆಲ್ಲಾ ಮೆಚ್ಚುವಂತಹ ವಿಚಾರಗಳು ಅವರಿಗೆ ತಾಕತ್ತು ಕೊಡುವುದು ಬೇಡವಾ? ಮಂತ್ರಿ ಮಾಡಿ ಹಾಗೇ ಕೂರಿಸಿ ಬಿಟ್ಟಿದ್ದೀರಿ ಒಂದು mechanized slaughter house ಮಾಡಿದ್ದಾರಾ ಇವರು? ಇವರ ಬಜೆಟ್‌ನಲ್ಲಿ ಇದೆಯಾ? Mechanized slaughter house ನೀವು ಮಾಡದೇ ಹೋದರೆ, ನಾನು ಹಂದಿ ಸಾಕುತ್ತೇನೆ, ಯಾರಿಗೆ ಲಾಸ್? Deviate ಮಾಡಿದರೆ, I am put to loss as a farmer ರಂಜಾನ್ ಹಬ್ಬ ಮತ್ತು ಕ್ರಿಸ್‌ಮಸ್ ಇವೆಲ್ಲಾ ಒಟ್ಟಿಗೆ ಬರುತ್ತವೆ ಲಾಟ್ ಲಾಟ್ ಕುರಿ ಮಾರುತ್ತೇವೆ ಆವಾಗಲೇ ಜಾಸ್ತಿ ಡಿಮಾಂಡ್ ಬರತಕ್ಕಂಥಾದ್ದು ಯಾರು ರೈತ ಇವುಗಳನ್ನು ಸಾಕುತ್ತಾನೆ ಅವನು ನಾಲ್ಕು ಕಾಸು ಮಾಡಿಕೊಳ್ಳುವುದಕ್ಕೆ ಅದೇ ಸೀಸನ್ ನಮಗೆ mechanized slaughter house ಇದ್ದರೆ ಒರುವ ಲಾಭಕ್ಕೂ, ಇವತ್ತು mechanized slaughter house ಇಲ್ಲದೇ ಇರುವುದರಿಂದ contractor ಯಾರು ಬರುತ್ತಾನೆ ಅವನಿಗೆ ಮಾರಬೇಕು ನಾವು ಇದರ ಜೊತೆಗೆ ಕುರಿಗೆ ಇನ್ಶ್ಯುರೆನ್ಸ್ ಇಲ್ಲ ಇವರ ಹತ್ತಿರ ವ್ಯಾಕ್ಸಿನ್ಸ್ ಇಲ್ಲ ಹಾಸ್ಪೆಟಲ್ ಅಂತೂ ಕೇಳಲೇ ಬೇಡಿ, ಇವರ livestock inspector ಏನೂ

ಗೊತ್ತಿಲ್ಲ ಪಶು ಸಂಪತ್ತು, ಇಲ್ಲ ಈಗ ಬದುಕುವುದಕ್ಕೆ ನಾವು ಕೋಲಾರದವರು ಇನ್ನು ಏನು ಮಾಡುವಂತಿದ್ದೇವೆ? ಯಾವ ನದಿ ಇಲ್ಲ, ಯಾವ ಅಣೆಕಟ್ಟಿಲ್ಲ, ಆ ಮೈನ್ಸ್ ಮುಚ್ಚಿಹೋಗಿದೆ, ಮಳೆ ಆಗುವುದಿಲ್ಲ, ಇರುವವನು, ಇಲ್ಲದೇ ಇರುವವನು ನಾಲ್ಕು ದನಗಳನ್ನು ಸಾಕಿಕೊಳ್ಳಬೇಕು, ಹಾಲು ತೆಗೆದುಕೊಂಡು ಹೋಗಿ ಡೈರಿಗೆ ಹಾಕಬೇಕು, ಆ ಹಾಲು ಉತ್ಪಾದನೆ ಜಾಸ್ತಿಯಾಗಿಬಿಟ್ಟರೆ ಹಾಲಿಡೆ ಎಂದು ಡಿಕ್ಲೇರ್ ಮಾಡಿಬಿಡುತ್ತಾರೆ ಒಂದಾದರೂ ಮಿಲ್ಕ್ ಬೈ ಪ್ರಾಡಕ್ಟ್ಸ್ ಮ್ಯಾನುಫ್ಯಾಕ್ಚರ್ ಮಾಡತಕ್ಕಂಥ ಫ್ಯಾಕ್ಟರಿಯನ್ನಾದರೂ ಆ ಭಾಗದಲ್ಲಿ ಹಾಕಿದ್ದೀರಾ ನೀವು? ಪಕ್ಕದಲ್ಲಿ ಕೆ.ಎಂ.ಎಫ್ ಅಧ್ಯಕ್ಷರಾಗಿದ್ದಂದವರು ಇದ್ದಾರೆ ಈಗೇನು ನಮ್ಮ ಕಡೆ ಆಗಿದೆಯೆಂದರೆ, ತಾವು ಮುಖ್ಯಮಂತ್ರಿಗಳು, ತಮ್ಮ ಗಮನಕ್ಕೆ ತರುತ್ತಿದ್ದೇನೆ, ಈಗ ಹಳ್ಳಿಗಳಲ್ಲಿ ಹಾಲು ಉತ್ಪಾದಕರ ಸಹಕಾರ ಸಂಘಗಳಲ್ಲಿ ಅಲ್ಲಲ್ಲೇ ಜಗಳ ಬರುತ್ತದೆ ಈ ಸೆಕ್ರೆಟರಿ ದುಡ್ಡು ತಿಂದುಬಿಡುತ್ತಾನೆ ಇವನನ್ನು ಸೆಕ್ರೆಟರಿ ಕೆಲಸ ಬಿಡು ಎಂದರೆ, ಅವನೇನು ಮಾಡುತ್ತಾನೆಂದರೆ ಇವರ ಮೇಲೆ revolt ಮಾಡಿ ಅವನು ಹೊರಗೆ ಹೋಗುವಾಗ ಅವನು ಇನ್ನೊಂದು ಪ್ರೈವೇಟ್ ಸೊಸೈಟಿ ತೆಗೆಯುತ್ತಾನೆ ಅವನ ಪ್ರೈವೇಟ್ ಸೊಸೈಟಿಯಲ್ಲಿ ಯಾರು ಹಾಲು ತೆಗೆದುಕೊಳ್ಳುವವರು ಎಂದರೆ ಪಕ್ಕದ ಆಂಧ್ರದವರು ಇವನಿಗೆ, ನೀನು ದುಡ್ಡು ತಿನ್ನಬೇಡ, ನಿನ್ನ ಮೇಲೆ ಕ್ರಮ ಜರುಗಿಸುತ್ತೇವೆ ಎಂದರೆ ಇವನು ಸೊಸೈಟಿ ಬಿಟ್ಟುಹೋಗುತ್ತಾನೆ ಇಲ್ಲದೇ ಹೋದರೆ ಸೊಸೈಟಿ ಮುಳುಗಿಸುತ್ತಾನೆ ಹೊರಗಿನ ರಾಜ್ಯಗಳವರು ನಮ್ಮ ಗಡಿ ಭಾಗಗಳಲ್ಲಿ ಬಂದು ಹಾಲು ಶೇಖರಣೆ ಮಾಡತಕ್ಕಂಥದ್ದನ್ನು ನಿಷೇಧ ಮಾಡುವುದಕ್ಕೆ ಸಾಧ್ಯವಿದೆಯೋ ಇಲ್ಲವೋ, ನೀವು ಹೀಗೆ ಕಾಲವನ್ನು ಕಳೆದರೆ ಇನ್ನು ಐದಾರು ವರ್ಷಗಳಲ್ಲಿ ಬಹುಶಃ ನಮ್ಮ ಇಡೀ ಕೋಲಾರ ಜಿಲ್ಲೆಯ ಗಡಿ ಭಾಗದಲ್ಲಿ ಬಾಗೇಪಲ್ಲಿ, ಶ್ರೀನಿವಾಸಪುರ, ಚಿಂತಾಮಣಿ, ಗೌರಿಬಿದನೂರು, ಈ ಭಾಗಗಳಲ್ಲಿ ಏನು ಸಂಘಗಳಿವೆ ಆ ಎಲ್ಲಾ ಹಾಲು ಉತ್ಪಾದಕರ ಸಹಕಾರ ಸಂಘಗಳೂ ಕೂಡ ಬಹುತೇಕ ಎಲ್ಲವೂ ನಿರ್ವೀರ್ಯವಾಗಿ ಬಿಡುತ್ತವೆ They will have a natural death ಕುರಿಗೆ ಇನ್‌ಶ್ಯೂರೆನ್ಸ್ ಇದೆಯಾ ಬಂಡೆಪ್ಪ ಕಾಶ್ಯಂಪೂರ್‌ರವರೆ ಹೇಳಿ ನೀವು ಕೃಷಿ ಸಚಿವರಾಗಿದ್ದೀರಿ ಸ್ವಲ್ಪ ಹೇಳಿ

ಶ್ರೀ ಬಂಡೆಪ್ಪ ಕಾಶ್ಯಂಪೂರ್ (ಕೃಷಿ ಸಚಿವರು) ಮಾನ್ಯ ಅಧ್ಯಕ್ಷರೆ, ಹಿರಿಯರು ಹಾಗೂ ಈ ಸದನದಲ್ಲಿ ಕೆಲಸ ಮಾಡಿರುವ ಬಹಳ

ಅನುಭವಿಗಳಾದ ಮಾನ್ಯ ರಮೇಶ್‌ಕುಮಾರ್‌ರವರು ಮಾತನಾಡುತ್ತಿದ್ದಾರೆ ಆದರೆ ಮೊಟ್ಟಮೊದಲ ನೆಯದಾಗಿ ನನ್ನ ಇಲಾಖೆ ಬಗ್ಗೆ ಎರಡು ನಿಮಿಷಗಳ ಕಾಲ ಹೇಳಬಯಸುತ್ತೇನೆ ಇವೊತ್ತು ನಾವೆಲ್ಲ ಹೊಸಬರಾಗಿದ್ದು ಈ ಒಂದು ಜವಾಬ್ದಾರಿಯನ್ನು ನಿಭಾಯಿಸಿದ್ದೇವೆ ಆದರೆ ಇವೊತ್ತು ಸುಮಾರು ಯೂನಿವರ್ಸಿಟಿಗಳಾಗಲಿ, ಇಲಾಖೆಯಾಗಲಿ, ಇವೊತ್ತಿಗೆ ಇವೊತ್ತೇ ಹುಟ್ಟಿಕೊಂಡು ಕೆಲಸಗಳನ್ನು ಮಾಡುತ್ತಿಲ್ಲ ಹಲವಾರು ಒಳ್ಳೆಯ ಕೆಲಸಗಳಾಗಿವೆ ನಾನು ಯೂನಿವರ್ಸಿಟಿ ಲೆವೆಲ್‌ನಲ್ಲಿ ಹಲವಾರು ಬಾರಿ ವಿಚಾರಣೆ ಹಾಗೂ ಪರಿಶೀಲನೆಯನ್ನು ಮಾಡಿದಾಗ ನನಗೆ ಗೊತ್ತಾಗಿದೆ ಇವೊತ್ತು cereals ನಮ್ಮಲ್ಲಿ ಉತ್ಪಾದನೆಯಾಗುತ್ತಿದೆ ಅದರಲ್ಲಿ ಪ್ಯಾಡಿ ಇರಬಹುದು, ಮುಸುಕಿನ ಜೋಳ ಇರಬಹುದು, ವೀಟ್ ಇರಬಹುದು, ಇವುಗಳಲ್ಲಿ ನಾವು ಇಂಡಿಯಾದಲ್ಲಿಯೇ ಟಾಪ್‌ನಲ್ಲಿದ್ದೇವೆ ಆದರೆ ಹಿರಿಯ ಸದಸ್ಯರು ಹೇಳಿದಂತೆ ತರಕಾರಿಯಲ್ಲಿ ಇನ್ನು ಬಹಳಷ್ಟು ನಾವು ಮುಂದುವರಿಯಬೇಕಾಗಿದೆ ಅಲ್ಲಿ ಈಗ ನಿಲ್ ಎಂದರೂ ನಾವು ಒಪ್ಪಿಕೊಳ್ಳ ಬೇಕಾಗುತ್ತದೆ ಏಕೆಂದರೆ ಅದರಲ್ಲಿ ಪ್ರೈವೇಟ್‌ದೇ ಜಾಸ್ತಿ ಇದೆ ಈಗ ವೇಸ್ಟ್‌ಲ್ಯಾಂಡ್ ಡೆವಲಪ್‌ಮೆಂಟ್‌ನಂತೆ ಬೇರೆ ಬೇರೆ ಹಲವಾರು ಸ್ಕೀಂಗಳಿವೆ ಇವೊತ್ತು ನಮ್ಮ ವಾಟರ್‌ಶೆಡ್ ಡಿಪಾರ್ಟ್‌ಮೆಂಟ್‌ನಿಂದ ಬಹಳಷ್ಟು ಸ್ಕೀಂಗಳನ್ನು ತೆಗೆದುಕೊಳ್ಳುತ್ತಿದ್ದೇವೆ ಫೆಲ್ಸ್ ಈಗ ಕಡಿಮೆಯಾಗುತ್ತಿದೆ ಆ ಬಗ್ಗೆ ಸಹ ಬಹಳಷ್ಟು ಪ್ರೋತ್ಸಾಹ ಮಾಡುತ್ತಿದ್ದೇವೆ ತಾವು ಹಿರಿಯರಿದ್ದೀರಿ, ಕೋಲಾರದಲ್ಲಿ ನಾಳೆ ಸುಜಲಾ ಎನ್ನುವ ಪ್ರಾಜೆಕ್ಟ್ ಕಾರ್ಯಕ್ರಮ ಇದೆ ಇದು ವಾಟರ್ ಶೆಡ್ ಸ್ಕೀಂನಲ್ಲಿ ಇದೆ ಸುಮಾರು 100 ಕೋಟಿ ರೂಪಾಯಿ ಮೇಲೆ ಒಂದೊಂದು ಜಿಲ್ಲೆಗೆ ಅಲೋಕೇಶನ್ಸ್ ಇದೆ ಹೀಗಾಗಿ ತಾವೇ ಅದರ ಬಗ್ಗೆ ರಿವ್ಯೂ ಮಾಡಿ ಪರಿಶೀಲನೆ ಮಾಡಬಹುದು ಇವೊತ್ತು ತಾವು ಕುರಿ ಬಗ್ಗೆ ಕೇಳಿದ್ದೀರಿ ಹಿಂದಿನ ಸರ್ಕಾರ ಮಾಡಿದಂಥ ಜನಶ್ರೀ ಯೋಜನೆಯನ್ನು ಈ ಸರ್ಕಾರ ಇವೊತ್ತೇ ಜಾರಿಗೆ ತಂದು, ಮತ್ತೆ ಇಡೀ ರಾಜ್ಯದಲ್ಲಿ 8 ಲಕ್ಷ ಕುರಿಗಳಿಗೆ ಈ ವರ್ಷ ವಿಮೆ ಮಾಡಬೇಕೆಂದು ಬಜೆಟ್‌ನಲ್ಲಿ ಸುಮಾರು 4 ಕೋಟಿ ಚಿಲ್ಲರೆ ಹಣ ವಿಮೆಗೆ ಇಡಲಾಗಿದ್ದು ಒಂದು ಕುರಿಗೆ 10 ರೂಪಾಯಿ ಮಾಡುವವರಿದ್ದೇವೆ ಮೊನ್ನೆ ಸಚಿವರ ಛೇಂಬರ್‌ನಲ್ಲಿ ಮೀಟಿಂಗ್ ಮಾಡಿ ಹಿಂದೆ ಏನು 5 ಕುರಿಗೆ ವಿಮೆ ಮಾಡುವುದು ಇತ್ತು ಈಗ 20 ಕುರಿಗಳವರೆಗೆ ಮಾಡಬೇಕು ಎಂದು ನಿರ್ಧಾರ ತೆಗೆದುಕೊಂಡು ಮುಂದುವರಿಯುತ್ತಿದ್ದೇವೆ ಇದುವರೆಗೆ ಅಂದರೆ ಮೊನ್ನೆಯವರೆಗೆ ಸುಮಾರು ಒಂದು ಲಕ್ಷ ಚಿಲ್ಲರೆ

ಕುರಿಗಳಿಗೆ ವಿಮೆ ಒಗ್ಗಿದೆಯಂತೆ ಆದರೆ ಈ ವರ್ಷ ನಮ್ಮ ಟಾರ್ಗೆಟ್ ಸುಮಾರು 8 ಲಕ್ಷ ಕುರಿಗಳಿಗೆ ವಿಮೆ ಮಾಡಿಸಬೇಕೆಂದು ಇದೆ ಸುಮಾರು 70 ಲಕ್ಷ ಕುರಿಗಳು ನಮ್ಮ ರಾಜ್ಯದಲ್ಲಿದೆ

ಶ್ರೀ ಆರ್ ಧ್ರುವನಾರಾಯಣ್ ಮಾನ್ಯ ಸಚಿವರೆ, ಕುರಿ ಮಂಡಳಿಗೆ ಕೊಡುತ್ತಿರುವ ಅನುದಾನ ವರ್ಷದಿಂದ ವರ್ಷಕ್ಕೆ ಇಳಿಮುಖವಾಗುತ್ತಿದೆ ಆದುದರಿಂದ ಕುರಿ ಮಂಡಳಿಗೆ ಹೆಚ್ಚಿನ ಅನುದಾನವನ್ನು ಕೊಡಲು ಕ್ರಮ ತೆಗೆದುಕೊಳ್ಳಬೇಕು

ಶ್ರೀ ಬಂಡೆಪ್ಪ ಕಾಶ್ಯಂಪೂರ್ ಈ ವರ್ಷ ವಿಶೇಷವಾಗಿ 10 ಕೋಟಿ ರೂಪಾಯಿಗಳನ್ನು ಕುರಿ ಮಂಡಳಿಗೆ ಕೊಟ್ಟಿದ್ದೇವೆ

ಶ್ರೀ ಕೆ ಆರ್ ರಮೇಶ್‌ಕುಮಾರ್ ಸುಜಲಾ ಎನ್ನುವ ಪ್ರಾಜೆಕ್ಟ್ ತಂದು ಒಳ್ಳೆಯ ಕೆಲಸವನ್ನು ಮಾಡಿದ್ದೀರಿ ಮಾನ್ಯ ಮಂತ್ರಿಗಳೆ, ತಾವು ದಯಮಾಡಿ ಒಂದು ವಿಷಯವನ್ನು ಜ್ಞಾಪಕದಲ್ಲಿಟ್ಟುಕೊಳ್ಳಬೇಕು ಎನ್ ಜಿ ಒ ಗಳು ಯಾರು ಬಂದಿದ್ದಾರೆ ಅವರಿಗೆ ಇದರ ಕ್ರೆಡಿಟ್‌ನ 90 ಭಾಗ ಹೋಗುತ್ತದೆ ನಿಮ್ಮವರಿಗೇ ಕೊಟ್ಟಿರತಕ್ಕಂಥದ್ದನ್ನೂ ನೀವು ನೋಡಿ ಎನ್ ಜಿ ಒ ಗಳಿಗೆ ಕೊಟ್ಟಿರತ ಕ್ಕಂಥದ್ದನ್ನೂ ನೋಡಿ ಏನು ಮಾಡಿದ್ದಾರೆ, ಯಾರು ಮಾಡಿದ್ದಾರೆ ಎಂಬುದು ಗೊತ್ತಾಗುತ್ತದೆ ನಾನು ಹೆಚ್ಚು ಸಮಯವನ್ನು ವ್ಯರ್ಥ ಮಾಡುವುದಕ್ಕೆ ಹೋಗುವುದಿಲ್ಲ ಹೌಸಿಂಗ್ ಬಗ್ಗೆ ಒಂದೆರಡು ನಿಮಿಷ ಮಾತನಾಡಿಬಿಡುತ್ತೇನೆ ಈ ಹೌಸಿಂಗ್ ಇಲಾಖೆ 1972ನೇ ಇಸವಿಯಲ್ಲಿ ಪ್ರಾರಂಭವಾಯಿತು ಮೊದಲು 3 ಸಾವಿರ ರೂಪಾಯಿ ಮಾತ್ರ ಕೊಡಲಾಗುತ್ತಿತ್ತು ಸಮಯದ ಅಭಾವವಿರುವುದರಿಂದ ನಾನು ನಿಮಗೆ ಇಷ್ಟು ಮಾತ್ರ ಸಲಹೆ ಕೊಡುತ್ತೇನೆ ನಿಮ್ಮಲ್ಲಿ ಮಾಹಿತಿ ಲಭ್ಯವಿದೆ ಈ ರಾಜ್ಯದಲ್ಲಿ ಟೋಟಲ್ ಹೌಸ್‌ಲೆಸ್ ಫ್ಯಾಮಿಲಿಗಳು ಎಷ್ಟಿವೆ, both house less and site less ಎಷ್ಟಿವೆ, ಸೈಟ್‌ಲೆಸ್‌ನವರಿಗೆ ಸೈಟ್ ಕೊಡಲು ಒಂದು time bound programme ಮಾಡಿ ಯಾರಿಗೆ ಸೈಟ್ ಇದ್ದು ಹೌಸ್ ಇಲ್ಲವೋ ಅಂಥವರಿಗಾಗಿ ಒಂದು time bound programme ಹಾಕಿಕೊಂಡು ಇಷ್ಟು ವರ್ಷದಲ್ಲಿ ಕರ್ನಾಟಕ ರಾಜ್ಯದಲ್ಲಿ ವಸತಿ ಸಮಸ್ಯೆ ಇರತಕ್ಕಂಥವರು ಯಾರು ಇರದಂತೆ ಮಾಡುತ್ತೇವೆ, ಕೆಲವು ಡಿಪಾರ್ಟ್‌ಮೆಂಟ್‌ಗಳನ್ನು ನೀವು ಬೇಕಾದರೆ ವೈಂಡಪ್ ಮಾಡಿ, ಆದರೆ ಆ ಇಡೀ ಹಣವನ್ನು ವಸತಿಗೋಸ್ಕರ ಮೀಸಲಾಗಿಡಿ ಈಗ ನೀವೇನು ಕೊಟ್ಟಿದ್ದೀರೆಂದರೆ ಒಂದು ಪಂಚಾಯತಿಗೆ

40 ಮನೆ, 60 ಮನೆ, ಈ ರೀತಿಯಲ್ಲಿ ಬದ್ಧತೆ ಇರತಕ್ಕಂಥವರು ಮಾಡತಕ್ಕಂಥ ಕೆಲಸವಲ್ಲ ಇದರಿಂದ ಏನಾಗುತ್ತದೆ? ಒಂದು ಪಂಚಾಯತಿ ವ್ಯಾಪ್ತಿಯಲ್ಲಿ ಹದಿನಾಲ್ಕೋ, ಹದಿನೈದೋ ಹಳ್ಳಿಗಳು ಬರುತ್ತದೆ ಒಂದು ಊರಿಗೆ ಎಷ್ಟು ಮನೆ ಬರುತ್ತದೆ ಗ್ರಾಮ ಸಭೆ ಮಾಡಿದರೆ ಅಲ್ಲಿ ನೂರು ಜನ ಬರುತ್ತಾರೆ ಎಲ್ಲರೂ ಮನೆ ಇಲ್ಲದವರೇ ಒಂದು ಊರಿನಲ್ಲಿ ನಾಲ್ಕು ಹೆಸರನ್ನು ಯಾರದ್ದನ್ನು ನೀವು ಬರೆಯುತ್ತಿರೀ? ನಿಮಗೆ ಬೇಕಾದವರ ಹೆಸರನ್ನು ಬರೆದುಕೊಂಡು ಹೋಗುತ್ತೀರಿ ಬರೆದುಕೊಂಡು ಬಂದರೆ ಹಿಂದೆಯೇ ಒಂದು ಅರ್ಜಿ ಬರುತ್ತದೆ, ರಾಜೀವ್‌ಗಾಂಧಿ ಹೌಸಿಂಗ್ ಕಾರ್ಪೊರೇಶನ್‌ನಿಂದ ನೀವು ಗ್ರಾಮಸಭೆ ಮಾಡಿಲ್ಲವೆಂದು ಪತ್ರ ಬರುತ್ತದೆ ಇವರು ಹಿಂದಕ್ಕೆ ಹಾಕುತ್ತಾರೆ ಇಷ್ಟು ಸಾಲದು ಎಂಬಂತೆ ಒಂದು ಜಾಗೃತ ಸಮಿತಿ ಮಾಡಿ ನಮ್ಮನ್ನು ಅಧ್ಯಕ್ಷರನ್ನಾಗಿ ಮಾಡಿದ್ದೀರಿ ನಮಗೆ ಅದರಲ್ಲಿ ಯಾವ ಅಧಿಕಾರವೂ ಕೂಡ ಇಲ್ಲ ನಮಗೇನು ಅಧಿಕಾರ ಬೇಡ I am against power being given to legislators ನಮ್ಮ ಸ್ನೇಹಿತರು ನನಗೆ ವಿರೋಧ ಮಾಡಿದರೂ ಚಿಂತೆಯಿಲ್ಲ ನಾನು ವಿಕೇಂದ್ರೀಕರಣಕ್ಕೆ ಬದ್ಧ ನಾನು ಅದನ್ನು ಗ್ರಾಮ ಪಂಚಾಯತಿಗಳಿಗೇ ಬಿಟ್ಟುಕೊಡಬೇಕೆಂದು ಬಹಳ ಸ್ಪಷ್ಟವಾಗಿ ಯಾವ ಕನ್‌ಫ್ಯೂಶನ್ ಕೂಡ ಇಲ್ಲದೇ ಹೇಳತಕ್ಕಂಥವನು ಆದರೆ ನೀವು ಈ ತರಹ ಕೊಟ್ಟಾಗ ಗ್ರಾಮಪಂಚಾಯತಿಯವರು ಹೇಗೆ ವಿತರಣೆ ಮಾಡುತ್ತಾರೆ? ಹೆಚ್ಚು ಮಾತು ಅಗತ್ಯವಿಲ್ಲ ಅನಗತ್ಯವಾಗಿರತಕ್ಕಂಥ ಎಕ್ಸ್‌ಪೆಂಡ್ವಿಚರ್‌ಗಳನ್ನು ಕಟ್ ಮಾಡಿ ನೀವು ಏನೇನು ಮಾಡಿಕೊಳ್ಳುತ್ತೀರೋ ರಾಜಕೀಯವಾಗಿ ನಿಮ್ಮ ಅರೇಂಜ್‌ಮೆಂಟ್ಸ್, ಪವರ್ ಹಾಗೂ ಇತ್ಯಾದಿಗಳ ಬಗ್ಗೆ I don't want to talk about it ಆ Subject stale ಆಗುತ್ತದೆ ಆದರೆ ಚರಿತ್ರೆಯಲ್ಲಿ ಉಳಿದು ಹೋಗುತ್ತೀರಿ ಕುಮಾರಸ್ವಾಮಿಯವರೆ ಈ ರಾಜ್ಯದಲ್ಲಿ ವಸತಿಹೀನ ಅನ್ನತಕ್ಕಂಥವನು ಇಷ್ಟು ವರ್ಷವಾದ ಮೇಲೆ ಇರಬಾರದು, ಅದಕ್ಕಾಗಿ ನಮ್ಮ ಡಿಸಿಶನ್ ಇದಾಗಿದೆ ಎಂದು ನೀವು ಸರ್ಕಾರದ ಪರವಾಗಿ ಉತ್ತರ ಕೊಡುವಾಗ ಹೇಳಿ ಇದಕ್ಕಾಗಿ ಇಷ್ಟು ಕೋಟಿ ರೂಪಾಯಿಗಳನ್ನು ನಾನು ಮಂಜೂರು ಮಾಡುತ್ತಿದ್ದೇನೆ ಎಷ್ಟು ಅಗತ್ಯವಿದೆಯೋ ಅಷ್ಟನ್ನು ತೆಗೆದಿಟ್ಟುಕೊಳ್ಳಿ ಮೂರು ವರ್ಷದಲ್ಲೋ, ನಾಲ್ಕು ವರ್ಷದಲ್ಲೋ, ಐದು ವರ್ಷದಲ್ಲೋ ಈ ಪ್ರೋಗ್ರಾಂ ಅನ್ನು ಮಾಡುತ್ತೇವೆ ಎನ್ನತಕ್ಕಂಥ ನಿರ್ಣಯವನ್ನು ನೀವು ತೆಗೆದುಕೊಂಡರೆ ನೀವು ಚರಿತ್ರೆಯಲ್ಲಿ ಉಳಿಯುತ್ತೀರಿ

ಒಬ್ಬೊಬ್ಬರು ಒಂದೊಂದು ರೀತಿಯಲ್ಲಿ ಚರಿತ್ರೆಯಲ್ಲಿ ಉಳಿದುಬಿಟ್ಟಿದ್ದಾರ ಕಂರಿಯವರು ಬಹಳ ಕಡಿಮೆ ದಿವಸ ಮುಖ್ಯಮಂತ್ರಿಗಳಾಗಿದ್ದದ್ದು ಆದರೆ ಅವರು ಕೊಟ್ಟ ಮಾತಂತೆ ನಡೆದುಕೊಂಡರು ಕಡಿದಾಳ್ ಮಂಜಪ್ಪನವರು ಬಹಳ ಕಡಿಮೆ ಅವಧಿ ಇಲ್ಲಿದ್ದರು ಸರಳತೆಗೆ ಹೆಸರಾದರು ಇನ್ನು ನಿಜಲಿಂಗಪ್ಪನವರು ಇರಿಗೇಶನ್ ವಿಚಾರದಲ್ಲಿ, ಮತ್ತೊಂದರ ವಿಚಾರದಲ್ಲಿ ತೆಗೆದುಕೊಂಡಂಥ ನಿರ್ಣಯ ದೇವರಾಜ ಅರಸುರವರು ಲ್ಯಾಂಡ್ ರಿಫಾರ್ಮ್ಸ್, ಬ್ಯಾಕ್‌ವರ್ಡ್ ಕ್ಲಾಸ್ ಕಮಿಶನ್ ಮತ್ತು ಉಳಿದ ಇನ್ನಿತರ ವಿಚಾರಗಳಲ್ಲಿ ಅವರು ತೆಗೆದುಕೊಂಡಂಥ ನಿರ್ಣಯ ರಾಮಕೃಷ್ಣ ಹೆಗಡೆಯವರು ಆಡಳಿತದಲ್ಲಿ ಸುಧಾರಣೆ ತರುವುದಕ್ಕೆ ಜನರಿಗೆ ಸರ್ಕಾರ ಎನ್ನುವ ವ್ಯವಸ್ಥೆ ಮೇಲೆ ನಂಬಿಕೆ ಹುಟ್ಟಿಸುವುದರಲ್ಲಿ ಪ್ರಯತ್ನ ಮಾಡಿದರು ವಿಕೇಂದ್ರೀಕರಣ ವ್ಯವಸ್ಥೆ ತರಲು ಪ್ರಯತ್ನ ಮಾಡಿದರು ಅದರಂತೆ ಜೆ ಹೆಚ್ ಪಟೇಲ್‌ರವರೂ ಪ್ರಯತ್ನ ಮಾಡಿದರು ಹೀಗೆ ಇವರೆಲ್ಲರೂ ಕೂಡ ತಮ್ಮ ತಮ್ಮದೇ ಆದಂಥ ಒಂದು ಚರಿತ್ರೆಯನ್ನು ಬಿಟ್ಟುಹೋಗಿದ್ದಾರೆ ನೀವು ಏನಾದರೂ ಒಳ್ಳೆಯ ನಿರ್ಣಯವನ್ನು ಮಾಡಿ It is a privilege ಮುಖ್ಯಮಂತ್ರಿಗಳಾಗಿಸಕ್ಕಂಥದ್ದು ತಮಾಷೆಯೇನಲ್ಲ ನಾವ್ಯಾರೂ ಮಾಡಲಿಲ್ಲ ನಿಮ್ಮನ್ನು ನಮಗೇ ಚಾಯ್ಸ್ ಕೊಟ್ಟಿದ್ದರೂ ನಾವು ಮಾಡುತ್ತಿರಲಿಲ್ಲ ನೀವು ಆಗಿದ್ದೀರಿ ಆದರೆ ಇಲ್ಲಿ ಉಳಿದು ಹೋಗುವುದು ಮುಖ್ಯವಲ್ಲ. ಚರಿತ್ರೆಯಲ್ಲಿ ಉಳಿಯಬೇಕು ಚರಿತ್ರೆಯಲ್ಲಿ ಯಾವಾಗ ಉಳಿಯುತ್ತೀರಿ? ನಾಲ್ಕು ಟ್ರಾನ್ಸ್‌ಫರ್ ಮಾಡುವುದರಿಂದ ಉಳಿಯುವುದಿಲ್ಲ ಯಾರೋ ನಾಲ್ಕು ಜನರು Vice Chancellor ಅನ್ನು appoint ಮಾಡುವುದರಿಂದ, 3 ಜನ High Court Judges ಹಾಕುವುದಕ್ಕೆ recommend ಮಾಡುವುದರಿಂದ, ಯಾವುದೋ 20 de-notification ಮಾಡುವುದರಿಂದ ಉಳಿಯುವುದಿಲ್ಲ ಯಾರೋ ಒಂದಿಷ್ಟು ಜನರಿಗೆ ಕೆಲಸ ಕೊಡಿಸಿದರೆ ಉಳಿಯುವುದಿಲ್ಲ ಈ ರೀತಿ ಜನಪರವಾದಂತಹ ನಿರ್ಣಯವನ್ನು ನೀವು ತೆಗೆದುಕೊಂಡರೆ ಇತಿಹಾಸದ ಒಂದು ಭಾಗವಾಗಿ ಹೋಗುತ್ತೀರಿ ನೀವು ಇತಿಹಾಸದ ಭಾಗವಾಗಬೇಕು ಎಂದು ನಮ್ಮ ಆಸೆ ಈಗ ಆಹಾರದ ಇಲಾಖೆಯ ವಿಚಾರದಲ್ಲಿ ಹೇಳುವುದಾದರೆ, ಮಾನ್ಯ ಗೋವಿಂದ ಕಾರಜೋಳರವರು ಇಲ್ಲಿದ್ದಾರೆ ನಾನು ಅತ್ಯಂತ ನೋವಿನಿಂದ ಹೇಳುತ್ತೇನೆ. ನಾವು ಯಾರಿಗೆ green card ಅಥವಾ BPL card ಕೊಡುತ್ತೇವೆ? ನಾನು ಮೊನ್ನೆ ಅವರ officeನಲ್ಲಿ ಹೇಳಿದೆ ಯಾರು

ಬೆಳಿಗ್ಗೆಯಿಂದ ರಾತ್ರಿಯವರೆಗೆ ಅವನ ಶರೀರದಲ್ಲಿ ಇರುವಂತಹ ಎಲ್ಲಾ ಶ್ರಮವನ್ನು invest ಮಾಡುತ್ತಾನೆ, ಅವನ ಹತ್ತಿರ Physical energy ಬಿಟ್ಟು ಏನೂ ಇಲ್ಲ ಅವನು ಬೆಳಿಗ್ಗೆಯಿಂದ ರಾತ್ರಿಯವರೆಗೆ ದುಡಿದರೆ, ಅವನು ಬೆವರು ಸುರಿಸಿದರೆ, ಅವನಿಗೆ ಪ್ರತಿಯಾಗಿ ಬರತಕ್ಕಂಥ ನಗದು ಹಣ ಏನಿದೆ ಅದನ್ನು ದಿನಸಿ ಅಂಗಡಿಗೆ ತೆಗೆದುಕೊಂಡು ಹೋದಾಗ ಅವನು ಕೊಳ್ಳತಕ್ಕಂಥ ಸಾಮಾನು ಅವನ ಕುಟುಂಬ ಪೋಷಣೆಗೆ ಸಾಕಾಗುತ್ತಿಲ್ಲ ಅವನು ಇನ್ನೇನು ಮಾಡುವ ಹಾಗೆ ಇದ್ದಾನೆ? ಅವನ ಹತ್ತಿರ ಜಮೀನು ಇಲ್ಲ, ಬೇರೆ ದುಡ್ಡು ಇಲ್ಲ ಅವನ ಹತ್ತಿರ ಇರುವುದು ಶರೀರದ ಕಷ್ಟ ಬೆಳಿಗ್ಗೆಯಿಂದ ರಾತ್ರಿಯವರೆಗೆ ದುಡಿದರೆ ಅವನಿಗೆ ಬರತಕ್ಕಂಥ ದುಡ್ಡು ಅವನಿಗೆ ಕೊಳ್ಳುವುದಕ್ಕೆ ಸಾಕಾಗುತ್ತಿಲ್ಲ ಅವನು ಅರ್ಧ ಹೊಟ್ಟೆಯಲ್ಲಿ ಮಲಗುತ್ತಾನೆ ಅವನು ಹೊಟ್ಟೆ ತುಂಬಾ ತಿನ್ನುವುದಕ್ಕೆ ಎಂದು ನಾವು ಸಬ್ಸಿಡಿಯಲ್ಲಿ introduce ಮಾಡಿದೆವು ಈ ವಿಚಾರದಲ್ಲಿ ನೀವು ಮೀನಾ ಮೇಷ ಮಾಡಿಕೊಂಡು ಇವತ್ತು, ನಾಳೆ, ನಾಡಿದ್ದು ಎಂದು October 31 ಕ್ಕೆ, October 2ಕ್ಕೆ, November 14ಕ್ಕೆ, January 14ಕ್ಕೆ ಎಂದು ನೀವು dateಗಳನ್ನು ಹಾಕಿಕೊಂಡು ration card ಕೊಡತಕ್ಕಂಥ ಕೆಲಸ ಇವತ್ತಿಗೂ ಸಮರ್ಪಕವಾಗಿ ರಾಜ್ಯದಲ್ಲಿ ಆಗಲಿಲ್ಲ ಇಷ್ಟು ಬಡವರ ಬಗ್ಗೆ ಕಾಳಜಿ ವ್ಯಕ್ತಪಡಿಸತಕ್ಕಂಥವರು, ಅರೆ ಹೊಟ್ಟೆ ಇರುವವರಿಗೆ ಕಾರ್ಡ್ ಕೊಡುವ ವಿಚಾರದಲ್ಲಿ ಕೂಡ ನೀವು ಯಶಸ್ವಿಯಾಗಿ ಕಾರ್ಯನಿರ್ವಹಣೆ ಮಾಡಲಿಲ್ಲವೆಂದರೆ ನಾವು ನಿಮ್ಮನ್ನು ಏನೆಂದು ಕರೆಯಬೇಕು ಸಮರ್ಥರು, ದಕ್ಷರು, ಬಡಜನರ ಪರವಾಗಿ ಇರುವವರು, ಇಂತಹ ಸರ್ಕಾರ ಹಿಂದೆಂದೂ ಬಂದಿಲ್ಲ ನಮ್ಮ ಪುಣ್ಯ, ನಮ್ಮ ಕಾಲಕ್ಕೆ ಬಂತು ಎಂದು ಹೇಳಿ ನಿಮ್ಮ ಎಲ್ಲಾ ಬೇಡಿಕೆಗಳನ್ನು pass ಮಾಡಿ ಕೊಡಬೇಕೇ? ಅಥವಾ ನೀವು ಈ ಬೇಡಿಕೆಗಳಿಗೆ ಅನರ್ಹರು, ಈ ದುಡ್ಡು ನಿಮಗೆ ಕೊಡುವುದು ವ್ಯರ್ಥ, ದಯಮಾಡಿ ನೀವು ಬಿಟ್ಟು ಹೋಗಿ, ಯಾರಾದರೂ ಸಮರ್ಥರು ಬಂದರೆ ಈ ದುಡ್ಡು ಖರ್ಚು ಮಾಡಲಿ ಎಂದು ಹೇಳಬೇಕೆ? Coffee, tea plantersಗೂ ಕೂಡ BPL card ಕೊಡಬೇಕು ಎಂದರೆ ಹೇಗೆ? Social Welfare Ministerಗೆ ಹೇಳುವುದೇನೆಂದರೆ hostel ಗಳ ಬಗ್ಗೆ, Social Welfare hostel ಗೆ BCM, SC/ST hostel ಗೆ pre metric hostel ಗೆ post metric hostel ಗೆ

ಯಾರು ಹೋಗುತ್ತಾರೆ? ಒಂದು ಚೂರು ಮನೆ ಕಡೆ ಅನುಕೂಲ ಇರುವವರು ಯಾರೂ ಹೋಗುವುದಿಲ್ಲ ನೀವು ಮಂತ್ರಿಯಾಗಲಿ, ಅವರಾಗಲಿ ಎಷ್ಟು ಸಲ ಈ hostel ಗಳಿಗೆ surprise inspections ಮಾಡಿದ್ದೀರಿ? ಅಲ್ಲಿಯ hygienic condition examine ಮಾಡಿದ್ದೀರಾ? ಆ ಮಕ್ಕಳಿಗೆ ಕೊಡುವಂತಹ ಊಟ ಶುಚಿಯಾಗಿದೆಯಾ ಇಲ್ಲವೇ? ಅವರಿಗೆ ಸರಾಸರಿ ಎಷ್ಟು ಹಣ ಕೊಡುತ್ತಿದ್ದೇವೆ? ಎಷ್ಟು ಖರ್ಚಾಗಿದೆ? ಇಲ್ಲವೇ ಇಲ್ಲ Hostel ಮಂಜೂರಾಗಲಿಲ್ಲ, ಇರುವ hostel ಚೆನ್ನಾಗಿ ನಡೆಯಲಿಲ್ಲ ಮಾರಿಕೊಂಡವನು ಮಾರಿಕೊಂಡ, ತಿಂದವನು ತಿಂದ, ಹೋದವನು ಹೋದ ನೀವು ಏಕೆ ಅಲ್ಲಿ inspection ಮಾಡಲಿಲ್ಲ? ನೀವೆಲ್ಲಾ ಜಿಲ್ಲಾ ಮಂತ್ರಿಗಳಿದ್ದೀರಿ ನೀವು ಜಿಲ್ಲಾ ಉಸ್ತುವಾರಿ ಮಂತ್ರಿಗಳಾಗಿದ್ದಾಗ ನಾಲ್ಕು hostel ಏಕೆ visit ಮಾಡಲಿಲ್ಲ? ನೀವು 4 ಜನರಿಗೆ ಏಕೆ suspend ಮಾಡಲಿಲ್ಲ? ನೀವು ಎಂದರೆ ಅವರಿಗೆ ಭಯವೇ ಇಲ್ಲ ತಪ್ಪು ಮಾಡಿದಂತಹವನಿಗೆ ಭಯ ಇರಬೇಕು ಬಡವನಿಗೆ ನಿಮ್ಮಲ್ಲಿ ಆಕರ್ಷಣೆ ಇರಬೇಕು ಅವನು ನಿಮ್ಮ ಹತ್ತಿರ ಅರ್ಜಿ ತೆಗೆದುಕೊಂಡು ಬರುವುದಕ್ಕೆ ಖುಷಿ ಇರಬೇಕು ಈಗ ನಿಮ್ಮ ಸರ್ಕಾರ ಹೇಗೆ ಇದೆ ಎಂದರೆ ಬಡವನಿಗೆ ವಿಶ್ವಾಸವೂ ಇಲ್ಲ ತಪ್ಪಿತಸ್ಥರಿಗೆ ಭಯ ಕೂಡ ಇಲ್ಲ ಇದು ಬಹಳ ನೋವಾಗತಕ್ಕಂಥ ಪರಿಸ್ಥಿತಿ Revenue Departmentಗೆ ಸಂಬಂಧಪಟ್ಟ ಹಾಗೆ ಹೇಳುವುದಾದರೆ ಮಾನ್ಯ ಮುಖ್ಯಮಂತ್ರಿಗಳು ಇದ್ದಾರೆ ಆದರೆ ಅದಕ್ಕೆ ಸಂಬಂಧಪಟ್ಟ ಕಂದಾಯ ಮಂತ್ರಿಗಳು ಸದನದಲ್ಲಿ ಇಲ್ಲ ಎಲ್ಲೆಲ್ಲಿ ಏನೇನು ಮಾಡಿಕೊಂಡಿದ್ದಾರೆ ಗೊತ್ತಿಲ್ಲ ನಾನು ಬೆಳಗಾವಿಯಲ್ಲಿ ಒಂದು ವಿಚಾರ ಪ್ರಸ್ತಾಪ ಮಾಡಿದ್ದೆನು ನಮ್ಮಲ್ಲಿ ಕೆಲವರು ಜಮೀನು ಇರತಕ್ಕಂಥವರು ಅರಣ್ಯವನ್ನು ವಶಪಡಿಸಿಕೊಂಡಿದ್ದಾರೆ, ಆಕ್ರಮಿಸಿಕೊಂಡಿದ್ದರೆ, ಸುಳ್ಳು ಸಾಗುವಳಿ ಚೀಟಿಯನ್ನು ಕೊಟ್ಟು ಬಿಟ್ಟಿದ್ದಾರೆ, ಇದರ ಮೇಲೆ enquiry ಆಗಬೇಕೆಂದು ಹೇಳಿದ್ದೆನು ಅವರ ಮೇಲೆ enquiry ಆಗುವುದಿರಲಿ, ನಾನು ಅರಣ್ಯವನ್ನು ಒತ್ತು ಬಿಟ್ಟಿದ್ದೇನೆಂದು ನನ್ನ ಮೇಲೆ ಒಂದು enquiry ಇದೆ, ಹೋದ ಶುಕ್ರವಾರ ಕೂಡ ನಾನು courtಗೆ ಹೋಗಿ bail ತೆಗೆದುಕೊಂಡು ಬಂದೆನು ಇರಲಿ ಅದು courtನಲ್ಲಿ ಇತ್ಯರ್ಥವಾಗುತ್ತದೆ ನನಗೆ Law ಪದವಿ

Pass ಮಾಡಲಿಲ್ಲವೆಂದು ಕೊರತೆ ಇತ್ತು ಈಗ ನನಗೆ ಆ ಕೊರತೆ ನೀಗಿದಂತೆ ಆಗಿದೆ

ಶ್ರೀ ಮಲ್ಲಿಕಾರ್ಜುನ ಖರ್ಗೆ ನನ್ನದು ಒಂದು ಕೇಸ್ ಇದೆ ಮಾನ್ಯ ಸಿದ್ದರಾಮಯ್ಯನವರ election time ನಲ್ಲಿ ಹೋಗಿ ಸಿಕ್ಕಿಬಿದ್ದಿದ್ದೇನೆ ದಯವಿಟ್ಟು ಅದನ್ನು ಏನಾದರೂ ಮಾಡುವುದಕ್ಕೆ ಬರುತ್ತದೆಯೇ ಎಂದು ನೋಡಿ

ಶ್ರೀ ಕೆ ಆರ್ ರಮೇಶ್‌ಕುಮಾರ್ ಮಾನ್ಯ ಮುಖ್ಯಮಂತ್ರಿಗಳೇ ಯಾರು ಈ ವಿಷಯಕ್ಕೆ ಸರ್ಕಾರದ ಪರವಾಗಿ ಗಮನ ಕೊಡುತ್ತಾರೆ ಗೊತ್ತಿಲ್ಲ ಶ್ರೀನಿವಾಸಪುರ ತಾಲ್ಲೂಕಿನಲ್ಲಿ ಲಿಂಗರಾಜಪುರ ಗ್ರಾಮದ ಸರ್ವೇ ನಂಬರ್ 12ರ ಪೈಕಿ ಬಿ ಎನ್ ರಾಮಚಂದ್ರಯ್ಯ, ಬಿನ್ ಮಲ್ಲಯ್ಯ, ಇವರ ವಾಸ ಎಲ್ಲಿ ಎಂದರೆ ಶ್ರೀನಿವಾಸಪುರ townನಲ್ಲಿ ಇವರು ವ್ಯಾಪಾರಸ್ಥರು ಇವರಿಗೆ ಸಾಗುವಳಿ ಚೀಟಿ ಕೊಡುತ್ತಾರೆ ಆದರೆ ಸಾಗುವಳಿ ಚೀಟಿ ಪತ್ತೇ ಇಲ್ಲ record ಇದೆಯಾ ಎಂದರೆ record ಕೂಡ ಇಲ್ಲ Survey Settlement ನವರು phode ಮಾಡಿದ್ದಾರೆಯೇ ಎಂದರೆ phode ಮಾಡಿಲ್ಲ Village Accountant mutation ಮಾತ್ರ ಮಾಡುತ್ತಾನೆ ಅದು ಅಲ್ಲಿಗೆ ನಿಲ್ಲುವುದಿಲ್ಲ ಹೆಬ್ಬಟೆ ಗ್ರಾಮದ ಸರ್ವೇ ನಂಬರ್ 118ರ ಪೈಕಿ ಶಿವಮ್ಮ C/o ಕೊಂಡ ಮಲ್ಲಪ್ಪನವರಿಗೆ 4 ಎಕರೆ 30 ಗುಂಟೆ ಜಮೀನು ಮಂಜೂರಿ ಬಗ್ಗೆ ಸಾಗುವಳಿ ಚೀಟಿ ಮತ್ತು mutation ಇವರು ಯಾರು? ರಾಮಚಂದ್ರಯ್ಯನವರ Wife ಇಲ್ಲಿ Revenue Department ನವರು ಯಾರಾದರೂ ಇದ್ದಾರ ಇಲ್ಲವೋ ಗೊತ್ತಿಲ್ಲ ಹೆಬಟ್ಟೆ ಗ್ರಾಮದ ಸರ್ವೇ ನಂಬರ್ 118 ರಲ್ಲಿ 4 ಎಕರೆ ಜಮೀನು ಬಿ ಎಸ್ ರಾಮಚಂದ್ರಪ್ಪ ಬಿನ್ ಮಲ್ಲಪ್ಪನವರಿಗೆ ಮಂಜೂರು ಮಾಡುವುದು ಮತ್ತೇ ಅವರಿಗೆ ಕೊಡುವುದು ಮತ್ತೆ ಶ್ರೀಮತಿ ಶಿವಮ್ಮ ಸರ್ವೇ ನಂಬರ್ 118ರಲ್ಲಿ 4 ಎಕರೆ, 4 ಕೇಸಾಯಿತು ಹೆಬಟ್ಟೆ ಗ್ರಾಮದ ಸರ್ವೇ ನಂಬರ್ 118 ರಲ್ಲಿ ಶಾರದಮ್ಮ ಉರುಫ್ ಶಿವಮ್ಮ ಬಿನ್ ಮಲ್ಲಪ್ಪ, ಇಲ್ಲಿ ಹೆಸರನ್ನು ಬದಲಾಯಿಸುತ್ತಾರೆ ಅದರಲ್ಲಿ ಮತ್ತೆ 4 ಎಕರೆ 20 ಗುಂಟೆ 5ನೇ ಕೇಸು, ಹೆಬಟ್ಟೆ ಗ್ರಾಮದ ಸರ್ವೇ ನಂಬರ್ 118ರ ಪೈಕಿ ಬಿ ಎನ್ ರಾಮಚಂದ್ರಯ್ಯ, ಮತ್ತೆ ಆತನಿಗೆ 4 ಎಕರೆ 20 ಗುಂಟೆ ಇದು revenue land ದಾಖಲೆಯನ್ನು ಸೃಷ್ಟಿ ಮಾಡಿಬಿಟ್ಟಿದ್ದಾರೆ ಎಲ್ಲಾ ಸುಳ್ಳು ದಾಖಲೆಗಳು ಎಲ್ಲಾ

ಆಕ್ರಮಣ ಮಾಡಿಕೊಂಡು ಮಾವಿನ ತೋಪು ಹಾಕಿದ್ದಾರೆ ಒಂದು ಎಕರ ಅಲ್ಲಿ ಇವತ್ತು 4,5,10 ಲಕ್ಷ ರೂಪಾಯಿ ಆಗುತ್ತದೆ ಯಾವ ಬಡವರಿಗೆ ನಾವು ಕೊಡಬೇಕಾಗಿತ್ತು, ಆ ಜಮೀನನ್ನು ಇವರು ಆಕ್ರಮಿಸಿಕೊಂಡಿರುವುದು ಕೆ ಜಿ ಲಿಂಗರಾಜ ಪುರ ಸರ್ವೇನಂಬರ್ 13ರ ಪೈಕಿ ಬಿ ಎನ್ ರಾಮಚಂದ್ರಯ್ಯ ಬಿನ್ ಮಲ್ಲಪ್ಪನವರಿಗೆ ಕ್ರಯದ ಬಗ್ಗೆ ಸಾಗುವಳಿ ಚೀಟಿ ಮತ್ತು mutation ಇವೆಲ್ಲವನ್ನು ಕಳುಹಿಸಿಕೊಡಬೇಕಾ? ಮಾನ್ಯ ಮುಖ್ಯಮಂತ್ರಿಗಳು ಕೇಳಲೇ ಇಲ್ಲವಲ್ಲ

ಶ್ರೀ ಹೆಚ್ ಡಿ ಕುಮಾರಸ್ವಾಮಿ ಅದು ಯಾವ ವರ್ಷದಲ್ಲಿ ಕೊಟ್ಟಿದ್ದು ಎಂದು ಹೇಳಿದರೆ ಒಳ್ಳೆಯದು

ಶ್ರೀ ಕೆ ಆರ್ ರಮೇಶ್ ಕುಮಾರ್ ಯಾವ ವರ್ಷಕ್ಕೆ ಬೇಕಾದರೂ ದಾಖಲೆಗಳನ್ನು ಅಲ್ಲಿ ಸೃಷ್ಟಿ ಮಾಡುತ್ತಾರೆ ಅಲ್ಲಿ ಯಾವ ದಾಖಲೆಗಳನ್ನು ಕೂಡ ಇಲ್ಲ ಈ Details ಇನ್ನೂ ಸುಮಾರು ಇವೆ ನಾನು ತಮಗ ಸಂಕ್ಷಿಪ್ತವಾಗಿ ಹೇಳಿಬಿಡುತ್ತೇನೆ ಆರು ಕೇಸುಗಳು ಒಂದೇ ಕುಟುಂಬದಲ್ಲಿ ಇವೆ ಅದಾದಮೇಲೆ, ಇನ್ನೊಬ್ಬರು ಬರುತ್ತಾರೆ, ಅವರ ಹೆಸರು ರಾಜಣ್ಣ, ಅವರ ತಂದೆ ಚಂಗಯ್ಯ ಒಂಬತ್ತು ಕೇಸು ಒಂದೇ ಕುಟುಂಬದೊಳಗೆ ಇದೆ ಸರ್ಕಾರಿ ಜಮೀನು ಮಂಜೂರಾತಿಗೆ ದಾಖಲೆಗಳನ್ನು ಸೃಷ್ಟಿ ಮಾಡುವುದು 9 places, ಮಾನ್ಯ ಮುಖ್ಯಮಂತ್ರಿಗಳೇ, ಇವರ ಸಾಹಸ ಇದು ಇಲ್ಲಿಗ ನಿಲ್ಲುವುದಿಲ್ಲ ತಮಗೆ ಎಲ್ಲಾ ದಾಖಲೆಗಳನ್ನು ಕಳುಹಿಸಿಕೊಡುತ್ತೇನೆ ಇವರು ಏನು ಮಾಡುತ್ತಾರೆಂದರೆ ಸುಳ್ಳು ದಾಖಲೆಗಳನ್ನು ಸೃಷ್ಟಿ ಮಾಡಿ ಜಮೀನು ಇವರದು ಎಂದು ಮಾಡಿಕೊಂಡು ಬೇರೆ ಮತ್ತೊಬ್ಬರಿಗೆ ಕ್ರಯ ಮಾಡುತ್ತಾರೆ ಕ್ರಯ ಮಾಡಿದ ಮೇಲೆ ಏನು ಮಾಡುತ್ತಾರೆಂದರೆ State Bank of Indiaಗೆ ಒಂದು ಕೋಟಿ ರೂಪಾಯಿಗೆ ಸಾಲಕ್ಕೆ ಒತ್ತೆ ಇಡುತ್ತಾರೆ ಮೊದಲೇ ಜಮೀನು ಇವರದಲ್ಲ ಕಬ್ಜಾ ಹಿಡಿದದ್ದು ಅದನ್ನು ಬೇರೆಯವನಿಗೆ ಮಾರುವುದು ಮತ್ತೇ ಅದೇ ಜಮೀನನ್ನು ಒಂದು ಕೋಟಿ ರೂಪಾಯಿ ಸಾಲಕ್ಕೆ ಬ್ಯಾಂಕಿಗೆ ಒತ್ತ ಇಡುವುದು State Bank of India ಮೇಲೆ complaint ಕೊಟ್ಟು ಎಲ್ಲಾ enquiryಗಳ ಬಗ್ಗೆ I will just read out It has gone to the Reserve Bank, we are also pursuing it ತಮಗೆ entire papers ಕಳುಹಿಸಿ ಕೊಡುತ್ತೇನೆ Government of India, Central Vigilance Commission, State Bank of India ದವರ inquiry

ಮಾಡಬೇಕೆನ್ನುತ್ತಾರೆ Revenue Departmentಗೆ ಮಾತ್ರ ಇವರು appoint ಮಾಡಿದ Officers ಸ್ಥಳಕ್ಕೆ ಹೋಗಿ, ಬಂದು report ಕೊಟ್ಟರೂ ಕೂಡ, ಇವತ್ತಿಗೂ ಕ್ರಮ ಜರುಗಿಸುವಂಥಾದ್ದು ಆಗಿಲ್ಲ ನಾನು Revenue departmentನ demandsಗೆ ಮಂಜೂರಾತಿಯನ್ನು ಕೊಡಬೇಕು ನಾನು ಹೇಗೆ ಕೊಡಲಿ? ಅಧ್ಯಕ್ಷರೆ, ನೀವೇ

(2-00 PM)

ಹೇಳಿ ಇದು ಎಲ್ಲೋ ಆಗಿದ್ದರೆ ಪರವಾಗಿಲ್ಲ ಹೊಸದುರ್ಗದಲ್ಲೋ ಗುರುಮಿಠ್ಕಲ್‌ನಲ್ಲೋ, ಅಥವಾ ಬಾಗಲಕೋಟೆಯಲ್ಲೋ, ಶ್ರೀ ಸಿ ಎಂ ಉದಾಸಿ ಯವರ ಕ್ಷೇತ್ರವಾದ ಹಾನಗಲ್‌ನಲ್ಲೋ ಆಗಿದ್ದರೆ ಪರವಾಗಿಲ್ಲ ಎಲ್ಲೋ ದೂರದಲ್ಲಿ ಆಗಿದ್ದರೆ ಪರವಾಗಿಲ್ಲ, ನನ್ನ ಕ್ಷೇತ್ರವಾದ ಶ್ರೀನಿವಾಸಪುರದಲ್ಲಿ ನಾನು ಜೀವಂತವಾಗಿರುವ ಕಡೆ, ಯಾವ ಜಮೀನನ್ನು ಬಡವರಿಗೆ ಕೊಡಬೇಕಾಗಿತ್ತೋ ಅದನ್ನು ಹಗಲು ದರೋಡೆ ಮಾಡಿ ಕೆಲವೇ ಜನರು ಒಬ್ಬೊಬ್ಬರು ನೂರು ನೂರು ಎಕರೆಗಳನ್ನು ತೆಗೆದುಕೊಂಡು ಮಾವಿನ ತೋಪನ್ನು ಹಾಕಿಕೊಳ್ಳುವುದಕ್ಕೆ ಕಬ್ಜಾ ಹಾಕುತ್ತಾರೆ Central Vigilance Commissioner ನವರಿಗೆ enquiry ಮಾಡುವುದಕ್ಕೆ ಬರುತ್ತದೆ Reserve Bank ನವರು enter ಆಗುತ್ತಾರೆ State Bankನವರು enquiryಗೆ order ಮಾಡುತ್ತಾರೆ ರಾಜ್ಯ ರೆವಿನ್ಯೂ ಇಲಾಖೆಯವರು ಮಾತ್ರ ಬಹಳ ಗಂಭೀರವಾಗಿ ಕುಳಿತಿದ್ದಾರೆ I had highest respect and regard for the present Revenue Commissioner I don't know why he is sleeping ಅವರ ಪ್ರಾಮಾಣಿಕತೆ ಬಗ್ಗೆ ನನಗೆ ಅಪಾರವಾದಂಥ ಗೌರವವಿತ್ತು ನಾನು Last time ಬೆಳಗಾಂನಲ್ಲಿ ಈ ವಿಚಾರವನ್ನು rise ಮಾಡಿದಾಗ ನನಗೆ ಅವರು ಒಂದು Complaint ಕೊಡಿಯೆಂದು ಸೂಚನೆಯನ್ನು ಕೊಟ್ಟರು ಆಗ ನಾನು complaint ಕೊಟ್ಟೆ, ಮತ್ತೊಬ್ಬರು ಕೊಟ್ಟರು ನಾವು complaint ಕೊಟ್ಟಮೇಲೆ enquiry ಮಾಡಿದರು ಇವತ್ತಿನರೆಗೂ ಕ್ರಮ ಜರುಗಿಸಿಲ್ಲ ಇದಕ್ಕೆ ಏನು ಕಾರಣ? ಇದರ ಹಿಂದೆ ಯಾರು ಇದ್ದಾರೆ? ನಾನು ಈ ಸಣ್ಣ ಸಣ್ಣ ವಿಚಾರಕ್ಕೆಲ್ಲಾ ಮಾನ್ಯ ಮುಖ್ಯಮಂತ್ರಿಯವರನ್ನು ದೂಷಣೆ ಮಾಡಲಾ? ಅಥವಾ ಮಾನ್ಯ ಜಗದೀಶ್ ಶೆಟ್ಟರ್‌ರವರು ಇದರ ಹಿಂದೆ ಇದ್ದಾರೆಂದು ಅವರನ್ನು ದೂಷಣೆ ಮಾಡಲಾ? ಆದರೆ ನೀವು ಜವಾಬ್ದಾರಿಯನ್ನು ಹೊತ್ತು

ಕೊಂಡಿರುವವರು, ನಿಮ್ಮ ಕರ್ತವ್ಯವನ್ನು ದಕ್ಷತೆಯಿಂದ ನಿರ್ವಹಣೆ ಮಾಡಲಿಲ್ಲ ನೀವು ಎಚ್ಚರವಾಗಿ ಇದ್ದಿದ್ದರೆ, ಸಮರ್ಪಕವಾಗಿ ಕೆಲಸ ಮಾಡಿದ್ದಿದ್ದರೆ, ಈ ಸ್ಥಿತಿ ಬರುತ್ತಾ ಇರಲಿಲ್ಲ ದಯಮಾಡಿ ನಿಮಗೆ ನಾನು ಈ ಎಲ್ಲಾ ದಾಖಲೆಗಳನ್ನು ಕಳುಹಿಸಿ ಕೊಡುತ್ತೇನೆ ಇನ್ನೊಂದು ವಿಚಾರವೇನೆಂದರೆ, ಇದು ಮಾನ್ಯ ಮುಖ್ಯಮಂತ್ರಿಯವರ ವ್ಯಾಪ್ತಿಗೆ ಬರುತ್ತದೆ ಒಂದು ಕಡೆಗೆ ನಿಮ್ಮ ಸರ್ಕಾರಿ ಸುತ್ತೋಲೆ ಹೇಳುತ್ತದೆ ಕೆಲವು ಜಮೀನುಗಳು ಗೋಮಾಳದ ಜಮೀನು, ಇವನ್ನೆಲ್ಲಾ ಯಾರಿಗೂ ಕೊಡುವ ಹಾಗೆ ಇಲ್ಲ, ವಿಲೇ ಮಾಡುವ ಹಾಗೆ ಇಲ್ಲವೆಂದು ಹೇಳುತ್ತೀರಿ ಮತ್ತೊಂದು ಕಡೆಗೆ ನೀವೇ ನೋಟಿಫೈ ಮಾಡಿ auction ಮಾಡುತ್ತೀರಿ ಇದು ಹೇಗೆ? How is this possible? ಗೋಮಾಳ ಲ್ಯಾಂಡ್ಸ್ ಅನ್ನು ಯಾವುದೇ ಕಾರಣಕ್ಕೂ, ಯಾರಿಗೂ ಕೊಡುವ ಹಾಗೆ ಇಲ್ಲ ವಿಲೇ ಮಾಡುವ ಹಾಗೇ ಇಲ್ಲವೆಂದು ಹೇಳಿ ಕೊಟ್ಟಿರುವಂಥಾ ಸರ್ಕಾರಿ ಸುತ್ತೋಲೆ ಇದೆ ಅದನ್ನು ನಿಮಗೆ ಕಳುಹಿಸಿಕೊಡುತ್ತೇನೆ ಮತ್ತೆ ಇದೇ ಜಮೀನುಗಳನ್ನು ಇತ್ತೀಚೆಗೆ ಹರಾಜು ಹಾಕುವುದಕ್ಕೆ ಪ್ರಾರಂಭ ಮಾಡಿದ ಮೇಲೆ, ಗೋಮಾಳ ಜಮೀನನ್ನು ಅದರಲ್ಲಿ ಸೇರಿಸಿದ್ದೀರಿ Earlier circular ಅನ್ನು repeal ಮಾಡಿದ್ದೀರಾ? ಇದನ್ನು ಯಾವಾಗ ಮಾಡಿದ್ದೀರಿ? ಯಾವ ಕಾರಣಕ್ಕಾಗಿ ಮಾಡಿದ್ದೀರಿ? ಗೋಮಾಳದ ಅಗತ್ಯ ಇಲ್ಲವಾ? ಹಾಗಾದರೆ ರಾಜ್ಯದ ಎಲ್ಲಾ ಕಡೆಗೂ ಇದೇ ಅನ್ವಯವಾಗುತ್ತದಾ? ನಮ್ಮ ಗೆಳೆಯ ಶ್ರೀ ಎ ಟಿ ರಾಮಸ್ವಾಮಿಯವರು ಬಂದರು ಇವತ್ತು I was reading something about his report ಒಂದೇ ಒಂದು sentence ಅನ್ನು ನಾನು ಹೇಳುತ್ತೇನೆ ಶ್ರೀ ಜಯಕರ್ ಜರೋಮ್‌ರವರು ಏನೇನು ಕೆಲಸ ಮಾಡಿದರೋ, I can't check his confidential records ಆದರೆ ಒಂದಂತೂ ಸತ್ಯ ನಾನು ಆ ವೇಳೆಗೆ ಸದನದಲ್ಲಿ ಇರಲಿಲ್ಲ B D A ಮುಚ್ಚಿ ಹೋಗುವಂಥಾ ಸ್ಥಿತಿಗೆ ಬಂತು B D A ಯನ್ನು revive ಮಾಡಿದ್ದು, ಬೆಂಗಳೂರಿನಲ್ಲಿ ಅನೇಕ ಸ್ಮರಣೀಯ ಕೆಲಸಗಳನ್ನು ಮಾಡುವುದರಲ್ಲಿ ಆತನದು ಸ್ವಲ್ಪ constribution ಇತ್ತು ನಾವು ಅವರಿಗೆ ಏನು ರಾಜ್ಯೋತ್ಸವ ಅವಾರ್ಡ್ ಅನ್ನು ಕೊಡಬೇಕಾಗಿಲ್ಲ, ಪದ್ಮಶ್ರೀಯನ್ನು ಕೊಡಬೇಕಾಗಿಲ್ಲ ಅನೇಕ ಜನರು ಶಿಕ್ಷೆಗೆ ಅರ್ಹರಾಗಿರುವವರು ನಮ್ಮ ಕಣ್ಣು ಮುಂದೆ ಡ್ಯಾನ್ಸ್ ಮಾಡಿಕೊಂಡು ಓಡಾಡುತ್ತಿರುವಾಗ,

ಅವರನ್ನೆಲ್ಲಾ ಬಿಟ್ಟು, ಇತನ ಮೇಲೆ ಎಲ್ಲೋ ಒಂದು ಕಡೆ observation ಮಾಡಿರುವುದು ಅದು ಅಷ್ಟು ಒಳ್ಳೆಯದಲ್ಲವೇನೋ, ಪ್ರಾಮಾಣಿಕವಾಗಿ ಕೆಲಸ ಮಾಡುವವರಿಗೆ ಮುಂದಕ್ಕೆ incentive ಇರುವುದಿಲ್ಲ dishonest peoplesಗೆ ಹೆಚ್ಚು ಪ್ರೋತ್ಸಾಹ ಇದರಿಂದ ಬರುತ್ತದೆಂಬ ಭಯ ನಾನು ನಿಮ್ಮ ಮೇಲೆ aspirations cast ಮಾಡುತ್ತಾ ಇಲ್ಲ, ವ್ಯಾಖ್ಯಾನ ಮಾಡುತ್ತಾ ಇಲ್ಲ I am trying to convey my very honest feelings Sale deed execute ಮಾಡಿರುವುದು, ಮತ್ತು ಇತರ ಎಲ್ಲಾ ದಾಖಲೆಗಳನ್ನು ಮಾನ್ಯ ಮುಖ್ಯಮಂತ್ರಿಯವರಿಗೆ ಕೊಡುತ್ತೇನೆ ಇನ್ನು Educationನಲ್ಲಿ ಸ್ವಲ್ಪ ಹಳ್ಳಿಗಾಡಿನಲ್ಲಿ 2nd Pre-University Levelನಲ್ಲಿ time Government Junior Collegeನಲ್ಲಿ, I am not talking about private Junior Colleges, ಪ್ರಯೋಗಾಲಯಗಳನ್ನು ತೆರೆಯುವುದಕ್ಕೆ, rooms ಕಟ್ಟಿ ಕೊಡುವುದಕ್ಕೆ ದಯಮಾಡಿ top priority ಕೊಡಿ ಅಲ್ಲಿ ಮಕ್ಕಳು ಮರದ ಕೆಳಗೆ, ಅಲ್ಲಿ ಇಲ್ಲಿ ಹೋಗುತ್ತಾರೆ ಈಗ ನಮ್ಮ ಶ್ರೀನಿವಾಸಪುರದಂಥ ಚಿಕ್ಕ ಊರಿನಲ್ಲೂ ಕೂಡ Private Junior Colleges ಮೂರು, ನಾಲ್ಕು ಬಂದಿವೆ ಆಗ ಯಾರು Government Junior Collegeಗಳಿಗೆ ಬರುತ್ತಾರೆ? ಯಾರು ಅತ್ಯಂತ ಬಡವರು ಇದ್ದಾರೋ, ಯಾರಿಗೆ ಓದುವ ಹಂಬಲ ಇದೆಯೋ, ಯಾರು private College ಗೆ ಹೋಗುವುದಕ್ಕೆ ಸಾಧ್ಯವಿಲ್ಲವೋ, ಅವರು ಬರುತ್ತಾರೆ ಆ ಮಕ್ಕಳಿಗೆ ನಾವು ಕೊಡುವಂಥಾ ಶಿಕ್ಷಣದ ಮಟ್ಟ ಉತ್ತಮ ಶಿಕ್ಷಣದ ಮಟ್ಟವಿರಬೇಕು ದಯಮಾಡಿ re-assess ಮಾಡಿಕೊಳ್ಳಿ, ಎಷ್ಟು ಕಡೆಗಳಲ್ಲಿ Government Junior Colleges ಇದೆ ಇದರ accommodationಗೆ ಎಷ್ಟು ಕಡೆಯಲ್ಲಿ demand ಇದೆ, ಅದನ್ನು ಮಾಡುವುದು, ಮತ್ತೆ Degree Collegeಗಳಲ್ಲಿ evaluation ಆಗಬೇಕು ನಾನು ಅಲ್ಲೂ ಇದ್ದೆನಲ್ಲಾ, ನನಗೆ ಅವರ ಕುಟುಂಬದವರೆಲ್ಲಾ ಗೊತ್ತು ಮಾನ್ಯ ಹೆಚ್ ಡಿ ರೇವಣ್ಣನವರ ಹತ್ತಿರ, ಮಾನ್ಯ ಹೆಚ್ ಡಿ ಕುಮಾರಸ್ವಾಮಿ ಯವರ ಹತ್ತಿರ ಹೇಗೆ ಕೆಲಸವನ್ನು ಹೇಗೆ ತೆಗೆದುಕೊಳ್ಳಬೇಕೋ, ಆ ರೀತಿಯಲ್ಲಿ ನಾನು ತೆಗೆದುಕೊಳ್ಳುತ್ತೇನೆ ನಾನು ಜನರಲ್ ಆಗಿ ಹೇಳುತ್ತಾ ಇರುವುದು

ಶ್ರೀ ಮಲ್ಲಿಕಾರ್ಜುನ ಖರ್ಗೆ ನೀವು ಹೇಳಿದ್ದು ಮಾನ್ಯ ಹೆಚ್ ಡಿ ರೇವಣ್ಣನವರು ಕೇಳುತ್ತಾರೆ ಅವರು ನಬಾರ್ಡ್‌ನಲ್ಲಿ ಮಾಡಿಕೊಡು ತ್ತೇವೆಂದು ಹೇಳಿದ್ದಾರೆ ನಿಮ್ಮ ಮಾತಿಗೆ ಅವರು ಬೆಲೆಯನ್ನು ಕೊಡುತ್ತಾರೆ ಅದು ಮಾನ್ಯ ಹೆಚ್ ಡಿ ರೇವಣ್ಣನವರು, ಅವರು ಇಲ್ಲಿಗೆ ಬಂದಿಲ್ಲ, ಅವರು ಬಂದ ಮೇಲೆ ಹೇಳಿದರೆ ಆಗುತ್ತದೆ ಇವರಿಗೆ ಹೇಳಿದರೆ ಅದು ಉಪಯೋಗವಾ ಗುವುದಿಲ್ಲ ಆ file ಇಲ್ಲಿಗೆ ಹೋಗುವುದಿಲ್ಲ ಇವರಿಗೆ ಬರುವುದೇ ಬೇರೆ file, ಅಲ್ಲಿ ಹೋಗುವುದೇ ಬೇರೆ file ಅದಕ್ಕೆ ಹೇಳಿದೆ

ಶ್ರೀ ಕೆ ಆರ್ ರಮೇಶ್ ಕುಮಾರ್ ಮಾನ್ಯ ಹೆಚ್ ಡಿ ರೇವಣ್ಣನವರಿಂದ ಕೆಲಸ ತೆಗೆದುಕೊಳ್ಳುವಂಥಾದ್ದು ಅದು ಒಂದು ದೊಡ್ಡ modus operandi ಆಗುತ್ತದೆ ಅದು ಸುಲಭವಾಗಿ ಆಗುವ ಕೆಲಸ ನಾವು ಅದನ್ನು public ಆಗಿ ಹೇಳಿದರೆ, ಆಮೇಲೆ ಎಲ್ಲರೂ ಕಲಿತುಕೊಂಡು ಎಲ್ಲರೂ ಹೋಗುತ್ತಾರೆ ಅದನ್ನು ಹೇಳುವುದಕ್ಕೆ ಬರುವುದಿಲ್ಲ ಅದು ಮಾನ್ಯ ಹೆಚ್ ಡಿ ಕುಮಾರಸ್ವಾಮಿ ಯವರಿಗೆ ಗೊತ್ತು, ನನಗೆ ಗೊತ್ತು, ನಾವು ಏನೋ ನಮ್ಮ ಕಾಲವನ್ನು ತಳ್ಳುತ್ತಿದ್ದೇವೆ ನಾವು manage ಮಾಡಿಕೊಳ್ಳುತ್ತೇವೆ Degree educationಗೆ ಲೆಕ್ಚರ್ ಆಗಿ ಸೇರಿಕೊಳ್ಳುತ್ತಾರೆ ಆಮೇಲೆ ಇಷ್ಟು ವರ್ಷ ಆದಮೇಲೆ ಖಾಯಂ ಆಗಿ time bound promotion ಇದೆಯಂತೆ, ಅದು Professor ಎಂದು, ಇವರು ಲೆಕ್ಚರ್ ಆಗಿ ಸೇರಿ ಆಮೇಲೆ professor ಆದಮೇಲೆ ಇವರು ಮಾಡಿದ ಪಾಠದಲ್ಲಿ ಎಷ್ಟು ಜನ ಹುಡುಗರು ಪಾಸ್ ಆದರು? ಇದರ ವಿಚಾರಣೆ ಬೇಡವೇ? ಅವರಿಗೆ ಟೈಮ್ ಟೈಮ್‌ಗೆ ಇಷ್ಟಿಷ್ಟೇ ಬೇಕೆಂದು ಕೇಳುತ್ತಾರೆ ನಮಗೆ ಅನೇಕ ಸಲ ಲಜ್ಜೆಯಾಗುತ್ತದೆ ಅದು ಏನು professorಗಳೋ, ಎಲ್ಲೋ ಒಂದು ಕಡೆ ಅವರನ್ನು ಆಗಾಗ ಕೆಲವು ಪರೀಕ್ಷೆಗಳಿಗೆ ಒಳಪಡಿಸಬೇಕು ಅವರ teaching level, if it is not upto the mark ನೀವು method ಏನು device ಮಾಡುತ್ತೀರೋ, ಅದನ್ನು ತಮಗೆ ಬಿಡುತ್ತೇನೆ I think we must do it There are good professors, ಅವರ ಬಗ್ಗೆ ನಾನು ಹೇಳುವುದಿಲ್ಲ I am talking about only useless Professors We compliment good ministers, we don't compliment other ministers ನಾವು ಮಾರ್ಕೆಟ್‌ಗೆ ಹೋಗುತ್ತೇವೆ ಅಲ್ಲಿ ಹಣ್ಣು ಚೆನ್ನಾಗಿ ಇದ್ದರೆ ತೆಗೆದುಕೊಳ್ಳುತ್ತೇವೆ, ಕೊಳೆತು ಹೋಗಿರುವ

ಹಣ್ಣನ್ನೆಲ್ಲಾ ಸಿಂಪತಿಗೋಸ್ಕರ ತೆಗೆದುಕೊಂಡು ಬರುತ್ತೇವಾ? ಅದೇ ಮನುಷ್ಯನಿಗೂ ಪ್ರಾಣಿಗಳಿಗೂ ಇರುವ ವ್ಯತ್ಯಾಸ You use your rationale ಮಾನ್ಯ ಅಧ್ಯಕ್ಷರೆ, ಈ Degree education ಕಡೆ ಗಮನ ಕೊಡಬೇಕೆಂದು ಹೇಳುತ್ತೇನೆ ಇನ್ನು Sports ಬಗ್ಗೆ nothing is said about sports ಕಡೇ ಪಕ್ಷ ನಮ್ಮ ಸರ್ಕಾರಿ ಹಿರಿಯ, ಕಿರಿಯ, ಪ್ರಾಥಮಿಕ ಶಾಲೆಗಳಲ್ಲಿ, ಪ್ರೌಢಶಾಲೆಗಳವರೆಗೂ ಎಲ್ಲೆಲ್ಲಿ ಆಟದ ಮೈದಾನಗಳು ಇದೆಯೋ, ಅಲ್ಲಿ ಪುಟ್ ಬಾಲ್, ವಾಲಿ ಬಾಲ್, ಅವುಗಳನ್ನು ಸಪ್ಲೈ ಮಾಡುವುದು, ಹೆಣ್ಣುಮಕ್ಕಳಿಗೆ ರಿಂಗ್, ಥ್ರೋ ಬಾಲ್ ಇವುಗಳನ್ನು ಕೊಡುವಂಥ ಒಂದು ವ್ಯವಸ್ಥೆ, ಮತ್ತು Physical education teachers ಅನ್ನು ಇಡುವಂಥಾದ್ದು ಏನೂ ಇಲ್ಲ ಹರಿಯಾಣದಲ್ಲಿ ಚೈಲ್ ಎನ್ನುವ ಊರಿನಲ್ಲಿ ಅವರು sport ಗೆ ಒಂದು school ಅನ್ನು ಮಾಡಿದ್ದಾರೆ It is an International standard ಆ ಚೈಲ್ ಸ್ಕೂಲ್ ಎಷ್ಟು ಚೆನ್ನಾಗಿದೆ ಅನೇಕ ಜನ ಮಕ್ಕಳು ಬಾಲ್ಯದಲ್ಲೇ ಅಲ್ಲಿ ಹೋಗಿ ಸೇರಿಕೊಂಡು ಬಿಡುತ್ತಾರೆ It is a residency school ಅವರು ಯಾವ್ಯಾವ ಆಟಗಳಲ್ಲಿ ಪರಿಣಿತವಾಗಿರುತ್ತಾರೆ ಅಲ್ಲಿ they become experts ದಯಮಾಡಿ ಮಾನ್ಯ ಮುಖ್ಯಮಂತ್ರಿಯವರಿಗೆ ಸಾಧ್ಯವಾಗುವುದಾದರೆ, ನಾಲ್ಕು, ಐದು ರೆವಿನ್ಯೂ ಡಿವಿಜನ್‌ಗೆ ಒಂದೊಂದರಂತೆ exclusive Sports school ಎಂದು ಮಾಡಿ 9 ವರ್ಷ, 10 ವರ್ಷಗಳ ಮೇಲ್ಪಟ್ಟ ಮಕ್ಕಳಿಗೆ ಗಂಡು ಮಕ್ಕಳಿಗೆ, ಹೆಣ್ಣು ಮಕ್ಕಳಿಗೆ, ಅವರಿಗೆ ಯಾವ sports ನಲ್ಲಿ ಆಸಕ್ತಿ ಇರುತ್ತದೋ, ಅದರಲ್ಲಿ ಅವರಿಗೆ train ಮಾಡಿ expertise ಮಾಡಿ ನಾಳೆ ಅವರು ಒಲಿಂಪಿಕ್ಸ್‌ಗೆ ಹೋಗುವಂಥಾವರನ್ನು train ಮಾಡುವಂದಾದ್ದು, these are all historic decisions ಮಾಡಬೇಕೆಂದರೆ ದುಡ್ಡು ತಾನಾಗೇ ಎಲ್ಲೋ ಒಂದು ಕಡೆಯಿಂದ ಬರುತ್ತದೆ You must be able to take some decision ಎಂದು ಹೇಳಿ, ಕೊನೆಯದಾಗಿ ಒಂದು ಮಾತನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ ನಾನು ಇನ್ನು ಮಾತನಾಡುವುದು ಬಹಳ ಇತ್ತು BDAನಲ್ಲಿ Employees' Association ಒಂದು ಇದೆ ನಾನು ಇವತ್ತೇ ಮಾತನಾಡಬೇಕೆಂದು ಅಂದು ಕೊಂಡಿರಲಿಲ್ಲ ನನಗೆ ನಾಳೆ ಮಾತನಾಡುವುದಕ್ಕೆ chance ಸಿಗಬಹುದೆಂದು ಅಂದು

ಕೊಂಡಿದ್ದೆ ನನಗೆ ಅದರ ದಾಖಲೆಗಳು ಪೂರ್ತಿ ಬರಲಿಲ್ಲ BDAನಲ್ಲಿ total employees ಎಷ್ಟು ಜನರಿದ್ದಾರೆ? ಇವರ associationನಲ್ಲಿ ಎಷ್ಟು ಜನರಿದ್ದಾರೆ? Associationನಲ್ಲಿ ಇರತಕ್ಕಂಥವರಿಗೆ ಒಬ್ಬೊಬ್ಬರಿಗೆ ಎಷ್ಟೆಷ್ಟು ಸೈಟುಗಳಿವೆ? ಈ ಸೈಟುಗಳು ಹೇಗೆ ಬಂದವು? ಇವರಿಗೆ ಈ ಸೈಟಿನ ಅಗತ್ಯವಿತ್ತೇ? ಮತ್ತು ಅವರ ಆಸ್ತಿಗಳ ವಿವರಗಳು ಈ Association ನ office bearers ಯಾರು? ಇವರಿಗೆ ವಿಶೇಷವಾಗಿ ಸರ್ಕಾರ ಎಷ್ಟು ಜಮೀನು ಕೊಟ್ಟಿತು? ಏಕೆ ಕೊಟ್ಟಿತು? ಇಷ್ಟಕ್ಕೆ ಮುಖ್ಯಮಂತ್ರಿಗಳು ಉತ್ತರ ತರಿಸಿಕೊಂಡು ಕೊಟ್ಟುಬಿಟ್ಟರೆ, I will be ever grateful ರಾಮಸ್ವಾಮಿಯವರ ಅಧ್ಯಕ್ಷತೆಯಲ್ಲಿ ಕಮಿಟಿ constitute ಮಾಡಿದ್ದೀರಿ ಅದರಲ್ಲಿ ನಮ್ಮ ಪಕ್ಷ ಭಾಗವಹಿಸಿತ್ತೋ, ಇಲ್ಲವೋ All that is different ತಾವು ಸಾರ್ವತ್ರಿಕವಾಗಿ ಒಂದು ಅಭಿಪ್ರಾಯವನ್ನು ಸ್ಥಾಪಿಸಿದ್ದೀರಿ ಭೂಗಳ್ಳರು ಯಾರಿದ್ದಾರೆ ಅವರನ್ನೆಲ್ಲ ಮಟ್ಟ ಹಾಕುತ್ತಿದ್ದೇವೆ, ಹಿಡಿದು ಹಾಕುತ್ತಿದ್ದೇವೆ, ಅವರಿಗೆಲ್ಲ ಬುದ್ಧಿ ಕಲಿಸುತ್ತಿದ್ದೇವೆ, ಆ ಜಮೀನುಗಳನ್ನೆಲ್ಲ ವಶಪಡಿಸಿಕೊಳ್ಳುತ್ತಿದ್ದೇವೆ" ಎಂದು ಹೇಳಿದ್ದೀರಿ ಆದರೆ, ನಿಮ್ಮ ಸರ್ಕಾರಿ ಸಂಸ್ಥೆಯಾಗಿರತಕ್ಕಂಥ ಬಿ ಡಿ ಎ ನಲ್ಲಿ ನೇರವಾಗಿ ನಿಮ್ಮ ಮೂಗಿನ ಕೆಳಗೇ Employees Association ಹೆಸರಿನಲ್ಲಿ ಎಷ್ಟು ಜನರನ್ನು ಹಿಡಿದಿದ್ದಾರೆ, ಹೇಗೆ ಅವರು ಪ್ರತ್ಯಕ್ಷವಾಗಿ, ಪರೋಕ್ಷವಾಗಿ, ಬೇರೆ ಬೇರೆಯವರ ಹೆಸರುಗಳಲ್ಲಿ ಸೈಟ್ಸ್ ತೆಗೆದುಕೊಂಡಿದ್ದಾರೆ? ನಾನು 1978 ರಲ್ಲಿ ಸದಸ್ಯನಾದೆ ನಾವು ಇದ್ದಾಗಲೇ ಸೊಸೈಟಿಯನ್ನು ಮಾಡಿದ್ದು 1978ರಲ್ಲಿ ಮೆಂಬರ್ ಆದ ನನಗೆ 1996ರಲ್ಲಿ ಸೈಟು ಕೊಟ್ಟರು ಮಧ್ಯೆ ಬಂದವರಿಗೆಲ್ಲ ಆವಾಗವಾಗಲೇ ಕೊಟ್ಟುಬಿಟ್ಟರು ಅವರಿಗೆಲ್ಲ ಅಲ್ಲಿ ಕೊಟ್ಟರು, ಇಲ್ಲಿ ಕೊಟ್ಟರು, ನಾನು ಒಂದು ದಿವಸವೂ ಕೇಳುವುದಕ್ಕೆ ಹೋಗಲಿಲ್ಲ Because I can't do such dirty things ಎಲ್ಲೋ ಕೊಟ್ಟ ಕಡೆ ತೆಗೆದುಕೊಂಡೆ ಯಾವುದೋ ಒಂದು Service road ನಲ್ಲಿ ಕೊಟ್ಟರು ಇದ್ದರೆ ಇರುತ್ತದೆ ಎಂದು ಹೇಳಿದೆ ಆ ಸೈಟ್ ತೆಗೆದುಕೊಂಡರೆ ನನಗೆ ಉಪಯೋಗಕ್ಕೆ ಬರುತ್ತದೋ, ಬರುವುದಿಲ್ಲವೋ, ಮತ್ತೊಮ್ಮೆ ಸರ್ಕಾರಕ್ಕೆ ಅರ್ಜಿ ಹಾಕಬೇಕೆಂದರೆ ತಲೆ ಕಡಿದಂತಾಗುತ್ತದೆ ಶಾಸಕರುಗಳು Affidavit ಕೊಡಬೇಕು, ಅವರು ಮೊದಲು ಸೈಟ್ ತೆಗೆದುಕೊಂಡಿದ್ದರೇ, ಇಲ್ಲವೇ ಎಂದೆಲ್ಲ ಕೊಡಬೇಕು ಇವರಿಗೆ ಒಬ್ಬೊಬ್ಬರಿಗೆ 4 ಸೈಟು, 5 ಸೈಟು ಎಲ್ಲಿಂದ ಬರುತ್ತದೆ? ಅವರು

ಮಾಡಿರತಕ್ಕಂಥ ದೊಡ್ಡ service ಏನು? ಇದು ನಿಮ್ಮ ಆಡಳಿತ ವ್ಯಾಪ್ತಿಗೆ ಬರತಕ್ಕಂಥಾದ್ದು ನಾನು ನೇರ ಆಪಾದನೆಯನ್ನು ಮಾಡುತ್ತಿದ್ದೇನೆ, ದಯಮಾಡಿ ವರ್ತಮಾನವನ್ನು ತರಿಸಿಕೊಳ್ಳಿ ಯಾವತ್ತು ಬಿ ಡಿ ಎ ನಲ್ಲಿ Resolution ಆಯಿತು ಯಾವತ್ತು ಸರ್ಕಾರ notification ಮಾಡಿ ಅವರಿಗೆ ಇಷ್ಟು ಜಮೀನು ಕೊಡಬೇಕೆಂದು ಎಂದು ಮಾಡಿದೆ, ಅವುಗಳನ್ನೆಲ್ಲ ತರಿಸಿ ದಯಮಾಡಿ ಉತ್ತರ ಕೊಡುವಾಗ ಹೇಳಬೇಕು ಎಂದು ಹೇಳಿ, ಇನ್ನೂ ಅನೇಕ ವಿಚಾರಗಳು ಮಾತನಾಡತಕ್ಕಂಥಾದ್ದು ಇದ್ದರೂ ಕೂಡ, ಮಾತನಾಡುವುದಕ್ಕೆ ಸಮಯದ ಅಭಾವವಿರುವುದರಿಂದ ನಾನು ಮಾತನಾಡುತ್ತಿಲ್ಲ ನಾನು ಸ್ವಲ್ಪ ಹದ್ದುಮೀರಿ ಮಾತನಾಡಿದರೂ ತಾವು ನನಗೆ ಅವಕಾಶ ಮಾಡಿಕೊಟ್ಟಿದ್ದೀರಿ ಈ ಸದನದ ವಿರೋಧ ಪಕ್ಷ ಸಾಲಿನಲ್ಲಿ ಕುಳಿತುಕೊಳ್ಳತಕ್ಕಂಥ ಅವಕಾಶವನ್ನು ಪಡೆದುಕೊಂಡಂಥವನಾಗಿ, ಸರ್ಕಾರ ನಮ್ಮ ಮುಂದೆ ಇಷ್ಟು ಬೃಹತ್ ಪ್ರಮಾಣದ ಬೇಡಿಕೆಗಳನ್ನು ಇಟ್ಟಿರತಕ್ಕಂಥಾದ್ದನ್ನು ಒಂದೊಂದನ್ನೂ ನಾವು ವಿಮರ್ಶೆ ಮಾಡಿದಾಗ ಎಲ್ಲೂ ಕೂಡ ಮನಸ್ಸಿಗೆ ತೃಪ್ತಿಯಾಗಿ, ಸಮಾಧಾನವಾಗಿ, ಜನರ ವಾರಸುದಾರರಾಗಿ, ಜನರ ನಂಬಿಕೆಯನ್ನು ಪಡೆದವರಾಗಿ ಈ ಬೇಡಿಕೆಗಳಿಗೆ ಮಂಜೂರಾತಿಯನ್ನು ಕೊಡಬಹುದು ಎನ್ನುವುದಕ್ಕೆ ನನ್ನ ಮನಸ್ಸು ಒಪ್ಪುತ್ತಿಲ್ಲ ವೃದ್ಧಾಪ್ಯ ವೇತನ ಹೆಚ್ಚಿಸುವುದು, ಸಾಲ ಮನ್ನಾ ಮಾಡತಕ್ಕಂಥಾದ್ದು ಹೀಗೆ ಘನವಾಗಿರತಕ್ಕಂಥ ಒಂದೆರಡು ಕೆಲಸಗಳನ್ನು ಮಾಡಿದ್ದೀರಿ ಮಾಡಿಲ್ಲ ಎನ್ನತಕ್ಕಂಥಾದ್ದು ಇಲ್ಲ ವೃದ್ಧಾಪ್ಯ ವೇತನವನ್ನು ಜಾಸ್ತಿ ಮಾಡಿದ್ದೀರಿ, ಸಾಲ ಮಂಜೂರಾತಿ ವಿಚಾರದಲ್ಲಿ, ಸಾಲ ಮನ್ನಾ ಮಾಡುವ ವಿಚಾರದಲ್ಲಿ ಒಳ್ಳೆಯ ಕೆಲಸವನ್ನು ಮಾಡಿದ್ದೀರಿ ನಾನು ಅದನ್ನೇ ಪ್ರಾರಂಭದಲ್ಲೇ ಹೇಳಿದೆ, ಒಟ್ಟು paper ಅನ್ನು evaluate ಮಾಡುವಾಗ correct ಆಗಿರುವ ಒಂದೆರಡು question ಗಳಿಗೆ ನಾವು tick ಮಾಡಿದ್ದೇವೆ, answer ಮಾಡಿದ್ದೇವ, ಆದರೆ overall ಪರೀಕ್ಷೆಯಲ್ಲಿ ನೀವು fail ಆಗಿದ್ದೀರಿ ನೀವು ಈ ಬೇಡಿಕೆಗಳನ್ನು ಪಡೆದುಕೊಳ್ಳುವುದಕ್ಕೆ ಅರ್ಹರಲ್ಲ ಎನ್ನತಕ್ಕಂಥ ಮಾತನ್ನು ಹೇಳಿ, ಯಾವ ಕಾರಣಕ್ಕೂ ಕೂಡ ಈ ಬೇಡಿಕೆಗಳ ಸ್ವೀಕಾರಕ್ಕೆ ನೀವು ಅರ್ಹರಲ್ಲ, ನೀವು ಸಮರ್ಥರಲ್ಲ, ರಾಜ್ಯದ ಹಿತ ನಿಮ್ಮ ಕೈಯಲ್ಲಿ ಕ್ಷೇಮವಲ್ಲ ಎನ್ನತಕ್ಕಂಥ ಮಾತನ್ನು ಹೇಳಿ, ಈ ಬೇಡಿಕೆಗಳನ್ನು ನಾನು ವಿರೋಧಿಸಿ ನನ್ನ ಮಾತನ್ನು ಮುಕ್ತಾಯ ಮಾಡುತ್ತಿದ್ದೇನೆ, ನಮಸ್ಕಾರ

ಶ್ರೀ ಎಸ್ ರಾಜೇಂದ್ರನ್ (ಕೆ ಜಿ ಎಫ್) ಸನ್ಮಾನ್ಯ ಸಭಾಧ್ಯಕ್ಷರೇ, Administration ಮೇಲೆ ಮಾತನಾಡಲು ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದನೆ ಹೇಳಿ ನನ್ನ ಮಾತನ್ನು ಪ್ರಾರಂಭಿಸುತ್ತೇನೆ ಕರ್ನಾಟಕ ರಾಜ್ಯದ administration ಯಾವ ರೀತಿಯಲ್ಲಿ ಇದೆ ಎನ್ನುವುದಕ್ಕೆ ನನ್ನ personal experience ಅನ್ನು ಹೇಳುತ್ತೇನೆ administration ಅಂದರೆ ಏನು? administration ಗೆ ಒಬ್ಬರು Chief person ಇರಬೇಕು, ಈ ರೀತಿ administration ಮಾಡಬೇಕು, ಅಧಿಕಾರಿಗಳು ಈ ರೀತಿ administration ಮಾಡಬೇಕು ಎಂದು ಒಂದು training programme ಅನ್ನು ಇಟ್ಟುಕೊಳ್ಳ ಬೇಕು ಅದಕ್ಕೆ chief ಯಾರಾಗಿರಬೇಕೆಂದರೆ, Chief Secretary ಯವರಾಗಿರಬೇಕು ಆದರೆ ನಮ್ಮ ಕರ್ನಾಟಕ ರಾಜ್ಯದ administration ಹೇಗಿದೆ ಎಂದರೆ, Chief Secretaryಗೆ Court notice issue ಮಾಡುತ್ತಿದೆ ಇದು ನಮ್ಮ administration Where we are lacking in the administration? ರಾಜ್ಯದ Chief Secretary ಯವರಿಗೇ ಈ ಗತಿ ಎಂದರೆ, ಉಳಿದ Secretary ಯವರ ಗತಿ ಏನಿದೆ ಎನ್ನುವುದನ್ನು ತಾವು ಯೋಚನೆ ಮಾಡಿ They do not know what is protocol and they talk himalaya ಆಕಾಶದೆತ್ತರಕ್ಕೆ ಮಾತನಾಡುತ್ತಾರೆ, ನಾವು ಒಳ್ಳೆಯ administration ಮಾಡುತ್ತೇವೆ, ನಾವು ಹೀಗೆ ಮಾಡುತ್ತೇವೆ ಎಂದು ಹೇಳುತ್ತಾರೆ ಇರಬಹುದು, ಕೆಲವು ಒಳ್ಳೆಯ ಅಧಿಕಾರಿಗಳೂ ಇರಬಹುದು But majority not good ಅಧಿಕಾರಿಗಳೂ ಇರಬಹುದು Home Department ನ ಒಬ್ಬ I G P , Inspector General of Police ರವರ ಕೆಳಗೆ ನಾಲ್ಕು ಜನ Superintendent of Police ಇರುತ್ತಾರೆ ಆದರೆ ಈ city ಯಲ್ಲಿ ದಿನಾ ಪೇಪರ್ ಅನ್ನು ನೋಡಿದರೆ ಸಾಕು, ಅಲ್ಲಿ ಕೊಲೆ, ಇಲ್ಲಿ ಕೊಲೆ, ಅವರನ್ನು ಕತ್ತರಿಸಿ ಬಿಟ್ಟರು, ರೌಡಿಗಳು ಇದನ್ನು ಮಾಡಿಬಿಟ್ಟರು ಈ ರೀತಿಯ ಸುದ್ದಿಗಳೇ ಇರುತ್ತವೆ Earlier it was only one D G P , one I G P , one S P ಆದರೆ ಈಗ ಒಬ್ಬ I G P ಕೆಳಗೆ ನಾಲ್ಕು S P ಗಳಿದ್ದಾರೆ Now, what is Administration? Where it is wrong? ಇಲ್ಲಿ ಪೊಲೀಸ್ ಆಫೀಸರ್‌ಗಳ ಬಗ್ಗೆ ಏನಾದರೂ ಪ್ರಶ್ನೆ ಕೇಳಿದರೆ, ಗೃಹ

ಮಂತ್ರಿಯವರು ಇಲ್ಲಿ ಉತ್ತರ ಕೊಡುತ್ತಾರೆ ಅಧಿಕಾರಿಗಳು ಏನು ಬರೆದು ಕೊಡುತ್ತಾರೋ, ಅದನ್ನೇ ಹೇಳುತ್ತಾರೆ ಆ ರೀತಿ ಇಲ್ಲ, ಹಾಗೆ ಆಗಿಲ್ಲ ಎಂದು ಹೇಳುತ್ತಾರೆ ನಾವು ಯಾವುದಾದರೂ ಅಧಿಕಾರಿಗಳ ಮೇಲೆ charge ಮಾಡಿದರೆ, ಆ Charge ಅನ್ನು ಏನು ಮಾಡುತ್ತಾರೆಂದರೆ ಅವರ ಮೇಲಾಧಿಕಾರಿಗಳು ಏನು ಮಾಡುತ್ತಾರೆಂದರೆ, ರ್‍ಯಾಂಕ್ ಪ್ರಕಾರ, ಅವರನ್ನು ಕಾಪಾಡುವುದಕ್ಕೋಸ್ಕರ wrong ಮಾಹಿತಿಗಳನ್ನು ಸರ್ಕಾರಕ್ಕೆ ಕೊಡುತ್ತಾರೆ ಅದನ್ನು ಇಟ್ಟುಕೊಂಡು ಮಂತ್ರಿಯವರು ನಮಗೆ ಉತ್ತರ ಕೊಡುತ್ತಾರೆ ಈ ಸಭೆಯಲ್ಲಿ ನಾವು ಭಾಷಣ ಮಾಡಿದರೆ ಅಲ್ಪಸ್ವಲ್ಪ value ಇರಬೇಕು ಕೇವಲ ಪತ್ರಿಕೆಗಳಲ್ಲಿ ನಮ್ಮ ಹೆಸರು ಬರಬೇಕು, T V ನಲ್ಲಿ ನಮ್ಮ ಮುಖ ತೋರಿಸಬೇಕು, ಪತ್ರಿಕೆಯವರು ನಮ್ಮ ಮೇಲೆ ಬಹಳ ಗೌರವವನ್ನಿಟ್ಟು ಕೊಂಡು ಬರೆದರೆ ಜನರು ನಮಗೆ ಬಹಳ ಓಟು ಕೊಟ್ಟುಬಿಡುತ್ತಾರೆ, Public ನಲ್ಲಿ ಒಳ್ಳೆಯ message ಬರುತ್ತದೆ ಎನ್ನುವುದಕ್ಕೋಸ್ಕರವಾಗಿ ಮಾತನಾಡ ಬಾರದು ನಾನು ಹಾಗೆ ಮಾತನಾಡುವುದೂ ಇಲ್ಲ Media will take its own privilege to write or not to write But my duty is that I have to bring to the House as well as to the media, where is the lacuna in administration of this Government That is my bourden duty to bring it down to this House Administrationನಲ್ಲಿ ಏನಾಗುತ್ತದೆಂದರೆ, ಶಾಸಕಾಂಗದಲ್ಲಿರುವ ನಾವು ಏನು ಮಾಡುತ್ತೇವೆಂದರೆ, ಮುಖ್ಯಮಂತ್ರಿಗಳ ಹತ್ತಿರ ಹೋಗುತ್ತೇವೆ, ನಮಗೆ ಇಂಥ ಅಧಿಕಾರಿಗಳನ್ನು ಕೊಡಿ ಎಂದು ಒಂದು letter ಕೊಡುತ್ತೇವೆ ನಮ್ಮದೂ ತಪ್ಪಿದೆ ಈ ಅಧಿಕಾರಿಯೇ ನಮಗೆ ಬೇಕು ಎಂದು ಕೇಳುತ್ತೇವೆ ಅದನ್ನು ಮಾಡದಿದ್ದರೆ ನಮಗೆ ಮುಖ್ಯಮಂತ್ರಿಯ ಮೇಲೆ ಕೋಪ ಬರುತ್ತದೆ ಮಾಡಿಕೊಟ್ಟರೆ, ಅವನು ನಮಗೆ co-operative ಆಗಿಲ್ಲದಿದ್ದರೆ, ಪುನಃ ಅವನು ಸರಿಯಿಲ್ಲ ಎಂದು ಮಾತನಾಡುವುದು ಆಗುತ್ತದೆ ನಾನು ಹಾಗಿಲ್ಲ ನಾನು ಇದುವರೆಗೂ Chief Minister ಹತ್ತಿರ ಒಂದೇ ಒಂದು D S P ಯನ್ನು ಮಾತ್ರ ಕೇಳಿದ್ದೇನೆ ಬಾಬಾ ಸಾಹೇಬ್ ಅಂಬೇಡ್ಕರ್‌ರವರು ಹೇಳಿದ್ದಾರೆ, 10 ಸಾವಿರ policemen ಬೇಡ, ನಮಗೆ ಒಂದು I G ಸಾಕು ಎಂದು ಹೇಳಿದ್ದಾರೆ ಇದಕ್ಕೆ ಏನು ಕಾರಣ? He is a commandable man, who is perfect, who can do

the administration well ಎಂದು ಅರ್ಥ ಒಂದು DSP ಮತ್ತು Municipal Commissioner ಇವರನ್ನು ಬಿಟ್ಟರೆ, ನಾನು ಯಾವ transfer ಗೂ ಹೋಗುವುದಿಲ್ಲ ಈ ಸಂದರ್ಭದಲ್ಲಿ ನಮ್ಮ ಊರಿಗೆ ಒಬ್ಬರು ಹೊಸ SP ಬಂದಿದ್ದಾರೆ ನಿಜವಾಗಿ ಹೇಳಬೇಕೆಂದರೆ, ಇನ್ನೂ ಅವರ ಮುಖವನ್ನು ನಾನು ನೋಡಿಲ್ಲ ಈ ರೀತಿಯ SP ಬೇಕು ಎಂದು ನಾನೂ ಕೇಳಿಲ್ಲ ನಾನು ಒಬ್ಬ ಸಾಮಾನ್ಯ ಶಾಸಕ ಅವರು ಬಂದ ಮೇಲೆ ನನಗೆ Phone ಮಾಡಿದರು ನನಗೆ ಅಂಥ ಸಂದರ್ಭ ಸಿಗಲಿಲ್ಲ, ನಾನು ಹೋಗಿ ಅವರನ್ನು ನೋಡಲಿಲ್ಲ ಅವರಿಗೂ ಸಂದರ್ಭ ಸಿಗಲಿಲ್ಲ, ನನಗೆ Phone ಮಾಡಲಿಲ್ಲ ಆದರೆ ನಾನು Social Welfare Minister ರವರನ್ನೋ ಅಥವಾ Health Minister ರವರನ್ನೋ ನನ್ನ ಕ್ಷೇತ್ರಕ್ಕೆ ಕರೆದುಕೊಂಡು ಹೋಗಬೇಕೆಂದರೆ I must take permission from my in Charge Minister In-charge Minister ಮುಖಾಂತರವೇ ನಾನು ಅವರನ್ನು fix ಮಾಡಬೇಕು ಅವರು ಬರುವುದಿಲ್ಲವೆಂದರೆ ಈ ಮಂತ್ರಿಗಳು ಬರುವುದಿಲ್ಲ ಅವರು time ಕೊಡಲಿಲ್ಲವೆಂದರೆ ಇವರು ಕೊಡುವುದಿಲ್ಲ, ಇವರು ಕೊಡುವ timeಗೆ ಅವರು ಬರುವುದಿಲ್ಲ ನಮ್ಮ ಸ್ಥಿತಿ ಹೇಗಿದೆ ಎಂದರೆ, in-charge minister ಮುಖಾಂತರವೇ ನಾವು ಹೋಗಬೇಕು what type of administration is this? ಇಲ್ಲಿ ನಾವು ಬರೀ ಭಾಷಣ ಮಾಡಿಬಿಟ್ಟು, ಅದು ರೆಕಾರ್ಡ್‌ಗೆ ಹೋಗಿ, ಒಳ್ಳೆಯ ಭಾಷಣ ಮಾಡಿದ್ದಾರೆ, humorous ಆಗಿದೆ, ನಗುವ ಹಾಗಿದೆ ಎನ್ನುವುದು ಮುಖ್ಯವಲ್ಲ ತಾವು ನಮ್ಮ ರಕ್ಷಣೆಗೆ ಬರಬೇಕು ತಾವು Speaker ಸ್ಥಾನದಲ್ಲಿ ಕುಳಿತುಕೊಂಡು ನಮ್ಮ ರಕ್ಷಣೆಗೆ ಬರಲಿಲ್ಲವೆಂದರೆ, ನಾವು ಈ House ನಲ್ಲಿ ಮಾತನಾಡುವುದಕ್ಕೆ value ವೇ ಇರುವುದಿಲ್ಲ You must instruct the concerned ministers, whoever it may be, "this is wrong, you must answer like this" ಎಂದು ನೀವು ಹೇಳಲೇಬೇಕು ನೀವು ಯಾವಾಗ ನಮ್ಮ ರಕ್ಷಣೆಗೆ ಬರುತ್ತೀರಿ, ಆವತ್ತು ಈ ಮಂತ್ರಿಗಳಿಗೆಲ್ಲ ಸ್ವಲ್ಪ ಭಯ ಬರುತ್ತದೆ ಎಂದು ಕಾಣುತ್ತದೆ ನೀವು ಯಾವಾಗ ನಮ್ಮ ರಕ್ಷಣೆಗೆ ಬರುತ್ತೀರೋ ಆವತ್ತು ಈ ಮಂತ್ರಿಗಳಿಗೆಲ್ಲ ಸ್ವಲ್ಪ ಭಯ ಇರುತ್ತದೆ ತಾವು Silent ಆಗಿ ಕುಳಿತುಕೊಂಡುಬಿಟ್ಟರೆ ಅವರು ಇನ್ನೂ silent ಆಗಿ

ಕುಳಿತುಕೊಂಡುಬಿಡುತ್ತಾರೆ ಅವರು silent ಆಗಿ ಕುಳಿತುಕೊಂಡ ಮೇಲೆ 'ನಮ್ಮನ್ನು ಏನೂ ಮಾಡುವುದಕ್ಕಾ ಗುವುದಿಲ್ಲವೆಂದು' ಅಧಿಕಾರಿಗಳಿಗೆ ತಲೆ ಮೇಲೆ ಕೊಂಬು ಬಂದುಬಿಟ್ಟಿರುತ್ತದೆ ಈ police officer ಆ S P ರವರನ್ನು ನಮ್ಮ in-Charge Minister ರವರು ನೋಡಿದ್ದೀರಾ? ಆ S P ಬಂದು ಸುಮಾರು 20 ದಿವಸಗಳಾಗಿದೆ ಇಷ್ಟರವರೆಗೆ ಆ S.P ಮುಖವೇ ಇವರಿಗೆ ಗೊತ್ತಿಲ್ಲ ಇವರು ಕೋಲಾರದ in-charge Minister ಆಗಿದ್ದಾರ ಇವರು administration ಮಾಡುವವರು ಇವರ ಮುಖಾಂತರ ನಾನು Programme ಅನ್ನು fix ಮಾಡಿಕೊಳ್ಳಬೇಕು 29ನೇ ತಾರೀಖಿಗೆ ನಾನು Social Welfare Minister ಅನ್ನು fix ಮಾಡಿದೆ 'ನನ್ನ ಕ್ಷೇತ್ರಕ್ಕೆ ಬಂದು ತಾವು ಈ ತರಹ ಈ ತರಹ ಕೆಲಸಗಳಿಗೆ ಪೂಜೆ ಮಾಡಬೇಕೆನ್ನುವ' ಒಂದು Programme ಸಲುವಾಗಿ Social Welfare Minister ರವರನ್ನು fix ಮಾಡಿದೆವು In-charge Minister ರವರ ಒಂದು ಮಾತು ಹೇಳಿ ರಾಜೇಂದ್ರನ್‌ರವರೆ ಎಂದು ಅವರು ನನಗೆ ಹೇಳಿದರು ನಾನು In-charge Minister ರವರ ಹತ್ತಿರ ಕೇಳಲೇ ಇಲ್ಲ ಆ programme ಅನ್ನು fix ಮಾಡಲೇ ಇಲ್ಲ ಕಾರಣವೇನೆಂದರೆ, ಒಬ್ಬ Superintendent of police ರವರೇ ಇವರಿಗೆ respect ನೀಡಲಿಲ್ಲವೆಂದರೆ, a Superintendent of Police, an IPS officer who has not respected the in-charge Minister in my district Why Should I? ನಾನು ಜನರಿಂದ ಗೆದ್ದು ಬಂದಿರುವನಲ್ಲವೇ? ನನಗೆ ನನ್ನ ಜನ ನನಗೆ ಓಟು ಕೊಟ್ಟಿರುವುದಿಲ್ಲವೇ? ಸರ್ಕಾರ ನನಗೆ nomination ಮಾಡಿ ಕೊಟ್ಟಿದ್ದಾರೆಯೇ? ಇಲ್ಲ Am I a dependant? No I am not a parasite But, ಸರ್ಕಾರದ ಕಲಸ ಮಾಡುವವರು parasites They are dependents to the Minister ಇನ್ನೂ ಕೂಡ Minister ರವರನ್ನು ಬಂದು ನೋಡಿಲ್ಲ, ಅವರ ಮುಖ ಹೇಗಿದೆಯೆಂದು ಗೊತ್ತಿಲ್ಲ whether he is an young or old or middle age, ತಮಗೇನಾದರೂ ಗೊತ್ತಿದೆಯೇ ಸ್ವಾಮಿ? ಮಂತ್ರಿಗಳೇ ಇಲ್ಲವೆಂದು ಹೇಳುತ್ತಾರೆಂದರೆ, ಇನ್ನು ಸರ್ಕಾರದ administration ಹೇಗಿದೆ ಎಂದು ಯೋಚನೆ ಮಾಡಿ ಅಂಥ ಅಧಿಕಾರಿ ಮೇಲೆ ತಾವು ಕ್ರಮ

ತೆಗೆದುಕೊಳ್ಳಬೇಕು that is a protocol respect The learned people have to give respect ನಾವು, ಬೀದಿಯಲ್ಲಿರುವವರೆಲ್ಲ ಇವರಿಗೆ respect ಇಲ್ಲ, ಇವರು ಸರಿಯಿಲ್ಲ, ಇವರ ಮೇಲೆ case ಹಾಕಿ ಎಂದು ಹೇಳುವ ಅಧಿಕಾರಿಗಳು ಎಷ್ಟು protocol respect ಇರಬೇಕೆಂದು ಯೋಚನೆ ಮಾಡಿ ಇದರ ಜೊತೆಗೆ ಅವರೇನು ಮಾಡುತ್ತಾರೆಂದರೆ, ಅದರಲ್ಲಿ ಭಾಷಣ ಮಾಡುವ ಜಾಗದಲ್ಲಿ, ನಾನು SP ಹೊಸದಾಗಿ ಬಂದಿದ್ದೇನೆ, ನನ್ನನ್ನು ಯಾರೂ ಏನೂ ಮಾಡುವುದಕ್ಕಾಗುವುದಿಲ್ಲ, ಇಲ್ಲಿ ಇಲ್ಲದಿದ್ದರೆ ಇನ್ನೊಂದು ಕಡೆ, ನಾನು ಯಾರಿಗೂ care ಮಾಡುವುದಿಲ್ಲ, What a non sense it is? ಇವರು care ಮಾಡುತ್ತಾರಾ? ಇವರು care ಮಾಡುವುದಿಲ್ಲವೇ? ಇದನ್ನು ಯಾರು ಕೇಳಿದರು? ನಾಳೆ ನನಗೆ ಕೋಪಬಂದರೆ ನಾನು ಯಾರನ್ನೂ shoot ಮಾಡಿಬಿಡುತ್ತೇನೆ, ನಾನು ಯಾರನ್ನೂ care ಮಾಡುವುದಿಲ್ಲ ನಾನು ಯಾರನ್ನೂ ಬೇಕಾದರೂ encounter ಮಾಡಿಬಿಡುತ್ತೇನೆ, ಈ ಭಾಷಣದ styleನಲ್ಲಿ ಹೋದರೆ, ನನಗೇನೂ ಭಯವಿಲ್ಲ I am not a smuggler, I am not a rogue, I am not a rowdy, I am not a Cheat, I need not salute anybody ನನಗೆ ಭಯ ಇದ್ದರೆ ಅದೇನೆ ಅಯ್ಯೋ ನನ್ನ ಆಫೀಸರ್ ಎಂದು I am clean handed ನಾನು ಭಯ ಪಡುವ ಅವಶ್ಯಕತೆಯೇ ಇಲ್ಲ ಇಂಥವರು public ಭಾಷಣದಲ್ಲಿ ನಾನು ಯಾರಿಗೂ ಹೆದರುವುದಿಲ್ಲವೆಂದರೆ mediaದಲ್ಲಿ ಏನಾಗಬಹುದು, public image ಏನಾಗಬಹುದು? ನಾಳೆ ಅಲ್ಲಿಯ in-charge Ministerರವರ ಗೌರವ ಏನಾಗಬಹುದು? ಈ ಪೊಲೀಸ್ ಅಧಿಕಾರಿ ಈ ತರಹ ಭಾಷಣ ಮಾಡುತ್ತಾರೆ, ಈ ತರಹ misbehave ಮಾಡುತ್ತಾರೆ ನಾಳೆಯ ದಿವಸ ನಾನು ಹೋಗಿ ಅವರಿಗೆ ಹೇಳಿದರೆ, ಜನರಿಂದ ಇವರಿಗೆ ಗೌರವ ಬರುತ್ತದೆಯೇ? ಜನರು ಮಂತ್ರಿಗೆ ಹೇಳಿದರೆ ಏನಾಗುತ್ತದೋ ಎನ್ನುವ ಭಯ ಬರುತ್ತದೆಯೇ? ಇಂಥ administration ನಲ್ಲಿ ತಾವು ಸರ್ಕಾರ ನಡೆಸಿಕೊಂಡು ಹೋದರೆ ನಾವು ಯಾರ ಹತ್ತಿರ ಹೋಗಿ ಕೇಳುವುದು? This is the value of your administration COD in police Department is a very important portfolio ಯಾರ್ಯಾರು ಏನೇನು ಮಾಡುತ್ತಾರೆಂದು ಅವನು deep ಆಗಿ

ಹೋಗಿ ಅವರ ಅಂತರಂಗದಲ್ಲಲ್ಲ ತೋಗಿ report ಕೊಡುವವರು COD Department. ನಮ್ಮ ಕರ್ನಾಟಕ ರಾಜ್ಯದಲ್ಲಿ ಹೇಗಿದೆ ಎಂದರೆ, ಯಾರಿಗೆ paid seat ಸಿಗಲಿಲ್ಲ, ಯಾರಿಗೆ ಒಳ್ಳೆಯ posts ಸಿಗಲಿಲ್ಲ, ಯಾರಿಗೆ administration ಕೈಗಾರಿಕೆ ಏರಿಯಾ ಸಿಗಲಿಲ್ಲ, Commercial area ಸಿಗಲಿಲ್ಲ, ಅಂಥ ಒಂದು ಕಾಂಜಿಪೀಂಜಿಗಳನ್ನು COD ಹಾಕುವುದು What an important portfolio COD is? ಅದರಲ್ಲಿ ಎಂಥವರು ಇರಬೇಕು? ಅಂಥ ಅಧಿಕಾರಿಗಳು ಅಲ್ಲಿರುವುದಿಲ್ಲ ಯಾರು ದುಡ್ಡು ಕೊಟ್ಟಿಲ್ಲವೋ, ಯಾರಿಗೆ ಸೀಟ್ ಸಿಗಲಿಲ್ಲವೋ, ಅವರನ್ನೆಲ್ಲ COD ಗೆ ಹಾಕುವುದು

ಶ್ರೀ ಕೆ ಜಯಪ್ರಕಾಶ್ ಹಗ್ಡೆ ಅವರು ಕಾಂಜಿಪೀಂಜಿ officers ಅಲ್ಲ ಒಳ್ಳೆಯ Officers ಆದರೆ, ಅವರ ಹತ್ತಿರ ದುಡ್ಡು ಇಲ್ಲ ಅಷ್ಟೆ

ಶ್ರೀ ಎಸ್ ರಾಜೇಂದ್ರನ್ ದುಡ್ಡು ಇಲ್ಲ ಹಾಗಾಗಿ ಪಾಪ ಅವರು CODಗೆ ಹೋಗಿ ಕುಳಿತುಕೊಳ್ಳುತ್ತಾರೆ ಇದು ನಮ್ಮ Administration in police Department ಪರಿಸ್ಥಿತಿ ಟಿಪ್ಪು ಸುಲ್ತಾನ್ ಕಾಲದಲ್ಲಿ purchase ಮಾಡಿರುವ gun ಗಳು, ಆ jeep, van ಗಳು, ಇನ್ನೂ ಇವೆ ನಾವು Modern technology ಬಗ್ಗೆ ಮಾತನಾಡುತ್ತೇವೆ "ನಮ್ಮ ಸರ್ಕಾರದಲ್ಲಿ ದುಡ್ಡು ತುಂಬಿದೆ" ಎಂದು ಹೇಳುತ್ತೀರಿ ಒಂದು Police Station Open ಮಾಡಲು ದುಡ್ಡು ಇಲ್ಲವೆಂದು ಹೇಳುತ್ತೀರಿ ನನ್ನ ಕ್ಷೇತ್ರದಲ್ಲಿ English ನವನು 1888 ನಲ್ಲಿ ಕಟ್ಟಿ ಬಿಟ್ಟು ಹೋಗಿರುವ police Station ಇದೆ ಅಲ್ಲಿ ಹೊಸ building ಅನ್ನು ಕೂಡ ಕಟ್ಟಿಲ್ಲ ಮಾತುಗಳಲ್ಲಿ ನೀವು ಏನು ಹೇಳುತ್ತೀರೆಂದರೆ, ನಮ್ಮ ಹತ್ತಿರ ದುಡ್ಡು ಇಷ್ಟಿದೆ, ದುಡ್ಡು ತುಂಬಿದೆ, ಎತ್ತಿಕೊಂಡು ಹೋಗುವುದಕ್ಕೆ ಯಾರೂ ಇಲ್ಲ ಹೊರಗಡೆ ರಾಜ್ಯದಿಂದ ಬಂದರೂ ಕೊಡುತ್ತೇವೆನ್ನುವ ಮಾತನ್ನು ಹೇಳುತ್ತೀರಿ Where do the police people will get more press? ಆ English ನವನು construction ಮಾಡಿಸಿರುವುದು ಒಬ್ಬ Sub Inspectorಗೆ ಮತ್ತು ಒಬ್ಬ constableಗೆ ಮಾತ್ರ, ಅಂದ buildingನಲ್ಲಿ ಈಗ Crime Sub Inspector, Law and order Sub Inspector, ಅದರ ಜೊತೆಗೆ ASI, Head constable, ಇವರಿಗೆಲ್ಲ room ಇಲ್ಲ ಸ್ವಾಮಿ ಇವರೆಲ್ಲ chair

ಹಾಕಿಕೊಂಡು ಬೀದಿಯಲ್ಲಿ ಕುಳಿತುಕೊಂಡಿದ್ದಾರೆ ಅವನು, ಓಹೋ ಚೆನ್ನಾಗಿದ್ದೀರಾ, ನಮಸ್ಕಾರ ಎಂದು ಹೇಳಿದರೆ, ಇವನು "ಬನ್ನಿ ಸರ್, ಟೀಗ ಹೋಗೋಣ" ಎಂದು ಹೇಳಿದಾಗ ಸರಿ ಹೋಗೋಣ ಎಂದು ಹೋಗುತ್ತಾರೆ ಅಲ್ಲಿ ಎಂಥ value ಇರುತ್ತದೆ? Value ಇರುತ್ತದೆಯೇ? ಇದನ್ನು ನೋಡಿ Circle Inspector ರವರು ಎಲ್ಲಿಗೆ ಹೋಗಿ ಬಂದಿದ್ದೀರಿ ಎಂದು ಕೇಳಿದರೆ ಟೀಗೆ ಸರ್ ಎಂದು ಹೇಳುತ್ತಾನೆ ಆಗ ನನಗೂ ಟೀ ತರಿಸಿ ಎಂದು ಹೇಳುತ್ತಾನೆ It is so shame for a Legislator who walks on the road ಇದಕ್ಕೂ ನಾನು ಈ ಸಭೆಯಲ್ಲಿ ಭಾಷಣ ಮಾಡಬೇಕೆ? ಇದು ಈ ಸಭಯಲ್ಲಿ ಬೇಕೇ? Is it Valuable a post? ಎಂಥ low level ನಲ್ಲಿ ನಾವು Administration ಮಾಡಿಕೊಂಡಿದ್ದೇವೆನ್ನುವುದನ್ನು ಯೋಚನೆ ಮಾಡಿ, ಇಂಥ ಅದಿಕಾರಿಗಳನ್ನಿಟ್ಟುಕೊಂಡು ನೀವು Administration ಮಾಡಿಕೊಂಡಿ-ದ್ದೇವೆನ್ನುವುದನ್ನು ಯೋಚನೆ ಮಾಡಿ ಇಂಥ ಅಧಿಕಾರಿಗಳನ್ನಿಟ್ಟು ಕೊಂಡು ನೀವು Administration ಬಗ್ಗೆ ಮಾತನಾಡುತ್ತೀರಿ, Administration ಚೆನ್ನಾಗಿದೆ ಎಂದು ಹೇಳುತ್ತೀರಿ, This is the morale of police Come to the point of your administration ಯರಗೋಳ್ಡ್ water Project ಶ್ರೀಮಾನ್ ಯಡಿಯೂರಪ್ಪನವರು ಸದನದಲ್ಲಿದ್ದಾರೆ ಪಾಪ, ನಾನು ಆವತ್ತು ಕೂಗಾಡಿದ್ದಕ್ಕೆ ಆ ದೊಡ್ಡ ಮನುಷ್ಯ ನಾಳೆ ಉತ್ತರ ಕೊಡುತ್ತೇನೆ ರಾಜೇಂದ್ರನ್, ಒಳ್ಳೆಯ food ನಿಮಗೆ ಸಿಗುತ್ತದೆ, ಒಳ್ಳೆಯ answer ಕೊಡುತ್ತೇನೆಂದು ಹೇಳಿದರೂ ಕೂಡ ನಾನು ಅವರನ್ನು ಬಿಟ್ಟಿಲ್ಲ ಇಲ್ಲ, ನೀವು ನನಗೆ ಅನ್ಯಾಯ ಮಾಡುತ್ತೀರಿ, ನಮ್ಮ reserve constituency ಗೆ ನೀವು ಕೊಟ್ಟಿಲ್ಲವೆಂದು ಇಷ್ಟೆಲ್ಲ ಕೂಗಾಡಿದ್ದೇನೆ ಆಗ ಅವರು, ಇಲ್ಲ, ನನ್ನ ಮೇಲೆ ನಂಬಿಕೆ ಇಡಿ, ನಾಳೆ ನಾನು ಒಳ್ಳೆಯ ರೀತಿಯ ಉತ್ತರ ಕೊಡುತ್ತೇನೆಂದು ಹೇಳಿದರು ಇಷ್ಟೆಲ್ಲಾ ನಾವು ಭಾಷಣ ಮಾಡಿದ ಮೇಲೆ ಅವರು '50 ಕೋಟಿ ಹಣವನ್ನು ನಾನು ಬಿಡುಗಡೆ ಮಾಡುತ್ತೇನೆಂದು' ಹೇಳಿದರು ನಾನು ಕೂಗಾಡಿದ್ದು, ನಾನು ಭಾಷಣ ಮಾಡಿದ್ದು ಯರಗೋಳ್ಡ್ project ನಿಂದ ಕುಡಿಯುವ ನೀರು ನಮ್ಮ ಊರಿಗೂ ಬರುತ್ತದೆ ಎನ್ನುವುದಕ್ಕೋಸ್ಕರ ಪುನಃ ಈಗ ನೀವು, ನಿಮ್ಮ administration ನಿಮ್ಮ ಸರ್ಕಾರ ಏನು ಮಾಡಿದ್ದೀರಿ? Water in-Charge Secretary ಯಾರೆನ್ನುವುದು ನನಗೆ ಸರಿಯಾಗಿ ಗೊತ್ತಿಲ್ಲ ಆ

ಮಹಾಪುರುಷ ಏನು ಮಾಡಿದ್ದಾರೆಂದರೆ, KGF ಗೆ ಆ ನೀರನ್ನೇ ಕೊಟ್ಟಿಲ್ಲ, ಯರಗೋಳ್ದ್ first project ಮಾಡಿರುವುದು KGF, ಬಂಗಾರಪೇಟೆ, ಮಾಲೂರು, ಕೋಲಾರ, ಮುಳಬಾಗಿಲಿಗೆ ನಮ್ಮ ಮಾನ್ಯ ಮುಖ್ಯಮಂತ್ರಿಗಳು ನನ್ನ ಕ್ಷೇತ್ರಕ್ಕೆ ಬಂದು ಇದನ್ನು announce ಮಾಡಿದರು ಮತ್ತು ಪತ್ರಿಕೆಯವರಿಗೂ ಕೂಡ ಹೇಳಿದರು This is the original project for which I spoke on this floor ಅಷ್ಟು ಕೂಗಾಡಿ Deputy Chief Minister ಅವರ ಹತ್ತಿರ ದುಡ್ಡು ಕೊಡಬೇಕೆಂದು ಮಾತನಾಡಿದ್ದು ನಾನೇ After closure of the mine, there is heavy shortage of drinking water Minister is well aware of this ನನ್ನ ಕ್ಷೇತ್ರವನ್ನು ಕೈಬಿಟ್ಟಿದ್ದಾರೆ KGF ಗೂ ಬಂಗಾರಪೇಟೆ ಯರಗೋಳ್ದ್ project ಗೂ just 12 Kms ನಮ್ಮ in-charge Minister ರವರ ಕ್ಷೇತ್ರಕ್ಕೆ 33 ಕಿ ಮೀ ದೂರಕ್ಕೆ ಅವರು ಮಂತ್ರಿಯಾದ ಮೇಲೆ ಆ IAS officer ಎಂಥಹವರು ಇರಬಹುದು, ಅವರಿಗೆ ಒಪ್ಪಿಕೊಂಡರು, ಮುಳಬಾಗಿಲಿಗೆ ಕೊಡುತ್ತೇವೆಂದು ಅವರಿಗೆ ಒಪ್ಪಿಕೊಂಡರು ಅಧ್ಯಕ್ಷರು ನಮ್ಮ ರಕ್ಷಣೆಗೆ ಬರಬೇಕು This is not my personal matter It is my people's matter, who gave Gold to the entire Karnataka and to India ಆವತ್ತು ನಾವು ಕೇಳಲಿಲ್ಲವೇ? ಬೇತಮಂಗಲ ಕೆರೆ ನೀರನ್ನು ನಾವು ಉಪಯೋಗ ಮಾಡಿಕೊಂಡಿದ್ದ ಸಮಯದಲ್ಲಿ ನಾವು ತಮ್ಮನ್ನು ಕೇಳಲಿಲ್ಲವೇ? Shivanasamudram was meant for omly BGML ಅದನ್ನೂ ಅವರು ತೆಗೆದುಕೊಂಡರು ನಾವು ಯಾರೂ ಆ ಕಾಲದಲ್ಲಿ fight ಮಾಡಲಿಲ್ಲ 30 ಕಿ ಮೀ ದೂರಕ್ಕೆ ನೀರು ಕೊಡುವುದಕ್ಕೆ ಇವರು ಒಪ್ಪಿಕೊಂಡರೆ ಇದು ಅಧಿಕಾರ ದುರುಪಯೋಗ ವಲ್ಲವೇ? ಅಥವಾ ಅಹಂಕಾರವೇ? Extra Constitutional method which he is using or adopting

ಶ್ರೀ ಕೆ ಜಯಪ್ರಕಾಶ್ ಹೆಗ್ಡೆ ಅವರು ಏನು ಮಾಡುತ್ತಾರೆಂದರೆ, ನೀವು ಕಷ್ಟಪಟ್ಟು ತೆಗೆದುಕೊಂಡು ಹೋದರೆ foundation stoneಗೆ inauguration ಗೆ ಅವರು ಬರುತ್ತಾರೆ ನೀವು ಏನೂ ಹೆದರಬೇಡಿ

ಶ್ರೀ ಆಲಂಗೂರು ಶ್ರೀನಿವಾಸ್ ಈಗಾಗಲೇ ಒಂದು ಕೆರೆ reserve ಆಗಿ ಹೋಗಿಬಿಟ್ಟಿದೆ ಅಲ್ಲಿ sufficient ಆಗಿ ನೀರಿದೆ ಅದಕ್ಕೆ ಅಂಥ ಅವಶ್ಯಕತೆಯಿಲ್ಲ ಆದ್ದರಿಂದ ಅದನ್ನು ಕೈಬಿಟ್ಟಿದ್ದಾರಷ್ಟೆ ಈಗ ಬೇತಮಂಗಲ ಕೆರೆಯಲ್ಲಿ ಬೇಕಾದಷ್ಟು ಇದೆ

ಶ್ರೀ ಎಸ್ ರಾಜೇಂದ್ರನ್ ತಾವು ತಕ್ಷಣ inspection ಮಾಡಿ You just send a Committee or press They can go there and see

(2-00 PM)

ಆ ಕೆರೆ ತುಂಬಿ ಅದರಲ್ಲೇನಾದರೂ ನೀರು ಒಂದಿಂಚು water at present ಇದ್ದು ನನ್ನ ಕೆಜಿಎಫ್‌ಗೆ ಬಂದರೆ, ನನ್ನ ಎಂಎಲ್ಎ ಪೋಸ್ಟ್‌ಗೆ ರಾಜೀನಾಮೆ ಕೊಡುತ್ತೇನೆ

ಶ್ರೀ ಆಲಂಗೂರು ಶ್ರೀನಿವಾಸ್ ಈಗ ಬರುವುದಿಲ್ಲ ಆ ಕೆರೆ ನೀರು ವ್ಯವಸಾಯಕ್ಕೆ ಉಪಯೋಗಿಸುವುದಲ್ಲ

ಶ್ರೀ ಎಸ್ ರಾಜೇಂದ್ರನ್ ಯಾವಾಗ ಬರುತ್ತದೆ ಸ್ವಾಮಿ? ಕೋಲಾರ ಡಿಸ್ಟ್ರಿಕ್ಟ್ ಎಂದರೇ ಬರಗಾಲ, dark area

ಶ್ರೀ ಆಲಂಗೂರು ಶ್ರೀನಿವಾಸ್ ಯರಗೋಳ್ಡ್‌ನಲ್ಲಿ ನೀರು ಬಂದಿಲ್ಲ ಮಳೆ ಬಂದರೆ ನೀರು ಬರುತ್ತದೆ De-silting ಗೆ ಬೇಕಾದರೆ, 5 ಕೋಟಿ ರೂ ಹಾಕಿದರೆ ಬಹುಶಃ ಯರಗೋಳ್ಡ್‌ನಲ್ಲಿ ಬರುವ ಎರಡರಷ್ಟು ನೀರನ್ನು ಅಲ್ಲಿ ಶೇಖರಣೆ ಮಾಡುವ ವ್ಯವಸ್ಥೆ ಮಾಡಬಹುದು

ಶ್ರೀ ಎಸ್ ರಾಜೇಂದ್ರನ್ ಯರಗೋಳ್ಡ್‌ಗೆ ಹೋಗಲು ಕೆಜಿಎಫ್‌ಗೆ ಬಂದು ಹೋಗಬೇಕು ಇವರಿಗೆ ನೀರು ಬೇಕು ನಾನು ಪಕ್ಕದಲ್ಲಿರುವವನು ನನಗೆ ನೀರು ಬೇಡ ಹೆಂಡತಿ ಪಕ್ಕದಲ್ಲಿಟ್ಟುಕೊಂಡಿರುವವನಿಗೆ ಅವನ ಹೆಂಡತಿಯ ಕೂದಲಿಗೆ ಹೂವು ಬೇಡ, ಅಲ್ಲಿಗೆ ಹೋಗುವವನಿಗೆ ಕೊಡುವುದಕ್ಕಾಗುತ್ತದೆಯೇ? ಅದಕ್ಕೆ ಹೀಗೆ ಮಾಡಿದ್ದಾರೆ ಕೋಲಾರ ಎಷ್ಟು distance ಇದೆ? ಅದು 30 ಕಿ ಮೀ distance ಇದೆ ಯಾರು ಶ್ರೀನಿವಾಸಗೌಡರು? ನೀವ್ಯಾರು? ಸ್ವಲ್ಪ ಯೋಚನೆ ಮಾಡಿ ಸ್ವಾಮಿ ಅವರಿಗೆ ನೀರು ಹೋಗಬೇಕು ಅವರ ಕೂದಲಿಗೆ ಹೂವು ಬೇಕು, ಇವರ ಕೂದಲಿಗೆ ಹೂವು ಬೇಕು ನಾನು ಮದುವೆಯಾಗಿರುವವನು ನನಗೆ ಹೂವು ಬೇಡವೇ? ಕೈಯಲ್ಲಿ ಸುತ್ತಿಕೊಡುತ್ತೇನೆ ಸ್ವಾಮಿ ಇದು ಹೇಗಿದೆ ಸಾರ್? What is this? The Minister is giving wrong information to us in this House

ನೀವು ಯಾರಿಗೆ preference ಕೊಡಬೇಕು ಮಂತ್ರಿಯವರೇ? KGF ಬಗ್ಗೆ ತಮಗೆಲ್ಲ ಗೊತ್ತಿದೆ ನಾನು ನಿಮ್ಮ ಒಳ್ಳೆಯ Friend ನಾನು ನಿಮ್ಮ ಬಗ್ಗೆ ಗೌರವವಿಟ್ಟು ಕೊಂಡಿರುವವನು ಮಾಡುತ್ತೀರೋ, ಬಿಡುತ್ತೀರೋ, that is different I am always your friend No doubt ತಾವು ನಮಗೆ first preference ನಮಗೆ ಕೊಡಬೇಕು ಅವರಿಗೆ ನಾನು good Friend ಅಲ್ಲವೋ ಗೊತ್ತಿಲ್ಲ ನನಗೆ ಅವರು good friend ಆಗಿದ್ದಾರೆ KGF city and Bethamangala constituency, two constituencies joined together forms Bangarpet taluk ಬಂಗಾರಪೇಟೆ ತಾಲ್ಲೂಕಿನಲ್ಲಿರುವ ನೀರನ್ನು ಕೊಡಬೇಕೆಂದರೆ, ಅದನ್ನು ನಮಗೆ ಮೊದಲು ಕೊಟ್ಟಮೇಲೆ ತಾನೆ ಮಾಲೂರಿಗೆ ಕೋಲಾರಕ್ಕೆ, ಮುಳಬಾಗಿಲಿಗೆ ಕೊಡಬೇಕು ಇಷ್ಟು 4 ಜಿಲ್ಲೆಗಳ ಎಂ ಡಿ ಅವರು ಓದಿರುವುದಕ್ಕೂ ಯೋಗ್ಯತೆ ಇದೆಯೇ ಎಂದು ಯೋಚನೆ ಮಾಡಿ ಇದಕ್ಕೆ ನಾನು ಅವರ ಮೇಲೆ ಭಾಷಣ ಮಾಡಬೇಕೇ? ಇದನ್ನು ನಾನು ಮಾತನಾಡಿಬಿಟ್ಟರೆ, IAS Officer ಮೇಲೆ ಇವರು ಹೀಗೆ ಮಾತನಾಡಿದರು ಎಂದು ಹೇಳುತ್ತಾರೆ ನನಗೇನೂ ಭಯವೇ ಇಲ್ಲ What way I should be obedient to him? Why should I be faithful to him? I should be faithful tomy parents I should be faithful to my people who voted to me Not for them It is my right ಭಾಷಣ ಮಾಡುವುದು ನನ್ನ ಹಕ್ಕು ಅದನ್ನು ಸರಿಪಡಿಸುವುದು ಮಂತ್ರಿಯವರು You call him and tell him to include KGF If he is not including, you are victimizing Scheduled Caste Reserve Constituency area ಅಂಥ ಸಂದರ್ಭದಲ್ಲಿ ನಮಗೆ Opposition leader, ಕಾಂಗ್ರೆಸ್ ಅಧ್ಯಕ್ಷರು ನಿಜವಾಗಲೂ ನನಗೆ ಸಪೋರ್ಟ್ ಮಾಡಿ, ಈ ಸರ್ಕಾರ ಯಾವ ರೀತಿಯಲ್ಲಿ ಮಾಡಬೇಕೆಂದು ಹೇಳಲೇಬೇಕು ಸಾರ್ They cannot neglect ಮೊನ್ನೆ ಭಾಷಣ ಮಾಡುವ ಟೈಂನಲ್ಲಿ Governor ರವರು Council ನಲ್ಲಿ ಏನು ಹೇಳಿದರು? ಜಾತಿ ಮೇಲೆ, ರಿಲಿಜಿಯನ್ ಮೇಲೆ, ಕ್ಯಾಸ್ಟ್, ಕಲರ್ ಮೇಲೆ ಹೋಗಬಾರದೆಂದು ಹೇಳಿದರು ಇಲ್ಲೇನು ನಡೆಯುತ್ತಿದೆ? Because KGF is Reserved constituency area, you want to neglect that yaragol project to my place

ಶ್ರೀ ಆರ್ ಶ್ರೀನಿವಾಸ್ ಈಗ ಮುಳಬಾಗಿಲು reservation ಆಗಿದೆ

ಶ್ರೀ ಎಸ್ ರಾಜೇಂದ್ರನ್ ಮೊನ್ನೆ ಮದುವೆ ಮಾಡಿಕೊಂಡಿರುವವಳು ಹಿಂದೂ ಆಮೇಲೆ divorce ಆದ ಮೇಲೆ ಮುಸ್ಲಿಂನನ್ನು ಮದುವೆ ಮಾಡಿಕೊಂಡರೆ ಅವಳು ಮುಸ್ಲಿಮಳೇ? ಅವಳು ಹುಟ್ಟಿರುವುದು ಯಾವ ಜಾತಿಯಲ್ಲಿ? ಅದು ಯೋಚನೆ ಮಾಡಿ ಹಿಂದೂ ಪ್ರಕಾರ ಒಬ್ಬನನ್ನು ಮದುವೆ ಮಾಡಿಕೊಳ್ಳುತ್ತಾಳೆ, divorce ಆಗಿ ಮುಸ್ಲಿಂ ವ್ಯಕ್ತಿಯನ್ನು ಮದುವೆ ಮಾಡಿಕೊಳ್ಳುತ್ತಾಳೆ ಆಗ ಅವಳು ಮುಸ್ಲಿಂ ವ್ಯಕ್ತಿಯಾಗುತ್ತಾಳೆಯೇ? ಈಗ ಆಗಿರುವುದು ಅದಕ್ಕೆ ಕೊಡಿ, ಬೇಡವೆಂದು ಹೇಳಲಿಲ್ಲ ಮುಳಬಾಗಿಲು ತೆಗೆದುಕೊಳ್ಳಿ ಆನರ, ಸತ್ಯಾಂಶ ನೋಡಿ ಕೆಲವು ಸಂದರ್ಭದಲ್ಲಿ ಮಂತ್ರಿಯವರು ಅಧಿಕಾರಿಗಳನ್ನು ರಕ್ಷಣೆ ಮಾಡಿಕೊಳ್ಳುವುದಕ್ಕೋಸ್ಕರ ಅಲ್ಲಿ ಮಾತನಾಡಿದರೆ, They will take the advantage and we will get disadvantaged ಅವರು IPS, IAS Officers ಆಗಿರಲಿ ಅವರು ತಪ್ಪು ಮಾಡಿಬಿಟ್ಟು ಅವರ higher ಅಧಿಕಾರಿಯ ಹತ್ತಿರ ತಾವು ರಿಪೋರ್ಟ್ ಕೇಳಿದರೆ ಅವರು ಅವರಿಗೆ adverse ಆಗಿ ಕೊಡುವುದೇ ಇಲ್ಲ

(ಈ ಹಂತದಲ್ಲಿ ಮಾನ್ಯ ಸಭಾಧ್ಯಕ್ಷರವರು ತಮ್ಮ ಸ್ಥಾನವನ್ನಲಂಕರಿಸಿದರು)

ಯಾವ ರೂಪದಲ್ಲಿ ಅವರನ್ನು ಕಾಪಾಡಬೇಕು ಎಂದು ಯೋಚನೆ ಮಾಡಿ ಅವರನ್ನು ಕಾಪಾಡುತ್ತಾರೆ ಈಗ ತಮ್ಮನ್ನು ಬಿಟ್ಟರೆ ನಮ್ಮ ರಕ್ಷಣೆಗೆ ಬರುವವರಾರು? ನಾವು ಚುನಾವಣೆಯಲ್ಲಿ ಜನರಿಗೆ ನಮಸ್ಕಾರ ಹೇಳಿ, ಇಷ್ಟೆಲ್ಲ ಕಷ್ಟಪಟ್ಟು ಗೆದ್ದು ಬಂದು ಮಂತ್ರಿಯಾಗಿ ಕುಳಿತುಕೊಂಡಿರುವುದು ಇದೆ ನಿಮ್ಮ ಕಷ್ಟ ನಮಗೆ ಗೊತ್ತಿದೆ ಆದರೆ, ನಮ್ಮ ಕಷ್ಟ ತಮಗೆ ಗೊತ್ತಾಗಬೇಕು ನೀವು ನಮ್ಮ ಕಷ್ಟವನ್ನು ಒದಗಿಸಿ ಅವರ ರಕ್ಷಣೆಗೆ ಹೋದರೆ, ಅವರು ಕಾಲ ಮೇಲೆ ಕಾಲುಹಾಕಿಕೊಂಡು ಆಯಿತು ಸಾರ್ ನೋಡೋಣವೆಂದು ಹೇಳುತ್ತಾರೆ ಮಂತ್ರಿಗಳ ಹತ್ತಿರ, Yes, I will look into matter ಎಂದು ಹೇಳುತ್ತಾರೆ Corporation School ನಲ್ಲಿ ಓದಿರುವವರೂ I look into this matter ಎಂದು ಹೇಳುತ್ತಾರೆ, Convent School ನಲ್ಲಿ ಓದಿರುವವರೂ ಅದನ್ನೇ ಹೇಳುತ್ತಾರೆ It makes no difference Unfortunately or fortunately they are sitting in their position and we are sitting in our Position We are no way lesser than anybody People have given us the opportunity in

this democratic country to speak for the truth and we should be loyal to the people But, ಅದು ಅವರಿಗಿಲ್ಲ ನಿಮ್ಮ administration ಗೊಂದಲವಿತ್ತು ಒಂದೊಂದು ಡಿಪಾರ್ಟ್‌ಮೆಂಟ್‌ನ ಒಂದೊಂದು ಪಾಯಿಂಟ್ ಹೇಳುತ್ತೇನೆ ಶಂಕರಮೂರ್ತಿಯವರು ಬಂದ ಮೇಲೆ ತಾವು ಅವರಿಗೆ ತಿಳಿಸಿ ಇಲ್ಲವೆಂದರೆ, my respectful friends, media is there At least, they will inform through their news ಏಕೆಂದರೆ, ಅವರು ಸಿಕ್ಕುವುದೇ ಇಲ್ಲ ಸಾರ್, ಇವರ administration ಹೇಗಿದೆ ನೋಡಿ? ಒಂದು Education matterನಲ್ಲಿ Criminal Procedure, High Court, Supreme Court ಯಾವ Court ಕೊಟ್ರೇನು? ನಾವು ಅದಕ್ಕೆ respect ಕೊಡಬೇಕು ಆ ಸಂದರ್ಭಗಳಲ್ಲಿ, The court has given very clearly ಪ್ಯಾರೆಜಾನ್, ಮಹಮದ್ ಅತಾವುಲ್ಲಾ, ಎಂ ಭಕ್ತ ವತ್ಸಲಂ & ಆಫೀಸ್ ಇವರು 4 ಜನರಿಗೂ Golden Valley Educational Trust ನಲ್ಲಿ ಒಳಗಡೆ ಬರಬಾರದು ಎಂದು Permanent Injuction Order has been given ತಾವೂ ವಕೀಲರಾಗಿದ್ದೀರಿ Government ಗೆ instruction ಕೊಟ್ಟಿದ್ದಾರೆ Permanent Injuction-With the peaceful administration, First Grade College, Law College and other principal membership dignitaries should not enter We are giving permanent Injuction Order ಎಂದು ಕೋರ್ಟ್ ಆದೇಶ ಕೊಟ್ಟಿದೆ ಅದರ ಕಾಪಿಯೂ ಇದೆ ಆ ಕಾಲೇಜ್‌ಗೆ ಸರ್ಕಾರ Grant-in-aid ಕೊಡುತ್ತದೆ ಅಂಥ permanent Injuction Order ತೆಗೆದುಕೊಂಡಿರುವವನನ್ನು ಆ ಕಾಲೇಜ್ ಅಧ್ಯಕ್ಷರು ಆ ಕಾಲೇಜ್‌ಗೆ General Secretary ಮಾಡಿದ್ದಾರೆ What is the role of your administration in that? Have you stopped the grant? Never Have You taken any action? Never ಕೊನೆಗೆ, ಆ ಕಾಲೇಜ್‌ನಲ್ಲಿ ಓದಿರುವವನೇ ಆ education matter ನ Professor ಅನ್ನು Suspend ಮಾಡಿದ್ದಾರೆ He appealed to the Principal Secretary ಅವರು ಕುಳಿತುಕೊಂಡು Judgment ಕೊಟ್ಟರು ಯಾವ Judgement? ನೀವು ಮಾಡಿರುವುದು ತಪ್ಪು, ಅವನನ್ನು ಕಾಲೇಜ್‌ಗೆ ಸೇರಿಸಿಕೊಳ್ಳಬೇಕು ಎಂದು Thay have not accepted ಇವರ ಆರ್ಡರ್ ಅನ್ನು ಅವರು ಕೇರ್

ಮಾಡಿಲ್ಲ They have not accepted at all What ıs the actıon taken? I have to brıng to the notıce of the Mınıster ನಾನು Educatıon Mınıster ರವರ notıceಗೆ ತೆಗೆದುಕೊಂಡು ಬಂದು, ಸ್ವಾಮಿ, earlıer, ಮಂಜುನಾಥ್‌ರವರು Educatıon Mınıster ಆಗಿದ್ದ ಸಂದರ್ಭದಲ್ಲಿ ಆ ಕಾಲೇಜ್‌ಗೆ admınıstrator ಅನ್ನು ಹಾಕಬೇಕೆಂದು Law Mınıster and Revenue Mınıster ಬರೆದಿದ್ದಾರೆ, ಆ ಕಾಪಿಯನ್ನೂ ಕೊಡುತ್ತೇನೆ, ನೋಡಿ ಸ್ವಾಮಿ ಎಂದು ಹೇಳಿದೆ ಅದಕ್ಕೆ ಅವರು ಹೌದಾ? ಹೌದು ಅವರೇ ಬರೆದಿದ್ದಾರೆ, ಏಕೆ ಹಾಕಿಲ್ಲವೆಂದು ಕೇಳಿದರು ಅವರು ಹಾಕಿಲ್ಲ ಸ್ವಾಮಿ, ತಾವು ಹಾಕಿ ಎಂದೆ ಅವರು Prıncıpal Secretary ಯವರನ್ನು ಕರೆದು, he ıs requestıng the prıncıpal Secretary, Educatıon Department A Mınıster ıs requestıng 'Please, kındly do somethıng ' ರಾಜೇಂದ್ರನ್ ಯಾವಾಗಲೂ ನನಗೆ ತೊಂದರೆ ಮಾಡುತ್ತಾರೆ ಎನ್ನುತ್ತಾರೆ ನಾನು ತೊಂದರೆ ಮಾಡುತ್ತಿದ್ದೇನೆಯೇ? ಹಾಗಿದ್ದರೆ, ನೀವು ರೆಡ್ ಲೈಟ್ ಕಾರು, ಜನರ ಟ್ಯಾಕ್ಸ್ ಉಪಯೋಗಿಸಿಕೊಂಡು Luxurıes ಅನುಭವಿಸುವುದು ಸರಿಯೇ? ನಿಮ್ಮ ಅಧಿಕಾರಿಗಳ style, A C room ಗಳೆಲ್ಲ ಪಾಪವೇ? ನಾನು ಕಸ ತಿನ್ನುವವನು ನೀವು ತುಪ್ಪ ಹಾಕಿಕೊಂಡು ಒಳ್ಳೆಯ ಊಟ ಮಾಡುವವರು A Mınıster ıs requestıng An elderly personalıty, an experıemced personalıty, who need not care for anythıng ın the future of hıs lıfe, he ıs requestıng the concerned Secretary, Eduatıon department ಆ ಸೆಕ್ರೆಟರಿ ಏನು ಹೇಳುತ್ತಾರೆ ಗೊತ್ತೇ, ಆ ಅಧ್ಯಕ್ಷ ಬಹಳ arrogant, ಅವನು ಒಪ್ಪಿಕೊಳ್ಳುವುದೇ ಇಲ್ಲ He ıs a retıred IAS officer He wıll not anythıng He wıll ımmedıately go to the court Then what for ıs the Advocate General of the State? ನಾವು ನಮಸ್ಕಾರ ಹೇಳಿಕೊಳ್ಳುವುದಕ್ಕಾ? ಇಲ್ಲ ನಾವು ಗೌರವ ಕೊಡುವುದಕ್ಕೇ? He ıs ınsultıng the Mınıster and the Mınıster ıs requestıng hım, ಏನಾದರೊಂದು ಮಾಡಿ At least you stop the grant Then, they say that the Commıssıone is not Co-Operatıng To whom I have to brıng about thıs? Where can I speak about thıs? I only say, ಅಧ್ಯಕ್ಷರೇ, ಅಧ್ಯಕ್ಷರೇ ಎಂದು ಹೇಳಿ ಅಭ್ಯಾಸವಾಗಿಬಿಟ್ಟಿದೆ ತಾವು ಅಧ್ಯಕ್ಷರು

ಏನು ಮಾಡುವುದಕ್ಕಾಗುತ್ತದೆ? ತಾವು ಏನಾದರೂ ಕೋಪ ಬಂದು ನೀವು ಮಂತ್ರಿಗಳನ್ನು ಬೈಯ್ದು ನೀವು ಸರಿಯಿಲ್ಲವೆಂದು ಹೇಳಿದರೆ ಅಟ್‌ಲೀಸ್ಟ್ ಅವರ ನಾಲ್ಡೇಜ್‌ಗೆ ಬರುತ್ತದೆಯೇ? ನೋಡೋಣ ಆ ಸ್ಥಿತಿಗೆ ಬಂದು ಬಿಟ್ಟಿದೆ It is so shameful, it is very shameful, utter shame, such notorious ರೌಡಿಗಳನ್ನು ಅವನು ಕೋರ್ಟ್ ಆರ್ಡರ್ ಇದ್ದರೂ Perrmanent injuction order ಇದ್ದರೂ ಅವನು ಜನರಲ್ ಸೆಕ್ರೆಟರಿಯಾಗಿ ಅದರ ಮೇಲೆ ಕೋರ್ಟಿಗೆ ಹೋಗಿ ತಡೆ ಇಟ್ಟಿದ್ದಾನೆಂದು ನನಗೆ ಉತ್ತರ ಕೊಟ್ಟರೆ, Where is the administration in this Government? It is a total failure ಗಟ್ಸ್ ಇಲ್ಲ, ಧೈರ್ಯ ಇಲ್ಲ, ನಿಮಗೆ ಧಮ್ ಇಲ್ಲ If you are not able to control an officer, Then, what for you are a Minister in this Government? Minister ಅಂದರೆ ಏನು ಗೌರವ? ನಾನಂತೂ Minister ಅನ್ನು ತಲೆ ಮೇಲೆ ಇಟ್ಟುಕೊಂಡಿದ್ದೇನೆ ನಿಮ್ಮ ಗೌರವದ ಬಗ್ಗೆ ನಾನು ಸತ್ಯವಾಗಿ ಹೇಳುತ್ತೇನೆ ನೀವು ಮಾಡುತ್ತೀರೋ ಬಿಡುತ್ತೀರೋ ಆದರೆ ನಾನು ಮಾತ್ರ protocol ಗೌರವ ಮಾತ್ರ ಇಟ್ಟುಕೊಂಡಿದ್ದೇನೆ, ನಾನು ಅಷ್ಟೊಂದು ಗೌರವ ಕೊಡುತ್ತೇನೆ Because, I know what is that struggle We are fighting in that crowd with the prople to win ಆ ಕಷ್ಟ ನನಗೆ ಗೊತ್ತಿದೆ Independent ಆಗಿ Contest ಮಾಡುವ Candidate ಆಗಿ ನನಗೆ ಕಷ್ಟ ಗೊತ್ತಿದೆ ಎಂದರೆ ತಮಗೆಲ್ಲ ಎಷ್ಟು ಕಷ್ಟ ಇರಬಹುದೆಂದು ನನಗೆ ಗೊತ್ತಿದೆ ಅದನ್ನೆಲ್ಲಾ ತೆಗೆದುಕೊಂಡು ಬಂದು ನೀವು ಇಲ್ಲಿ ಕುಳಿತ್ತಿದ್ದೀರಿ ಇವರು ಜಾಲಿಯಾಗಿ ಬಂದು ಯಾರು ಎದುರುಗಡೆ ಬರುತ್ತಾರೆ ಅವರಿಗೆ ನಮಸ್ಕಾರ ಹೇಳಿ, boot licking ಮಾಡಿ ಒಳ್ಳೆಯ post ನಲ್ಲಿ ಕುಳಿತುಕೊಂಡರೆ, ಇವರು ನಮಗೆ ಹೇಳುವುದು ಏನೆಂದರೆ, ನೋಡೋಣ I will see to that, I will look in to this Why? ಇದು administration? Floorನಲ್ಲಿ direct ಆಗಿ ಯಾರು administration ಬಗ್ಗೆ ಮಾತನಾಡಿಲ್ಲ Subject ಮೇಲೆ ಮಾತನಾಡಿದರು ನಾನು ಒಂದೊಂದು department ನಲ್ಲಿ ನಿಮ್ಮ administration ನ ನ್ಯೂನತೆಗಳನ್ನು ಹೇಳುತ್ತೇನೆ ಕೇಳಿ Is it not shameful? Can't you take serious action? ಒಂದು ಜಡ್ಜ್ ಸ್ಥಾನದಲ್ಲಿ ಕುಳಿತಿರುವ Principal

Secretary, ತಾವು order ಮಾಡಿದ್ದೇವೆ ಇದನ್ನು accept ಮಾಡಿ ಎಂದರೆ, ಆ college ಇನ್ನುವರೆಗೆ accept ಮಾಡಿಲ್ಲ ಒಂದು ವರ್ಷವಾಗಿದೆ ಅವನಿಗೆ ಒಂದು ರೂಪಾಯಿ ಕೊಟ್ಟಿಲ್ಲವೆಂದರೆ ಆ ಓದಿರುವ graduate Professor ಹೇಗೆ ಜೀವನ ಮಾಡುವುದಕ್ಕಾಗುತ್ತದೆ? ನೀವು ಮಾತನಾಡುತ್ತೀರಿ, ಅವನಿಗೆ BPL card ಕೊಡುತ್ತೇವೆ, ಅವನಿಗೆ APL card ಕೊಡುತ್ತೇವೆ, ಅವನಿಗೆ ಊಟಕ್ಕೆ ವ್ಯವಸ್ಥೆ ಮಾಡಿ ಎಂದರೆ, an educated fellow can he just go back to his low level life? ಅವನು ಮಕ್ಕಳೆಲ್ಲಿ ಓದುವುದು? ಒಂದು ರೂಪಾಯಿ ಕೊಟ್ಟಿಲ್ಲ What arrogance he must be possessing? He is a rich arrogance possessing fellow What action has this Government taken? ತೆಗೆದುಕೊಳ್ಳುವುದಕ್ಕೆ ಧೈರ್ಯ ಇದೆಯೇ? ಏಕೆ ಮಾಡಿಲ್ಲವೆಂದು ಮಂತ್ರಿಗಳಿಗೆ ಅಧಿಕಾರಿಗಳಿಗೆ ಹೇಳುವುದಕ್ಕೆ ಧೈರ್ಯ ಇದೆಯೇ ಸಾರ್ ಅದು ಕೋರ್ಟ್‌ಮ್ಯಾಟರ್ ಮಾನ್ಯ ಜಾರಕೀಹೊಳಿಯವರೆ ತಾವು in-charge minister ಆಗಿ ಬಂದಿರುವ ಟೈಂನಲ್ಲಿ ತಮ್ಮ ಸಮ್ಮುಖದಲ್ಲಿ co-operative Society ಬಗ್ಗೆ ಕೇಳಿದೆವು ತಾವು ಅಧಿಕಾರಿಗಳಿಗೆ ಏನು ಹೇಳಿದಿರಿ, ಕೋರ್ಟಿನಲ್ಲಿ Stay ಇದ್ದರೆ ಹೈಕೋರ್ಟಿಗೆ ಹೋಗಲಿ ವಜಾ ಮಾಡಿ ಎಂದು ಹೇಳಿದಿರಿ, ತಮ್ಮ ಗಮನಕ್ಕೆ ಇದೆಯೋ ಇಲ್ಲವೋ, ಆ ಒಂದು Co-operative Society ಬಗ್ಗೆ ಇಲ್ಲಿಯವರೆಗೆ ಮಾಡಿಲ್ಲ Till today, why? Officers have no fear about you Why? I don't know Either your captain is so liberal or your captain is not involved in your matter Whether you have individual freedom or you are parasite or dependent? I do not Know You will be answerable for this No body will answer Sir, one more point about administration of your Government, regarding Co-operative Society ಇದರಲ್ಲಿ ಮುಖ್ಯಮಂತ್ರಿಯವರು ಬಹಳ ಗಂಭೀರವಾಗಿ ಒಂದು ಸೊಸೈಟಿಯ ಬಗ್ಗೆ ಉತ್ತರ ಕೊಟ್ಟರು ಏನು ಕೊಟ್ಟರು? ಸ್ವಾಮಿ ನಮ್ಮ ಊರಿನಲ್ಲಿ ಒಂದು ಕೋ-ಆಪ್‌ರೇಟಿವ್ ಸೊಸೈಟಿ ಇದೆ, ಅದು ಬೋಗಸ್, ಅದರ ಬಗ್ಗೆ No-1 of this State No doubt, I have high regards about my Chief Minister My Chief Minister cannot notice everything But, ಸೆಕ್ರೆಟರಿಗಳು ನೋಡಬೇಕಲ್ಲವೇ?

ಅಧಿಕಾರಿಗಳು ನೋಡಬೇಕಲ್ಲವೇ? I called the attention of Hon'ble Chief Minister regarding unauthorised occupation of the property belonging to liquidated KGF Co-operative Society, by Saravana TVS Agency at Ambedkar Road, Robertsonpet, KGF ಇದರ ಮೇಲೆ ನಾನೊಂದು call attenstion notice ಕೊಟ್ಟಿದ್ದೆ ಅದಕ್ಕೆ ಮುಖ್ಯಮಂತ್ರಿಯವರು ಉತ್ತರ ಕೊಟ್ಟರು ಪೂರ್ತಿ ಉತ್ತರ ಹೇಳಿದರೆ ಟೈಂ ಆಗುತ್ತದೆ ಅವರು ಏನು ಹೇಳುತ್ತಾರೆಂದರೆ, ಎಲ್ಲಾ ಕೊಟ್ಟು ಬಿಟ್ಟು 39X81running TVS Agency Show room Which year? Very long back It has come to the notice that Sri Ramani, President of Society has created records and has invested money for the construction of the building and he is running TVS agency and it has also come to the notice that Sri B A Ramani, is the owner of the TVS agency, Liquidator is taking necessary action with the help of police authorities to get backl the asserts of the Society as false documents have been fabricated for constructing building and running the show room ಯಾರು ಹೇಳಿರುವುದು? ಹೆಚ್ ಡಿ ಕುಮಾರ್‌ಸ್ವಾಮಿ ಮಾನ್ಯ ಮುಖ್ಯಮಂತ್ರಿಗಳು Concocted, fabricatyed, bogus ಎಲ್ಲಾ ಸತ್ಯಾಂಶನೆ with support of the Police ನಾನು ಅದನ್ನು take over ಮಾಡುತ್ತೇನೆ ಒಂದು ವರ್ಷವಾಗಿದೆ, ಇದನ್ನೇ ನಾನು Social Welfare Minister in charge ಆಗಿರುವ ಟೈಂನಲ್ಲಿ ಆ KDP ಮೀಟಿಂಗ್‌ನಲ್ಲಿ ಮಾತನಾಡಿದ ಟೈಂನಲ್ಲಿ ಆ Registrar of Co-operative Socities ಅವನ ಮಾತಿಗೆ ತಾವು ಹೇಳಿದಿರಿ, ರೀ ಹಾಗೆ ಇದ್ದರೆ ಅದನ್ನು High Court ನಲ್ಲಿ Stay cancel ಮಾಡಿ take over ಮಾಡಿ ಎಂದು ಹೇಳಿದರೂ ಇದುವರೆಗೆ ಮಾಡಿಲ್ಲವೆಂದರೆ, ಮಾನ್ಯ ಮುಖ್ಯಮಂತ್ರಿ ಉತ್ತರ ಕೊಟ್ಟು ಭಾಷಣ ಮಾಡಿ confirmed in this House that it is fabricated and created and wrongful documents ಎಂದು ಅವನನ್ನು ಅರೆಸ್ಟ್ ಮಾಡಿಲ್ಲ, ಆ ಪ್ರಾಪರ್ಟಿಯನ್ನು take over ಮಾಡಿಲ್ಲ Concerned Registrat ಅನ್ನು meet ಮಾಡಿ, ಸ್ವಾಮಿ ಈ ತರಹದ ಏನಾದರೂ ಸುದ್ದಿ ಇದೆಯೇ ಎಂದರೆ, ನನಗೆ IAS officer ಹೇಳುತ್ತಾರೆ, "ನನ್ನ ಗಮನಕ್ಕೆ ಯಾವುದೂ ಬಂದಿಲ್ಲ" "ಇಲ್ಲ ಇಲ್ಲ ನಾನು

ತೆಗೆದುಕೊಂಡು ಬರುತ್ತೇನೆ ಚೆಕ್ ಮಾಡಿ ಎಂದರೆ "I don't think, it is not, I don't feel, it is not," ಈ ಮಾತುಗಳನ್ನು ಕೇಳಿಕೊಂಡಿದ್ದರೆ ನಮಗೆಷ್ಟು ಕೋಪ ಬರುತ್ತದೆಂದರೆ, ಎಲ್ಲಿಯಾದರೂ 307, 302, ಆಗಿ ಬಿಡುತ್ತದೆ ಎನ್ನುವಷ್ಟು ಕೋಪ ಬರುತ್ತದೆ ಈಗ ನಾವು ಮುಟ್ಟಿಬಿಟ್ಟರೆ ಏನಾಗುತ್ತದೆ? ಓಹೋ ಒಬ್ಬ IAS ಅಧಿಕಾರಿಯನ್ನು ಅಂದರೆ ಸರ್ಕಾರದ ಒಬ್ಬ ಅಧಿಕಾರಿಯನ್ನು ಮುಟ್ಟುವುದಕ್ಕಾಗುತ್ತದೆಯೆ ಎಂದು ಹೇಳಿಬಿಟ್ಟರೆ, ನಾನು ಮನುಷ್ಯ ತಾನೇ, ಊಟ ತಿನ್ನುವವನು ತಾನೆ, ನನಗೆ ಫೀಲಿಂಗ್ಸ್ ಇರುವುದಿಲ್ಲವೇ? ಆಮೇಲೆ ಏನು ಮಾಡುತ್ತೀರಿ? ಓಹೋ ಅಧಿಕಾರಿಗಳನ್ನು ಮುಟ್ಟುವುದಕ್ಕೆ ಆಗುತ್ತದೆಯೇ? ನಮ್ಮ ರೇಣುಕಾಚಾರ್ಯರವರು ಯಾರೋ ಅಧಿಕಾರಿಗಳ ಮೇಲೆ ಮುಟ್ಟುವುದಕ್ಕೆ ಹೋಗುವ ಟೈಂನಲ್ಲಿ ಗಲಾಟೆ ಮಾಡಿಬಿಟ್ಟರಲ್ಲ, ಪಾಪ ಅವರು ಎಷ್ಟು ನೋವಿನಿಂದ ಮುಟ್ಟಿದರೋ? ಈಗ ನನಗೆ ಗೊತ್ತಾಗಿದೆ ಅವರು ಮುಟ್ಟಿರುವ ನ್ಯಾಯ ಅವರು ಮುಟ್ಟೇ ಇಲ್ಲ, ಮುಟ್ಟಿ ಬಿಟ್ಟಿರಬೇಕು Yes Why naxalites are created in this Country? This is the Main cause ನಾವು ಸುಮ್ಮನೆ ಸಾಮಾನ್ಯ ಮನುಷ್ಯನ ಮೇಲೆ ಹೆಸರು ಹೇಳಿಕೊಂಡು ಅವನು ಊಟಕ್ಕೆ ಇಲ್ಲ, ಜಮೀನು ಇಲ್ಲ, ನಕ್ಸಲೈಟ್ಸ್ ಆಗಿದ್ದಾನೆಂಬುದು ಎಲ್ಲಾ ಸುಳ್ಳು They are depressed because of your administration Wrong people are elected and they are coming and sitting and not controlling that corrupt officers, they are taking more advantage and creating nuisance in the Society ಇದರ ಮೇಲೆ ನಾನು ಇನ್ನೇನು ನಿಮ್ಮ administration ಬಗ್ಗೆ explantation ಕೊಡಬೇಕು? ಇದರ ಮೇಲೆ ನಾನು ನಿಮ್ಮ administration ಬಗ್ಗೆ ಏನು ಹೇಳಬೇಕು? ಮಾನ್ಯ ಮುಖ್ಯಮಂತ್ರಿಗಳು ಹೇಳಿದರೂ ಆ ಕೆಲಸವಾಗಿಲ್ಲ ಬಂದಿರುವ SP ಯಾರು ಎಂದು ನಮ್ಮ Incharge Ministerಗೆ ಗೊತ್ತಿಲ್ಲ ಅವರು ಬಂದು protocol ಪ್ರಕಾರ at least phone ನಲ್ಲಿ, "ನಾನು ಹೊಸ SP ಯಾಗಿ ಬಂದಿದ್ದೇನೆ, ನೀವು ಹೇಗೆ ಇದ್ದೀರಿ, ತಮಗೆ ಟೈಂ ಇದ್ದರೆ ನಾನು ಬರುತ್ತೇನೆ, ನಾನು ಬಹಳ ಬ್ಯೂಸಿ ನಾನೊಬ್ಬನೆ IPS ಯಾಗಿ ಹುಟ್ಟಿರುವುದು, ಆಕಾಶದಿಂದ ಬಂದಿರುವುದು, ಬೇರೆ ಯಾರು ಇಲ್ಲ, ನನ್ನ ಬಿಟ್ಟರೆ ಈ ರಾಜ್ಯದಲ್ಲಿ ಬೇರೆ ಯಾರು

ಓದುವವರು ಇಲ್ಲ" ಆ ರೀತಿ ಅವರಿಗೆ ತಿಳಿಸಬೇಕು ಅಲ್ಲವೆ? ನಾಳೆ ನಮ್ಮ in charge Minister ಊರಿಗೆ ಬಂದರೆ, ನಾನು ಮಾತ್ರ ಯಾರು ಬಂದರೂ ಹೋಗಿ ನೋಡುವುದಿಲ್ಲ ಮಂತ್ರಿಯವರೆ, ಹೆಗ್ಡೆಯವರು ಕೇಳುತ್ತಿದ್ದಾರೆ, ಆ SP ಬಂದು ಇನ್ನು ನೋಡಿಲ್ಲವೇ ಎಂದು ನನ್ನನ್ನು ಕೇಳುತ್ತಿದ್ದಾರೆ ನಾವು ಅವರನ್ನು ಹೆದರಿಸಿಕೊಂಡು ಅವರನ್ನು ಟ್ರಾನ್ಸ್‌ಫರ್ ಮಾಡಬೇಕೋ ನಮಗೇನು ಭಯವಿಲ್ಲ ಮಂತ್ರಿಗಳು ಮನಸ್ಸು ಮಾಡಿದರೆ ನಾಳೆ ಎತ್ತಿ ಬಿಸಾಕಬಹುದು But, ಅವರು ಮಂತ್ರಿಗಳು ಎತ್ತಿ ಬಿಸಾಕುವುದಕ್ಕೆ ಆಗುವುದಿಲ್ಲ ಅವರ ಭಾಷಣದ ಸ್ಟೈಲ್ ಹೇಗೆ ಎಂದರೆ, ನಾನು ಯಾರಿಗೂ ಹೆದರಿಕೊಳ್ಳುವುದಿಲ್ಲ, ನಾನು ಯಾರಿಗೂ care ಮಾಡುವುದಿಲ್ಲ, ಇದೇನು ಭಾಷಣ? ಇದೇನು ಸ್ಟೈಲ್? ಇವರೇನು ನಮಗೆ ಬೆದರಿಸುತ್ತಿದ್ದಾರೋ ಏನೋ ನನಗೆ ಗೊತ್ತಿಲ್ಲ That is unfair ಸಾಮಾನ್ಯ ಒಬ್ಬ Constable ಬಾಯಿಂದ ಬಂದರೆ ಪರವಾಗಿಲ್ಲ ಪಾಪ ಅವನು ಓದಿಲ್ಲ ಬಿಡಿ, ಅವನಿಗೆ ಅಷ್ಟು ಕ್ವಾಲಿಫಿಕೇಷನ್ ಇಲ್ಲವೆಂದು ಹೇಳಬಹುದು, they are learned people I P S , I A S ಎಂದರೆ ಏನು? ಮಾನ್ಯ ಅಧ್ಯಕ್ಷರು ಈಗಾಗಲೇ ಹೇಳಿದರು ಬಹಳ ಗೌರವದ ಮಾತುಗಳು ಹೇಳಿದರು ನಾವು ಓದುವ ಟೈಂನಲ್ಲಿ I A S , I P S ಎಂದರೆ ಬಹಳ ಗೌರವ ಇತ್ತು ನಾವು ಏನೇನು ತಿಳಿದುಕೊಂಡಿದ್ದೆವು, ಅವರು ಬಹಳ ಸೂಕ್ಷ್ಮವಾಗಿ ಹೇಳಿದರು ನಾನೂ ಕೂಡ ಹಾಗೆ ತಿಳಿದುಕೊಂಡಿದ್ದೆ ನಾನೂ ಹಾಗೆ I A S , I P S , ಓದಬೇಕು, ವಾಹ್ ಒಳ್ಳೆಯ ಕೆಲಸ ಮಾಡಬಹುದು, ಜನ ನಮ್ಮ ಮೇಲೆ ವಿಶ್ವಾಸ ಇಟ್ಟಿರುತ್ತಾ ರೆಂದರು ಈಗ ನನಗೆ ಆ ಕಂತ್ರಿ ಕೆಲಸ ಕೊಟ್ಟರೂ ಬೇಡ ಸ್ವಾಮಿ

ಅಧ್ಯಕ್ಷರು ನಿಮಗೆ IAS ಕೊಡಬೇಕೆಂದು ನಿರ್ಧಾರ ಮಾಡಿದ್ದಾರೆ ಬೇಡ ಸ್ವಾಮಿ ನನಗೆ ಬೇಡ ಸ್ವಾಮಿ ನಾನು ಬೇಕಾದರೆ ಬೀದಿಯಲ್ಲಿ ಬಂಡಿ ತೆಗೆದುಕೊಂಡು ಹೋಗಿ ಬಿಡುತ್ತೇನೆ ಏಕೆಂದರೆ ಅಲ್ಲಿ ಗೌರವ ಇರುತ್ತದೆ ನಾಲ್ಕು ಜನ ಹೆಣ್ಣು ಮಕ್ಕಳು, ತರಕಾರಿ ಬನ್ನಿ, ನೂಲ್‌ಕೋಲ್ ಬನ್ನಿ ಎಂದು ನನ್ನನ್ನು ಕರೆಯುತ್ತಾರೆ ಇವರು most corrupt fellows ಅವರನ್ನು enquiry ಮಾಡುವುದಕ್ಕೆ Interpolಗೆ ದೇಶದಲ್ಲಿರುವವರಿಗೆ ಕೊಡಬಾರದು ಕೊಟ್ಟು ನೋಡಿ ಈಗ ಮಾನ್ಯ ರಮೇಶ್ ಕುಮಾರ್‌ರವರು ಲೋಕಾಯುಕ್ತರವರು ನಮಗೆ ಬ್ಯಾಂಕ್ ಅಕೌಂಟ್ ನಂಬರ್ ಕೇಳುತ್ತಾರೆ

ಎಲ್ಲಾ ಕೇಳುತ್ತಾರಂದು ಭಾಷಣ ಮಾಡಿದರು Yes He is right Let him ask We will give No doubt ಅವರು ಯಾರ್ಯಾರನ್ನು ಕೇಳಬೇಕೆಂದು ಅವರು ಇನ್ನು ಪಟ್ಟಿ ಮಾಡಿಲ್ಲ ಯಾರ್ಯಾರದು ಕೇಳಬೇಕೆಂದು ಪಟ್ಟಿ ಮಾಡಿದರೆ ಗೊತ್ತಾಗುತ್ತದೆ ರಾಜಕೀಯಕ್ಕೆ ಬಂದ ಮೇಲೆ ಯಾರ್ಯಾರು ಯಾವ್ಯಾವ ಸ್ಥಿತಿಯಲ್ಲಿ ಇದ್ದಾರೋ ಈಗ ಅವರು ಯಾವ ಸ್ಥಿತಿಯಲ್ಲಿ ಇದ್ದಾರೆ ಎನ್ನುವುದರ ಬಗ್ಗೆ ಪಟ್ಟಿ ಮಾಡಿ ಕೇಳಿದರೆ, ನಮಗೆ ಇನ್ನು ಸಂತೋಷ ನಮ್ಮ ತರಹ ಇರುವವರನ್ನು ಕೇಳಿದರೆ ಏನು ಪ್ರಯೋಜನ? ಏನೂ ಇಲ್ಲ Sir, this is the administration where you are doing wrongful things and talking that ಬಹಳ ಚೆನ್ನಾಗಿ ಜನಗಳಿಗೆ ಸರ್ಕಾರ ಮಾಡುತ್ತಿದೆ, ನಾವು ಹೀಗೆ ಮಾಡಿದ್ದೇವೆಂದು ಹೇಳುವುದು ತಪ್ಪಾಗುತ್ತದೆ ಇದು Education department valueless ಆಗುತ್ತದೆ ಸೀನಿಯರ್ ಆಗಿರುವಂಥ ಶ್ರೀಮಾನ್ ಶಂಕರ್ ಮೂರ್ತಿಯವರು, ಪಾಪ ನಾನು ಅವರ ಮೇಲೆ ತಪ್ಪೆಂದು ಹೇಳುವುದಕ್ಕೆ ಆಗುವುದಿಲ್ಲ, ಆದರೆ ಅವರ ಕಂಡೀಷನ್ ಹೇಗೆ ಇದೆ ನೋಡಿ ಆದರೆ, ಅವರು ಮಂತ್ರಿಗಳಾಗುವುದಕ್ಕಿಂತ ಮುಂಚೆ ಕೌನ್ಸಿಲ್‌ನಲ್ಲಿ ಅವರ ಭಾಷಣ ಎಂದರೆ ಎಲ್ಲರಿಗೂ ಷೇಕ್, ಅಷ್ಟು ಸ್ಟ್ರಾಂಗ್ ಆಗಿರುವುದು, ಮಂತ್ರಿಯಾದ ಮೇಲೆ ಏನಾಯಿತೋ ನನಗೆ ಗೊತ್ತಿಲ್ಲ ಒಂದು ಮಾತ್ರ ನನಗೆ ಅರ್ಥವಾಗುತ್ತದೆ ಯಾರ್ಯಾರು ಮಂತ್ರಿಯಾಗಿಲ್ಲವೋ ಅವರು ದಿನ ಹೌಸ್ ಅನ್ನು ಅಟೆಂಡ್ ಮಾಡುತ್ತಾರೆ ನಾವು ಮಾತನಾಡುವ ಟೈಂನಲ್ಲಿ ಈ ಮೆಂಬರ್‌ಗಳು ಓಹೋ ಎಂದು ಕೂಗಾಡುವುದು ಅವರೇನು ಭಾಷಣ ಮಾಡುತ್ತಾರೆನ್ನುವುದು ಗೊತ್ತಾಗುವುದಿಲ್ಲ ಅವರು ಕೂಗಾಡುವುದನ್ನು ಸಿಎಂ ರವರು ಹೋಗಿ ನೋಡುವುದು ಅಪ್ಪಿತಪ್ಪಿ ಮಂತ್ರಿಸ್ಥಾನ ಸಿಕ್ಕರೆ ಸ್ವಾಮಿ ಈ ಹೌಸ್‌ನಲ್ಲಿ ಪತ್ತೇನೇ ಇಲ್ಲ ಹಾಗಾದರೆ ಇವರು ಕೂಗಾಡುವುದು ಈ ಸ್ಥಾನಕ್ಕಾಗಿಯೇ? ಮಂತ್ರಿಸ್ಥಾನ ಸಿಕ್ಕ ಮೇಲೆ ಇವರು ಬ್ಯೂಸಿ ಆಗಿ ಬಿಡುತ್ತಾರೆ, ಶಾಸಕರಾಗಿರುವಾಗ ಇವರು ಬ್ಯೂಸಿಯಾಗುವುದಿಲ್ಲ ಇದು ಹೇಗೆ ಇದೆ? ಮಂತ್ರಿಗಳಾದ ಮೇಲೆ ಇವರು ಬರುವುದೇ ಇಲ್ಲ ಆದುದರಿಂದ ಮಂತ್ರಿಗಳ ಸಂಖ್ಯೆಯನ್ನು ಕಡಿಮೆ ಮಾಡಬೇಕು ಕೊಡಲೇ ಬಾರದು, ಒಬ್ಬರೇ ಹತ್ತತ್ತು ಪೋರ್ಟ್‌ಫೋಲಿಯೋಗಳನ್ನು ಇಟ್ಟುಕೊಳ್ಳಬೇಕು ಆಗಲೇ ಎಲ್ಲಾ ಮೆಂಬರ್ ಇಲ್ಲಿ ಇರುತ್ತಾರೆ ಕೊಟ್ಟ ತಕ್ಷಣ ಎಲ್ಲಿ ಇದ್ದಾರೆಂದರೆ ಬ್ಯೂಸಿಯಾಗಿ ಬಿಟ್ಟಿರುತ್ತಾರೆ ಬ್ಯೂಸಿ ಹೇಗೆ? ಈ ತರಹ ನೀವು administration ಅನ್ನು

ಇಟ್ಟುಕೊಂಡಿದ್ದೀರಿ ಮುಜರಾಯಿ ಡಿಪಾರ್ಟ್‌ಮೆಂಟ್ administration ಹೇಗೆ ಇದೆ? ಚೆನ್ನಾಗಿದೆಯೇ? ತಾವು ತಪ್ಪು ತಿಳಿದುಕೊಳ್ಳಬೇಡಿ ತಾವು ನಮಗೆ ಪತ್ರ ಕಳುಹಿಸಿದಿರಿ, ಮೆಂಬರ್‌ಗಳೆಲ್ಲ ಆಗಿದ್ದೀರಿ ನಾನು ಆ ಬಗ್ಗೆ ಸುಮಾರು ಸಾರಿ ಮನವಿ ಮಾಡಿದಾಗ ನೀವು ಮಾಡಿಕೊಟ್ಟಿದ್ದೀರಿ ಸಂತೋಷ ನೀವು ಮಾಡಿಕೊಟ್ಟಿರುವ ಗೌರವದ ಮೇಲೆ ತಹಶೀಲ್ದಾರ್ ಆಫೀಸ್‌ನಲ್ಲಿ ನಾವು ಎಲ್ಲಾ ಮೆಂಬರ್‌ಗಳೆಲ್ಲಾ ಹೋಗಿ ಕುಳಿತುಕೊಂಡು ಮೀಟಿಂಗ್ ಮಾಡಿದೆವು ಗುಡಿಗಳಿಗೆ ಎಷ್ಟೆಷ್ಟು ಕೊಡಬೇಕೆನ್ನುವ ಪಟ್ಟಿ ಮಾಡಿದರು, ಅದರಂತೆ ಪೇಪರ್‌ನಲ್ಲಿ ಕೂಡ ಕೊಟ್ಟರು ಜನಕ್ಕೆಲ್ಲ ಸಂತೋಷ ನಮ್ಮ ಊರಿನಲ್ಲಿ ಈಗ ಬಹಳ ಫೆಸ್ಟಿವಲ್ಸ್ Adi festivals, Amman festivals ನಮಗೆ ಇವತ್ತು ಪೌಂಡೇಷನ್ ಹಾಕುತ್ತಾರೆ ನಾಳೆ ಹಾಕುತ್ತಾರೆ ಎನ್ನುವ ನಿರೀಕ್ಷೆಯಲ್ಲಿ ಇದ್ದೆವು ಆದರೆ, ಅಲ್ಲಿಂದ ಅದು ಡಿ ಸಿ ಗೆ ಹೋಗಿದೆ ಡಿ ಸಿ ಗೆ ಹೋದ ತಕ್ಷಣ, ಮಂತ್ರಿಗಳೆಲ್ಲ ಲೆಕ್ಕ ಇಲ್ಲ ಬಿಡಿ ಎಲ್ಲಾ ಡಿ ಸಿ ನೇ ಒಬ್ಬ ಡಿ ಸಿ ನಮ್ಮ ಜೇಬಿನಲ್ಲಿದ್ದರೆ I am crorepathi I can murder anybody I can do what ever it may be ಡಿ ಸಿ ಹತ್ತಿರ ಹೋಗಿದೆ ಡಿ ಸಿ ಕೂಲಾಗಿ ಏನು ಹೇಳಿದ್ದಾರೆಂದರೆ, No No Iam sorry Funds for 2006 have been returned back No money We can't do it Withdraw ಮಾಡಿಕೊಂಡು ಸರ್ಕಾರಕ್ಕೆ ಹೋಗಿ ಬಿಟ್ಟಿದೆ ನಾನೇನು ಮಾಡುವುದ ಕ್ಕಾಗುವುದಿಲ್ಲ ಎಂದರು ನಮಗೆ ತಹಶೀಲ್ದಾರ್ ಸ್ವಾಮಿ ಡಿ ಸಿ ಯವರು ಹೀಗೆ ಹೇಳಿಬಿಟ್ಟರು ನಾನೇನು ಮಾಡುವುದಕ್ಕಾಗುತ್ತದೆ ಎಂದು ಹೇಳುತ್ತಾರೆ ನಾನು ಜನರ ಹತ್ತಿರ ಹೋಗಿ ಚಪ್ಪಲಿ ಏಟು ತೆಗೆದುಕೊಂಡು ಬರುತ್ತೇನೆ ಸ್ವಾಮಿ ಎಂದು ನಾನು ಅವರಿಗೆ ಹೇಳಿದೆ ಏಕೆಂದರೆ, ಜನರಿಗೆ ದುಡ್ಡು ಕೊಡುತ್ತೇನೆಂದು ಹೇಳಿರುವುದು ನಾನು ತಾನೆ ನಿಮ್ಮ ಗುಡಿಗೆ ಇಷ್ಟು ದುಡ್ಡು ಬಂದಿದೆ ಎಂದು ನಾನು ತಾನೇ ಹೇಳಿರುವುದು ಈಗ ದುಡ್ಡು ಇಲ್ಲವೆಂದು ಜನರ ಹತ್ತಿರ ಹೇಳಿದರೆ ಯಾರಿಗೆ ಚಪ್ಪಲಿಯಲ್ಲಿ ಹೊಡೆಯುವುದು ನನಗೆ ತಾನೆ ತಹಶೀಲ್ದಾರ್‌ಗೆ ಇಲ್ಲ, ಡಿ ಸಿ ಗೆ ಇಲ್ಲ, ತಮ್ಮ ಬಗ್ಗೆ ನಾನು ಹೇಳುವುದೇ ಇಲ್ಲ ಬಿಡಿ ತಮಗೆ ಬರುವುದೇ ಇಲ್ಲ

ಅಧ್ಯಕ್ಷರು ರಾಜೇಂದ್ರನ್‌ರವರೆ, ದಯಮಾಡಿ ಬೇಗ ಮುಗಿಸಬೇಕು ಹಿಂದೆ ಇರುವವರು ಬಹಳ ಜನರು ಇದ್ದಾರೆ ಅವರಿಗೂ ಅವಕಾಶ ಕೊಡೋಣ ಆದ್ದರಿಂದ ಬೇಗ ಮುಗಿಸಿಬಿಡಿ

ಶ್ರೀ ಎಸ್ ರಾಜೇಂದ್ರನ್ ಮುಗಿಸಿ ಬಿಡುತ್ತೇನೆ ಸಾರ್ ಈಗ ತಾನೇ ಶುರುಮಾಡಿದೆ ತಾವು ಬರುವುದಕ್ಕಿಂತ ಐದು ನಿಮಿಷ ಮುಂಚೆ ಶುರು ಮಾಡಿದೆ ಅಷ್ಟರಲ್ಲಿ ಓಂಪ್ರಕಾಶ್‌ರವರು ಬಂದು ತಮಗೆ ಟೈಂ ತಿಳಿಸಿದರು ಮುಗಿಸಿ ಬಿಡುತ್ತೇನೆ ಸಾರ್ ನಾನು ತಮ್ಮನ್ನು ಇಕ್ಕಟ್ಟಿಗೆ ಸಿಕ್ಕಿಸುವುದಿಲ್ಲ ಏನಾಗಿದೆ ಎಂದರೆ, ಅವರಿಗೆ ದುಡ್ಡು ಇಲ್ಲವೆಂದು ನಾನು ಹೇಳಿದೆ ಕೊನೆಗೆ ಅವರೊಂದು ಐಡಿಯಾ ಕೊಟ್ಟರು ಏನೆಂದರೆ, ತಾವು ಮಂತ್ರಿಗಳ ಹತ್ತಿರ ಹೋಗಿ, ನಮಗೆ ಅಲ್ಲಿಂದ ಫ್ಯಾಕ್ಸ್, ಮೆಸೇಜ್ ಅಥವಾ ಲೆಟರ್‌ನ್ನು ತೆಗೆದುಕೊಂಡು ಬಂದರೆ, ನಾವು ಯಾವ ರೂಪದಲ್ಲಿ ಅವರು ಹೇಳುತ್ತಾರೋ ಆ ರೂಪದಲ್ಲಿ ದುಡ್ಡು ಕೊಡುತ್ತೇವೆ ಎಂದರು ಇದು ನನ್ನ ಕೆಲಸವೇ? ಇದು ಯಾರ ಕೆಲಸ ಸ್ವಾಮಿ? ಈ ಕೆಲಸವನ್ನು ನಿಮ್ಮ ತಹಶೀಲ್ದಾರ್ ಮಾಡಿರಬೇಕು ನಿಮ್ಮ ಡಿ ಸಿ ಹೇಳಿದ ತಕ್ಷಣ ತಹಶೀಲ್ದಾರ್‌ರವರು ಡಿ ಸಿ ಯವರನ್ನು ಅಪ್ರೋಚ್ ಮಾಡಿ, ಡಿ ಸಿ ನಿಮಗೆ ವರದಿ ಕಳುಹಿಸಿರಬೇಕು ಸಾರ್ ತಾವು ಕೆ ಜಿ ಎಫ್ ಕ್ಷೇತ್ರದಲ್ಲಿ ವಿತ್ ಡ್ರಾ ಮಾಡಿಕೊಂಡಿದಿರಿ, ಈ ತರಹ ಹಣ ಬಿಡುಗಡೆ ಮಾಡಬೇಕೆಂದು ಲೆಟರ್ ಬಂದಿದೆ, ಅವರು ಮೀಟಿಂಗ್ ಎಲ್ಲಾ ಮಾಡಿ ಕೊಟ್ಟಿದ್ದಾರೆ, ನಾನು ಏನು ಮಾಡಬೇಕು? ಯಾವ ರೂಪದಲ್ಲಿ ದುಡ್ಡು ಕೊಡಬೇಕೆಂದು ಅವರು ನಿಮಗೆ ಅಪ್ರೋಚ್ ಮಾಡಿರಬೇಕು? ಅವರೇನು ಬಾಸುಮತಿ ರೈಸ್ ಊಟ ಮಾಡಿ ಎ ಸಿ ರೂಮಿನಲ್ಲಿ ಮಲಗಿರುವ ತರಹ, ತಾವೇನು ಬೀದಿಯಲ್ಲಿ ದಿನ್ನೆಯಲ್ಲಿ ಮಲಗಿರುವ ತರಹ, ನಾವು ಹೋಗಿ ಅವರಿಗೆ ಗುಲಾಮು ಸೆಲ್ಯೂಟ್ ಹೊಡೆಯಬೇಕೇ? ನಮಗೆ ಎಷ್ಟು ಕೋಪ ಬರಬಹುದು ತಾವು ಯೋಚನೆ ಮಾಡಿ ಸದನ ಇದೆ ತಾವು ಸಿಕ್ಕುತ್ತೀರಿ ಇಲ್ಲಂದ್ರೆ ನಮ್ಮ ಗತಿ ಏನಾಗಬೇಕು? ನಾನು ನಿಮ್ಮನ್ನು ಹುಡುಕಿದರೆ ನಿಮ್ಮದು ಟೂರ್ ಪ್ರೋಗ್ರಾಂ ಇದೆ ಮಂತ್ರಿ ಸ್ಥಾನ ಇರುವುದರಿಂದ ಅಟ್‌ಲೀಸ್ಟ್ ನಿಮ್ಮ ಕ್ಷೇತ್ರದಲ್ಲಿ ಶಾಸಕರಾಗಿ ಕೆಲಸ ಮಾಡಲೇಬೇಕು What would happen to my fate? How should I answer to the people? ನಮಗೆ ಎಷ್ಟು ನೋವು ಆಗುತ್ತದೆ ನೀವು ನೋಡಿ ಇಂಥ administration ಅಧಿಕಾರಿಗಳನ್ನು ನೀವು ಇಟ್ಟುಕೊಂಡು, ಒಳ್ಳೆಯ ಅಧಿಕಾರಿ ತೋರಿಸಿ ಎಂದರೆ ಹೇಗೆ ತೋರಿಸುವುದು? ಉದಾಹರಣೆಗೆ ಹೇಳುವುದಾದರೆ, ಯಾರೋ ಒಬ್ಬ ಹಳ್ಳಿಯವನು ತರಕಾರಿಗಳನ್ನು ತೆಗೆದುಕೊಂಡು ಬರುವುದಕ್ಕೆ ತನ್ನ ಊರಿನ ಹತ್ತಿರ ಇರುವ ಗುಡ್ಡದ ಬಳಿಗೆ

fresh ತರಕಾರಿಗಳು ಸಿಗುತ್ತವೆ ಅಲ್ಲಿ ಹೋಗಿ ತೆಗೆದುಕೊಂಡು ಬರೋಣ ಎಂದು ಹೋಗಿದ್ದಾನೆ ಅಲ್ಲಿ ಅವನಿಗೆ ಮೆಣಸಿನಕಾಯಿ ಬಹಳ ಚೀಪ್ ಆಗಿ ಸಿಕ್ಕಿವೆ ಎಷ್ಟೊಂದು ಚೀಪ್ ಇದೆ ಎಂದು ಸುಮಾರು ಒಂದು ಗನ್ನಿ ಬ್ಯಾಗ್ ತುಂಬಾ ಮೆಣಸಿನಕಾಯಿಗಳನ್ನು ತುಂಬಿಕೊಂಡು ತನ್ನ ಮನೆಗೆ ಬಂದಿದ್ದಾನೆ ಇದನ್ನು ನೋಡಿದ ಅವನ ಹೆಂಡತಿ, ಏನ್ರೀ ಇಷ್ಟೊಂದು ಮೆಣಸಿನ ಕಾಯಿಗಳನ್ನು ಏಕೆ ತೆಗೆದುಕೊಂಡು ಬಂದಿದ್ದೀರಿ ಎಂದು ಕೇಳಿದ್ದಾಳೆ ಅದಕ್ಕೆ ಅವನು ನಿನಗೆ ಗೊತ್ತಾಗುವುದಿಲ್ಲ ಸುಮ್ಮನಿರು ಇದು ಬಹಳ ಚೀಪ್ ಆಗಿ ಸಿಕ್ಕದೆ ಅದಕ್ಕಾಗಿ ನಾನು ಇಷ್ಟೊಂದು ಮಣಸಿನಕಾಯಿ ಗಳನ್ನು ತಂದಿದ್ದೇನೆಂದು ಹೇಳಿದ್ದಾನೆ ನಂತರ ಅವನು ಏನು ಮಾಡಿದ್ದಾನೆ, ತನ್ನ ಮನೆಯ ಮಧ್ಯದಲ್ಲಿ ಎಲ್ಲಾ ಮೆಣಸಿನ ಕಾಯಿಗಳನ್ನು ಕೆಳಗೆ ಹಾಕಿ ಅವನು ಆರಾಮವಾಗಿ ಕುಳಿತುಕೊಂಡು ಒಂದೊಂದಾಗಿ ತಾನು ತಂದಿರುವ ಮೆಣಸಿನಕಾಯಿಗಳನ್ನು ಕಚ್ಚಿಕಚ್ಚಿ ನೋಡಿ ಕೆಳಗೆ ಹಾಕುತ್ತಿದ್ದಾನೆ ಕಣ್ಣಲ್ಲಿ ನೀರು ಅವನ ಬಾಯಿ ಎಲ್ಲಾ ಸುಟ್ಟು ಬಹಳ ಕಷ್ಟವಾಗಿದೆ ಇದನ್ನು ನೋಡಿದ ಅವನ ಮನೆಯವರು, ಇವರಿಗೇನು ಹುಚ್ಚು ಹಿಡಿಯಿತೋ ಏನೋ ಏಕೆ ಈ ರೀತಿಯಾಗಿ ಒಂದೊಂದಾಗಿ ಮಣಸಿನಕಾಯಿಗಳನ್ನು ಕಚ್ಚಿ ಕಚ್ಚಿ ನೋಡುತ್ತಿದ್ದಾನೆ ಏನು ಸಮಾಚಾರ ಎಂದು ಕೇಳಿದರೆ ಇವನು ಏನು ಹೇಳುವುದಿಲ್ಲ ಸುಮ್ಮನ ಕಚ್ಚಿ ಕಚ್ಚಿ ಹಾಕುತ್ತಿದ್ದಾನೆ ಜೊತೆಗೆ ಕಣ್ಣಲ್ಲಿ ಬಾಯಿಯಲ್ಲಿ ನೀರು ಬೇರೆ ಬರುತ್ತಿದೆ ಮನೆಯವರು ನೋಡಿ ಹೆದರಿಕೊಂಡು, ಇವನಿಗೆ ಏನೋ ಆಗಿ ಬಿಟ್ಟಿದೆ ಎಂದು, ಅಕ್ಕಪಕ್ಕದವರನ್ನು ಹೋಗಿ ಕರೆದುಕೊಂಡು ಬಂದರೂ ಯಾರಿಗೂ ಏನು ಮಾಡಲಿಕ್ಕೆ ಆಗಿಲ್ಲ ಕೊನೆಯಲ್ಲಿ ಆ ಊರಿನಲ್ಲಿರುವ ಒಬ್ಬ ದೊಡ್ಡ ಮನುಷ್ಯನನ್ನು ಕರೆದುಕೊಂಡು ಬಂದಿದ್ದಾರೆ ಆ ಮನುಷ್ಯ ಬಂದು ಇವನನ್ನು, ಏನಪ್ಪಾ ಈ ರೀತಿ ಮಾಡುತ್ತೀರಿ, ನಿಮಗೇನಾದರೂ ಹುಚ್ಚು ಹಿಡಿಯಿತೇ ಎಂದು ಕೇಳಿದಕ್ಕೆ, ಅವನು, ಸ್ವಾಮಿ, ಇಷ್ಟೊಂದು ಮೆಣಸಿನಕಾಯಿಗಳಲ್ಲಿ ಎಲ್ಲಾ ಖಾರ ಇದೆ ಯಾವುದಾದರೊಂದು ಸಿಹಿಯಾಗಿದೆಯೇ ಎಂದು ನೋಡುತ್ತಿದ್ದೇನ, ಬೇರೆ ರೀತಿಯಲ್ಲಿ ನನ್ನ ಮೇಲ ತಪ್ಪು ತಿಳಿಯಬೇಡಿ ಎಂದು ಹೇಳಿದ್ದಾನೆ ಅದಕ್ಕೆ ಆ ದೊಡ್ಡ ಮನುಷ್ಯ, ಅಲ್ಲಾರಿ, ಎಲ್ಲಾ ಮಣಸಿನಕಾಯಿಗಳನ್ನು ಕಚ್ಚದರೂ ಅವು ಖಾರವೇ ಇರುವುದು, ನಿನಗೆ ಸಿಹಿಯಾಗಿರಬೇಕಾದರೆ, ಕಲ್ಲು ಸಕ್ಕರೆ ಕಚ್ಚಿರಿ ಆಗ ನಿಮಗೆ ಸಿಹಿ ಗೊತ್ತಾಗುತ್ತದೆ, ಮೆಣಸಿಕಾಯಿನಲ್ಲಿ ಸಿಹಿ ಇರುವುದಿಲ್ಲ ಎಂದು ಹೇಳಿದ್ದಾರ ಆ ರೀತಿಯ ಕಲ್ಲು ಸಕ್ಕರೆಯಂಥ ಅಧಿಕಾರಿಗಳನ್ನು

ನೀವು ಇಟ್ಟುಕೊಳ್ಳಿ ಮೆಣಸಿನಕಾಯಿ ಇರುವ ತರಹ ಅಧಿಕಾರಿಗಳನ್ನು ಇಟ್ಟುಕೊಳ್ಳಬಾರದು ನಿಮ್ಮ ಸರ್ಕಾರದಲ್ಲಿ ಎಲ್ಲ ಅಧಿಕಾರಿಗಳೂ ಮೆಣಸಿನ ಕಾಯಿ ತರಹ ಇದ್ದಾರೆ ಸ್ವಾಮಿ, ಕಲ್ಲು ಸಕ್ಕರೆ ತರಹ ಇರುವ ಅಧಿಕಾರಿಗಳನ್ನು ಸ್ವಲ್ಪ ಡೆಲ್ಲಿಯಿಂದ ತರಿಸಿ, ಅಥವಾ ಬೇರೆ ರಾಜ್ಯದಿಂದ ತರಿಸಿ ಇಲ್ಲಿ ನೋಡಿದರೆ ಬರೀ ಮೆಣಸಿನಕಾಯಿ ತರಹ ಅಧಿಕಾರಿಗಳು ಇದ್ದಾರೆ ಇಂಥವರ ಹತ್ತಿರ ನಿಮಗೆ ಹೇಗೆ ಕೆಲಸ ಮಾಡುವುದಕ್ಕೆ ಆಗುತ್ತದೆ? ನೀವೇ ಯೋಚನೆ ಮಾಡಿ

ಶ್ರೀ ರಾಮಚಂದ್ರ ಗೌಡ ನೀವು ಎಲ್ಲಾದರೂ ಕಲ್ಲು ಸಕ್ಕರೆಯಂಥ ಅಧಿಕಾರಿಗಳನ್ನು ನೋಡಿದ್ದೀರಾ?

ಶ್ರೀ ಕೆ ಜಯಪ್ರಕಾಶ್ ಹೆಗ್ಡೆ ಅದನ್ನು ನೀವು ಹೇಳಬೇಕು

ಶ್ರೀ ಎಸ್ ರಾಜೇಂದ್ರನ್ ಕಲ್ಲು ಸಕ್ಕರೆಯಂಥ ಅಧಿಕಾರಿಯನ್ನು ನೋಡಿಲ್ಲ ಕಲ್ಲು ಅಧಿಕಾರಿಗಳನ್ನು ನೋಡಿದ್ದೇನೆ ಏನು ಹೇಳಿದರೂ ಕಿವಿಗೆ ಹೋಗುವುದಿಲ್ಲ ಕಣ್ಣು ಕಾಣುತ್ತಿಲ್ಲ, ಹಾಗೆಯೇ ಗೂಬೆ ತರಹ ಕುಳಿತು ಬಿಟ್ಟಿದ್ದಾರೆ ಇಂಥ ಅಧಿಕಾರಿಗಳನ್ನು ನಾನು ನೋಡಿದ್ದೇನೆ ಅದಕ್ಕೆ ನಾನು ಏನು ಮಾಡುವುದಕ್ಕೆ ಆಗುತ್ತದೆ? Coming to the point of Social Welfare Department, Social Welfare Minister ರವರೇ ಎಷ್ಟು ಹಣ ಪೂಲಿಂಗ್ ಆಗುತ್ತದೆ, ಅಷ್ಟು ದುಡ್ಡನ್ನು ನಮ್ಮ Social Welfare Department ನಲ್ಲಿ ಇಟ್ಟುಕೊಂಡು ಜನಕ್ಕೆ ಉಪಯೋಗ ಮಾಡಬೇಕು? It Should be useful for Scheduled Caste and Scheduled Tribe But, again your Social Welfare Department Wanted to take somehow the amount for other works and jobs ಆ ರೀತಿಯಾಗಿ ಹೋದರೆ, You will not be fit to be a Minister for Social Welfare Dapartment It is for the Scheduled Caste and Scheduled Tribe people ಅವರ ಹಕ್ಕನ್ನು, ಮುಟ್ಟುವುದಕ್ಕೆ ಸಾಧ್ಯವೇ ಇಲ್ಲ ನಮಗೆ ಕೊಟ್ಟಿರುವ ದುಡ್ಡನ್ನು ಎಸ್ ಸಿ ಮತ್ತು ಎಸ್ ಟಿ ಜನಾಂಗದ ಅಭಿವೃದ್ಧಿಗಾಗಿ ಉಪಯೋಗಿಸಬೇಕು ನೀವು ಅದನ್ನು ಬಿಟ್ಟು Social Welfare Department ತಾನೆ, ನಾಲ್ಕು ಸಾವಿರ ಕೋಟಿ ಬರಲಿ, ಎರಡು ಸಾವಿರ ಕೋಟಿ ಬರಲಿ, ಎಂದು ಕೊಂಡು ಹೋದರೆ, all the people are dependent only on that loan

ತಾವು ಹೋಗಿ ಕುಳಿತುಕೊಂಡು ನಿಮ್ಮ Finance Minister ಹತ್ತಿರ fight ಮಾಡಿ Social Welfare Minister ಹತ್ತಿರ ತೆಗೆದುಕೊಂಡು ಬರಬೇಕು ನೀವು ಹಾಗೆ ಮಾಡಿಲ್ಲ, ಅಂದರೆ ತಮಗೆ ಕಷ್ಟವೇನು ಗೊತ್ತಿಲ್ಲ You are born wilth Golden spoon ಅಲ್ಯೂಮಿನಿಯಂ ಪ್ಲೇಟ್‌ನಲ್ಲಿ ಊಟ ತಿನ್ನುವವರ ಕಷ್ಟ ನಮಗೆ ಗೊತ್ತಿಲ್ಲ ತಾವು Silver Plate, Gold Plate ಊಟವನ್ನು ತಿನ್ನುತ್ತೀರಿ ಸ್ವಾಮಿ ತಮಗೆ Schedulded Caste ನವರ ಬಗ್ಗೆ ಕಷ್ಟ ಗೊತ್ತಿಲ್ಲ ತಾವು ಕಲಿಯಬೇಕು. ಬೀದಿಯಲ್ಲಿ ಎಷ್ಟು ಜನರು ಸಾಯುತ್ತಿದ್ದರೋ ಕೇವಲ 10 ಸಾವಿರ ಲೋನ್‌ಗೆ ಒಂದು ಬ್ಯಾಂಕ್ ಅವನ ಹತ್ತಿರ ಹೋದರೆ ಅವರು "ನಿಮ್ಮದು ಇದೇ ಕೆಲಸ ಹೋಗಿ" ಎಂದು ಹೇಳುತ್ತಾನೆ 10--=10 ಸಾವಿರ ಲೋನ್ ಕೊಡುವುದಕ್ಕೆ ನಮಗೆ ಆಗುವುದಿಲ್ಲ ನಿಮ್ಮ ಅಧಿಕಾರಿಗಳು ಅವರ ಮೇಲೆ ಕ್ರಮವನ್ನು ತೆಗೆದುಕೊಂಡಿದ್ದಾರಾ? ನಿಮ್ಮ Socila Welfare Department Officer has taken no action on that ಅವರು ನಿಮ್ಮ officer ಅನ್ನು threaten ಮಾಡುತ್ತಿದ್ದಾರೆ You cannot sake anything the bank ಅಂತ ನಾವು Public representatives ಹೋಗಿ ನುಗ್ಗಿದರೆ ಏನಾಗುತ್ತದೆ? ಪೊಲೀಸ್ ಕೇಸ್ 506, 506(B), 134 ಇದಕ್ಕೊಂದು Social Welfare Department ಇದಕ್ಕೆ ಅಧಿಕಾರಿಗಳು ಆಮೇಲೆ ನಾವು Home Minister ಹತ್ತಿರ ಹೋಗಿ ಈ ತರಹ ನಡೆಯುತ್ತಿದೆ ಎಂದು ಹೇಳಬೇಕು ಅವರು ಏನು ಮಾಡುತ್ತಾರೆ ಸ್ವಾಮಿ? ನಮ್ಮ ರಾಜ್ಯದಲ್ಲಿ worst department ಯಾವುದು ಎಂದರೆ Police Department ಪ್ರತಿಯೊಂದಕ್ಕೂ ಕೂಡ Home Minister ಯಾವನೋ ಒಬ್ಬ ಕಳ್ಳತನ ಮಾಡಿದರೂ ಕೂಡ Home Minister, Rape ಮಾಡಿದರೂ ಕೂಡ Home Minister, ಎಲ್ಲೋ ಬಿದ್ದರೂ ಕೂಡ Home Minister ಒಬ್ಬ ಅನಾಥ ಹಳ್ಳದಲ್ಲಿ ಬಿದ್ದು ಸತ್ತರೂ ಕೂಡ Home Minister, ಎಲ್ಲದಕ್ಕೂ ಕೂಡ Home Minister ಸ್ವಾಮಿ ಅಲ್ಲಿ ಲೋನ್ ಕೊಡುತ್ತಿದ್ದಾರೆ, ಅಲ್ಲಿ ನಾಲ್ಕು ಜನ ಬಿದ್ದು ಹೋಗಿ ಒಬ್ಬರೋ ಇಬ್ಬರು crush ಆಗಿ ಸತ್ತುಹೋದರೂ ಕೂಡ Home Minister ಯಾವುದರ ಬಗ್ಗೆ ನಾವು Home Minister ಹತ್ತಿರ ಹೋಗಬೇಕೆಂದು ನಾವು ಕೂಡ ಯೋಚನೆ

ಮಾಡಬೇಕು ಯಾವುದು Home Minister portfolio ಪ್ರತಿಯೊಂದು department ಬಗ್ಗೆ Home Minister ಇದು ನಮ್ಮ ಕ್ಷೇತ್ರದಲ್ಲಿಯೂ ಹಾಗೆಯೇ? ನಾನು ಪ್ರತಿಯೊಂದು ಜಾಗದ ಬಗ್ಗೆಯೂ ಪೋಲೀಸ್‌ನವರನ್ನು ಕರೆಯಬೇಕು, ಅದಕ್ಕಾಗಿ ಒಳ್ಳೆಯ ಅಧಿಕಾರಿಗಳು ಇರಬೇಕೆಂದು ಹೇಳುವುದು. ಸಾರ್, ತಾವು ಆಗ ಬಂದಿರಲಿಲ್ಲ ಸ್ವಾಮಿ, ಅದಕ್ಕಾಗಿ ನಾನು ತಮ್ಮ ಮುಂದೆ ಭಾಷಣ ಮಾಡಿದ್ದೇನೆ ನಮ್ಮ ಊರಿಗೆ ಡಿಎಸ್‌ಪಿ ಬಂದಿದ್ದಾರೆ, ನಾನು ಇನ್ನು ನೋಡಿಲ್ಲ, ನಾನು ನಮ್ಮ Incharge Minister ರವರಿಗೆ ಹೇಳಿದೆ, ತಾವು ಏನಾದರೂ ನೋಡಿದ್ದೀರಾ ಸಾರ್ ಎಂದು ಕೇಳಿದೆ ಇಲ್ಲಿ ನಿಮಗೇನಾದರೂ ಫೋನ್ ಬಂದಿತ್ತಾ, ತಾವು ಏನಾದರೂ ಮಾತನಾಡಿದ್ದೀರಾ ಎಂದು ಕೇಳಿದೆ ಅವರು ನನಗೆ ಯಾರೆಂದು ಗೊತ್ತಿಲ್ಲಪ್ಪ ಎಂದು ಅವರು ಹೇಳಿದರು ಹಾಗಾದರೆ protocol ಗೊತ್ತಿಲ್ಲದ ಎಸ್‌ಪಿಯನ್ನು ಏತಕ್ಕೆ ಇಟ್ಟುಕೊಂಡಿದ್ದೀರಿ, ನೀವು district ಆಗಿ he does not know the protocol to give respect you, senior most ತಾವು ಒಂದು ರೌಂಡ್ ಸಭೆಗೆ ಬರುವುದಕ್ಕೆ ಮುಂಚೆ ನಮ್ಮೆಲ್ಲರ ಹತ್ತಿರ ಬಂದು ಒಂದು protocol ಗೌರವ, How are you ಹೇಳುವ ಟೈಮ್‌ನಲ್ಲಿ ಹೇಳಿದರೆ ನಮ್ಮ ಹೃದಯದಲ್ಲಿ ಎಷ್ಟು ಸಂತೋಷವಾಗುತ್ತದೆ You are a very intelligent and senior most minister with extra ordinary brain and personality ಎಲ್ಲವೂ ನಮಗೆ ಗೊತ್ತಿದೆ ನಿಮ್ಮ ಗೌರವಕ್ಕೋಸ್ಕರವಾದರೂ ಕೂಡ ನೀವು ಅಲ್ಲಿಯೇ ಕುಳಿತುಕೊಂಡಿದ್ದರೆ ನಿಮ್ಮನ್ನು ಯಾರು ಕೇಳುವುದಿಲ್ಲ But ನಾವೆಲ್ಲರೂ ಚೆನ್ನಾಗಿ ಇರಬೇಕು ಒಂದು cordial relationship ಇರಬೇಕೆನ್ನು-ವುದಕ್ಕೋಸ್ಕರ ತಾವು ನಮಗೆಲ್ಲರಿಗೂ ನಮಸ್ಕಾರ ಹೇಳುವ ಟೈಮ್‌ನಲ್ಲಿ ಸಭೆ ಶಾಂತವಾಗಿರುತ್ತದೆ Incharge Minister ರವರು ಈ ಸದನದಲ್ಲಿ ಉತ್ತರವನ್ನು speaker ಮುಂದೆ ಕೊಡುತ್ತಾರೆ ತಾವು ನೋಡಿದ್ದೀರಾ ಎಂದು ಕೇಳಿದರೆ ಇಲ್ಲವೆಂದು ಹೇಳುತ್ತಾರೆ ನಾನು ಇಲ್ಲಿ ಟೀಕೆ ಮಾಡುತ್ತಿಲ್ಲ, ಇನ್ನು ಮಂತ್ರಿ ಬಂದು ನೋಡಿಲ್ಲವೇ? ಇವರು ನನ್ನ ಟೀಕೆಯನ್ನು ಮಾಡುತ್ತಾರೆ ಆ ಅಧಿಕಾರಿಯೂ ನನ್ನ ನೋಡುವುದನ್ನು ಬಿಡಿರಿ ಇನ್ನು ನಮ್ಮ ಮಂತ್ರಿಯನ್ನು ನೋಡಿಲ್ಲ ಅದಕ್ಕೆ ಲಘುವಾಗಿ ಹೌದ್ರಿ, ಇನ್ನು ನೋಡಿಲ್ಲವೆಂದರೆ don't you feel, it is a sheme on the par of the administration? Tomorrow

how you will command respect? ಅದರಲ್ಲಿ ಅವರು ಭಾಷಣವನ್ನು ಮಾಡುತ್ತಾರೆ, ನನ್ನನ್ನು ಯಾರು ಏನು ಮಾಡುವುದಕ್ಕಾಗುವುದಿಲ್ಲ I don't care anybody ಹೀಗೆ ಅವರು ಭಾಷಣ ಶುರು ಮಾಡಿಬಿಟ್ಟಿದ್ದಾರೆ, ಅದಕ್ಕೆ ನಾನು ಏತಕ್ಕಾಗಿ incharge minister ರವರನ್ನು ಕೇರ್ ಮಾಡಬೇಕು ಅವರೇ ನಮ್ಮನ್ನು ಕೇರ್ ಮಾಡುತ್ತಿಲ್ಲ ನಾನು legislator, ನಿಮ್ಮ ತರಹ ನಾನು ಸಹ ಗೆದ್ದು ಬಂದಿರುತ್ತೇನೆ ಜನರು ನನಗೆ ವೋಟು ಕೊಟ್ಟಿದ್ದಾರೆ, ನಾನು ಏತಕ್ಕಾಗಿ ನಿಮ್ಮನ್ನು ಕೇರ್ ಮಾಡಬೇಕು ಆ protocol ನ್ನು break ಮಾಡಿ Protocol ಅವಶ್ಯಕತೆ ಇಲ್ಲ ಅದು ನನ್ನ ಭಾಷಣ ಅದಕ್ಕಾಗಿ ಅವರು ನನ್ನ ಮೇಲೆ ತಪ್ಪು ತಿಳಿದುಕೊಂಡಿರಬಹುದು I am trying to bring to your notice all tese facts ಅದಕ್ಕೆ Home Minister ಏನು ಮಾಡುವುದಕ್ಕಾಗುತ್ತದೆ? ಒಬ್ಬೊಬ್ಬ Home Minister ಗೂ ನಾನು ಏತಕ್ಕಾಗಿ salute ಹೊಡೆಯಬೇಕು ಸ್ವಾಮಿ? ಏನು ನಾನು ಹೇಳಿ, ಹೇಳಿ, salute ಹೊಡೆಯುವುದಕ್ಕಾಗುತ್ತದೆಯೇ? ಇಲ್ಲಾ ನನಗೂ ಸಹ ಗೊತ್ತಿದೆ ನಾನು ಹೀಗೆಲ್ಲಾ Home minister ರವರ ಹತ್ತಿರ ತೆಗೆದುಕೊಂಡು ಹೇಳುವಂತಹ ಅವಶ್ಯಕತೆ ಇಲ್ಲ These are all small things How long he can goes how past you want everything should be watch? We are watch dog's to find when and where that he is legislator's duty ಅದು ಇಲ್ಲ, ತಾವು ಮನಸ್ಸು ಇಟ್ಟರೆ deside ಮಾಡಬೇಕು ಅದೇ incharge minister do that urban development ನಲ್ಲಿ ಈಗ underground drainage system, urban development ದು ಆಗಸ್ಟ್‌ನಲ್ಲಿ ಮಾಡುತ್ತೇ-ವೆಂದು ತಾವು ಒಪ್ಪಿಕೊಂಡಿದ್ದೀರಿ? ನಿಮ್ಮ ಅಧಿಕಾರಿಗಳು ಮಾಡುತ್ತಾರೆಯೇ? ಅವರು ಮಾಡಬೇಕು, ಮಾಡದಿದ್ದರೆ ತಾವು ಏನು ಮಾಡುತ್ತೀರಿ? ಅವರ ಮೇಲೆ ತಾವು ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತೀರಾ ಅಥವಾ ಇಲ್ಲವೇ? ಕೆಜಿಎಫ್ ಸಿಟಿ ಮುನ್ಸಿಪಾಲಿಟಿಯಲ್ಲಿ ತಾವು ತಪ್ಪು ಮಾಡಿರುವವರನ್ನು ಅವರ ಪ್ರಾಪರ್ಟಿಯನ್ನು ಸೀಜ್ ಮಾಡಿ ಅವರ ಮೇಲೆ ಕ್ರಿಮಿನಲ್ ಕೇಸ್‌ನ್ನು ಬುಕ್ ಮಾಡಿ with in three months ಅವರಿಗೆ ಶಿಕ್ಷೆ ಕೊಡಿ ಎಂದು ಹೈಕೋರ್ಟ್ ಹೇಳಿದೆ Writ petition reject ಮಾಡಿದರು ಈಗ 8 ತಿಂಗಳು ಆಗಿದೆ,

ನಿಮ್ಮ ಅಧಿಕಾರಿಗಳು ಮಾಡಿದ್ದಾರಾ? ನಾಮಕಾವಸ್ತೆಗೆ ಮಾಡುವುದಕ್ಕೋಸ್ಕರ they have just started the enquiry but court 3 ತಿಂಗಳೊಳಗಡೆ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿದೆ, ಆದರೆ 8 ತಿಂಗಳು ಆಗಿದ Department ನಲ್ಲಿರುವಂತಹ ಅಧಿಕಾರಿಗಳನ್ನು ಸಸ್ಪೆಂಡ್ ಮಾಡುತ್ತೀರಾ? transfer ಮಾಡುತ್ತೀರಾ? ನಿಮ್ಮ director ಮೇಲೆ action ತೆಗೆದುಕೊಳ್ಳುತ್ತೀರಾ? ನಿಮ್ಮ ಸೆಕ್ರೆಟರಿಯ ಮೇಲೆ action ತೆಗೆದುಕೊಳ್ಳುತ್ತೀರಾ? ಯಾರು ಅಧಿಕಾರಿಗಳು ಇದ್ದಾರೆ ಅವರ ಮೇಲ action ತೆಗೆದುಕೊಳ್ಳುತ್ತೀರಾ? ಈ ರೀತಿ action ತೆಗೆದುಕೊಳ್ಳುವುದಕ್ಕೂ the minister shoud have guts and power ಅದು ಇಲ್ಲವೇ? ನಾನು ಯಾವ vitamin box ತೆಗೆದುಕೊಂಡು ಬಂದು ಕೊಡುವುದು ಸ್ವಾಮಿ? ತಮಗೆ ಯಾವ tablet ಬೇಕು ಕೇಳಿ ಸ್ವಾಮಿ? ನಾವು ತೆಗೆದುಕೊಂಡು ಬಂದು ಕೊಡುತ್ತೇವೆ ಇಂತಹ ಶಾಸಕರುಗಳು ಇದ್ದಾರೆ ನೋಡಿ ಸ್ವಾಮಿ? ನಾನು ಹೇಳಿದ್ದು vitamin tablets ಎಂದರೆ ಅವರು ವಯಾಗ್ರ ಎಂದು ಹೇಳುತ್ತಿದ್ದಾರೆ ನಾನು ಅದನ್ನು ನೋಡಿಲ್ಲ ಸ್ವಾಮಿ ಅದನ್ನು ನಾನು ಕೇಳಿಲ್ಲ ಅದು ಏನು tablets ಎಂದು ಕೇಳಿಲ್ಲ, ಅದು ಏನು ಸಮಾಚಾರವೆಂದು ನನಗೆ ಗೊತ್ತಿಲ್ಲ ನನಗೆ ಅದರ ಅವಶ್ಯಕತೆ ಇಲ್ಲ no doubt

ಶ್ರೀ ಕೆ ಜಯಪ್ರಕಾಶ್ ಹೆಗ್ಡೆ ಅವರು ಮದುವೆಯಾಗಿಲ್ಲವೆಂದು ಹೇಳಿದ್ದು, ಅವರು ಬೇರೆ ಏನೂ ಹೇಳಿಲ್ಲ

ಶ್ರೀ ಹೆಚ್ ಆಂಜನೇಯ ಏನ್ ಬ್ರದರ್ ಮದುವೆಯಾಗಿಲ್ಲವೇ?

ಶ್ರೀ ಎಸ್ ರಾಜೇಂದ್ರನ್ ತಾವು ಏನು ಕೇಳಿದರೂ ಸಹ ನಾನು Yes ಎಂದು ಹೇಳಿಬಿಡುತ್ತೇನೆ ಸ್ವಾಮಿ ಈಗ ಸಭೆಯಲ್ಲಿ ಏನು ನಡೆಯುತ್ತಿದೆ, ನಾವು ಬಿಲ್‌ಗಳ ಮೇಲೆ ಮಾತನಾಡಿದರೂ ಕೂಡ ಹೌದು, ಹೌದು ಎಂದು ಹೇಳುತ್ತಾರ, ಯಾವುದಾದರೂ ಇಲ್ಲವೆಂದು ಹೇಳುತ್ತಾರಾ? ಇಲ್ಲ, ಇಲ್ಲ ಎಂದರೆ ಹೇಳುತ್ತಾರೆ, ನೀವು ಏನು ಕೇಳಿದರೂ ಹೌದು ಸ್ವಾಮಿ, ನೀವು ಏನೇ ಹೇಳಿದರೂ ಸಹ ಹೌದು, ನೀವು ಏನೂ ಹೇಳಿದರೂ ಇಲ್ಲ, ಎರಡರಲ್ಲಿ ಯಾವುದು ಬೇಕೆಂದು ಕೇಳಿದರ ಅದಕ್ಕೆ ನಾನು ಉತ್ತರವನ್ನು ಕೊಡುತ್ತೇನೆ In the entire Government, in each department we are facing lot of difficulties I am just concluding my speech

ಯಾವ department ಬಗ್ಗೆಯೂ ನಾನು criticize ಮಾಡುವುದಿಲ್ಲ ಅದರಲ್ಲಿ what is that we are lacking? ಅದನ್ನು ಮಾತ್ರ ನಾನು particular ಆಗಿ ತೆಗೆದುಕೊಳ್ಳುತ್ತಿದ್ದೇನೆ ಈಗ ಮುಜರಾಯಿ ಮಿನಿಸ್ಟರ್ ಬಗ್ಗೆ I have brought it to you notice ಅದಕ್ಕೆ action ಇರಬೇಕು or reaction, ಎರಡು ಇರಬೇಕು ಇಲ್ಲವೆಂದರೆ ನಾನು ಭಾಷಣ ಮಾಡುವುದರಲ್ಲಿ value ಇರುವುದಿಲ್ಲ ಪ್ರತಿಯೊಂದು ಅಧಿಕಾರಿಗಳು ನಾವು ಹೋಗಿ ಹೇಳಿಕೊಂಡಿರುವುದಕ್ಕೂ ನಮಗೆ ಆಗುವುದಿಲ್ಲ ನಾಳೆ ದಿವಸ ಚುನಾವಣೆ ಬಂದರೆ ಜನರ ಮುಂದೆ ಹೋಗಿ ನಾವು face ಮಾಡಿದಾಗ ನಾವು ಏನು ಮಾಡಿದ್ದೇವೆಂದು ಪಟ್ಟಿ ಮಾಡಿ ಹೇಳಬಹುದು PWDಯಲ್ಲಿ 12th Finance ನಲ್ಲಿ ಹಣ ಕೊಟ್ಟಿರುವುದೇನು? ನನಗೆ ಈ ರೋಡ್ ಬ್ರಿಡ್ಜ್‌ಗಳಿಗೆ ಕೊಟ್ಟಿಲ್ಲವೆಂದು ಎಲ್ಲರೂ ಭಾಷಣ ಮಾಡುತ್ತಾರೆ ಅದರ ಬಗ್ಗೆ repeat ಮಾಡಲು ನಾನು ತಯಾರಿಲ್ಲ ಈ administrationನಲ್ಲಿ ಯಾವ ಕಾರಣದಿಂದ ನಮಗೆ lack ಆಗಿದೆ ಇದರ ಮೇಲೆ ಸರ್ಕಾರ ಹೇಗೆ ಇರಬೇಕು ಯಾವ ತರಹ ಇರಬೇಕು ತಾವು ಡಿಸೈಡ್ ಮಾಡಬೇಕು out side ನಲ್ಲಿ ಬಾಷಣ? ಬೆಳಿಗ್ಗೆ ನೋಡಿದರೆ ಮಾನ್ಯ ಮುಖ್ಯಮಂತ್ರಿಗಳು ದೆಹಲಿಯಲ್ಲಿ ಹೇಳಿದ್ದಾರೆ "3ನೇ ತಾರೀಖು ನಾವು ಕಂಡಿತವಾಗಿ ಅಧಿಕಾರ ಹಸ್ತಂತರ ಮಾಡುತ್ತೇವೆ ಅದರ ಬಗ್ಗೆ ಯಾರು ಮಾತನಾಡಬಾರದು" But ನಾವು Legislators ನಮಗೆ ಗೊತ್ತಾಗಬೇಕಲ್ಲ ಈ ಸಭೆಯಲ್ಲಿ ಏನು ನಡೆಯುತ್ತಿದೆ ಎಂದು Legislatorsಗೆ ಗೊತ್ತಾಗಬೇಕಲ್ಲಾ ತಾವು ಕೇಳಿ ಮಾನ್ಯ ಮುಖ್ಯಮಂತ್ರಿಗಳನ್ನು ಇದರಿಂದ ಅಧಿಕಾರಿಗಳು ಇವತ್ತು careless and begligent ಆಗಿದ್ದಾರೆ ಯಾವ ಸರ್ಕಾರ ಅಧಿಕಾರಕ್ಕೆ ಬರುತ್ತದೆಯೋ ಯಾವ ಸರ್ಕಾರ ಹೋಗುತ್ತದೆಯೋ ಏನಾಗುತ್ತೆ, ನಮ್ಮನ್ನು ಅವರು ಟೀಕೆ ಮಾಡುವುದು ಏನು ಸರ್ಕಾರ ಇರುತ್ತಾ, ಇಂತಹ ಅಧಿಕಾರಿಗಳು ಮಾತನಾಡುತ್ತಾರೆಂದರೆ ನಮಗೆ ಎಷ್ಟು ನೋವಾಗುತ್ತದೆ ನಾವೇ ಬಂದು ತಮ್ಮ ಹತ್ತಿರ Speaker Sir, ನಾವು next session ವರೆಗೆ ಇರುತ್ತೇವಾ, ಒಂದು ಹತ್ತು ಜನರು ತಮ್ಮನ್ನು ಕೇಳಿದರೆ ತಮಗೆ ಕೋಪ ಬರುವುದಿಲ್ಲವೇ? ನಾವು ತಮ್ಮ ಹತ್ತಿರ ಹತ್ತು ಜನರು ಬರುತ್ತೇವೆ, "ಏನ್ Speaker ರವರೇ next session

ನಡೆಯುವುದಿಲ್ಲವೆ? ನಾನು ಬರುವುದಕ್ಕಾಗುತ್ತದೆಯೇ" ಈ ತರಹ ಹೇಳಿಕೊಂಡು ಬಂದರೆ ಹೋಗ್ರಿ ಎಂದು ಹೇಳುತೀರಿ ಆ ಸ್ಥಿತಿಗೆ ನಮ್ಮನ್ನು ತೆಗೆದುಕೊಂಡು ಒಂದಿದ್ದೀರಿ This is a peculiar disease in this Government ಯಾವುದೋ ಒಂದು functionನಲ್ಲಿ former president Radhakrishnan participate ಮಾಡಿದ್ದರು ಅಂತಹ ಸಂದರ್ಭದಲ್ಲಿ Anglo-Indians, Britishers, ಅಮೇರಿಕನ್ಸ್ ಎಲ್ಲರೂ ಸೇರಿದ್ದರು ಅವರು ಇವರನ್ನು ಟೀಕೆ ಮಾಡುವ ತರಹ ಒಂದು ಭಾವನೆಯಲ್ಲಿ ಮಾತನಾಡಿದ್ದಾರೆ "ನಾವೆಲ್ಲಾ ದೇವರಿಗೆ ಬಹಳ ಪ್ರೀತಿ ದೇವರಿಗೆ ನಮ್ಮ ಮೇಲೆ ಅಪಾರವಾದ ಪ್ರೀತಿ ಅದರಿಂದ ನಮ್ಮನ್ನು ಬೆಳ್ಳಗೆ ಮಾಡಿದ್ದಾರೆ, white ಆಗಿ ಮಾಡಿದ್ದಾರೆ ನಾವೆಲ್ಲರೂ ಫೇರ್ ಆಗಿದ್ದೇವೆ ಎಂದು ಭಾಷಣ ಮಾಡಿದರು ಅದಕ್ಕೆ ಡಾ ರಾಧಾಕೃಷ್ಣನ್‌ರವರು ನಮಗೆ ಏನು ಹೇಳಿದ್ದಾರೆಂದರೆ" ಹೌದು ಸ್ವಾಮಿ ದೇವರು ಚಪಾತಿಯನ್ನು ಮಾಡುವುದಕ್ಕೆ ಸುರು ಮಾಡಿದರು ಆ ಚಪಾತಿಯನ್ನು ಮಾಡುವ ಟೈಮ್‌ನಲ್ಲಿ ಅರ್ಧಂಬರ್ಧ ಬೆಂದಿರುವಂಥ ಚಪಾತಿಗೆ ಕಲರನ್ನು ಹಾಕಿ ಬಿಟ್ಟರು ಅದಕ್ಕಾಗಿ ನೀವು ಬೆಳ್ಳಗೆ ಆದಿರಿ, ಅಯ್ಯಯ್ಯೋ ಏನು ಇದು ಅರ್ಧಬರ್ಧ ಆಗಿದೆ ಏನು ಟೇಸ್ಟ್ ಇಲ್ಲದೆ ತಿನ್ನುವುದಕ್ಕಾಗುವುದಿಲ್ಲ ಎಂದು ಇನ್ನೊಂದು ಚಪಾತಿಯನ್ನು ತಯಾರಿಸಿದೆ ಅದು ಬಹಳ ಬರ್ನ್ ಆಗಿ ಬಿಟ್ಟು ಕಪ್ಪಗೆ ಆಗಿ ಅವರು black people ಆಗಿ ಬಿಟ್ಟರು ಎರಡು experienceಗಳೂ ಆದ ಮೇಲೆ ಮೂರನೆಯದು correct ಆಗಿ ತಿನ್ನುವ ತರಹ ಮಾಡಿದರು ಅದೆ ನಾವು Indians ದೇವರೆ, ಎರಡು ಸಲ try ಮಾಡಿಕೊಂಡರು ಮೂರನೇ ಸಲ ಸರಿಪಡಿಸಿದ್ದೇನೆಂದು ಹೇಳಿದ್ದಾರೆ ಆ ತರಹ ನೀವು coalitionಗ join ಆಗಿರುವುದು ಕಾಂಗ್ರೆಸ್, ಅದು ಬೆಳ್ಳಗೆ ಆಯಿತು ಎರಡನೆಯದು ಈ ನೀವು ಮಾಡಿಕೊಂಡಿದ್ದೀರಿ ನೋಡಿ ಅದು ಕಪ್ಪಗೆ ಆಗಿದೆ ಮೂರನೆಯದು ತಿನ್ನುವ ತರಹ ಮಾದಿ ಸ್ವಾಮಿ ನಾವು ಶಾಸನಸಭೆಗೆ ಬರಬೇಕು ಅದನ್ನಾದರೂ ಸಹ ತಾವು ಸರಿಯಾಗಿ ಮಾಡಬೇಕೆಂದು ಹೇಳುತ್ತಾ ನನ್ನ ಭಾಷಣವನ್ನು ಮುಗಿಸುತ್ತೇನೆ Thank you very much

ಅಧ್ಯಕ್ಷರು ಮಾನ್ಯ ಸುಧಾಕರ್‌ರವರೆ ತಾವು ಮಾತನಾಡಿ, ತಮಗ ಮಾತನಾಡುವುದಕ್ಕೆ ನಾನು 15 ನಿಮಿಷಗಳ ಕಾಲಾವಕಾಶವನ್ನು ಕೊಟ್ಟಿದ್ದೇನೆ

ಡಾ ಎಂ.ಸಿ.ಸುಧಾಕರ್ (ಚಿಂತಾಮಣಿ) ಮಾನ್ಯ ಅಧ್ಯಕ್ಷರೆ, ಕಳೆದ 3 ವರ್ಷದ ಅವಧಿಯಲ್ಲಿ ನನಗೆ ಮಾತನಾಡುವುದಕ್ಕೆ ಅವಕಾಶ ಸಿಕ್ಕಿದೆ ನಾವೆಲ್ಲರೂ ಬಹಳ ಒಂದು ಆಸೆಯನ್ನು ಇಟ್ಟುಕೊಂಡು ಸಮಾಜ ಸೇವೆಯನ್ನು ಮಾಡಬೇಕೆಂಬ ಉದ್ದೇಶದಿಂದ ಈ ಒಂದು ಶಾಸನ ಸಭೆಯ ಸದಸ್ಯರಾಗಿ ಸಾರ್ವಜನಿಕರಿಗೆ ಸರ್ಕಾರದಿಂದ ಬರುವಂತಹ ಸೌಲಭ್ಯಗಳನ್ನು ತಲುಪಿಸ-ಬೇಕೆಂಬ ಮಹತ್ವಾಕಾಂಕ್ಷೆಯ ಉದ್ದೇಶವನ್ನು ಇಟ್ಟುಕೊಂಡು ಇವತ್ತು ಈ ಶಾಸನ ಸಭೆಗೆ ಬಂದಿದ್ದೇವೆ ಈ 3 ವರ್ಷಗಳಲ್ಲಿ ನಮ್ಮ ಅನುಭವ ವಿಶೇಷವಾಗಿ ಇತ್ತೀಚಗಂತೂ ಒಂದೂವರೆ ವರ್ಷದಲ್ಲಿ ವಿರೋಧ ಪಕ್ಷಕ್ಕೆ ಬಂದ ಸಂದರ್ಭದಿಂದ ಏನು ನಮ್ಮ ಕ್ಷೇತ್ರದ ಜನರು ತಪ್ಪು ಮಾಡಿದ್ದಾರೆ, ನಾವು ವಿರೋಧ ಪಕ್ಷದಲ್ಲಿ ಬರುವಂತಹ ಸಂದರ್ಭ ಬಂದರೆ ಶಾಸನಸಭಾ ಸದಸ್ಯರಾಗಿ ಇರಬೇಕೇ ಬೇಡವೇ ಎಂದು ಒಂದು ಆಲೋಚನೆ ಇದೆ ಒಂದು ಕಡೆ ಇಲ್ಲಿ ಮಾತನಾಡುವುದಕ್ಕೆ ಅವಕಾಶಗಳು ಕಡಿಮೆ ಏಕೆಂದರೆ ನಾವು ಬಹಳ ಹಿಂದೆ ಇರುತ್ತೇವೆ ಮುಂದಿನ ಸಾಲಿನಲ್ಲಿ ಕುಳಿತುಕೊಂಡವರಿಗೆ ಬಹಳಷ್ಟು ಅವಕಾಶಗಳು ಸಿಗುತ್ತದೆ ಅವರು ಹಲವಾರು ಬಾರಿ ಆಯ್ಕೆಯಾಗಿ ಬಂದವರಾಗಿರುತ್ತಾರೆ ಇನ್ನೊಂದು ಕಟೀ ಜೋರಾಗಿ ಮಾತನಾಡಿದರೆ ದ್ವೇಷವನ್ನು ಸಾಧಿಸುವವರು ಕೆಲವರು ಇರುತ್ತಾರೆ "ಇವನು ಜೋರಾಗಿ ಮಾತನಾಡುತ್ತಾನೆ ಇವನಿಗೆ ನನ್ನ ಹತ್ತಿರ ಬಂದರೆ ಏನು ಸವಲತ್ತು ಮಾಡಬಾರದು ಅವನ ಕ್ಷೇತ್ರಕ್ಕೆ ಏನು ಮಾಡುವುದು" ಎಂಬ ಭಾವನೆ ದಯವಿಟ್ಟು ನಾನು ತಮ್ಮಲ್ಲಿ ವಿನಂತಿಯನ್ನು ಮಾಡಿಕೊಳ್ಳುತ್ತೇನೆ ಇಲ್ಲಿ ಇರುವಂತಹ ಎಲ್ಲಾ ಹಿಂದಿನ ಸಾಲಿನ ಸದಸ್ಯರ ಪರವಾಗಿ ಹೇಳುವುದೇನೆಂದರೆ ಬಹಳಷ್ಟು ಕಡೆಗಳಲ್ಲಿ ನಮ್ಮ legislators committee ಯನ್ನು ಮಾಡುತ್ತೇವೆ ಒಂದು ಸಾರಿ ರೋಟೇಷನ್ ಮಾಡುತ್ತಿರುತ್ತೀರಿ, 5 ವರ್ಷಕ್ಕೆ ಒಂದು ಸಾರಿ ಏನು ಎಲ್ಲರೂ ಒಂದೇ ಕಮಿಟಿಯಲ್ಲಿ ಇರುವುದಿಲ್ಲ ಎಲ್ಲರೂ ಒಂದೊಂದು ಕಮಿಟಿಯಲ್ಲಿರುತ್ತಾರೆ ದಯವಿಟ್ಟು ಆ ರೀತಿ ಹಿಂದಿನವರನ್ನು ಮುಂದಕ್ಕೆ ಕಳುಹಿಸುವುದು, ಮುಂದಿನವರನ್ನು ಹಿಂದಕ್ಕೆ ಕಳುಹಿಸುವಂತಹ ವ್ಯವಸ್ಥೆಯನ್ನು ಮಾಡಬೇಕು ನಮಗೆ ಹೆಚ್ಚೆಚ್ಚು ಮಾತನಾಡುವಂತಹ ಅವಕಾಶಗಳು ಸಿಗುತ್ತದೆ ದಯವಿಟ್ಟು ತಾವು ಇದನ್ನು ಗಂಭೀರವಾಗಿ ಪರಿಗಣಿಸಬೇಕಾಗಿದೆ ಹಿಂದೆ ಕುಳಿತುಕೊಂಡವರಿಗೆ ಮಾತನಾಡುವುದಕ್ಕೆ ಅವಕಾಶಗಳು ಸಿಗುವುದೇ ಇಲ್ಲ ಮುಂದೆ ಕುಳಿತಿರುವಂತಹವರು ಎಷ್ಟು ಗಂಟೆಗಳವರೆಗೆ ಮಾತನಾಡಿದರೂ ಕೂಡ ಏನು ಒಬ್ಬೊಬ್ಬರು ಒಂದು

ದಾಖಲೆಯನ್ನು ಮಾಡಬೇಕೆಂದು 3 ರಿಂದ 5 ಗಂಟೆಯವರೆಗೆ ಮಾತನಾಡಿದರೆ ನಮ್ಮಂತಹ ಬಡಪಾಯಿಗಳು ಏನು ಮಾಡಬೇಕು? ದಯವಿಟ್ಟು ತಾವು ಈ ವಿಚಾರದ ಬಗ್ಗೆ ಸ್ವಲ್ಪ ಗಂಭೀರವಾಗಿ ಪರಿಗಣಿಸಬೇಕು ನಮ್ಮಂತಹವರು ಬಹಳಷ್ಟು ಜನರು ನಮ್ಮ ನೋವನ್ನು ನಾವು ಹೇಳಿಕೊಳ್ಳುವುದಕ್ಕೆ ಬಹಳ ಕಷ್ಟವಾಗುತ್ತದೆ ಈ ವಿಚಾರವನ್ನು ನಾನು ತಮ್ಮ ಮುಂದಿಡುತ್ತೇನೆ ನಾನು ಹೆಚ್ಚು ಬೇರೆ ವಿಚಾರಗಳನ್ನು ಹೇಳದೆಯೇ ಮುಖ್ಯವಾಗಿ ಕೃಷಿಗೆ ಸಂಬಂಧಪಟ್ಟ ಹಾಗೆ ಮಾತನಾಡಲು ಬಯಸುತ್ತೇನೆ ತಮಗೆಲ್ಲರಿಗೂ ಗೊತ್ತಿರುವ ಹಾಗೆ ಬಹಳಷ್ಟು ನೀರಾವರಿ ಪ್ರದೇಶಗಳು ಇವೆ ಬಹಳಷ್ಟು ಒಣಪ್ರದೇಶಗಳು ಇವೆ

ಶ್ರೀ ಹೆಚ್ ಆಂಜನೇಯ ಮಾನ್ಯ ಅಧ್ಯಕ್ಷರೆ, ಮೊದಲನೆಯ ಸಾಲಿನಲ್ಲಿ ಕುಳಿತಿರುವವರು ಏನು ಮಾಡುತ್ತಾರೆಂದರೆ ಬೆಳಿಗ್ಗೆ Press gallery full ಇರುತ್ತದೆ ಅವರು ಮಾತನಾಡುತ್ತಾರೆ, ಅವರು ಮಾತನಾಡಿಕೊಂಡು ಜಾಗವನ್ನು ಖಾಲಿ ಮಾಡಿಕೊಂಡು ಹೋಗಿಬಿಡುತ್ತಾರೆ ಇನ್ನು ಮೇಲೆ ತಾವು ಏನು ಮಾಡಬೇಕೆಂದರೆ, Press Gallery full ಇದ್ದಾಗ ಎಲ್ಲಾ ನಮಗೆ ಅಂದರೆ ಹೊಸಬರಿಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಡಿ, ಅವರಿಗೆ ಸಾಯಂಕಾಲ ಮಾತನಾಡುವುದಕ್ಕೆ ಅವಕಾಶ ಕೊಡಿ

ಅಧ್ಯಕ್ಷರು ಈ ಮಾತನ್ನು ಹೇಳುವವರು ಮೊದಲೆ ಡಿಮ್ಯಾಂಡ್ಸ್ ಮೇಲೆ ಚರ್ಚೆ ಆರಂಭ ಆಗುವುದಕ್ಕೆ ಮುಂಚೆಯೇ ಎದ್ದು ಹೇಳಿದ್ದರೆ ಏನಾದರೂ ಈ ಸಾರಿ ಬದಲಾವಣೆಯಾಗುತ್ತಿತ್ತು ನೀವು ಆಗ ಮಾಡಲಿಲ್ಲ ಈಗ ನಾನು ಏನು ಮಾಡುವುದಕ್ಕಾಗುವುದಿಲ್ಲ ಆಯಿತು ಮಾನ್ಯ ಸುಧಾಕರ್‌ರವರೇ ತಾವು ಮಾತನಾಡಿ

ಶ್ರೀ ಹೆಚ್ ಆಂಜನೇಯ . ಎಲ್ಲಾ ಭಾಷಣ ಮಾಡಿದರು, ಆರಾಮವಾಗಿ ಹೋಗಿ ಮಲಗಿದ್ದಾರೆ

ಅಧ್ಯಕ್ಷರು ನೀವುಗಳು ನಿಮ್ಮ ನಿಮ್ಮ ನಾಯಕರುಗಳಿಗೆ ಮೊದಲು ನಮಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಡಿ ಎಂದು ಹೇಳಿ

ಶ್ರೀ ಎಂ ಮಹದೇವ ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಶ್ರೀ ಸುಧಾಕರ್‌ರವರು ಹೇಳತಕ್ಕಂತಹ ನೋವು ಏನಿದೆ ಪ್ರಾಯಶಃ ನಾವೆಲ್ಲರೂ ಹಿಂದೆ ಕುಳಿತಿರುವವರು ಮೊದಲನೆಯ ಸಲ ಗೆದ್ದು ಬಂದವರಾಗಿದ್ದೇವೆ ನಮಗೆ ಸ್ವಲ್ಪ ನೋವು ಇದೆ ಇಲ್ಲಿ ಕುಳಿತಿರುವವರಿಗೆ

ಯಾವ ಅವಕಾಶಗಳು ಸಹ ಇಲ್ಲ ನಾವು ಇಲ್ಲಿ ಪ್ರಶ್ನೆಗಳನ್ನು ಕೇಳುವುದನ್ನೇ ಬಿಟ್ಟು ಬಿಟ್ಟಿದ್ದೇವೆ ನಾವು ಚರ್ಚೆಯಲ್ಲಿ ಭಾಗವಹಿಸುತ್ತಿಲ್ಲ ಎಲ್ಲರಿಗೂ ಮಾತನಾಡುವುದಕ್ಕೆ ಅವಕಾಶವನ್ನು ಕೊಡಿ

ಅಧ್ಯಕ್ಷರು ಒಳ್ಳೆಯದು ಆಯಿತು ತಾವು ಕುಳಿತುಕೊಳ್ಳಿ ಅವರು ಮಾತನಾಡಲಿ ತಾವು ಕುಳಿತುಕೊಳ್ಳಿ

ಡಾ ಎಂ ಸಿ ಸುಧಾಕರ್ ಇವತ್ತು ನಮ್ಮ ರಾಜ್ಯದಲ್ಲಿ ನೀರಾವರಿ ವ್ಯವಸ್ಥೆಗೆ ಹಲವಾರು ವರ್ಷಗಳಿಂದ ಸಾವಿರಾರು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ ನಾನು ಅದನ್ನು ತಪ್ಪು, ಮಾಡಿರುವುದು ಸರಿಯಿಲ್ಲವೆಂದು ಎಂದು ವಾದ ಮಾಡುವುದಕ್ಕೆ ಬರುತ್ತಿಲ್ಲ ಅದೇ ಒಂದು ಈ ಒಣಪ್ರದೇಶದಲ್ಲಿ ಬಯಲುಸೀಮೆ ಭಾಗದಲ್ಲಿ ಎಷ್ಟರ ಮಟ್ಟಿಗೆ ಯಾವ ಯಾವ ಕ್ರಮಗಳನ್ನು ಸರ್ಕಾರ ತೆಗೆದುಕೊಂಡಿದೆ ಎಂಬುದು ಬಹಳ ಮುಖ್ಯವಾದ ವಿಚಾರವಾಗಿದೆ ಉದಾ ಕೋಲಾರ ಇರಬಹುದು, ಕೆಲವು ಭಾಗದಲ್ಲಿ ತುಮಕೂರು, ಚಿತ್ರದುರ್ಗ, ಬೆಂಗಳೂರು ಗ್ರಾಮಾಂತರ ಇರಬಹುದು ಇಲ್ಲಿ ಸರ್ಕಾರ ಅಥವಾ ಇಲಾಖೆ ಏನು ಕ್ರಮಗಳನ್ನು ತೆಗೆದುಕೊಂಡಿದೆ? ಇದು ಇವತ್ತು ಇರುವಂತಹ ಸರ್ಕಾರದ ಬಗ್ಗೆ ಆರೋಪ ಮಾಡುವಂತಹ ವಿಚಾರವಲ್ಲ ನಾನು ಇದುವರೆವಿಗೂ ಆಗಿರುವಂತಹ ವ್ಯವಸ್ಥೆಗಳ ಬಗ್ಗೆ ತಮ್ಮ ಮುಂದಿಡುವುದಕ್ಕೆ ಬಯಸುತ್ತೇನೆ ಮೊನ್ನೆ ತಾನೇ ಒಂದು ಅವಕಾಶ ಸಿಕ್ಕಿತು ಕೇಂದ್ರ ಕೃಷಿ ಸಚಿವರಾದಂತಹ ಶ್ರೀ ಶರದ್ ಪವಾರ್‌ರವರನ್ನು ಭೇಟಿ ಮಾಡುವಂತಹ ಸೌಭಾಗ್ಯ ಸಿಕ್ಕಿತು ಅವರು ಮಾತನಾಡುವಂತಹ ಸಂದರ್ಭದಲ್ಲಿ ಅವರು ನಮ್ಮ ಜಿಲ್ಲೆಯ ಬಗ್ಗೆ ಕೇಳಿದರು ಕೋಲಾರ ಜಿಲ್ಲೆಯ ಇವತ್ತು ಅಂತರ್‌ಜಲ ಸುಮಾರು ಸಾವಿರ ಅಡಿಗೆ ಹೋಗಿದೆ, ಬಹಳಷ್ಟು ಸಮಸ್ಯೆಗಳು ಇದೆ, ನಮಗೆ ಶಾಶ್ವತವಾದಂತಹ ನೀರಾವರಿ ಸೌಲಭ್ಯಗಳು ಇಲ್ಲ ಸರ್ಕಾರಗಳು ಇದರ ಬಗ್ಗೆ ಹೆಚ್ಚು ಗಮನವನ್ನು ಕೊಡುತ್ತಿಲ್ಲ ನಾವು ಏನು ಮಾಡಬೇಕೆಂದು ಅವರನ್ನು ಕೇಳಿದಾಗ ಅವರು ನೀವು National Rural Employment Guarantee Schemeಗೆ ನಿಮ್ಮ ಜಿಲ್ಲೆಯೂ ಒಳಪಟ್ಟಿದೆಯೇ ಎಂದು ಕೇಳಿದರು ನಾನು ಇಲ್ಲವೆಂದು ಹೇಳಿದಾಗ ಅವರು ಆಶ್ಚರ್ಯಪಟ್ಟರು ಇಷ್ಟೆಲ್ಲಾ ನೀವುಗಳು ಸಮಸ್ಯೆಯನ್ನು ಹೇಳುತ್ತೀರಿ, ಏತಕ್ಕಾಗಿ ಸೇರಿಲ್ಲವೆಂದು ಕೇಳಿದರು ಇದರ ಬಗ್ಗೆ ಬಹಳಷ್ಟು ಚರ್ಚೆಯಾಗಿದೆ ಹೆಚ್ಚಾಗಿ ನಾನು ಆ ಬಗ್ಗೆ ಹೇಳುವುದಕ್ಕೆ

ಹೋಗುವುದಿಲ್ಲ ನಿಮ್ಮ ಜಿಲ್ಲೆಯಲ್ಲಿ ಸರಾಸರಿ ಎಷ್ಟು ಮಳೆಯ ಪ್ರಮಾಣ ಇದೆ ಎಂದು ಕೇಳಿದರು, ನಾವು ಸುಮಾರು 540–600 ಮಿಲಿಮೀಟರ್ ಎಂದು ಹೇಳಿದೆವು ನನ್ನ ಕ್ಷೇತ್ರ ಭಾರಮತಿಯಲ್ಲಿ ಕೇವಲ ನಮ್ಮಲ್ಲಿ 6–7 ಇಂಚು ಮಳೆಯಾಗುತ್ತದೆ We save every dvop of water ಎಂದು ಹೇಳಿದರು ಪ್ರತಿಯೊಂದು ಹನಿ ನೀರನ್ನು ನಾವು ಬಾರಾಮತಿಯಲ್ಲಿ ಉಳಿತಾಯ ಮಾಡುತ್ತಿದ್ದೇವೆ ಇವತ್ತು ಅಲ್ಲಿ ಅಂತರಜಲ ಮೇಲಿದೆ ಇವತ್ತು ಅಲ್ಲಿ ಏನೇನು ಆಗಿದೆ ಎಂಬುದರ ಬಗ್ಗೆ ತಮಗೆಲ್ಲಾ ತಿಳಿದಿರುವಂತಹ ವಿಚಾರ, ಅದರ ಬಗ್ಗೆ ನಾನು ಹೆಚ್ಚು ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ ಏಕೆ, ಬೇರೆ ದೇಶದ ಉದಾಹರಣೆಯನ್ನು ಕೊಡುತ್ತಿಲ್ಲ ನಮ್ಮ ದೇಶದಲ್ಲಿ ಪಕ್ಕದಲ್ಲಿರುವಂತಹ ರಾಜ್ಯದಲ್ಲಿ ಯಾವ ರೀತಿಯಾದಂತಹ ವ್ಯವಸ್ಥೆಯನ್ನು ಕಲ್ಪಿಸಿಕೊಟ್ಟಿದ್ದಾರೆ, ಏನು ನಮ್ಮ ಅಧಿಕಾರಿಗಳು ಇದರ ಬಗ್ಗೆ ಕಣ್ಣು ಕಾಣುತ್ತಿಲ್ಲವೇ? ಇವರಿಗೆ ಏನು ಚಿಂತನೆ ಇಲ್ಲವೇ? ಬಹಳ ಚೆನ್ನಾಗಿ ಹೇಳಿದ್ದಾರೆ ಬಹಳಷ್ಟು ಜನರು ಏನು Project ಮಾಡಿದ್ದಾರೆಂದರೆ ಮುಂದಿನ 15–20 ವರ್ಷಗಳಲ್ಲಿ ಕೋಲಾರ ಜಿಲ್ಲೆ ಮರಳುಭೂಮಿಯಾಗುತ್ತದೆ ಎಂದು ಈ ರೀತಿಯಾದ ದಿಕ್ಕಿನಲ್ಲಿ ನಾವು ಚಿಂತನೆಯನ್ನು ಮಾಡದೇ ಇದ್ದರೆ ಇವತ್ತು ಆ ಭಾಗದ ಜನರಿಗೆ ನಾವು ಏನು ಜವಾಬನ್ನು ಕೊಡಬೇಕಾಗುತ್ತದೆ? ಇದರ ಜೊತೆಯಲ್ಲಿ ಸರ್ಕಾರ ಒಂದು ದೊಡ್ಡ ಘೋಷಣೆಯನ್ನು ಮಾಡಿತು ನಾವು ಸರ್ಕಾರ ಸಾಲ,ಮನ್ನಾ ಮಾಡುತ್ತೇವೆಂದು ಇದರಿಂದ ನಮ್ಮ ಜಿಲ್ಲೆಗೆ ಆಗಿರುವಂತಹ ಅನುಕೂಲ ಏನು ಹೇಳಿ ಮಾನ್ಯ ಅಧ್ಯಕ್ಷರೆ, ಇವತ್ತಿನ ಪ್ರಶ್ನೋತ್ತರ ಪ್ರಾರಂಭವಾಗಿಲ್ಲ ಮಾನ್ಯ ಶ್ರೀರಾಮರೆಡ್ಡಿಯವರ ಪ್ರಶ್ನೆಗೆ ಒಂದು ಉತ್ತರವನ್ನು ಕೊಟ್ಟಿದ್ದಾರೆ ಕೇವಲ 2188 ರೈತರಿಗೆ ಕೋಲಾರ ಜಿಲ್ಲೆಗೆ ಅನುಕೂಲವಾಗಿದೆ ಕೋಲಾರ ಜಿಲ್ಲೆಯ ಡಿಸಿಸಿ ಬ್ಯಾಂಕಿನ ಪುನಃಶ್ಚೇತನ ಗೊಳಿಸುವುದಕ್ಕೆ ಕ್ರಮ ತೆಗೆದುಕೊಳ್ಳುತ್ತದೆಯೇ ಸರ್ಕಾರ ಎಂದರೆ ಇಲ್ಲವೆಂದು ಹೇಳುತ್ತಾರೆ ಇದರ ಉದ್ದೇಶವೇನು? ಕೇವಲ ಸಾಲ ಮನ್ನಾ ಮಾಡಿದ್ದೇವೆಂದು ನಮ್ಮ ಬೆನ್ನನ್ನು ನಾವು ತಟ್ಟಿಕೊಂಡರೆ ಅದರ ಬಗ್ಗೆ ನಾವು ಯಾರಿಗೆ ಏನು ಹೇಳಬೇಕು? ನಮ್ಮ ಭಾಗದ ರೈತರು ಮಾಡಿರುವಂತಹ ತಪ್ಪು ಏನು? ನಾವು ಖಂಡಿತವಾಗಿ ಒಪ್ಪಿಕೊಳ್ಳುತ್ತೇವೆ ಆಗ ಅಲ್ಲಿ ಆಡಳಿತ ನಡೆಸುವಂತಹ ವ್ಯವಸ್ಥೆ ಏನಿತ್ತು, ಅವರು ಅಲ್ಲಿ ತಪ್ಪು ಮಾಡಿದ್ದಾರೆ, ಅಧಿಕಾರಿಗಳು ಶಾಮೀಲಾಗಿ ತಪ್ಪು ಮಾಡಿದ್ದಾರೆ ನಾನು ಇಲ್ಲವೆಂದು

ಹೇಳುತ್ತಿಲ್ಲ ಆದರೆ ಇರತಕ್ಕಂತಹ ವ್ಯವಸ್ಥೆಯನ್ನು ಯಾವ ರೀತಿಯಾಗಿ ರೈತರಿಗೆ ತಲುಪಿಸಬೇಕು ಅದರ ಒಂದು ಅನುಕೂಲವನ್ನು ರೈತರಿಗೆ ಸಿಗುವಂತಹ ಕೆಲಸವನ್ನು ಮಾಡಬೇಕು ಎಂದು ದಯವಿಟ್ಟು ನಾನು ಸರ್ಕಾರಕ್ಕೆ ತಮ್ಮ ಮೂಲಕ ಹೇಳುವುದಕ್ಕೆ ಬಯಸುತ್ತೇನೆ ಈ ರೀತಿಯಾದಂತಹ ಉತ್ತರವನ್ನು ತಾವು ದಯವಿಟ್ಟು ಕೊಡಬೇಡಿ ಇದರ ಬಗ್ಗೆ ಸರ್ಕಾರದ ಗಮನದಲ್ಲಿ ಇಲ್ಲವೆಂದು ಹೇಳಿದರೆ ಬೇಕಾದ ಕಡೆಯಲ್ಲಿ ಮಠಾಧೀಶರಿಗೆ ಮತ್ತೊಂದು ಕಡೆ ಇನ್ನೊಂದು ಕಡೆ ಕೋಟ್ಯಾಂತರ ರೂಪಾಯಿಗಳನ್ನು ಕೊಡುತ್ತಿರಬಹುದು ನಾನು ಇಲ್ಲವೆಂದು ಹೇಳುತ್ತಿಲ್ಲ ಆದರೆ ಇಲ್ಲಿ ಅತಿ ಅವಶ್ಯಕವಾದಂತಹ ರೈತರು, ರೈತರ ಪರವಾಗಿ ಸರ್ಕಾರ ನುಡಿದಂತೆ ನಡೆಯುವಂತಹ ಸರ್ಕಾರ ಎಂದು ಪದೇ ಪದೇ ತಾವು ಹೇಳುತ್ತಿರುವುದನ್ನು ಏತಕ್ಕಾಗಿ ತಾವು ನುಡಿದಂತೆ ನಡೆಯುತ್ತಿಲ್ಲ ಕೋಲಾರ ಜಿಲ್ಲೆಯವರು ಮಾಡಿರುವಂತಹ ಪಾಪವಾದರು ಏನು ಎಂದು ನಾನು ತಮ್ಮ ಮೂಲಕ ಕೇಳುವುದಕ್ಕೆ ಬಯಸುತ್ತೇನೆ ಇದರ ಜೊತೆಯಲ್ಲಿ ಈಗಾಗಲೇ ನಮ್ಮಲ್ಲಿ ಒಂದು ವ್ಯವಸ್ಥಿತವಾದ ಬೆಳೆ ಪದ್ದತಿಯನ್ನು ನಾವು ತರಬೇಕಾಗುತ್ತದೆ ಅದರ ಬಗ್ಗೆ ಇಲಾಖಾಧಿಕಾರಿಗಳು ಗಮನವನ್ನು ಹರಿಸುತ್ತಿಲ್ಲ ಇವತ್ತು ನಮ್ಮಲ್ಲಿ ಬೋರ್‌ವೆಲ್ ಆಧಾರಿತವಾಗಿ ಭತ್ತವನ್ನು ಬೆಳೆಯುವಂತಹ ಪದ್ದತಿಯನ್ನು ಬಹಳಷ್ಟು ಕಡೆಯಲ್ಲಿ ನಡೆಸಿಕೊಂಡು ಬರುತ್ತಿದ್ದಾರೆ ನಮ್ಮ ರೈತರು ಅದನ್ನು ನಾವು ಹೇಳುವುದಕ್ಕೆ ಹೋದರೆ ಎಲ್ಲರೂ ನಮ್ಮ ಮೈಮೇಲೇ ಬೀಳುತ್ತಾರೆ ಒಂದು ಕಡೆಯಲ್ಲಿ Mines & Geology ಇಲಾಖೆಯವರು ಅದನ್ನು Dark Area ಎಂದು ಗುರುತು ಮಾಡಿದ್ದಾರೆ ಇಡೀ ಕೋಲಾರ ಜಿಲ್ಲೆ Dark Area ಎಂದು ಗುರುತು ಮಾಡಿದ್ದಾರೆ ಮೊನ್ನೆ ರೈತರ ಪಂಪ್‌ಸೆಟ್‌ಗೆ ಅಕ್ರಮ ಸಕ್ರಮ ಮಾಡುವಂತಹ ಸಂದರ್ಭದಲ್ಲಿ Mines & Geology ಇಲಾಖೆಯವರು ಹೇಳಿದ್ದಾರೆ ಇಲ್ಲಿ ಯಾವುದೇ ಅಕ್ರಮ ಸಕ್ರಮ ಮಾಡುವಂತಹದ್ದು ಯಾವುದು ಇಲ್ಲ ಇದು Dark Area ಇಲ್ಲಿ ನಾವು ಅವರಿಗೆ ಇದರಿಂದ ದೂರ ಇಡಬೇಕು Bore well ಹಾಕುವ ವಿಷಯದಲ್ಲಿ ನಾವು discourage ಮಾಡಬೇಕು ಎಂದು ಆ ಅಧಿಕಾರಿಗಳು ಹೇಳುತ್ತಾರೆ ದಯವಿಟ್ಟು ಅಧ್ಯಕ್ಷರೇ, ಅಲ್ಲಿರತಕ್ಕಂಥ ಜನ ಸಂಪೂರ್ಣವಾಗಿ ಬೋರ್‌ವೆಲ್ ಆಧಾರಿತ ಕೃಷಿ ಮೇಲೆ ಅವಲಂಬಿತರಾಗಿರುವ ನಮ್ಮ ಜಿಲ್ಲೆಯನ್ನು dark zone ಎಂದು ಕರೆಯಲಿಕ್ಕೆ ಯಾರು ಕಾರಣ ಕರ್ತರು

ಹೇಳಿ? ಅವರು ಅಲ್ಲಿ ಬದುಕುವುದು ಬೇಡವೇ? ಇವತ್ತು ತಾವು ಆತ್ಮಹತ್ಯೆ ಪ್ರಕರಣಗಳನ್ನು ತೆಗೆದುಕೊಳ್ಳಿ ಬೇರೆ ಜಿಲ್ಲೆಗಳಲ್ಲಿ ಒಳ್ಳೆಯ ನೀರಾವರಿ ಸೌಲಭ್ಯ ಇರುವ ಅತಿ ಹೆಚ್ಚು ಮಳೆಯಾಗುವಂಥ ಭಾಗಗಳಲ್ಲಿ ರೈತರು ಹೆಚ್ಚು ಆತ್ಮಹತ್ಯೆ ಮಾಡಿಕೊಂಡಿದ್ದಾರೆಯೇ ವಿನಃ ನಮ್ಮ ಭಾಗದಲ್ಲಿ ಹೆಚ್ಚು ರೈತರ ಆತ್ಮಹತ್ಯೆ ಆಗಿಲ್ಲ ಅವರ ಕಷ್ಟ ಏನು ಎಂದು ರೈತರು ಅರಿತುಕೊಂಡು ಅವರು ಯಾವ ರೀತಿ ಬದುಕಬೇಕೆಂಬ ಬಗ್ಗೆ ಮಾರ್ಗವನ್ನು ಹುಡುಕಿಕೊಂಡು ಇವತ್ತು ಅವರು ಬದುಕುತ್ತಿದ್ದಾರೆ ಆದರೆ ಇನ್ನು ನಾವು ಅವರ ತಾಳ್ಮೆಯನ್ನು ಹೆಚ್ಚು ಹೆಚ್ಚು ಪರೀಕ್ಷೆ ಮಾಡಿಕೊಂಡು ಹೋಗುತ್ತಿದ್ದರೆ ಬಹುಶಃ ಎಲ್ಲೋ ಒಂದು ಕಡೆ ನಾವೆಲ್ಲರೂ ಅದರ ಒಂದು ಪರಿಣಾಮವನ್ನು ಎದುರಿಸಬೇಕಾಗುತ್ತದೆ, ದಯವಿಟ್ಟು ಇನ್ನು ಮೇಲಾದರೂ ಸರ್ಕಾರ ಈ ಬಗ್ಗೆ ಹೆಚ್ಚು ಗಮನವನ್ನು ಕೊಡಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ ರೈತರ ಆತ್ಮಹತ್ಯೆಗೆ ಹಲವಾರು ಕಾರಣಗಳಿವೆ, ಅಲ್ಲಿರುವ ವ್ಯವಸ್ಥೆ ಇರಬಹುದು ಇವತ್ತು ಮಾರ್ಕೆಟ್ ವ್ಯವಸ್ಥೆ ಬಗ್ಗೆ ಹೇಳುವುದಾದರೆ, ಎ ಪಿ ಎಂ ಸಿ ಬಗ್ಗೆ ಹೊಸ ಕಾಯ್ದೆಯನ್ನು ಜಾರಿಗೊಳಿಸುವಾಗ ಬಹಳಷ್ಟು Multi National Companiesಗೆ ಅನುಕೂಲ ಮಾಡಲಿಕ್ಕೆ ಹೊರಟ್ಟಿದ್ದಾರೆಂದು ಚರ್ಚೆ ಮಾಡಿದರು ಕೃಷ್ಣಾ ಬೈರೇಗೌಡರು ಬಹಳ ವಿವರವಾಗಿ ಇದರ ಅನುಕೂಲತೆಗಳ ಬಗ್ಗೆ ಹೇಳಿದರು ಇವತ್ತು ಮಾರ್ಕೆಟ್ ವ್ಯವಸ್ಥೆಯನ್ನು ನಾವು ಉನ್ನತ ಮಟ್ಟಕ್ಕೆ ತರಬೇಕಾಗಿದೆ ಇವತ್ತು ನಮ್ಮ ಮಾರ್ಕೆಟ್ ವ್ಯವಸ್ಥೆ ಕುಸಿದಿದೆ, ಅದರ ಬಗ್ಗೆ ಗಮನ ಕೊಡಬೇಕು ನಮ್ಮ ಭಾಗದಲ್ಲಿರುವ ಒಂದೆರಡು ಸಮಸ್ಯೆಗಳ ಬಗ್ಗೆ ಹೇಳ ಬಯಸುತ್ತೇನೆ ಚಿಂತಾಮಣಿಯಲ್ಲಿ ಹುಣಿಸೇಹಣ್ಣಿನ ವ್ಯಾಪಾರ ಇದೆ, ಅಲ್ಲಿ Rose Onion ಅನ್ನು ಬೆಳೆಯುತ್ತಾರೆ ಅದು ಬೇರೆಡೆಗೆ ರಫ್ತಾಗುತ್ತದೆ ಇಂಥದ್ದನ್ನು ಅಲ್ಲಿನ ಸ್ಥಳೀಯರು ಕೊಂಡುಕೊಳ್ಳುವುದಿಲ್ಲ ಅಲ್ಲಿ ದಲ್ಲಾಳಿಗಳು ಇರುತ್ತಾರೆ, ಅವರು ಬೇರೆ ಎಲ್ಲೋ ಒಂದು ಭಾಗದಲ್ಲಿ ವಾಸವಾಗಿರುವವರು ಅದನ್ನು ನಿಯಂತ್ರಣ ಮಾಡುತ್ತಾರೆ ಅಲ್ಲಿ ಏನು ಬೆಲೆ ಇದೆ, ಆ ಬೆಲೆಯ ಬಗ್ಗೆ ನಮ್ಮ ರೈತರಿಗೆ ತಿಳಿಸುವುದಿಲ್ಲ ಇಲ್ಲಿ ರೈತರಿಂದ ಕಡಿಮೆ ದರಕ್ಕೆ ಖರೀದಿ ಮಾಡಿ ಸ್ವಲ್ಪ ದಿವಸ ಅದನ್ನು ಹಾಗೆಯೇ ಉಳಿಸಿಕೊಂಡು ದುಪ್ಪಟ್ಟು ಬೆಲೆಗೆ ಅದನ್ನು ಅವರು ಮಾರಿಕೊಳ್ಳುತ್ತಾರೆ, ಈ ರೀತಿಯಾದಂಥ ವ್ಯವಸ್ಥೆ ಇದೆ ಖಾಸಗಿ ಕ್ಷೇತ್ರದವರು ನೇರವಾಗಿ ರೈತರ ಹತ್ತಿರ ಪಡೆದುಕೊಳ್ಳುವಂಥ ವ್ಯವಸ್ಥೆಯಾಗುತ್ತದೆ ಟೊಮ್ಯಾಟೋ ಬೆಳೆಯಲ್ಲಿ

ನಮ್ಮ ಜಿಲ್ಲೆ ಇಡೀ ರಾಜ್ಯ ಹಾಗೂ ರಾಷ್ಟ್ರದಲ್ಲಿ ಅತಿ ಹೆಚ್ಚು ಬೆಳೆಯುವಂದ ಜಿಲ್ಲೆಯಾಗಿದೆ ಹೋದ ವರ್ಷ ನಮ್ಮ ಮುಖ್ಯಮಂತ್ರಿಗಳು ಅಧಿಕಾರವನ್ನು ಸ್ವೀಕರಿಸಿದ ನಂತರ ಟೊಮ್ಯಾಟೋ ಬೆಳೆಗೆ ಬೆಂಬಲ ಬೆಲೆಯನ್ನು ಘೋಷಣೆ ಮಾಡಿದರು ಅದನ್ನು ನೋಡಬೇಕಾಗಿತ್ತು ಅಲ್ಲಿ ಎಂಥ ಅನ್ಯಾಯ, ಅವ್ಯವಹಾರವಾಗುತ್ತಿದೆಯೆಂದು ಎಂಬ ಬಗ್ಗೆ ನಾನು ಮುಖ್ಯಮಂತ್ರಿಗಳಿಗೆ ಒಂದು ಸಭೆಯಲ್ಲಿ ಭೇಟಿ ಮಾಡಿದ ಸಂದರ್ಭದಲ್ಲಿ ಹೇಳಿದೆ ಒಂದು ಟ್ರ್ಯಾಕ್ಟರ್ ತುಂಬಾ ಮಣ್ಣು, ಕಲ್ಲು, ಗಿಡಗಳ ಸಮೇತ ತುಂಬಿಕೊಂಡು ಬಂದು ಅಲ್ಲಿ weight bridge ನಲ್ಲಿ ತೂಕ ಮಾಡಿಸಿ ಹಣ ಪಡೆದಂಥವರು ಬಹಳ ಜನರಿದ್ದಾರೆ ಅದೆಲ್ಲಾ ರೈತರೇ ಮಾಡಿದ್ದಾರೆಂದು ನಾನು ಹೇಳುತ್ತಿಲ್ಲ ರೈತರ ಹೆಸರಿನಲ್ಲಿ ಅಲ್ಲಿ ಬಹಳಷ್ಟು ಜನ ಸರ್ಕಾರದ ಸೌಲಭ್ಯವನ್ನು ಬಹಳಷ್ಟು ದುರುಪಯೋಗಪಡಿಸಿಕೊಂಡಿದ್ದಾರೆ ಅದನ್ನು ಒಂದು ವ್ಯವಸ್ಥಿತವಾಗಿ ಮಾಡಬೇಕಾಗಿತ್ತು ಆತುರಾತುರವಾಗಿ ನಾವು ಬೆಂಬಲ ಬೆಲೆ ಘೋಷಣೆ ಮಾಡಿದ್ದೇವೆ, ನಾವು ರೈತರ ಪರವಾಗಿ ನಿಂತಿದ್ದೇವೆಂದು ನಾವು ಹೇಳಲಿಕ್ಕೆ ಹೊರಟ್ಟಿದ್ದೇವೆ ವಿನಃ ಅದನ್ನು ವ್ಯವಸ್ಥಿತವಾಗಿ ರೈತರಿಗೆ ತಲುಪುವಂಥ ವ್ಯವಸ್ಥೆಯನ್ನು ನಾವು ಏತಕ್ಕೆ ಮಾಡಲಿಲ್ಲ, ಅದರ ಬಗ್ಗೆ ಅಧಿಕಾರಿಗಳು ಚಿಂತನೆ ಮಾಡಬೇಕಾಗಿತ್ತು ರೈತರು ಎಲ್ಲೆಲ್ಲಿ ಎಷ್ಟು ಎಕರೆಯಲ್ಲಿ ಟೊಮ್ಯಾಟೋ ಬೆಳೆದಿದ್ದಾರೆ, ಆ ಬೆಳೆ ಎಷ್ಟು ಬೆಲೆ ಬಾಳಬಹುದು ಎಂದು ಅಂಕಿ ಅಂಶವನ್ನು ಪಡೆದುಕೊಂಡು ಒಂದು ಎಕರೆಗೆ ಇಷ್ಟು ಬೆಲೆಯನ್ನು ಕೊಡುತ್ತೇವೆಂದು ರೈತರಿಗೆ ನೇರವಾಗಿ ಆ ಅಧಿಕಾರಿಗಳು ತಲುಪಿಸಿದ್ದರೆ ಈ ರೀತಿಯಾದಂಥ ಅನಾಹುತ ಆಗುತ್ತಿರಲಿಲ್ಲ ಸರ್ಕಾರದ ಕೋಟ್ಯಾಂತರ ಹಣ ಬೆಂಬಲ ಬೆಲೆಯ ಹೆಸರಿನಲ್ಲಿ ದುರುಪಯೋಗವಾಯಿತು ಇದರ ಜೊತೆಯಲ್ಲಿ ಈಗಾಗಲೇ ಟೊಮ್ಯಾಟೋ ಬೆಲೆ ಹೆಚ್ಚಿದೆ ನಮ್ಮ ಭಾಗದಲ್ಲಿ ಬಹಳ ಹೆಚ್ಚು ಟೊಮ್ಯಾಟೋವನ್ನು ಬೆಳೆಯುತ್ತಾರೆ ಟೊಮ್ಯಾಟೋ ಬೆಲೆ ಜಾಸ್ತಿಯಾದಾಗ ರೈತರ ಮುಖದಲ್ಲಿ ಮಂದಹಾಸ, ಸಂತೋಷ ಬಹುಶಃ ಏನೇ ಮಾಡಿದರೂ ಅಂಥ ಒಂದು ಸಂತೋಷವನ್ನು ನಾವು ನೋಡುವುದು ಕಷ್ಟವಾಗುತ್ತದೆ ಆದರೆ ಬೆಂಗಳೂರು, ಬೇರೆ ಕಡೆ ಇರುವ ಗ್ರಾಹಕರ ಕಣ್ಣಿನಲ್ಲಿ ಆಗ ನೀರು, ಇದು ನಮ್ಮ ವ್ಯವಸ್ಥೆ, ಬೆಳೆಯ ಬೆಲೆ ಕುಸಿದಾಗ ರೈತರ ಕಣ್ಣಿನಲ್ಲಿ ನೀರು, ಗ್ರಾಹಕರ ಮುಖದಲ್ಲಿ ಮಂದಹಾಸ ಕಾಣುತ್ತೇವೆ ಇದಕ್ಕೆ ಏನಾದರೂ ಒಂದು ವ್ಯವಸ್ಥೆಯನ್ನು ಕಲ್ಪಿಸಬೇಕಾಗಿದೆ, ಅಲ್ಲಿ ರೈತರು ಒಂದು ರೀತಿಯಲ್ಲಿ ನಿಲ್ಲುವಂಥ ವ್ಯವಸ್ಥೆಯನ್ನು ಮಾಡಬೇಕಾಗುತ್ತದೆ ಗ್ರಾಹಕರ ಮೇಲೆ ಸಹ

ಹೆಚ್ಚು ಪರಿಣಾಮವನ್ನು ಬೀರದಿರುವಂಥ ವ್ಯವಸ್ಥೆಯನ್ನು ಮಾಡಬೇಕಾಗುತ್ತದೆ ಇದು ಒಂದೊಂದು ಸಾರಿ extreme ಆಗುತ್ತದೆ ಒಂದು ಸಾರಿ ಬಹಳ ಅತಿರೇಕವಾಗುತ್ತದೆ, ಒಂದು ಸಾರಿ ಬಹಳ ಕೆಳಮಟ್ಟಕ್ಕೆ ಬರುವಂಥ ವ್ಯವಸ್ಥೆ ಇದೆ ಇದನ್ನೆಲ್ಲಾ ನಾವು ವ್ಯವಸ್ಥಿತವಾಗಿ ತಡೆಯಲು ಒಂದು ಮಾರ್ಗವನ್ನು ಕಂಡುಹಿಡಿಯದಿದ್ದಲ್ಲಿ ರೈತರ ಆತ್ಮಹತ್ಯೆ ಕಂಡಿತವಾಗಿ ನಿಲ್ಲುವುದಿಲ್ಲ ದಯವಿಟ್ಟು ಘೋಷಣೆಗಳು ಮಾಡುವುದು, ನಾವು ರಾಜೀನಾಮೆ ಕೊಡುತ್ತೇವೆ, ಮತ್ತೊಂದು, ಮಗದೊಂದು ಮಾಡುತ್ತೇವೆಂದರೆ, ರಾಜೀನಾಮೆ ಕೊಟ್ಟು ನೀನು ಮನೆಗೆ ಹೋಗು ಎನ್ನುತ್ತಾರೆ ವಿನಃ ಯಾರೂ ಅದರ ಬಗ್ಗೆ ತಲೆ ಕೆಡಿಸಿಕೊಳ್ಳುವುದಿಲ್ಲ ಇವತ್ತು ನಾನಾ ಕಡೆ ಬೇರೆ ವಿಚಾರಗಳಲ್ಲಿ ಆತ್ಮಹತ್ಯೆ ಆಗುತ್ತಿದ್ದರೂ ರೈತರ ಆತ್ಮಹತ್ಯೆ, ಬೆಳೆ ಸಾಲಕ್ಕೆ ಆಗುವುದು ಎಂದು ಬಹಳಷ್ಟು ನಮ್ಮ ವಾಡಿಕೆಯಾಗಿಬಿಟ್ಟಿದೆ ಈಗಾಗಲೇ ಸಬ್ಸಿಡಿ ಕೊಡುವಂಥ ವ್ಯವಸ್ಥೆಯಲ್ಲಿ ನಮ್ಮ ಜಿಲ್ಲೆಗೆ ಎಷ್ಟು ಸಬ್ಸಿಡಿ ಕೊಡಬೇಕಾಗಿತ್ತು ಅದನ್ನು ಕೊಟ್ಟಿಲ್ಲ Drip Irrigation ಗೆ ಇವತ್ತಿನವರೆಗೆ ಬಹಳಷ್ಟು ಹಣ ಬಾಕಿ ಇದೆ ಅದರ ಬಗ್ಗೆ ಪ್ರಶ್ನೆ ಹಾಕಿದರೆ ಹಣಕಾಸಿನ ಲಭ್ಯತೆ ಮೇಲೆ ಹಣವನ್ನು ವಿತರಣೆ ಮಾಡಲಾ-ಗುವುದು ಎಂದು ಹೇಳುತ್ತಾರೆ ಘೋಷಣೆ ಮಾಡಿರುವಂಥ ಹಣ ಸಂಬಂಧಪಟ್ಟ, ಹಣಕಾಸಿನ ಇಲಾಖೆಯಿಂದ ಬಿಡುಗಡೆಯಾಗಲಿಲ್ಲವೆಂದರೆ ಇದಕ್ಕೆ ಯಾರು ಜವಾಬ್ದಾರರಾಗುತ್ತಾರೆ ಎಂಬ ಬಗ್ಗೆ ಗಂಭೀರವಾಗಿ ಪರಿಗಣಿಸಬೇಕಾಗುತ್ತದೆ ಇದರೊಂದಿಗೆ ಮುಖ್ಯವಾಗಿ ಬೆಂಗಳೂರಿನಲ್ಲಿ Agro Industriesನ ಸ್ಥಳವಿದೆ ಅದರ ಭೂಮಿ ಹೆಚ್ಚು ಇದೆ ಈಗಾಗಲೇ ಬಹಳಷ್ಟು ಜನರ ಕಣ್ಣು ಆ ಭೂಮಿಯ ಮೇಲೆ ಬಿದ್ದಿದೆ ಏಕೆಂದರೆ ಆ ಆಗ್ರೋ ಇಂಡಸ್ಟ್ರೀಸ್ ಅನ್ನು ಈಗಾಗಲೇ ಮುಚ್ಚಿದ್ದಾರೆ ಅಲ್ಲಿ ಅವರೇನು ನೂರಾರು ಕೋಟಿ ರೂ ಗಳ ಕೊಡಲಿಕ್ಕೆ ಬಾಕಿ ಇದ್ದಾರೆಂದು ಅದರ ಮೇಲೆ ಬಹಳಷ್ಟು ಜನಕ್ಕೆ ಕಣ್ಣು ಬಿದ್ದಿದೆ ಅದು ಅಂತರ್‌ರಾಷ್ಟ್ರೀಯ ವಿಮಾನ ನಿಲ್ದಾಣದ ಮಾರ್ಗದ ಮಧ್ಯದಲ್ಲಿ ಹೆಬ್ಬಾಲದ ಹತ್ತಿರ ಇದೆ ಅದನ್ನು ಯಾವ ರೀತಿಯಾಗಿ ಕೃಷಿಗೆ ಸಂಬಂಧ ಪಟ್ಟಿರುವಂಥ ವ್ಯವಸ್ಥೆಯಲ್ಲಿ ಉಳಿಸಬೇಕು, ಈಗಾಗಲೇ ಇಲ್ಲೇ ಪಕ್ಕದಲ್ಲಿ ಒಂದು ರೋಸ್ ಮಾರ್ಕೆಟ್ ಅನ್ನು ಮಾಡಿದ್ದಾರೆ ಹಾಗಾಗಿ ಅಂತರ್‌ರಾಷ್ಟ್ರೀಯ ಮಟ್ಟದಲ್ಲಿ ಅಲ್ಲಿ ಒಂದು ಸುಸಜ್ಜಿತವಾದ ರೋಸ್ ಮಾರ್ಕೆಟ್ ಅನ್ನು ಏತಕ್ಕೆ ಸ್ಥಾಪನೆ ಮಾಡಬಾರದು? ಬೇರೆಯವರು ಅಲ್ಲಿ ವಾಣಿಜ್ಯ ಸಂಕೀರ್ಣ, Guest Houses ಕಟ್ಟಿಕೊಳ್ಳುತ್ತೇವೆಂದು ಸರ್ಕಾರದಲ್ಲಿ

ಬಹಳಷ್ಟು ಒತ್ತಾಯ ಮಾಡುತ್ತಿದ್ದಾರೆಂಬ ವಿಚಾರ ಅಲ್ಲಲ್ಲಿ ಕೇಳಿ ಬಂದಿದೆ, ದಯವಿಟ್ಟು ಅದಕ್ಕೆ ಅವಕಾಶ ಮಾಡಿಕೊಡದೇ ಇದು ಕೃಷಿಗೆ ಸಂಬಂಧಪಟ್ಟ ಜಾಗವಾಗಿರುವುದರಿಂದ ಇದನ್ನು ಅದಕ್ಕೆ ಮೀಸಲಾಗಿಡಬೇಕು, ಸರ್ಕಾರ ಇದನ್ನು ಬಹಳಷ್ಟು ಸುಲಭವಾಗಿ ತೆಗೆದುಕೊಳ್ಳದೇ ಅದೇ ಕಾರಣಕ್ಕೆ ಉಳಿಸಬೇಕೆಂದು ಯಾವುದೇ ಒತ್ತಡಕ್ಕೆ ಮಣಿಯಬಾರದೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ ಈಗ ಗ್ರಾಮೀಣ ಅಭಿವೃದ್ಧಿ ಇಲಾಖಾ ವಿಚಾರವಾಗಿ ಹಿರಿಯರಾದ ಸನ್ಮಾನ್ಯ ಉದಾಸಿಯವರನ್ನು ಅಭಿನಂದಿಸುತ್ತೇನೆ, ಅವರ ಒಂದು ಪ್ರಯತ್ನ, ದೂರದೃಷ್ಟಿ ಉತ್ತಮವಾಗಿದೆ, ಸುವರ್ಣ ಗ್ರಾಮ ಯೋಜನೆ ಬಹಳ ಮಹತ್ವಾಕಾಂಕ್ಷಿಯಾದ ಯೋಜನೆ, ಮುಖ್ಯಮಂತ್ರಿಗಳ ಗ್ರಾಮ ವಾಸ್ತವ್ಯ, ಮತ್ತೊಂದು ಇರಬಹುದು ಅದರ ಬಗ್ಗೆ ಹೆಚ್ಚಾಗಿ ಪ್ರಸ್ತಾಪ ಮಾಡುವುದಿಲ್ಲ ಮುಖ್ಯವಾಗಿ ಎಸ್ ಎಂ ಕೃಷ್ಣರವರ ಸರ್ಕಾರ ಇದ್ದಾಗ ಇದ್ದಂಥ ಪ್ರಧಾನ ಕಾರ್ಯದರ್ಶಿಯವರಾದ ಶ್ರೀನಿವಾಸ್‌ಮೂರ್ತಿ ರವರು ಸ್ವಚ್ಛ ಗ್ರಾಮ ಎನ್ನುವ ಒಂದು ಯೋಜನೆಯನ್ನು ಪ್ರಾರಂಭ ಮಾಡಿದ್ದಾರೆ ಈ ಯೋಜನೆಗಾಗಿ ಗ್ರಾಮಸ್ಥರ ವಂತಿಕೆ 2 00 ಲಕ್ಷ ರೂ ಸರ್ಕಾರದಿಂದ ಉಳಿದ 18 00 ಲಕ್ಷ ರೂಪಾಯಿಗಳನ್ನು ನೀಡಲಾಗುತ್ತದೆ ಈ ಕಾರ್ಯಕ್ರಮ ಮೊಟ್ಟಮೊದಲನೆ ಯದಾಗಿ ಪ್ರಾರಂಭವಾಗಿದೆ, ಅದಕ್ಕೂ ಮುಂಚೆ ಬಹಳಷ್ಟು ಯೋಜನೆಗಳಿದ್ದಿರ ಬಹುದು, ಸ್ವಚ್ಛ ಗ್ರಾಮ ಯೋಜನೆ ನಮ್ಮ ಜಿಲ್ಲೆಯಲ್ಲಿ ಅಂದಿನ ಪರಿಸ್ಥಿತಿಯಲ್ಲಿ ಬಹಳಷ್ಟು ಒಳ್ಳೆಯ ರೀತಿಯಲ್ಲಿ ಅನುಷ್ಠಾನವಾಗಿತ್ತು ನಾನು ಬಹಳ ಸಲ ಅಧಿಕಾರಿಗಳನ್ನು ಬಂದು ನೋಡಿ ಎಂದು ಕೇಳಿದೆ ಇಲ್ಲ, ಅದರಲ್ಲಿ ಬಹಳ ದುರುಪಯೋಗವಾಗಿದೆಯೆಂದು ಆ ಕಾರ್ಯಕ್ರಮ ಸರಿಯಿಲ್ಲವೆಂದು ಬಹಳಷ್ಟು ನಮ್ಮಲ್ಲಿ ಶಾಸಕ ಮಿತ್ರರಲ್ಲಿ ಚರ್ಚೆಯಾಯಿತು ಆಗ ನಾನು ಹೇಳಿದೆ, ನಾವು ಅದರ ಜವಾಬ್ದಾರಿಯನ್ನು ತೆಗೆದುಕೊಂಡು ಸರಿಯಾದ ರೀತಿಯಲ್ಲಿ ಉಪಯೋಗವಾಗುವಂಥ ವ್ಯವಸ್ಥೆಯನ್ನು ಮಾಡಬೇಕೆಂದು ಆ ಸಂದರ್ಭದಲ್ಲಿ ಬಹಳಷ್ಟು ಜನ ನಮ್ಮ ಶಾಸಕ ಮಿತ್ರರಿಗೆ, ಹಿರಿಯರಿಗೂ ಹೇಳಿದ್ದೆ ಇವತ್ತು ಅದೇ ಒಂದು ಮಾದರಿಯಲ್ಲಿ, ಸುವರ್ಣ ಗ್ರಾಮೋದಯ ಕಾರ್ಯಕ್ರಮವನ್ನು ರೂಪಿಸಿದ್ದಾರೆ ಆದರೆ ಕಾರ್ಯಕ್ರಮದಲ್ಲಿ ಅದರ ಉದ್ದೇಶಗಳೂ, ವಿಚಾರಗಳು ಏನೇನು ಒಳಪಟ್ಟಿದೆ ಅದು ಬಹಳ ಒಳ್ಳೆಯ ರೀತಿಯಲ್ಲಿ ಸೇರಿಸಿದ್ದಾರೆ ಆ ಯೋಜನೆಯನ್ನು ತಯಾರು ಮಾಡಲಿಕ್ಕೆ ಕೊಟ್ಟಿರುವ Non Government Organizationಗೆ ಕೊಟ್ಟಿದ್ದಾರೆ ಅವರ್‍ಯಾರಿಗೂ ಕನಿಷ್ಠ ಇಂಜಿನಿಯರಿಂಗ್ ಕ್ಷೇತ್ರದಲ್ಲಿ ಒಂದು ಚೂರೂ

ಅನುಭವವಿಲ್ಲ ಯಾರ‍್ಯಾರು ಹೋಗಿ NGO ಎಂದು ರಿಜಿಸ್ಟರ್ ಮಾಡಿದ್ದಾರೆ, ಆ ಜಿಲ್ಲಾ ಪಂಚಾಯತಿಗಳಲ್ಲಿ ಏನೇನು ಒತ್ತಡಗಳನ್ನು ಹೇರಿದ್ದಾರೆ, ಯಾರ‍್ಯಾರು ಪ್ರಭಾವವನ್ನು ಬೀರಿದ್ದಾರೆ, ಅಂಥವರಿಗೆಲ್ಲಾ ಅದನ್ನು ವಹಿಸಿಬಿಟ್ಟು ಅವರಿಗೆ ಒಂದೊಂದು ಊರಿನ detail project report ಮಾಡಲಿಕ್ಕೆ ಅವರಿಗೆ 15,000–00 ರೂ ಗಳನ್ನು ಕೊಟ್ಟು ಈ ಕೆಲಸ ವಹಿಸಿರುವುದು ಬಹಳ ದುರದೃಷ್ಟಕರವಾಗಿದೆ ಏಕೆಂದರೆ ಈ ಯೋಜನೆ ಇವತ್ತಿಗೂ ಪ್ರಾರಂಭವಾಗಿಲ್ಲ ನಾನೇಕೆ ಇದರ ಬಗ್ಗೆ ಕಳಕಳಿಯಿಂದ ಹೇಳುತ್ತಿದ್ದೇನೆ, ಇದರ ಬಗ್ಗೆ ಟೀಕೆ ಮಾಡಬೇಕೆನ್ನುವ ಉದ್ದೇಶವಿಲ್ಲ ಬಹಳಷ್ಟು ಗ್ರಾಮಗಳಲ್ಲಿ ಅವರು ಮಾಡಿರುವಂಥ ರಸ್ತೆಗಳ ಅಗಲ, ಉದ್ದ ಎಷ್ಟು? ಅದಕ್ಕೆ ಎಷ್ಟು ಹಣ ಬೇಕಾಗಬಹುದು, ಅವರಿಗೆ ಒಂದು ಎಸ್ ಆರ್ ಪ್ರತಿಯನ್ನು ಕೊಟ್ಟಿದ್ದರು ಇವತ್ತು ಸಿಮೆಂಟ್ ರಸ್ತೆಗಳನ್ನು ಬಹಳಷ್ಟು ಗ್ರಾಮ ಪಂಚಾಯಿತಿ, ಜಿಲ್ಲಾ ಪಂಚಾಯಿತಿ, ಶಾಸಕರ ಅನುದಾನ, ಲೋಕಸಭಾ ಸದಸ್ಯರ ಅನುದಾನ ಎಲ್ಲದರಲ್ಲಿಯೂ ಮಾಡುತ್ತಿದ್ದೇವೆ ಇದರಲ್ಲಿ ಯಾವ ರೀತಿ ಗುಣಮಟ್ಟದ ಸಿಮೆಂಟ್ ರಸ್ತೆಯನ್ನು ಗ್ರಾಮೀಣ ಪ್ರದೇಶದಲ್ಲಿ ಮಾಡುತ್ತಿದ್ದೇವೆಂದು ತಾವು ಹೇಳಿ ಒಂದು ಅಥವಾ ಎರಡು ತಿಂಗಳು ಆಗುವಷ್ಟರಲ್ಲಿ ನಾವು ಬರಿಗಾಲಲ್ಲಿ ಈ ರಸ್ತೆಗಳಲ್ಲಿ ನಡೆಯಲಿಕ್ಕೆ ಸಾಧ್ಯವಿಲ್ಲ ನಮ್ಮಲ್ಲಿ ಇವತ್ತು ತಂತ್ರಜ್ಞಾನ ಬಹಳಷ್ಟು ಮುಂದುವರೆದಿದ, ಇವತ್ತು ಕೆ ಎಸ್ ಆರ್ ಟಿ ಸಿ ಯಲ್ಲಿ ತಂತ್ರಜ್ಞಾನವನ್ನು ಉಪಯೋಗಿಸಿ ಯಾವ ರೀತಿ ಸಿಮೆಂಟ್ ರಸ್ತೆಯನ್ನು ಮಾಡುತ್ತಿದ್ದರೆ, ಅದರ ಬಾಳಿಕೆ ಎಷ್ಟು ಬರುತ್ತಿದೆ ಅದನ್ನು ಗಮನಿಸಬೇಕಾಗಿದೆ, ಆ ಒಂದು ವ್ಯವಸ್ಥೆಯನ್ನು ಈ ಸುವರ್ಣ ಗ್ರಾಮೋದಯ ಯೋಜನೆಯಲ್ಲಿ ಉಪಯೋಗಿಸಬೇಕಾಗಿದೆ, ಎಲ್ಲೆಲ್ಲಿ ಸಿಮೆಂಟ್ ರಸ್ತೆಯನ್ನು ಮಾಡುತ್ತಾರೆ, ಅಂಥ ಕಡೆ Vacuum de-watering technique ತಂತ್ರಜ್ಞಾನವನ್ನು ಉಪಯೋಗಿಸಬೇಕು, ಇದಕ್ಕೆ ಸ್ವಲ್ಪ ಹಣ ಜಾಸ್ತಿಯಾದರೂ ಪರವಾಗಿಲ್ಲ, ಎಸ್ ಆರ್ ನಲ್ಲಿಯೂ ಅದಕ್ಕೆ ಪ್ರಾವಿಷನ್ ಇದೆ ಶಾಸಕರ ಅನುದಾನದಲ್ಲಿ ನಾವು ಆ ವ್ಯವಸ್ಥೆಯನ್ನು ಮಾಡುತ್ತಿದ್ದೇವೆ ಸ್ವಲ್ಪ ಕಡಿಮೆ -ಯಾದರೂ ಪರವಾಗಿಲ್ಲ, ಶಾಶ್ವತವಾಗಿ ಉಳಿಯುವಂಥ ಕೆಲಸ ಮಾಡಬೇಕೆಂಬ ಪ್ರಯತ್ನವನ್ನು ಮಾಡುತ್ತಿದ್ದೇವೆ ಇದು ಅದರಲ್ಲಿ ಒಳಪಡಬೇಕು ಆ ಸುವರ್ಣ ಗ್ರಾಮೋದಯ ಯೋಜನೆಯಲ್ಲಿ ಈಗಾಗಲೇ ಮೂರು ಕೋಟಿ ಇಪ್ಪತ್ತಾರು ಲಕ್ಷ ರೂ ಗಳನ್ನು ಅಂತಿಮವಾಗಿ

ಕೊಡುತ್ತೇವೆಂದು ಹೇಳುತ್ತಾರೆ, ನನಗಂತೂ ಖಂಡಿತವಾಗಿಯೂ ಅದರಲ್ಲಿ ನಂಬಿಕೆಯಿಲ್ಲ ಏಕೆಂದರೆ ಈಗಾಗಲೇ 'ಸುಗ್ರಾಮ ಸುವರ್ಣಗ್ರಾಮ' ಎಂದು ಮಾನ್ಯ ಧರಂಸಿಂಗ್‌ರವರು ಮುಖ್ಯಮಂತ್ರಿಯಾಗಿದ್ದಾಗ ಆ ಯೋಜನೆಯನ್ನು ಜಾರಿಗೊಳಿಸಿದ್ದರು ಅದರಲ್ಲಿ ಸುಮಾರು 20 ಲಕ್ಷ ರೂಪಾಯಿವರೆಗೂ ವಿವಿಧ ಇಲಾಖೆಗಳು, ಸೇರಿಕೊಂಡು ನಾವು ಅನುಷ್ಠಾನ ಮಾಡುತ್ತೇವೆಂದು ಹೇಳಿದರು ಅದೂ ನಮ್ಮ ಕ್ಷೇತ್ರದಲ್ಲಿ ನಾವು ಅನುಷ್ಠಾನ ಮಾಡಿದ್ದೇವೆ ಅದರಲ್ಲೂ ಡಿ ಪಿ ಆರ್ ನಿಂದ ಸಂಪೂರ್ಣವಾದ ವಿವರ ತರಿಸಿಕೊಂಡು ಅನುಷ್ಠಾನ ಚೆನ್ನಾಗಿ ಮಾಡಿದ್ದೇವೆ ಆದರೆ ಬಿಡುಗಡೆ ಆಗಬೇಕಾದಂತಹ ಹಣ ಪೂರ್ತಿಯಾಗಿ ಬಿಡುಗಡೆ ಆಗಲಿಲ್ಲ ಏಕೆಂದರೆ ಅದಕ್ಕೆ ಸರ್ಕಾರದಿಂದ ಬರತಕ್ಕಂಥ ಹಣ ಅಲ್ಲ ವಿವಿಧ ಯೋಜನೆಗಳಿಂದ, ವಿವಿಧ ಇಲಾಖೆಗಳಿಂದ ಇದಕ್ಕೇನು ಹಣ ಸೇರ್ಪಡೆ ಆಗಬೇಕಾಗುತ್ತಿತ್ತು? ಆ ಹಣ ಸೇರ್ಪಡೆ ಆಗಲಿಲ್ಲ ಖಂಡಿತ ಈ ವಿಚಾರವನ್ನು ನಾನು ಏಕೆ ಹೇಳುತ್ತೇನೆಂದರೆ ಸುವರ್ಣ ಗ್ರಾಮೋದಯದ ಯೋಜನೆ ಅಡಿಯಲ್ಲಿ ಈಗಾಗಲೇ ಬರೀ 15 ರಿಂದ 20 ಲಕ್ಷ ರೂಪಾಯಿ ಬಿಡುಗಡೆ ಆಗಿದೆ ಅದು ನಂತರ ಯಾವ ಯಾವ ಹಂತದಲ್ಲಿ ಬಿಡುಗಡೆ ಆಗುತ್ತದೆ ಎಂಬ ಬಗ್ಗೆ ಒಂದು ನಿಖರವಾದಂತಹ ಮಾಹಿತಿ ಇಲ್ಲ ನಾನು ಸನ್ಮಾನ್ಯ ಸಚಿವರಲ್ಲಿ ವಿನಂತಿಸಿಕೊಳ್ಳುವುದು ಇಷ್ಟೇ ಯಾವುದೇ ಒತ್ತಡಕ್ಕೆ ಒಳಗಾಗಬಾರದು

ಶ್ರೀ ಕೆ ಜಯಪ್ರಕಾಶ್ ಹೆಗ್ಡೆ ಒಂದು ಕೋಟಿ ರೂಪಾಯಿಯೂ ಬರುವುದಿಲ್ಲವೆಂದು ಕಾಣುತ್ತದೆ ನೀವು ಜನಸಂಖ್ಯೆ ಆದಾರದ ಮೇಲೆ ಕೊಡುತ್ತೇವೆಂದು ಹೇಳುತ್ತೀರಿ ಯಾವ ಗ್ರಾಮಕ್ಕೂ ಒಂದು ಕೋಟಿ ರೂಪಾಯಿ ಬರುವುದಿಲ್ಲ ಮೊದಲು ಒಂದು ಕೋಟಿ ರೂಪಾಯಿ ಕೊಡುತ್ತೇವೆಂದು ಹೇಳಿದ್ದೀರಿ ಎರಡು ಕೋಟಿಯಾ?

ಶ್ರೀ ಸಿ ಎಂ ಉದಾಸಿ ಒಂದು ನಿಮಿಷ ನಿಮಗೆ ಕ್ಲಿಯರ್ ಮಾಡಿ ಬಿಡುತ್ತೇನೆ ಮಾನ್ಯ ಜಯಪ್ರಕಾಶ್ ಹೆಗ್ಡೆ ಅವರು ಪ್ರಸ್ತಾಪ ಮಾಡಿದ ಹಾಗೆ, ಜನಸಂಖ್ಯೆ ಆಧಾರದ ಮೇಲೆ ನಾವೇನು ಮಾಡಿದ್ದೇವೆಂದರೆ, ಇಡೀ ರಾಜ್ಯದ ಜನಸಂಖ್ಯೆ, ಗ್ರಾಮೀಣ ಭಾಗದ ಜನಸಂಖ್ಯೆ ಎಂದು ಮೂರು ಕೋಟಿ 40 ಲಕ್ಷ ಎಂದು ಗುರುತಿಸಿದ್ದೇವೆ ಗ್ರಾಮೀಣ ಭಾಗದ ಜನಸಂಖ್ಯೆಯನ್ನು ಪ್ರತಿ ಒಂದು ತಾಲ್ಲೂಕಿನಲ್ಲಿ, ಗ್ರಾಮೀಣ ಭಾಗದ ಜನಸಂಖ್ಯೆಯನ್ನು ಗಮನದಲ್ಲಿ ಇಟ್ಟುಕೊಂಡು Pro-rata ಹಣವನ್ನು ಬಿಡುಗಡೆ ಮಾಡುವಂತಹ ವ್ಯವಸ್ಥೆಯನ್ನು ಆ ತಾಲ್ಲೂಕಿಗೆ ಗೊತ್ತುಪಡಿಸಿರುವಂತಹ ಕೆಲಸ ಮಾಡಿದ್ದೇವೆ

ಈ ತಾಲ್ಲೂಕಿಗೆ ಗೊತ್ತು ಪಡಿಸಿರುವಂತಹ ಹಣದಲ್ಲಿ ಪ್ರತಿ ಒಂದು ಗ್ರಾಮ ನೀವು ಆಯ್ಕೆ ಮಾಡಬೇಕಾದಾಗ ಎರಡು ಸಾವಿರದಿಂದ ಎಂಟು ಸಾವಿರದ ಮಧ್ಯದ ಜನಸಂಖ್ಯೆ ಗ್ರಾಮಗಳನ್ನು ಆಯ್ಕೆ ಮಾಡಿ ಅದಕ್ಕೆ ಬಂದಿರುವಂತಹ ಹಣದಲ್ಲಿ, ನಿಮಗೆ ಅಲೊಕೇಶನ್ ಆದ ಜನಸಂಖ್ಯೆಗೆ ಪೂರಕವಾದ ಹಣ ಏನು ಮಂಜೂರಾತಿ ಆಗಿದೆ? ಅದರಲ್ಲಿ ಕಾರ್ಯಕ್ರಮವನ್ನು ರೂಪಿಸಬೇಕೆಂದು ಮಾಡಿದ್ದೇವೆ ಅದು ಮೂರೂವರೆ ಸಾವಿರ ಜನಸಂಖ್ಯೆಗೆ ಒಂದು ಕೋಟಿ ರೂಪಾಯಿ ಹಣ ಖರ್ಚು ಮಾಡುವುದಕ್ಕೆ ಅನುಕೂಲ ಆಗುತ್ತದೆ ಆ ರೀತಿ ಮಾಡಿದ್ದೇವೆ ಆದರೆ ಅನೇಕ ಸಂದರ್ಭದಲ್ಲಿ ಗ್ರಾಮಗಳನ್ನು ಆಯ್ಕೆ ಮಾಡಬೇಕಾದಂತಹ ಸಂದರ್ಭದಲ್ಲಿ ತಾವು ಕೊಟ್ಟಿರುವಂತಹ ಸಲಹೆಯಲ್ಲಿ ವ್ಯತ್ಯಾಸಗಳು ಆಗಿರಬಹುದು ಜನಸಂಖ್ಯೆ ಕಡಿಮೆ ಆದಲ್ಲಿ ಅನುದಾನದ ಹಣ ಕಡಿಮೆ ಬರುತ್ತದೆ

ಡಾ ವೈ ನಾಗಪ್ಪ ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಹೇಳುತ್ತಿದ್ದಾರೆ ಮಾನ್ಯ ಶಾಸಕರಿಗೆ ಆಯ್ಕೆ ಮಾಡಲು ಕೊಟ್ಟಿಲ್ಲ ಎಂದು ಹೇಳಿದರು ನಾವೆಲ್ಲಾ ಬರೆದು ಕೊಟ್ಟರೂ ಆ ಗ್ರಾಮಗಳು ಆಗಿಲ್ಲ ಅದೇಕೆ ಲೋಕಲ್ ಎಂಎಲ್ಎಗಳನ್ನು ನೆಗ್ಲೆಕ್ಟ್ ಮಾಡಬೇಕು? ನಾವೆಲ್ಲ ಬರೆದು ಕೊಟ್ಟಿದ್ದೇವೆ

ಶ್ರೀ ಸಿ ಎಂ ಉದಾಸಿ ಜಿಲ್ಲಾ ಮಂತ್ರಿಗಳಿಗೆ ಈ ವಿಚಾರವನ್ನು ಫೈನಲ್ ಮಾಡುವುದಕ್ಕೆ ಹೇಳಿದ್ದೇವೆ ಅದನ್ನು expedite ಮಾಡಿ ಮಾಡಿಸಿ ಕೊಡುತ್ತೇನೆ

ಡಾ ವೈ ನಾಗಪ್ಪ ನಮ್ಮ ಹತ್ತಿರ ಯಾರೂ ಕೇಳಲೇ ಇಲ್ಲ

(ಗೊಂದಲ)

ಅಧ್ಯಕ್ಷರು ಮಾನ್ಯ ಮಂತ್ರಿಗಳು ಇದ್ದಾರಲ್ಲ ಮಾನ್ಯ ಸುಧಾಕರ್ ಮುಗಿಸಿ ಮಾನ್ಯ ನಾಗಪ್ಪನವರೇ ಆಮೇಲೆ ನೀವು ಕೇಳಿ ಮಾನ್ಯ ಸುಧಾಕರ್ ಬೇಗ ಮುಗಿಸಿ

ಡಾ ಎಂ ಸಿ ಸುಧಾಕರ್ ನಾನು ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುವುದು ಇಷ್ಟೇ ದಯವಿಟ್ಟು ಅವಕಾಶ ಇದ್ದರೆ ಒಂದು ಒಳ್ಳೆಯ Reputed Consultants ಅವರನ್ನು ಇದಕ್ಕೆ ನೇಮಕ ಮಾಡಿ ಎಂದು ನನ್ನ ಸಲಹೆ ತಾವು Division-wise ತೆಗೆದುಕೊಳ್ಳುತ್ತೀರೋ ಅಥವಾ ಜಿಲ್ಲೆಗೆ ಒಂದೊಂದು ತೆಗೆದುಕೊಳ್ಳುತ್ತೀರೋ? ಒಂದೊಂದು ಕಡೆ pilot basis ನಲ್ಲಿ

ಈ ಕಾಮಗಾರಿಯನ್ನು ಮಾಡಿಸಿ ಅದರಲ್ಲಿರತಕ್ಕಂಥ ನ್ಯೂನತೆಗಳೇನು? ಅದರಲ್ಲಿ ಇನ್ನೇನಾದರೂ ಒಳಗೊಳ್ಳಬಹುದು ಎನ್ನುವ ಬಗ್ಗೆ ದಯವಿಟ್ಟು ಒಂದು Pilot basis ಮೇಲೆ ಮಾಡಿ ಏಕೆಂದರೆ ಹಲವಾರು ವರ್ಷಗಳಿಂದ ಸರ್ಕಾರ, ಅಧಿಕಾರಿಗಳು ಹಲವಾರು ಯೋಜನೆಗಳನ್ನು ರೂಪಿಸುತ್ತಾ ಬಂದಿವೆ ಆದರೆ ನಾವು ಇವತ್ತೂ ಎಂತಹ ಒಂದು ಪರಿಸ್ಥಿತಿಯಲ್ಲಿದ್ದೇವೆಂದರೆ ಬಹುಶಃ ನಾವೆಲ್ಲಾ ತಲೆ ತಗ್ಗಿಸಬೇಕಾದಂತಹ ವಿಚಾರ ದಯವಿಟ್ಟು ಇದನ್ನು ತಾವು ಯೋಚನೆ ಮಾಡಿ ಇಲ್ಲ, ಇದು ಸಾಧ್ಯ ಇಲ್ಲ ಎಂದರೆ ಕನಿಷ್ಠ ಎಸ್ಟಿಮೇಟ್ಸ್ ಯಾವ ರೀತಿ ಆಗಿದೆ? ಅದನ್ನು ಪರಿಶೀಲಿಸಿ, ಅದನ್ನು ಮಾರ್ಪಾಟು ಮಾಡಿಸಿ ಇದನ್ನು ದಯವಿಟ್ಟು ತುಂಡು ಗುತ್ತಿಗೆ ಮಾತ್ರ ಕೊಡಬೇಡಿ ಮತ್ತೊಂದು ವಿನಂತಿ ಎಂದರೆ ತಮ್ಮ ಇಲಾಖೆಯ ವ್ಯಾಪ್ತಿಯಲ್ಲಿದೆ ಎಂದು ಹೇಳಿ Land Army ಗಂತೂ ದಯವಿಟ್ಟು ಅವರಿಗೆ ಕೊಡಲೇ ಬೇಡಿ ಈಗಾಗಲೇ ಅವರು PMGSY ರಸ್ತೆಗಳನ್ನು ಅವರು ತೆಗೆದುಕೊಂಡಿದ್ದಾರೆ ಇವತ್ತಿನವರೆಗೂ dead-line ಪೂರ್ಣಗೊಂಡಿದೆ ಈಗಾಗಲೇ ಕಾಮಗಾರಿಗಳು ಇನ್ನು ಪೂರ್ಣವಾಗಿಲ್ಲ ಈಗಾಗಲೇ 7th Phase ಗೆ 3rd Phase, 4th Phase ಕಾಮಗಾರಿ ಪೂರ್ಣವಾಗಿಲ್ಲ ಎಂದರೆ 7th Phase, 8th Phase ಗೆ ಕೊಡುವಂತಹ ಪರಿಸ್ಥಿತಿ ಇವತ್ತು ಇಲ್ಲ ಇವತ್ತು ತಮಗೆಲ್ಲಾ ಬಹಳಷ್ಟು ತಿಳಿದಿರುವಂತಹ ವಿಚಾರ ಗ್ರಾಮೀಣ ರಸ್ತೆಗಳ ಮಟ್ಟ ಇವತ್ತು ಯಾವ ರೀತಿ ಇದೆ? ಇನ್ನೊಂದು ವಿಚಾರ ತಾವು ಇತ್ತೀಚೆಗೆ ಒಂದು ನಿಲುವನ್ನು ತೆಗೆದುಕೊಂಡಿದ್ದೀರಿ ಏನು 3054 CMGSY ಇರಬಹುದು, 12th Finance ಇರಬಹುದು, ಬಹಶಃ ತಮಗೆ ನಾನು ಪತ್ರ ಮುಖಾಂತರ ತಿಳಿಸಿಕೊಟ್ಟಿದ್ದೆ ದಯವಿಟ್ಟು ಸ್ವಾಮಿ ಇದರಲ್ಲಿ ಅವ್ಯವಹಾರ ಆಗುತ್ತಿದೆ ಇದರ ಉದ್ದೇಶ ರಸ್ತೆಗಳನ್ನು ಸರಿಯಾದ ರೀತಿಯಲ್ಲಿ ತರುವ ವ್ಯವಸ್ಥೆ ಆಗಬೇಕು ಅದನ್ನು ಯಾರು ಮಾಡುತ್ತಿದ್ದಾರೆಂದು ನಾನು ದೂಷಣೆ ಮಾಡುತ್ತಿಲ್ಲ ಆದರೆ ಅದನ್ನು 50 ಸಾವಿರ, ಒಂದು ಲಕ್ಷ ಹಾಕಿಕೊಂಡು ಬರೇ ಮಣ್ಣು ಚೆಲ್ಲಿ ಹಣ ಮಾಡಿಕೊಳ್ಳುತ್ತಿದ್ದಾರೆ ದಯವಿಟ್ಟು ಇದನ್ನು ನಿಲ್ಲಿಸಿ ಎಂದು ತಮ್ಮಲ್ಲಿ ವಿನಂತಿ ಮಾಡಿಕೊಂಡಿದ್ದೆ ಸಂಬಂಧಪಟ್ಟ ಅಧಿಕಾರಿಗಳು ಅದಕ್ಕೆ ಹೆಚ್ಚು ಗಮನ ಕೊಡಲಿಲ್ಲ ಆದರೂ ತಾವು ಬಹುಶಃ ಸಾಕಷ್ಟು ಶಾಸಕರ ಒಂದು ವಿಚಾರವನ್ನು ತಿಳಿದು, ಅವರಿಂದ ಮಾಹಿತಿಯನ್ನು ಪಡೆದು ಇವತ್ತು ಒಂದು ಒಳ್ಳೆಯ ನಿರ್ಧಾರವನ್ನು ತೆಗೆದುಕೊಂಡಿದ್ದೀರಿ ಅದನ್ನು

Package System ಮಾಡಿ ಅದಕ್ಕೆ ಇಂತಿಷ್ಟು ಭಾಗ ಡಾಂಬರೀಕರಣವೇ ಮಾಡಬೇಕು, ಅದಕ್ಕೆ ಇಂತಿಷ್ಟು ಈ ರೀತಿ ಕೆಲಸ ಮಾಡಬೇಕೆಂದು ಹೇಳಿ ತಾವು ನಿಯಮವನ್ನು ತಂದಿದ್ದೀರಿ ಅದನ್ನು ನಾವೆಲ್ಲಾ ಒಪ್ಪುತ್ತೇವೆ, ಶ್ಲಾಘಿಸುತ್ತೇವೆ ಇದರ ಜೊತೆಯಲ್ಲಿ ನಬಾರ್ಡ್ ರಸ್ತೆ ಆಗಿರಬಹುದು, ವಿವಿಧ ಯೋಜನೆಗಳನ್ನು ಮಾಡತಕ್ಕ ಗ್ರಾಮೀಣ ರಸ್ತೆಗಳಲ್ಲಿ, ನಮ್ಮ ರೈತರಿಗೆ ಅವರಿಗೆ ಎಷ್ಟು ದುರಾಸೆ ಎಂದರೆ ರಸ್ತೆಯ ಸೈಡ್ ಶೋಲ್ಡರ್ಸ್ ಏನು ಇರುತ್ತವೆ? ಅದನ್ನೂ ಬಿಡುವುದಿಲ್ಲ ಅವಕಾಶ ಸಿಕ್ಕರೆ ಬಹುಶಃ ರಸ್ತೆಯಲ್ಲೂ ಸ್ವಲ್ಪ ಉತ್ತು ಬಿಟ್ಟು ಅಲ್ಲೂ ಬೆಳೆ ಇಡುವಂತಹ ವ್ಯವಸ್ಥೆ ಮಾಡುತ್ತಿದ್ದಾರೆ ಅಧಿಕಾರಿಗಳೂ ಅಲ್ಲಿ ಓಡಾಡುತ್ತಿರುತ್ತಾರೆ ಅವರಿಗೆ ಕಣ್ಣು ಕಾಣುವುದಿಲ್ಲ ಅವರಿಗೆ ಅಲ್ಲಿ ಹೋಗಿ ಅಲ್ಲಿ ಯಾವ ರೀತಿ ರಸ್ತೆ ಇತ್ತು? ಅಲ್ಲಿನ measurement ಎಷ್ಟು ಇತ್ತು? ಅದು ನಬಾರ್ಡ್‌ನಲ್ಲಿ 30 ಅಡಿ ರಸ್ತೆ ಎಂದು ಮಾಡುತ್ತಾರೇನೋ ಪೂರ್ತಿ width ಅದನ್ನು ಏನು ಮಾಡಿರುತ್ತಾರೆ? ಅಲ್ಲಿರತಕ್ಕ drain ಏನು ಮುಚ್ಚಿ ಹೋಗಿರುತ್ತದೆ? ಅದನ್ನು ಒತ್ತುವರಿ ಮಾಡಿಕೊಂಡಿರು ವಂತಹ 4-5 ಜನರ ಮೇಲೆ ತಾವು ದಯವಿಟ್ಟು ಕ್ರಮ ಜರುಗಿಸಿ, ಆವಾಗ ಅದರ ಬಗ್ಗೆ ಭಯ ಬರುತ್ತದೆ ನಮ್ಮ ದೇಶದಲ್ಲಿ ಭಯ ಇಲ್ಲದೇ ಇದ್ದರೆ ಅದು ನಾನೇ ಆಗಿರಬಹುದು, ಅಥವಾ ಮತ್ತೊಬ್ಬರು ಆಗಿರಬಹುದು ಯಾರೂ ಕಾನೂನನ್ನು ಪರಿಪಾಲನೆ ಮಾಡುವುದಿಲ್ಲ ಎಲ್ಲೋ ಒಂದು ಕಡೆ ಭಯ ಇದೆ ಎತ್ತಿ ಒಳಗೆ ಹಾಕಿ ಬಿಡುತ್ತಾರೆ ಇದಕ್ಕೆ ಶಿಕ್ಷೆ ಇದೆ ಎಂದು ಹೇಳಿ ಭಯ ಇದ್ದರೆ ಖಂಡಿತ ನಮ್ಮ ಬಾಗ ಸುಧಾರಣೆ ಆಗುತ್ತದೆ ದಯವಿಟ್ಟು ಈ ರಸ್ತೆಗಳನ್ನು ಮಾಡುವುದಕ್ಕಿಂತ ಮುಖ್ಯವಾಗಿ ಅದನ್ನು ಯಾವ ರೀತಿ ಸುಧಾರಣೆ ಮಾಡಬೇಕು? ಅದಿಕಾರಿಗಳು ಅವರಿಗೆ ಇರತಕ್ಕ ಜವಾಬ್ದಾರಿ ಕ್ರಮಗಳೇನು ಇರುತ್ತದೆ? ದನ್ನು ಅವರು ಸರಿಯಾಗಿ ತೆಗೆದುಕೊಳ್ಳಬೇಕು ಅದನ್ನು ಅವರು ಸರಿಯಾದ ರೀತಿಯಲ್ಲಿ ತೆಗೆದುಕೊಳ್ಳುತ್ತಿಲ್ಲ ದಯವಿಟ್ಟು ಅದರ ಬಗ್ಗೆ ಸಹ ತಾವು ಗಮನ ಹರಿಸಬೇಕಾಗಿದೆ ಇನ್ನು ಗ್ರಾಮೀಣ ನೀರಿನ ಸೌಲಭ್ಯದ ವಿಚಾರವಾಗಿ ಈ ಕೇಂದ್ರ ಸರ್ಕಾರದ Rajiv Gandhi Rural Water Supply Machine ಎಂದೇನು ಇದೆ ಬಹುಶಃ ಅದು ನಾನು ಹೇಳುವುದು ತಪ್ಪಿರಬಹುದು ಇದನ್ನು ಗಮನಿಸಿದಾಗ, ಬರೇ ಕೆಲವೇ ಭಾಗಗಳಲ್ಲಿ ಶಾಶ್ವತವಾಗಿ ನೀರು ಹರಿಯುವಂತಹ ಕಡೆಗೆ ಏಕೆ ಇದನ್ನು 4-5 ಗ್ರಾಮಗಳಿಗೆ ಈ ವ್ಯವಸ್ಥೆ ಕಲ್ಪಿಸಬಾರದು? ಇವತ್ತು 2005ನೇ ವರ್ಷದಲ್ಲಿ

ನನ್ನ ಕ್ಷೇತ್ರದಲ್ಲಿ ಸುಮಾರು 400 borewell ಅನ್ನು ಹಾಕಿಸಿದ್ದೇನೆ ತಾವು ನಂಬುತ್ತೀರೋ ಬಿಡುತ್ತೀರೋ 400 ಬೋರ್‌ವೆಲ್ ಗ್ರಾಮೀಣ ಪ್ರದೇಶದಲ್ಲಿ ಹಾಕಿಸಿದ್ದೇನೆ 2006ರಲ್ಲಿ ಸಮಸ್ಯೆ ಇರಲಿಲ್ಲ ಏಕೆಂದರೆ ಆ ಬೋರ್‌ವೆಲ್ ಹಾಕಿದ್ದೆವು ಕೆಲವು ಗ್ರಾಮಗಳಲ್ಲಿ 8,10,11 ಬೋರ್‌ವೆಲ್ ಅನ್ನು ಹಾಕಿದ್ದೇವೆ ಇವತ್ತು ಹೋದ ವರ್ಷ 2006ರಲ್ಲಿ ಮಳೆ ಕೈಕೊಟ್ಟಿದ್ದರಿಂದ ನಮಗೆ ಬಹಳ ಸಮಸ್ಯೆ ಇದೆ ಈ ರೀತಿ ಎಷ್ಟು ವರ್ಷ ಎಂದು ನಾವು ಎಷ್ಟು ಕೋಟ್ಯಾಂತರ ರೂಪಾಯಿ ಹಣವನ್ನು ಇದಕ್ಕೆ ವಿನಿಯೋಗಿಸಿಕೊಂಡು ಹೋಗಲಿಕ್ಕೆ ಸಾಧ್ಯ ಇದೆ? ಎಲ್ಲೋ ಒಂದು ಕಡೆ ಅದಕ್ಕೆ ಶಾಶ್ವತವಾಗಿ ಪರಿಹಾರ ಕಂಡುಕೊಳ್ಳುವುದಕ್ಕೆ ವ್ಯವಸ್ಥೆ ಎಲ್ಲೆಲ್ಲಿ ಸಾಧ್ಯವಿದೆ ಅಲ್ಲಿ ಹಂತ ಹಂತವಾಗಿ ತೆಗೆದುಕೊಳ್ಳಬೇಕು ನಾನು ಇಲಾಖೆಯ ಹತ್ತಿರ ಬಂದು ಬೆಳಗಾಂ ಮತ್ತು ಬೇರೆ ಭಾಗಗಳಲ್ಲಿ ಮಾಡಿರುವ estimate ಗಳನ್ನು ತೆಗೆದುಕೊಂಡು ಹೋಗಿ ಈ ರೀತಿ ಯೋಜನೆಗಳು ಇದೆ ಮಹಾನುಭಾವರೇ, ದಯವಿಟ್ಟು ಇದನ್ನು ನಮ್ಮ ಭಾಗದಲ್ಲಿ ಏಕೆ ಅಳವಡಿಸಬಾರದು, ಇದಕ್ಕೆ ಒಂದು estimate ಮಾಡಿಕೊಡಿ ಎಂದರೆ ಆ ಅಧಿಕಾರಿಗಳಿಗೆ ಇವತ್ತಿನವರೆಗೆ ಆ ಕೆಲಸವನ್ನು ಮಾಡಿಕೊಡಲು ಆಗಿಲ್ಲ 8–9 ತಿಂಗಳುಗಳಾಯಿತು, ಏಕೆಂದರೆ ಅವರಿಗೆ ಅದರಲ್ಲಿ ಏನು percentage ಸಿಗುವುದಿಲ್ಲವಲ್ಲ? ರಾಜ್ಯ ಸರ್ಕಾರದಿಂದ ಕೇಂದ್ರ ಸರ್ಕಾರಕ್ಕೆ ಕೇವಲ estimate ಮಾಡಿ ಕಳುಹಿಸಿದರೆ ಏನೂ ಸಿಗುವುದಿಲ್ಲವಲ್ಲ, ಇದರ ಬಗ್ಗೆ ತಾವು ದಯವಿಟ್ಟು ಗಮನ ಹರಿಸಬೇಕಾಗಿದೆ ಈಗ ಮಾನ್ಯ ರಾಮಚಂದ್ರೇಗೌಡರು ಹೊರಗಡೆ ಹೋದರು ನಮ್ಮ Border area development fundನ್ನು ಕಳೆದ ವರ್ಷ ಮಾನ್ಯ ಉಪ ಮುಖ್ಯಮಂತ್ರಿಯವರು ಸ್ವಲ್ಪ ಹೆಚ್ಚು ಮಾಡಿದ್ದಾರೆ ಆದರೆ ಬಯಲು ಸೀಮೆ ಮತ್ತು ಈ ಭಾಗಕ್ಕೆ ಇನ್ನೂ ಹೆಚ್ಚಿನ ಅನುದಾನವನ್ನು ಕೊಡಬೇಕೆಂದು ಕೇಳುತ್ತೇನೆ ನಿನ್ನೆ ಗ್ರಾಮೀಣ ಜಿಲ್ಲಾ ಪಂಚಾಯತಿ ವ್ಯವಸ್ಥೆಯ ಬಗ್ಗೆ ಬಹಳಷ್ಟು ಚರ್ಚೆಯಾಯಿತು ಜಿಲ್ಲಾ ಪಂಚಾಯಿತಿಯ ಅಧಿಕಾರ ಕಿತ್ತುಕೊಳ್ಳುತ್ತಿದ್ದಾರೆಂದು ಚರ್ಚೆಯಾಯಿತು ನಾನು ತಮ್ಮ ಮೂಲಕ ವಿನಂತಿ ಮಾಡುವುದೇನೆಂದರೆ, ಇಲ್ಲಿರುವ ಯಾರೂ ಜಿಲ್ಲಾ ಪಂಚಾಯತಿ ವ್ಯವಸ್ಥೆಯ ವಿರುದ್ಧವಾಗಿಲ್ಲ ಆ ವ್ಯವಸ್ಥೆಯನ್ನು ಸರಿಪಡಿಸಬೇಕು ಮತ್ತು ಸರಿ ದಾರಿಗೆ ತೆಗೆದುಕೊಂಡು ಹೋಗಬೇಕು ಕೆಲವರಿಗೆ ಏನಾಗಿದೆ ಎಂದರೆ ಇನ್ನೂ 20–30 ವರ್ಷ ಅವಕಾಶ ಕೊಡೋಣ ಎನ್ನುವ ಭಾವನೆ ಇರಬಾರದು

ಇವತ್ತು ಸಾರ್ವಜನಿಕರ ಹಣವನ್ನು ಖರ್ಚು ಮಾಡುತ್ತಿದ್ದೇವೆ ಎಲ್ಲೆಲ್ಲಿ ವ್ಯವಸ್ಥೆಯನ್ನು ಸರಿಪಡಿಸಲು ಸಾಧ್ಯವಾಗುತ್ತದೆ ಅದಕ್ಕೆ ಆಗಿಂದಾಗ್ಯೆ ಕ್ರಮ ಜರುಗಿಸಬೇಕಾಗಿದೆ ಇವತ್ತು ಗ್ರಾಮಪಂಚಾಯತಿ ಯಾವುದೇ ಪಕ್ಷದ ಚಿನ್ಹೆಯ ಮೇಲೆ ನಡೆಯುವುದಿಲ್ಲ ಆದರೆ ನಮಗೆಲ್ಲ ತಿಳಿದಿರುವ ವಿಚಾರ ಗ್ರಾಮಪಂಚಾಯಿತಿ ಚುನಾವಣೆ ಆಯಾಯ ಪಕ್ಷದ ಆಧಾರದ ಮೇಲೆ ನಡೆಯುವುದು ಇವತ್ತು ಗ್ರಾಮ ಪಂಚಾಯಿತಿಯಲ್ಲಿ ಏನಾದರೂ ಹೆಚ್ಚುಕಡಿಮೆ ಆಗಿ ಅಲ್ಲಿರುವ ಸದಸ್ಯರು, ಅಧ್ಯಕ್ಷರಾಗಿರಬಹುದು ತಪ್ಪಾಗಿ ನಡೆದುಕೊಂಡರೆ ಅದರ ನೇರ ಪರಿಣಾಮ ಇವತ್ತು ಶಾಸಕರ ಮೇಲೆ ಬೀಳುತ್ತದೆ ಅಲ್ಲಿ ಅವರು ಏನಾದರೂ ಸರಿಯಾದ ರೀತಿಯಲ್ಲಿ ಜನರಿಗೆ ಸ್ಪಂದಿಸದಿದ್ದಲ್ಲಿ ಅದರ ಪರಿಣಾಮ ನೇರವಾಗಿ ಶಾಸಕರ ಮೇಲೆ ಬೀಳುತ್ತದೆ ನಾಳೆ ನಾವು ಯಾರೂ ಶಾಸನಸಭೆಗೆ ಬರುವಂದ ಅವಕಾಶ ಇರುವುದಿಲ್ಲ ಯಾವುದೇ ಪಕ್ಷ ಇರಬಹುದು, ಅದರ ಬುನಾದಿ ಏನಿದೆ ಅದು ಇವತ್ತು ಗ್ರಾಮಪಂಚಾಯಿತಿ ವ್ಯವಸ್ಥೆಯಲ್ಲಿದೆ ಆ ವ್ಯವಸ್ಥೆಯಲ್ಲಿ ಯಾರು ಸರಿಯಾಗಿ ನಡೆದುಕೊಳ್ಳುವುದಿಲ್ಲ ಅದರ ಪರಿಣಾಮ ನೇರವಾಗಿ ಶಾಸಕರು ಅನುಭವಿಸ ಬೇಕಾಗುತ್ತದೆ ಏಕೆಂದರೆ, ಅವರಿಗೆ ಯಾವುದೇ ರೀತಿಯಾದ ಕಮಿಟ್‌ಮೆಂಟ್ ಇರುವುದಿಲ್ಲ ಒಂದು ಸಲ ಚುನಾವಣೆಗೆ ನಿಂತರೆ ಮತ್ತೊಂದು ಬಾರಿಗೆ ಅವಕಾಶ ಇಲ್ಲ ದಯವಿಟ್ಟು ನಾನು ಸಚಿವರಲ್ಲಿ ತಮ್ಮ ಮುಖಾಂತರ ವಿನಂತಿಸಿಕೊಳ್ಳುತ್ತೇನೆ ಶಾಸಕರಾಗಿ ನಾವು ಮತ್ತೊಮ್ಮೆ ಯಾವ ರೀತಿ ಗೆದ್ದು ಬರಬೇಕು? ಮತ್ತೊಮ್ಮೆ ಹೇಗೆ ನಾವು ವಿಧಾನಸಭೆಗೆ ಬರಬೇಕು? ನಮ್ಮ ಕೈಲಾದಷ್ಟು ಸೇವೆಯನ್ನು ನಮ್ಮ ಕ್ಷೇತ್ರಕ್ಕೆ ಮಾಡಬೇಕೆಂಬ ಆಲೋಚನೆಯನ್ನು ನಾವು ಮಾಡುತ್ತೇವೆ ಆ ನಿಟ್ಟಿನಲ್ಲಿ ಗ್ರಾಮ, ತಾಲ್ಲೂಕು ಮತ್ತು ಜಿಲ್ಲಾ ಪಂಚಾಯತಿಗಳಿಗೆ ಏನು reservation ಇದೆಯೋ, ದಯವಿಟ್ಟು ಅದನ್ನು ಎರಡು term ಅಥವಾ ಮೂರು termಗೆ ತನ್ನಿ ಅವರಲ್ಲೂ ಸ್ವಲ್ಪ ಜವಾಬ್ದಾರಿ ಬರುತ್ತದೆ ನಾಳೆ ಅವರು ಜನರಿಗೆ ಉತ್ತರ ಕೊಡುವ ಪರಿಸ್ಥಿತಿಯಲ್ಲಿರುತ್ತಾರೆ ದಯವಿಟ್ಟು ಸನ್ಮಾನ್ಯ ಸಚಿವರು ಇದನ್ನು ಗಮನಿಸಬೇಕು ತಾವು ಇದನ್ನು ಗಂಭೀರವಾಗಿ ತೆಗೆದುಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ ಇನ್ನು ನಮ್ಮ ಜಿಲ್ಲಾ ಸಚಿವರಾದ ಪೌರಾಡಳಿತ ಸಚಿವರು ಏನು ಹೊರಟು ಬಿಟ್ಟಿದ್ದಾರೆ, Urban Department ಬಗ್ಗೆ ಕೆಲವು ವಿಚಾರಗಳನ್ನು ಪ್ರಸ್ತಾಪಿಸುತ್ತೇನೆ ಇವತ್ತು ಅಧಿಕಾರ ವಿಕೇಂದ್ರೀಕರಣವೆಂದು ಹೇಳುತ್ತಿದ್ದೇವೆ

ಅದು Corporation ಆಗಿರಬಹುದು, Town Municipal Council ಆಗಿರಬಹುದು, CMC ಆಗಿರಬಹುದು, ಪಟ್ಟಣ ಪಂಚಾಯಿತಿ ಆಗಿರಬಹುದು, ಅಲ್ಲಿಂದ ಅಂಕಿ–ಅಂಶಗಳನ್ನು ತರಿಸಿಕೊಳ್ಳಿ ಯಾವ್ಯಾವ ನಗರಗಳಲ್ಲಿ ಎಷ್ಟೆಷ್ಟು tax collection ಆಗಿದೆ? What is the percentage of tax Collection? Water tax ಎಷ್ಟು ಕಲೆಕ್ಟ್ ಆಗಿದೆ? ಎಂಬ ಮಾಹಿತಿಯನ್ನು ದಯವಿಟ್ಟು ತರಿಸಿಕೊಳ್ಳಿ UGD ಇರತಕ್ಕಂಥ ಊರುಗಳಲ್ಲಿ, ಎಷ್ಟು UGDಗೆ ಹಣವನ್ನು regularize ಮಾಡಿದ್ದಾರೆ? ಅಲ್ಲಿ ಎಷ್ಟು ಜನರು ಹಣ ಕಟ್ಟಿದ್ದಾರೆಂಬ ಮಾಹಿತಿಯನ್ನು ತರಿಸಿಕೊಳ್ಳಿ ಇವತ್ತು ಈ ವ್ಯವಸ್ಥೆ ಸಂಪೂರ್ಣವಾಗಿ ಕುಸಿದು ಬಿದ್ದಿದೆ ಈಗಾಗಲೇ ಪೌರ ಕಾರ್ಮಿಕರು ಮುಷ್ಕರದಲ್ಲಿ ನಿರತರಾಗಿದ್ದರೂ ಅವರುಗಳ ಬಹಳಷ್ಟು ಬೇಡಿಕೆಗಳನ್ನು ಇತ್ಯರ್ಥಗೊಳಿಸಿರುವುದಾಗಿ ಸರ್ಕಾರದವರು ಹೇಳುತ್ತಾರೆ ಆದರೂ ಅವರು ಮುಷ್ಕರವನ್ನು ಇನ್ನು ಹಿಂತೆಗೆದುಕೊಂಡಿಲ್ಲ ಇವತ್ತು ಏನಾಗಿದೆಯೆಂದರೆ, ಮುನಿಸಿಪಾಲಿಟಿಯಲ್ಲಿರುವ ಅಧಿಕಾರಿಗಳು ಒಳಚರಂಡಿ ವ್ಯವಸ್ಥೆ ಇರುವ ಊರುಗಳಲ್ಲಿ ಅದನ್ನು ಸಮರ್ಪಕವಾಗಿ ನಿಭಾಯಿಸುತ್ತಿಲ್ಲ ಇವತ್ತು ಬಡ ಪೌರ ಕಾರ್ಮಿಕರು ಏನು ಶೋಷಣೆಗೊಳಗಾಗಿದ್ದಾರೆ ಬಹಳ ಕಡಿಮೆ ಕೆಲಸ ಮಾಡುವಂತಹ ವ್ಯವಸ್ಥೆ ಏನಿದೆ, ಅದಕ್ಕೆ ಅವರು ಅವಕಾಶ ಕಲ್ಪಿಸಿಕೊಡುತ್ತಿಲ್ಲ UGD ಇರುವಂತಹ ಕಡೆಗಳಲ್ಲಿ ಕೇವಲ toilets ಮಾತ್ರ ಕೊಟ್ಟಿರುತ್ತಾರೆ ಉಳಿದಂತೆ ಸ್ನಾನದ ಮನೆ, ಅಡುಗೆ ಮನೆ ನೀರೆಲ್ಲವೂ ರಸ್ತೆಗೆ, ಚರಂಡಿಗೆ ಬಿಡುತ್ತಾರೆ ಇದರಿಂದ ಬಹಳಷ್ಟು ಅನಾನುಕೂಲವಾಗುತ್ತದೆ ದಯವಿಟ್ಟು ಇದರ ಬಗ್ಗೆ ಪೌರಾಡಳಿತ ಸಚಿವರು ಗಮನ ಹರಿಸಬೇಕಾಗುತ್ತದೆ ಇದನ್ನು ನಿಭಾಯಿಸಿದರೆ ನಾಳೆ ವ್ಯವಸ್ಥೆ ಹೆಚ್ಚಿಗೆ ಸುಧಾರಣೆಯಾಗುತ್ತದೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ Karnataka Municipal Reforms Programme ಎಂದು

ಅಧ್ಯಕ್ಷರು ನೀವು refer ಮಾಡಬೇಕೆಂದರೆ ಆಗುವುದಿಲ್ಲ ಮಾತನಾಡುವ ಇನ್ನು 8–10 ಸದಸ್ಯರಿದ್ದಾರೆ ಎಲ್ಲರೂ 15 ನಿಮಿಷ ಏನಾದರೂ ಮಾತನಾಡುವುದಿದ್ದರೆ, ಅವಕಾಶ ಕೊಡುತ್ತೇನೆ ಅಲ್ಲಿಗೆ ಕ್ಲೋಸ್ ಮಾಡಿ ನಾನು ಉತ್ತರ ಕೊಡಿಸುತ್ತೇನೆ ಅಷ್ಟೇ ಏನಿದು? ಮುಂದಿನ

ಬೆಂಚಿನವರಿಗೂ ಇದಿಲ್ಲ, ಹಿಂದಿನ ಬೆಂಚಿನವರಿಗೂ ಇದಿಲ್ಲ ನೀವೆಲ್ಲರೂ ಮಾತನಾಡಬೇಕೆಂದರೆ ಹೇಗಾಗುತ್ತದೆ?

ಡಾ ಎಂ ಸಿ ಸುಧಾಕರ್ ಅಧ್ಯಕ್ಷರೆ, ನಾವು ವಾಸ್ತವಿಕ ವಿಚಾರಗಳನ್ನು ಹೇಳುತ್ತಿದ್ದೇವೆ 'ನೀವು ಹೇಳಬೇಡಿ' ಎಂದರೆ, ನಾವೇನೂ ಹೇಳುವುದಿಲ್ಲ

ಅಧ್ಯಕ್ಷರು ಎಲ್ಲಿ ಅವಕಾಶವಿದೆ?

ಡಾ ಎಂ ಸಿ ಸುಧಾಕರ್ ನಾವೇನೂ ಇಲ್ಲಿ ಟೀಕೆ-ಟಿಪ್ಪಣಿಗಳನ್ನು ಮಾಡುತ್ತಿಲ್ಲ ನಾನು ತಮ್ಮ ಮುಂದೆ ವಾಸ್ತವಿಕ ವಿಚಾರಗಳನ್ನು ಹೇಳುತ್ತಿದ್ದೇನೆ

ಅಧ್ಯಕ್ಷರು ಹೌದು ಸ್ವಾಮಿ ಅನೇಕ ವಿಚಾರಗಳನ್ನು ನಿಮ್ಮ ನಾಯಕರುಗಳು ಮಾತನಾಡಿದ್ದಾರೆ ನೀವು ಸೀಮಿತವಾಗಿ, ನಿಮಗೆ ಯಾವುದು ಆಸಕ್ತಿ ಇದೆಯೋ, ನಿಮ್ಮ ಸಮಸ್ಯೆ ಏನಿದೆಯೋ, ಅದರ ಬಗ್ಗೆ ಮಾತನಾಡಿ ನೀವು ಈ ರೀತಿ ಗಂಟೆಗಟ್ಟಳೆ ಮಾತನಾಡಿದರೆ ಹೇಗೆ? No,No

ಡಾ ಎಂ ಸಿ ಸುಧಾಕರ್ ಕನಿಷ್ಠ ನಾವು ಬೇಡಿಕೆಗಳ ಮೇಲಾದರೂ ಹೇಳುವುದಕ್ಕೆ ಅವಕಾಶ ಮಾಡಿ ಕೊಡಿ ಈಗ KUIDFC ಮುಖಾಂತರ Karnataka Municipal Reforms Programme ಎಂದು ಸುಮಾರು ಐದು ವರ್ಷಗಳ ಹಿಂದೆ ಈ ಕಾರ್ಯಕ್ರಮ ಪ್ರಾರಂಭವಾಯಿತು ಈಗ 1st Phase, 2nd Phase ಎಂದು ಒಂದು ಹಂತಕ್ಕೆ ಬಂದಿದೆ 1st Phaseನಲ್ಲಿ Detailed Project Report ತಯಾರಾಗಿದೆ ಇವತ್ತಿಗೂ ಟೆಂಡರ್ ಕರೆಯಲಿಲ್ಲ ಇದರಲ್ಲಿ ಸುಮಾರು 18 ನಗರಗಳು ಒಳಪಟ್ಟಿವೆ ಇದರಿಂದ ಬಹುಶಃ ಬೆಂಗಳೂರು, ಮೈಸೂರು ಕಾರ್ಪೋರೇಷನ್‌ಗಳನ್ನು ಹೊರತುಪಡಿಸಿರಬಹುದು ಎರಡನೇ ಫೇಸ್‌ನಲ್ಲಿ ನಮ್ಮ ಕ್ಷೇತ್ರವೂ ಸೇರಿದೆ ಸುಮಾರು ಒಂದೂವರೆ ವರ್ಷದಿಂದಲೂ ನಾವು ಅದನ್ನು ರೆಡಿ ಮಾಡಿಸಿ ಕಳುಹಿಸಿದ್ದೇವೆ ಆದರೆ, ಇವತ್ತಿಗೂ ಅದರ ಬಗ್ಗೆ ಯಾವುದೇ ಕ್ರಮ ಜರುಗಿಸಿಲ್ಲ ಈ ರೀತಿಯಲ್ಲಿ World Bank Supported Programmes ಬಗ್ಗೆ ಇವತ್ತು ಸರ್ಕಾರ ಗಮನ ಕೊಡದೇ ಬಹಳಷ್ಟು ತಡ ಮಾಡುತ್ತಿದೆ ಅಲ್ಲಿರುವ ಅಧಿಕಾರಿಗಳು ಅದರ ಬಗ್ಗೆ ಗಮನಹರಿಸುತ್ತಿಲ್ಲ ಏಕೆ ಇದು ವಿಳಂಬವಾಗುತ್ತಿದೆ? ಇಂತಹ ಯೋಜನೆಯನ್ನು ಮಂಜೂರು ಮಾಡಿಸಿಕೊಟ್ಟಿದ್ದೇವೆಂದು ಜನರಿಗೆ ಹೇಳಿದ್ದೇವೆ ಆ ಭಾಗದಲ್ಲಿ ಇವತ್ತು ಕೆಲಸವಾಗುತ್ತಿಲ್ಲ ಇದರ ಬಗ್ಗೆ ನಾವು ಸರ್ಕಾರದ ಗಮನಕ್ಕೆ

ತರಬಯಸುತ್ತೇವೆ ಮತ್ತು Slum Board ನಲ್ಲಿ Integrated Housing and Slum Development Programme (IHSDP) ಎಂಬ ಕೇಂದ್ರ ಸರ್ಕಾರದ ಯೋಜನೆಯಡಿ ಸೌಲಭ್ಯ ಹೊಂದಲು ನಮ್ಮ ಪ್ರಸ್ತಾವನೆ ಒಂದೂವರೆ ವರ್ಷದಿಂದ, ಅಲ್ಲಿದೆ ಪ್ರತಿ ಬಾರಿಯೂ ಆ ಲಿಸ್ಟ್‌ನಲ್ಲಿ ನಮ್ಮ ಪ್ರಸ್ತಾವನೆ ಇರುತ್ತದೆ ಪ್ರಭಾವಿಗಳು ಬರುತ್ತಾರೆ ನಂತರ, ಅದನ್ನು ತೆಗದು ಹಿಂದಕ್ಕೆ ಹಾಕುತ್ತಾರೆ ಅಧ್ಯಕ್ಷರೆ, ನಾವು ಮಾಡಿರುವ ತಪ್ಪಾದರೂ ಏನು? ಈ ರೀತಿಯಲ್ಲಿ ಪಕ್ಷಪಾತ ಮಾಡಿಕೊಂಡಿದ್ದರೆ, ನಾವು ನಮ್ಮ ಕ್ಷೇತ್ರಗಳಲ್ಲಿ ನಮ್ಮ ಜನರಿಗೆ ಹೇಗೆ ಮುಖ ತೋರಿಸುವುದು? ಇನ್ನು ನಾವು ಅವರಿಗೆ ಹೇಳಬೇಕಾಗುತ್ತದೆ ನಾವು ವಿರೋಧ ಪಕ್ಷದಲ್ಲಿದ್ದೇವೆ ದಯವಿಟ್ಟು ನೀವು ಇನ್ನು ನಮ್ಮನ್ನು ಏನೂ ಕೇಳಬೇಡಿ ನಾವು ಯೋಗ್ಯರಲ್ಲ, ಬರೀ ಆಡಳಿತ ಪಕ್ಷದಲ್ಲಿರುವವರ ಕೆಲಸಗಳು ಮಾತ್ರ ಆಗುತ್ತದೆಂಬ ಮಾತನ್ನು ಹೇಳಬೇಕಾಗುತ್ತದೆ ಸರ್ಕಾರ ಈ ರೀತಿಯಲ್ಲಿ ತಾರತಮ್ಯ ಎಸಗುತ್ತಿದೆ ಇದರಲ್ಲಿ ನಾವು ಇನ್ನಷ್ಟು ಪ್ರಯತ್ನ ಮಾಡಬೇಕು ಸದನ ಸಮಿತಿಯವರು ಸರ್ಕಾರಿ ಜಮೀನು ಒತ್ತುವರಿ ಕುರಿತಂತೆ ನಿನ್ನೆ ಸರ್ಕಾರಕ್ಕೆ ಮಧ್ಯಂತರ ವರದಿಯೊಂದನ್ನು ಸಲ್ಲಿಸಿದರು ಕಳೆದ ಸದನದಲ್ಲಿ ಸನ್ಮಾನ್ಯ ಕಂದಾಯ ಮಂತ್ರಿಗಳು ಇಲ್ಲಿ ಉತ್ತರ ಕೊಟ್ಟಿದ್ದರು ಚಿಂತಾಮಣಿಯಲ್ಲಿ ಸರ್ವೆ ನಂ–69 ರಲ್ಲಿ ಕೆರೆ ಒತ್ತುವರಿಯನ್ನು ತೆರವುಗೊಳಿಸುತ್ತೇವೆಂದು ಹೇಳಿದ್ದರು ಮೂರು ತಿಂಗಳಾದವು ಇವತ್ತಿನವರೆಗೂ ತೆರವುಗೊಳಿಸುವುದಕ್ಕಾಗಿಲ್ಲ ಮೊನ್ನೆ ಅದನ್ನು ತೆರವುಗೊಳಿಸುವ ಪ್ರಯತ್ನವಾಯಿತು

ಅಧ್ಯಕ್ಷರು ಮುಗಿಸಿರಿ

ಡಾ ಎಂ ಸಿ ಸುಧಾಕರ್ ಅದಕ್ಕೆ ಇಲ್ಲಿ ಆಡಳಿತ ನಡೆಸುವವರು ಅದರ ಬಗ್ಗೆ ಒತ್ತಾಯ ತಂದು ನಿಲ್ಲಿಸಿ ಬಿಟ್ಟರು ಅಧ್ಯಕ್ಷರೆ, ಈ ರೀತಿ ಇಲ್ಲಿ ಹೇಳುವುದೊಂದು, ಮಾಡುವುದೊಂದು ಹೀಗಾದರ, ಹೇಗೆ? ಕೊನೆಯದಾಗಿ, ಸಣ್ಣ ನೀರಾವರಿ ಬಗ್ಗೆ ಎರಡು ಮಾತುಗಳನ್ನಾಡಿ ಬೇಡಿಕೆಗಳ ಬಗ್ಗೆ ಚರ್ಚೆ ಮುಗಿಸುತ್ತೇನೆ ಸನ್ಮಾನ್ಯ ಖರ್ಗೆಯವರು ಒಂದೆರಡು ವರ್ಷಗಳ ಕಾಲ ಸಣ್ಣ ನೀರಾವರಿ ಸಚಿವರಾಗಿದ್ದರಿಂದ ಇಲಾಖೆಗೆ ಸ್ವಲ್ಪ ಹೆಚ್ಚು ಹಣ ಲಭ್ಯವಾಗಿದೆ ಯಡಿಯೂರಪ್ಪನವರು ಅದನ್ನು ಮುಂದುವರೆಸಿಕೊಂಡು ಹೋಗುತ್ತಿದ್ದಾರೆ ನಾನು ಅವರಲ್ಲಿ ಬೇಡಿಕೊಳ್ಳುವುದಿಷ್ಟೇ ಜಲಸಂಪನ್ಮೂಲ ಇಲಾಖೆಯಲ್ಲಿ ಭಾರೀ ನೀರಾವರಿಗೆ ಏನು ಒತ್ತು ಕೊಡುತ್ತೀರಿ, ಅಷ್ಟೇ ಒತ್ತನ್ನು

ನೀವು ಸಣ್ಣ ನೀರಾವರಿ ಇಲಾಖೆಗೂ ಕೊಡಬೇಕಾಗುತ್ತದೆ ಬಯಲುಸೀಮೆ ಭಾಗಗಳಲ್ಲಿ ಏನೇನು permanent structures ಮಾಡಲು ಸಾಧ್ಯವಾ-ಗುತ್ತದೋ, ಅಂತರ್ಜಲ ವೃದ್ಧಿಗೊಳಿಸುವುದಕ್ಕೆ ಏನೇನು ಕಾರ್ಯಕ್ರಮಗಳನ್ನು ನಾವು ರೂಪಿಸುವುದಕ್ಕಾಗುತ್ತದೋ, ದಯವಿಟ್ಟು ಅದರ ಬಗ್ಗೆ ಹೆಚ್ಚು ಗಮನ ಕೊಡಬೇಕು ಇನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಕುರಿತು ಹೇಳುವುದಾದರೆ, SJRYನಲ್ಲಿ 30%ನಷ್ಟು ಜಲಾನಯನಕ್ಕೆ ಕೇಂದ್ರ ಸರ್ಕಾರದ ಆದೇಶದಂತೆ ನಾವು ಕೊಡಬೇಕಾಗುತ್ತದೆ ನಾವು ಬಹಳಷ್ಟು ಕಡೆಗಳಲ್ಲಿ ಅದನ್ನು ಗಮನಿಸಿದ್ದೇವೆ ಆ 30% ಅನ್ನು Action Plan ಮಾಡಬೇಕಾದರೆ, ಮಾಡುತ್ತಾರೆ Action Plan ಮಂಜೂರಾದ ನಂತರ ಅದು ಗ್ರಾಮ ಪಂಚಾಯಿತಿ ಇರಬಹುದು, ತಾಲ್ಲೂಕು ಪಂಚಾಯಿತಿ ಇರಬಹುದು, ಜಿಲ್ಲಾ ಪಂಚಾಯಿತಿ ಇರಬಹುದು, Action Plan ಮಂಜೂರಾದ ನಂತರ ಸರಿಯಾಗಿ ಸದ್ಬಳಕೆಯಾಗುತ್ತಿಲ್ಲ ಅದು ಬೇರೆ ಉದ್ದೇಶಕ್ಕೆ ಬದಲಾವಣೆಯಾಗುವ ವ್ಯವಸ್ಥೆಯಾಗುತ್ತಿದೆ ಅದು ಸರಿಯಾದ asset creation ಕೆಲಸಗಳಿಗೆ ಆಗುತ್ತಿಲ್ಲ ಕೇವಲ ಎಲ್ಲಿಯೋ ಒಂದು ಕಾಲುವೆ ಎಂದು ತೋರಿಸಿ ಬಿಟ್ಟರೆ ಅದು norms ನಲ್ಲಿ ಬರುತ್ತದೆಂದು ಬಿಡುತ್ತಾರೆ ಅಲ್ಲಿ ದುರುಪಯೋಗವಾಗುತ್ತಿದೆ ಈ ರೀತಿಯ ವ್ಯವಸ್ಥೆ ಇದ್ದರೆ, ನಾವು ಯಾವ ರೀತಿ ಅಂತರ್ಜಲ ವೃದ್ಧಿಗೊಳಿಸುವುದು? ಇದನ್ನು ವ್ಯವಸ್ಥಿತವಾಗಿ ಮಾಡುವಂತಾ ಗಬೇಕು ಇದರಲ್ಲಿ ಅಧಿಕಾರಿಗಳು ಶಾಮೀಲಾಗದಂತೆ ಕಟ್ಟುನಿಟ್ಟಾಗಿ ವಿರೋಧಿಸು ವಂತಾಗಬೇಕು ದಯವಿಟ್ಟು ತಾವು ಇದನ್ನು ಸೇರ್ಪಡಿಸುತ್ತೀರೆಂದು ಹೇಳುತ್ತಾ, ಅದರ ಜೊತೆಯಲ್ಲಿ ಅರಣ್ಯಕ್ಕೆ ಇರತಕ್ಕಂಥ 10% ಏನಿದೆ,

ಅಧ್ಯಕ್ಷರು ಸುಧಾಕರ್, ನಿಲ್ಲಿಸ್ರಿ, ಎಷ್ಟೇ ಹೇಳಿದರೂ defend ಮಾಡಿಕೊಂಡು ಹೋಗುತ್ತಿರುವುದು ನಾನು next man ಕರೆದು ಬಿಡುತ್ತೇನಷ್ಟೇ ಏನಿದು?

ಡಾ ಎಂ ಸಿ ಸುಧಾಕರ್ ಆಯಿತು ಅಧ್ಯಕ್ಷರೆ, ಚರ್ಚೆ ಮಾಡುವಾಗ ನೀವು ಈ ತರಹ ಮಾತನಾಡಬಾರದು

ಅಧ್ಯಕ್ಷರು ಮತ್ತೆ ಕುಳಿತುಕೊಳ್ಳಿ ಬಹಳಷ್ಟು ಸದಸ್ಯರು ಇನ್ನು ಮಾತನಾಡಬೇಕಾಗಿದೆ ಎಷ್ಟು ಸಲ request ಮಾಡಿಕೊಂಡರೂ ಗಮನಕ್ಕೆ

ತೆಗೆದುಕೊಳ್ಳುವುದಿಲ್ಲ ಇಲ್ಲಿ ಎಲ್ಲ ವಿಚಾರಗಳನ್ನೂ ಮಾತನಾಡುವುದಕ್ಕಾಗುತ್ತದೆಯೇ?

ಶ್ರೀ ಡಿ ಕೆ ಶಿವಕಮಾರ್ ಅವರನ್ನೇಕೆ ಬೈಯುತ್ತೀರಿ?

ಅಧ್ಯಕ್ಷರು ಅವರನ್ನೇಕೆ ಬೈಯ್ಯುತ್ತೀರೆಂದರೆ, ಇನ್ಯಾರನ್ನು ಬೈಯ್ಯುವುದು? ನೀವು ಮುಂದಕ್ಕೆ ಬನ್ನಿ, ನಿಮ್ಮ ಲೀಡರುಗಳನ್ನೆಲ್ಲಾ ಬೈಯಿರಿ ಸುಮ್ಮನೆ ಮಾತನಾಡುತ್ತೀರಿ

ಶ್ರೀ ದಿನೇಶ್ ಗುಂಡೂರಾವ್ ಅಧ್ಯಕ್ಷರೆ, ತಾವು ಸಮಧಾನವಾಗಿ ಮಾತನಾಡಿ

ಶ್ರೀ ಡಿ ಕೆ ಶಿವಕುಮಾರ್ ಕುರಿಯನ್ನು ಗದರಿಸಿದಂತೆ ಗದರಿಸುತ್ತೀರಲ್ಲ, ಎಂ ಎಲ್ ಎ ಗಳಿಗೆ ಸ್ವಾಭಿಮಾನ ಬೇಡವೇ? ಕುರಿಯನ್ನು ಗದರಿಸಿದಂತೆ ನೀವು ಗದರಿಸಬೇಡಿ ನೀವು ಅವರಿಗೆ ಟೈಮ್ ಕೊಡಬೇಡಿ ಬೇಕಾದರೆ, ನೀವು ಬೇರೆ ಸದಸ್ಯರನ್ನು ಕರೆಯಿರಿ ಅವರು ಎಂ ಎಲ್ ಎ ಆಗಿ ಗೆದ್ದು ಬಂದಿದ್ದಾರೆ ನೀವು ಗದರಿಸುವುದಕ್ಕಾಗುವುದಿಲ್ಲ

ಅಧ್ಯಕ್ಷರು ಶಿವಕುಮಾರ್‌ರವರೆ, ನೀವು ಕುಳಿತುಕೊಳ್ಳಿ ನೀವೇನೂ ಹೇಳಬೇಕಾಗಿಲ್ಲ ಕುಳಿತುಕೊಳ್ಳಿ

(ಮಾನ್ಯ ಸದಸ್ಯರಾದ ಡಾ ಎಂ ಸಿ ಸುಧಾಕರ್‌ರವರು ಮಾನ್ಯ ಸಭಾಧ್ಯಕ್ಷರ ಪೀಠದತ್ತ ತೆರಳಿ ಪ್ರತಿಭಟಿಸಿದರು)

ಶ್ರೀ ಡಿ ಕೆ ಶಿವಕುಮಾರ್ ಏನು ನೀವು ಗದರಿಸುವುದು?

ಅಧ್ಯಕ್ಷರು ಗಂಟೆಗಟ್ಟಳೆ ಮಾತನಾಡುವುದೆಂದರೆ ಏನು? ನಾನು ಏನು ಹೇಳಿದೆ ಹೊಸಬರು, ನಾನು ಕಾಲು ಗಂಟೆ ಎಂದು ಹೇಳಿದೆ ನಂತರ, ಅರ್ಧ ಗಂಟೆ ಎಂದು ಹೇಳಿದೆ 35 ನಿಮಿಷವಾಯಿತು ನೀವು ನಿಲ್ಲಿಸುತ್ತಿಲ್ಲ ಬೇರೆಯವರೆಲ್ಲರಿಗೂ ಹೇಗೆ ಅವಕಾಶ ಕೊಡಬೇಕು? ಇದನ್ನು ನಾನು ಎಲ್ಲರಿಗೂ ಹೇಳುತ್ತಿದ್ದೇನೆ ಎಲ್ಲರಿಗೂ ಹೇಳುತ್ತಿದ್ದೇನೆ

(ಗೊಂದಲ)

ಅಧ್ಯಕ್ಷರು This is not the way ಏನಿದು?

ಶ್ರೀ ಡಿ ಕೆ ಶಿವಕುಮಾರ್ ನೀವು ಬೆಲ್ ಹೊಡೆಯಿರಿ, ಮಾತನ್ನು ನಿಲ್ಲಿಸಿರಿ, ನಿಮಗೆ ಅವಕಾಶ ಕೊಡುವುದಕ್ಕಾಗುವುದಿಲ್ಲವೆಂದು ಹೇಳಿ, ರೆಕಾರ್ಡ್‌ನಿಂದ ತೆಗೆಯುತ್ತೇನೆಂದು ಹೇಳಿ

ಅಧ್ಯಕ್ಷರು ಹೌದು ಸ್ವಾಮಿ ನಾನು ಅದೇ ರೀತಿ ಮಾಡುವುದು ಬೆಳಗ್ಗೆಯಿಂದ ನಾನು ಅದನ್ನೇ ಹೇಳುತ್ತಿದ್ದೇನೆ ಇಲ್ಲಿ ಯಾರೂ ಕೇಳದಿದ್ದರೆ

ಏನು ಮಾಡುವುದಕ್ಕಾಗುತ್ತದೆ? ನೋಡಿ ಖರ್ಗೆ ಸಾಹೇಬರೆ, ದಯಮಾಡಿ ಕೇಳಿ ಈ ಭಾಗದಿಂದ ಒಬ್ಬರೂ ಮಾತನಾಡಿಲ್ಲ ಸಿದ್ದು ಸವದಿಯವರು 15 ನಿಮಿಷ ಮಾತ್ರ ಮಾತನಾಡಿದರು ಎಲ್ಲರೂ ಈ ಭಾಗದವರೇ ಎಲ್ಲರಿಗೂ ಅವಕಾಶ ಸಿಗಬೇಕು ನೀವೆಲ್ಲರೂ ಆದಷ್ಟು ಕಡಿಮೆ ಮಾತನಾಡಬೇಕೆಂದು ನಾನು Request ಮಾಡಿಕೊಂಡಿದ್ದೇನೆ (ಯಾರೂ ಸಹ ಮಾತು ಕೇಳುವುದಿಲ್ಲ ಅದನ್ನು ಎಲ್ಲರೂ defend ಮಾಡುತ್ತಾರೆ? ಏನಿದು? ಈ ರೀತಿ ಆದರೆ ಕಲಾಪ ನಡೆಸುವುದು ಹೇಗೆ? ಆಯಿತು, ಯಾರಾದರೊಬ್ಬರು ಇಲ್ಲಿ ಕುಳಿತುಕೊಂಡು ನೀವೇ ನಡೆಸಿಕೊಳ್ಳಿ ಏನಿದು ತಮಾಷ?

ಶ್ರೀ ಡಿ ಕೆ ಶಿವಕುಮಾರ್ ಆಯಿತು, ಬಿಡಿ, ನಡೆಸುತ್ತೇವೆ

ಅಧ್ಯಕ್ಷರು ಶಿವಕುಮಾರ್, ನೀವು ಸುಮ್ಮನೆ ಕುಳಿತುಕೊಳ್ಳಿ ನೀವು ಯಾವಾಗಲೋ ಬಂದು ಬಿಡುತ್ತೀರಿ ಬಂದು ಜಗಳಕ್ಕೆ ನಿಂತುಕೊಂಡು ಬಿಟ್ಟರೆ, ಕುಳಿತುಕೊಳ್ಳಿ ಸದನಕ್ಕೆ ಯಾವಾಗಲೋ ಬರುತ್ತೀರಿ ಯಾವಾಗಲೋ ಬಿಡುವಿನ ಸಮಯದಲ್ಲಿ ಬಂದು ಬಿಟ್ಟು, ಇಲ್ಲಿ ಇದನ್ನು ತೋರಿಸಿ ಹೊರಟು ಹೋಗಿ ಬಿಡುತ್ತೀರಿ ನಿಮಗೇನು ಗೊತ್ತಿದೆ? ಬೆಳಗ್ಗೆಯಿಂದ ಸಂಜೆವರೆಗೂ ಕುಳಿತಿದ್ದರೆ ನಿಮಗೆ ಗೊತ್ತಾಗುತ್ತಿತ್ತು

ಶ್ರೀ ಮಲ್ಲಿಕಾರ್ಜುನ ಖರ್ಗೆ ಅವರು ಮೊದಲನೇ ಸಲ ಮಾತನಾಡುತ್ತಿದ್ದಾರೆ ವಿಶೇಷವಾಗಿ, subject ಬಿಟ್ಟು deviation ಮಾಡುತ್ತಿಲ್ಲ, ಬೇರೆ ಯಾರ ಮೇಲೂ allegation ಮಾಡುತ್ತಿಲ್ಲ ಮತ್ತು ಅನಾವಶ್ಯಕವಾಗಿ ಪ್ರಚೋದನಕಾರಿ ಭಾಷಣವನ್ನೂ ಮಾಡುತ್ತಿಲ್ಲ ಅವರು rural development ಬಗ್ಗೆ ಸಲಹೆಗಳನ್ನು ಕೊಡುತ್ತಿದ್ದಾರೆ ತಾವು ಸ್ವಲ್ಪ ತಾಳ್ಮೆಯಿಂದ ಇರಬೇಕು

ಅಧ್ಯಕ್ಷರು ಆಗಲ್ಲ, ಸ್ವಾಮಿ, ತಾವು ದಯಮಾಡಿ ಕೇಳಬೇಕು ನೀವು ಕೊಟ್ಟಿರುವಂತಹ ಲಿಸ್ಟ್ ಪ್ರಕಾರ ಇರುವವರು ಕೇಳುತ್ತಾರೆ ಮಾತನಾಡುವವರು ಎಲ್ಲರೂ ಸಹ ನಿಯಂತ್ರಣ ಇಟ್ಟುಕೊಂಡು ಮಾತನಾಡಬೇಕು ಎಲ್ಲರೂ ಕೂಡ ಅರ್ಥ ಮಾಡಿಕೊಂಡು ಮಾತನಾಡಬೇಕು

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ ನಾನು ಮಾತನಾಡುತ್ತೇನೆಂದು ಕೈ ಎತ್ತಿದ್ದೆ ತಾವು ಕುಳಿತುಕೊಳ್ಳಿ ಎಂದ ತಕ್ಷಣ ಕುಳಿತುಕೊಂಡೆ ಮಾನ್ಯ ರಮೇಶ್‌ಕುಮಾರ್‌ರವರನ್ನು ಮಾತನಾಡುವುದಕ್ಕೆ ಹೇಳಿದರೆ ಆಗಲೂ ಸಹ ನಾನು ಕುಳಿತುಕೊಂಡೆ ಮಾನ್ಯ ರಾಜೇಂದ್ರನ್‌ರವರ ಹೆಸರನ್ನು ಕರೆದಿರಿ

ಆಗಲೂ ಸಹ ನಾನು ಕುಳಿತುಕೊಂಡೆ ಇನ್ನೊಬ್ಬರ ಹೆಸರನ್ನು ಕರೆದಿರುವುದರಿಂದ ಕುಳಿತುಕೊಂಡೆ ನಾವು ತಾಳ್ಮೆಯಿಂದ ಕೇಳುತ್ತಿದ್ದೇವೆ ಈಗ ಮಾನ್ಯ ಸುಧಾಕರ್ ರವರು ಹೊಸದಾಗಿ ಗೆದ್ದು ಬಂದಿದ್ದು ಮಾತನಾಡುತ್ತಿದ್ದಾರೆ

ಅಧ್ಯಕ್ಷರು ನಾನು ಹೇಳುವುದನ್ನು ತಾವು ದಯಮಾಡಿ ಕೇಳಿ ಹೊಸಬರು ಮಾತನಾಡುವವರು ಬಹಳ ಜನರು ಇದ್ದಾರೆ, ನಾನು 15 ನಿಮಿಷದಲ್ಲಿ ಮುಗಿಸಿ ಎಂದು ಹೇಳಿದೆ ಆಮೇಲೆ ನಾನು ಮುಗಿಸಿ ಎಂದು ಹೇಳುತ್ತಲೇ ಹೋದೆ ಅವರು 35 ನಿಮಿಷಗಳ ಕಾಲ ಮಾತನಾಡುತ್ತಾ defend ಮಾಡುತ್ತಾ ಹೋದರೆ,

ಶ್ರೀ ಮಲ್ಲಿಕಾರ್ಜುನ ಖರ್ಗೆ Continuity ಇದ್ದಾಗ ಸ್ವಲ್ಪ disturb ಆಗುತ್ತಿದೆ ನೀವು ಈ ಲೈನ್‌ನಲ್ಲಿ ಇರುವವರನ್ನು ದಬಾಯಿಸಿದರೆ ಸರಿ ಇರುತ್ತದೆ ಒಂದು 5 ನಿಮಿಷ ಅವರಿಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಡಿ

ಅಧ್ಯಕ್ಷರು ಮಾನ್ಯ ಖರ್ಗೆಯವರೆ, ತಾವು ಹಿರಿಯರಾಗಿ ಮೆಂಬರ್ಸ್‌ಗಳನ್ನು ತಾವು ಸರಿಯಾಗಿ ಕಂಟ್ರೋಲ್‌ಗೆ ತರದಿದ್ದರೆ ಕಷ್ಟ

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ ನಮ್ಮ ಮೆಂಬರ್ಸ್ ಅಷ್ಟು ಚೆನ್ನಾಗಿ ಯಾರು ಇಲ್ಲ

ಅಧ್ಯಕ್ಷರು ಯಾರು ಚೆನ್ನಾಗಿಲ್ಲ ನೋಡಿ ಸ್ವಾಮಿ, ಹೊಸಬರು, ಹಿಂದೆ ಕುಳಿತುಕೊಂಡವರು ಪ್ರಥಮ ಸಾರಿ ಬಂದಿರುವವರು 15–20 ನಿಮಿಷಗಳು ಮಾತನಾಡಿ ಎಂದು request ಮಾಡಿದೆ ನಿನ್ನೆಯಲ್ಲಾ ಸೀನಿಯರ್ಸ್‌ಗಳು ಮಾತನಾಡಿದ್ದಾರೆ ಮೂರೂವರೆ ಗಂಟೆಗಳ ಕಾಲ ಮಾತನಾಡಿದ್ದಾರೆ, ಆ ಬಗ್ಗೆ ನಾನು ಕೇಳಲಿಲ್ಲ ಆದರೆ ಎಲ್ಲರಿಗೂ ಮಾತನಾಡುವುದಕ್ಕೆ ಅವಕಾಶ ಸಿಗಬೇಕಲ್ಲವೇ? ಮಾತನಾಡುವವರು ಸ್ವಲ್ಪ ಜವಾಬ್ದಾರಿಯನ್ನು ಅರಿತುಕೊಂಡು ಬೇಗನೆ ಮುಗಿಸಿದರೆ ಎಲ್ಲರಿಗೂ ಕೂಡ ಅವಕಾಶ ಸಿಗುತ್ತದೆ ಎಂದು ಹೇಳಿದರೂ ಕೂಡ ಕೇಳದಿದ್ದರೆ ಸದನವನ್ನು ಹೇಗೆ ನಡೆಸುವುದಕ್ಕಾಗುತ್ತದೆ? ತಾವು ಹೇಳಿ ಇಲ್ಲಾ ನೀವೇ ಬಂದು ಇಲ್ಲಿ ಕುಳಿತುಕೊಂಡು ಸದನವನ್ನು ನಡೆಸಿ

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ ಅವರಿಗೆ 5 ನಿಮಿಷಗಳ ಕಾಲ ಅವಕಾಶವನ್ನು ಕೊಡಿ ಅವರು ಮುಗಿಸುತ್ತಾರೆ

ಅಧ್ಯಕ್ಷರು ಇದು ತೀರಾ ಅತಿಯಾಯಿತು ಮಾನ್ಯ ಭೋಸರಾಜುರವರೆ ನೀವು 8–10 ಜನರ ಹೆಸರನ್ನು ಕೊಟ್ಟಿದ್ದೀರಿ ಇದರಲ್ಲಿರುವವರ ಹೆಸರಿನಲ್ಲಿ 3–4ನ್ನು ಇಳಿಸಿ ಕೊಡಿ ಮಾನ್ಯ ಭೋಸರಾಜುರವರೆ, ತಾವು ವಿಪ್ ಅಲ್ಲವೇನ್ರಿ, ಇನ್ನು 4 ಹೆಸರನ್ನು ಮಾತ್ರ ಕೊಡಿ ಹಿರಿಯರು ಅಥವಾ ಕಿರಿಯರ ಹೆಸರನ್ನು ಕೊಡಿ ನೀವು ಮಾತನಾಡುವವರ ಲಿಸ್ಟ್‌ನ್ನು ಕೊಟ್ಟು ಬಿಡುತ್ತೀರಿ, ಇಲ್ಲಿ ನಿಮ್ಮ ವಿರೋಧ ಪಕ್ಷದ ನಾಯಕರು ಈ ರೀತಿಯಾಗಿ ಹೇಳುತ್ತಾರೆ ಏನ್ರೀ ಇದು ಇಲ್ಲಿ ಸಭಾ ಮರ್ಯಾದೆಯೇ ಇಲ್ಲ

ಶ್ರೀ ದಿನೇಶ್ ಗುಂಡೂರಾವ್ ಮಾನ್ಯ ಅಧ್ಯಕ್ಷರೆ, ತಮ್ಮ ಆದೇಶದ ಪ್ರಕಾರ ಮಾಡೋಣ ಸಾರ್

ಅಧ್ಯಕ್ಷರು ಮಾನ್ಯ ಸುದಾಕರ್‌ರವರೆ ತಾವು ಬೇಗನೆ ಮುಗಿಸಿ

(ಗೊಂದಲ)

ಡಾ ಎಂ ಸಿ ಸುಧಾಕರ್ ರಾಜ್ಯ ಸರ್ಕಾರ ಶಿಕ್ಷಣ ಇಲಾಖೆಗೆ ಸಂಬಂಧಪಟ್ಟ ಹಾಗೆ ರಾಜ್ಯ ಸರ್ಕಾರವು ಜನಸಂಖ್ಯೆಗೆ ಅನುಗುಣವಾಗಿ ರಾಜ್ಯಕ್ಕೆ ಎಷ್ಟು ಸರ್ಕಾರಿ ಪ್ರೌಢಶಾಲೆಗಳು ಬೇಕೆಂಬುದನ್ನು ಇಲಾಖೆಯಲ್ಲಿ ಅಂಕಿ ಅಂಶಗಳನ್ನು ತೆಗೆದುಕೊಂಡಿದ್ದೇನೆ ಇದರಲ್ಲಿ ತಾಲ್ಲೂಕುವಾರು ಸರ್ಕಾರಿ ಪ್ರೌಢಶಾಲೆಗಳು ಎಷ್ಟು ಇದೆ, ಅನುದಾನಿತ ಪ್ರೌಢಶಾಲೆಗಳು ಎಷ್ಟು ಇದೆ ಮತ್ತು ಖಾಸಗಿ ಪ್ರೌಢಶಾಲೆಗಳು ಎಷ್ಟು ಇದೆ ಎಂಬುದರ ಬಗ್ಗೆ ಅಂಕಿ ಅಂಶಗಳು ಇದೆ ಆದರೆ ಇವತ್ತು ರಾಜ್ಯ ಸರ್ಕಾರದಲ್ಲಿ ಹೊಸ ಪ್ರೌಢಶಾಲೆಗಳನ್ನು ಯಾವ ಆಧಾರದ ಮೇಲೆ ಯಾವ ಅಂಕಿಅಂಶಗಳನ್ನು ಇಟ್ಟುಕೊಂಡು ಇವತ್ತು ಅದನ್ನು ನೀಡುತ್ತಿದ್ದಾರೆಂಬ ಬಗ್ಗೆ ದಯವಿಟ್ಟು ಸಂಬಂಧಪಟ್ಟ ಸಚಿವರು ಅದಕ್ಕೆ ಉತ್ತರವನ್ನು ಕೊಡಬೇಕಾಗುತ್ತದೆ ಅವರ ಇಲಾಖೆಯಲ್ಲಿರುವಂತಹ ಅಂಕಿ ಅಂಶಗಳು, ನಾನು ಕೊನೆಯದಾಗಿ ಈ ಮಾತುಗಳನ್ನು ಹೇಳುತ್ತಾ ಈ ರೀತಿಯ ತಾರತಮ್ಯವನ್ನು ಮಾಡದೆಯೇ ಇನ್ನು ಮುಂದಾದರೂ ಎಲ್ಲಾ ಕ್ಷೇತ್ರವರಿಗೆ ಸಮಾನವಾಗಿ ಅವಕಾಶ ಕೊಡಬೇಕೆಂದು ಹೇಳಿ ತಾವು ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದೀರಿ, ನನಗೆ ಇನ್ನಷ್ಟು ಮಾತನಾಡ ಬೇಕಾಗಿತ್ತು, ಆದರೂ ಸಹ ನಾನು ತಮ್ಮ ಮಾತಿಗ ಗೌರವವನ್ನು ಕೊಟ್ಟು ನನ್ನ ಈ ಕೆಲವು ಅನಿಸಿಕೆಗಳನ್ನು ಹೇಳುತ್ತಾ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ

ಅಧ್ಯಕ್ಷರು ಎಲ್ಲರೂ ಮಾತನಾಡಬೇಕೆಂದರೆ, 10-15 ನಿಮಿಷದಲ್ಲಿ ಮುಗಿಸಿ, ಇಲ್ಲದಿದ್ದರೆ ಮೊದಲಿಗೆ ಇರುವ 4 ಜನರ ಹೆಸರನ್ನು ಕರೆದು ಅಲ್ಲಿಗೆ ಚರ್ಚೆ ಮುಕ್ತಾಯವಾಗುತ್ತದೆ ನಂತರ ಪ್ರಶ್ನೋತ್ತರವನ್ನು ತೆಗೆದುಕೊಂಡು ನಾಳೆ ಉತ್ತರವನ್ನು ಕೊಡಿಸುತ್ತೇನೆ

ಶ್ರೀ ಕೆ ಚಂದ್ರಶೇಖರ್ (ಬಸವನಗುಡಿ) ಮಾನ್ಯ ಅಧ್ಯಕ್ಷರೆ, ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದಕ್ಕಾಗಿ ತಮಗೆ ವಂದನೆಗಳು ಬೆಂಗಳೂರು ವ್ಯಾಪಕವಾದಂತಹ ಬಜೆಟ್‌ನಲ್ಲಿ ಕೇಂದ್ರ ಸರ್ಕಾರ ಭಾರತ ರಾಷ್ಟ್ರಗಳ ನಗರಗಳನ್ನು ಅಭಿವೃದ್ಧಿ ಮಾಡಬೇಕೆಂದು ಒಂದು ಚಿಂತನೆಯನ್ನು ಇಟ್ಟುಕೊಂಡು ನರ್ಮ್ ಅಡಿಯಲ್ಲಿ ಕಾರ್ಯಕ್ರಮಗಳನ್ನು ಜಾರಿಗೆ ತಂದರು ಇದನ್ನು ಜಾರಿಗೆ ತಂದಾಗ ಅದನ್ನು ಸದುಪಯೋಗಪಡಿಸಿಕೊಳ್ಳುವುದರಲ್ಲಿ ಬೆಂಗಳೂರು ನಗರ 14ನೇ ಸ್ಥಾನದಲ್ಲಿ ರಾಷ್ಟ್ರ ಮಟ್ಟದಲ್ಲಿ ನಿಂತಿದೆ ಅಷ್ಟು ಹಿಂದುಳಿದಿದೆ, ಮಹಾರಾಷ್ಟ್ರ ಒಟ್ಟು 45 ಪ್ರಾಜೆಕ್ಟ್‌ಗಳನ್ನು ಇವತ್ತು ಕೇಂದ್ರ ಸರ್ಕಾರಕ್ಕೆ approvalಗೆ ಕೊಟ್ಟರೆ ಬೆಂಗಳೂರು ನಗರ ಕರ್ನಾಟಕ ಸರ್ಕಾರದಿಂದ ಕೇವಲ 11 Projectಗಳನ್ನು NURMನ ಅದಿಯಲ್ಲಿ ಕೇಂದ್ರ ಸರ್ಕಾರಕ್ಕೆ ಕೊಡುವುದಕ್ಕೆ ಸಾಧ್ಯವಾಗಿದೆ ಈ ಬೆಂಗಳೂರು ನಗರ ಒಟ್ಟು ಜನಸಂಖ್ಯೆಯಲ್ಲಿ ಕರ್ನಾಟಕ ರಾಜ್ಯದ ಜನಸಂಖ್ಯೆಯಲ್ಲಿ ಶೇಕಡ 28 3 ರಷ್ಟು ಜನಸಂಖ್ಯೆ ಬೆಂಗಳೂರು ನಗರದಲ್ಲಿದೆ ಇಂತಹ ಒಂದು ಸಂದರ್ಭದಲ್ಲಿ ಕೇಂದ್ರ ಸರ್ಕಾರದಲ್ಲಿ ತಮಗೆ ಗೊತ್ತಿರುವ ಹಾಗೆ 35% amount ನ್ನು grant ಆಗಿ ಕೊಡುತ್ತಿದ್ದಾರೆ ರಾಜ್ಯ ಸರ್ಕಾರ 15%, ಬೆಂಗಳೂರು ಮಹಾನಗರ ಪಾಲಿಕೆ 50% grant ನ್ನು ಕೊಡುತ್ತಿದೆ ಇದರಲ್ಲಿ 41 ಕಾರ್ಯಕ್ರಮಗಳನ್ನು ತೆಗೆದುಕೊಳ್ಳುವಂತಹ ಅವಕಾಶ ಇದ್ದರೂ, ನಮ್ಮ ರಾಜ್ಯ ಸರ್ಕಾರ ಕೇಂದ್ರ ಸರ್ಕಾರಕ್ಕೆ ಕೊಟ್ಟಿರುವಂತಹ Projectಗಳು ಕೇವಲ 11 ಮಾತ್ರ, ಇದರಲ್ಲಿ ಏನಾಗಿದೆ ಎಂದರ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಇರತಕ್ಕಂತಹ ಪ್ರಾಜೆಕ್ಟ್‌ಗಳಿಗೆ 2 ವರ್ಷಗಳಿಂದ Consultant appoint ಮಾಡತಕ್ಕಂತಹ ಅಶಕ್ತ ರೀತಿಯಲ್ಲಿ ಕಳೆದ 18 ತಿಂಗಳುಗಳಿಂದ ನಡೆದುಕೊಂಡು ಬರುತ್ತಿದೆ ಬೆಂಗಳೂರು ನಗರದಲ್ಲಿ ಇನ್ನು Projectಗಳು ರೆಡಿ ಮಾಡುವುದು ಯಾವಾಗ? Consultantಗಳು appointment ಆಗುತ್ತಿಲ್ಲ Project ರೆಡಿ ಆಗುತ್ತಿಲ್ಲ ಒಟ್ಟು ಬೆಂಗಳೂರು ನಗರದಲ್ಲಿ ಇವತ್ತು ಕೇಂದ್ರ ಸರ್ಕಾರ ಎಲ್ಲಾ ನಗರಗಳನ್ನು ಹೇಗೆ ಅಭಿವೃದ್ಧಿ ಮಾಡಬೇಕೆಂಬ ಬಗ್ಗೆ ಚಿಂತನೆಯನ್ನು

ಮಾಡುತ್ತಿದೆ ಆ ರೀತಿಯಲ್ಲಿ ರಾಜ್ಯ ಸರ್ಕಾರವು ಇವತ್ತಿಗೆ ಇನ್ನು 20 ವರ್ಷಗಳಿಗೆ ಎರಡು generationಗೆ ಏನು ಮಾಡಬೇಕೆಂಬುದರ ಬಗ್ಗೆ ಯಾವುದೇ ಚಿಂತನೆಯನ್ನು ಮಾಡಿಲ್ಲ ಈ ಬಜೆಟ್‌ನಲ್ಲಿ ಇವತ್ತು ರಾಜಕೀಯ ನಿಲುವನ್ನು ತೆಗೆದುಕೊಳ್ಳ ಬೇಕೆಂದು ಒಂದು ನಿಲುವಿನಲ್ಲಿ ರಾಜ್ಯ ಸರ್ಕಾರ BBMP announce ಮಾಡಿದೆಯೇ ಹೊರತು, ಇದಕ್ಕೆ ಬೇಕಾಗಿರುವಂತಹ ಆಡಳಿತ ಸೌಕರ್ಯಗಳಾಗಲೀ, ಆಡಳಿತಾತ್ಮಕ ಸೌಕರ್ಯಗಳಾಗಲೀ, ಆರ್ಥಿಕ ಸೌಕರ್ಯಗಳಾಗಲೀ, ಯಾವುದೇ ಸೌಕರ್ಯಗಳನ್ನು ಕೊಡುವುದರಲ್ಲಿ ಸರ್ಕಾರ ವೈಫಲ್ಯತೆಯನ್ನು ಕಂಡುಕೊಂಡಿದೆ ಈ ಬಜೆಟ್‌ನಲ್ಲಿ BBMP "ನಾವು ಬೆಂಗಳೂರು ಮಹಾನಗರ ಪಾಲಿಕೆಗೆ ಆರ್ಥಿಕ ಸಹಾಯವನ್ನು, ಆಡಳಿತಾತ್ಮಕ ಸಹಾಯವನ್ನು ಮಾಡುತ್ತೇವೆ" ಎಂದು ಸರ್ಕಾರ ಹೇಳಿತು ಆದರೆ ಬಜೆಟ್‌ನಲ್ಲಿ ಕೇವಲ ಯಾವ ವಾರ್ಡುಗಳನ್ನು ಅಡಿಷನಲ್ ಆಗಿ 514 Sq KM ನ್ನು ನಾವು ತೆಗೆದುಕೊಂಡಿದ್ದೇವೆ ಈ 514 SQ KM ಗೆ ಕೇವಲ 150 ಕೋಟಿ ರೂಪಾಯಿಗಳನ್ನು ಬಜೆಟ್‌ನಲ್ಲಿ ಹಣವನ್ನು ಒದಗಿಸುವ ಮುಖಾಂತರ ಅದನ್ನು ಇವತ್ತು ಮೂಲೆಗುಂಪು ಮಾಡಿದೆ ಅಲ್ಲಿರುವಂತಹ ಶಾಲೆಗಳಲ್ಲಿರುವ ನೌಕರರುಗಳಿಗೆ ಸಂಬಳ ಯಾರು ಕೊಡಬೇಕು? ಆ ಶಾಲೆಗಳನ್ನು ಯಾರು ನಡೆಸಬೇಕು ಎನ್ನುವುದು, ಇವತ್ತು ರಾಜ್ಯ ಸರ್ಕಾರದಲ್ಲಿ ನಿರ್ಧಾರವಾಗಿಲ್ಲ ಬೆಂಗಳೂರು ನಗರದಲ್ಲಿ ಒಂದು ದಿನಕ್ಕೆ 814 ವಾಹನಗಳು Registration ಆಗುತ್ತಿದೆ ಆದರೂ ಸಹ ಈ ಬೆಂಗಳೂರು ನಗರ ಬೆಳೆಯುತ್ತಿರುವುದು 3 ವಿಧಾನದಲ್ಲಿ, ಒಂದು North & South ಆಗಿ, ಇನನೊಂದು East & West ಆಗಿ, ಇನ್ನೊಂದು 360 ಡಿಗ್ರಿ, ಈ ಬೆಂಗಳೂರು ನಗರ ಬೆಳೆಯುತ್ತಿದೆ ಈ ಬೆಂಗಳೂರು ನಗರದ ಟ್ರಾಫಿಕ್ ಅನ್ನು for example Hebbal to Electronic city ಗೆ ಯಾವ ರೀತಿಯಾಗಿ ತೆಗೆದುಕೊಂಡು ಹೋಗಬೇಕು, ಅಥವಾ ವಿಶ್ವವಿದ್ಯಾನಿಲಯದಿಂದ K R Puram ಗೆ ಯಾವ ರೀತಿಯಾಗಿ ತೆಗೆದುಕೊಂಡು ಹೋಗಬೇಕು, 360 ಡಿಗ್ರಿ Ring road ಯಾರು ಮಾಡಬೇಕೆಂದು ಹೇಳಿ ಇವತ್ತಿನವರೆಗೂ ಒಂದು Management Project ಎಂದು ಬೆಂಗಳೂರು ನಗರದಲ್ಲಿ ರೆಡಿ ಮಾಡುವುದಕ್ಕೆ ಸಾಧ್ಯವೇ ಆಗಿಲ್ಲ ನಾವು ಎಂತಹ ವೈಫಲ್ಯತೆಯನ್ನು ಕಂಡುಕೊಂಡಿದ್ದೇವೆಂದರೆ, ಇಡೀ ವಿಶ್ವದಲ್ಲಿಯೇ ಏಷ್ಯಾ ಖಂಡದಲ್ಲಿ

ಭೂಪಟದಲ್ಲಿ ಎರಡನೇ ಸ್ಥಾನವನ್ನು ಈ ನಗರ ಪಡೆದುಕೊಂಡಿದ್ದರೂ ಸಹ ನಮ್ಮಲ್ಲಿ Project management ಮಾಡುವುದಕ್ಕೆ Consultant ಗಳನ್ನು ನೇಮಕ ಮಾಡುವುದಕ್ಕೆ ಇವತ್ತಿನವರೆಗೂ ಆಗಿಲ್ಲ ಎಂತಹ ಅವಮಾನ ಎಂದರೆ, ಬೆಂಗಳೂರು ನಗರದಲ್ಲಿ ಇವತ್ತಿನವರೆಗೂ Under pass ಮತ್ತು grade separator ಗಳನ್ನು ಮಾಡಲಿಕ್ಕೆ ನಮಗೆ ಸಾಧ್ಯವಾಗಿರತಕ್ಕಂಥದ್ದು ಕೇವಲ ಮೂರು ಮಾತ್ರ. 18 ತಿಂಗಳುಗಳಲ್ಲಿ ಕೇವಲ 3 under pass ಗಳನ್ನು ಮಾತ್ರ drawing ಮಾಡಿ, design ಮಾಡಿ, tender ಮಾಡಿ, NURM ನಲ್ಲಿ approve ಮಾಡಿಕೊಳ್ಳಲಿಕ್ಕೆ ಸಾಧ್ಯವಾಗಿದ್ದು ಮೂರೇ ಮೂರು ಎಂದರೆ, ನಾವು ಎಂತಹ ಪರಿಸ್ಥಿತಿಯಲ್ಲಿ ನಾವಿದ್ದೇವೆ ಎಂಬುದು ಅರ್ಥವಾಗುತ್ತದೆ ಅಧ್ಯಕ್ಷರೆ, ನಿಮಗೆ ಗೊತ್ತೇ? ಆ ಮೂರಕ್ಕೆ ಕೇಂದ್ರ ಸರ್ಕಾರದ ಹಣ ಬಿಡುಗಡೆಯಾಗಿದ್ದರೂ ಸಹ, ಆ ಮೂರರಲ್ಲಿ ಒಂದೇ ಒಂದು Project ಗೆ ಮಾತ್ರ ಹಣವನ್ನು ತೆಗೆದುಕೊಳ್ಳುವುದಕ್ಕೆ ಆಗಿದೆ, ಇನ್ನು ಎರಡು Project ಗೆ ಹಣವನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗದ ಪರಿಸ್ಥಿತಿಯಲ್ಲಿ ಇವತ್ತು ರಾಜ್ಯ ಸರ್ಕಾರವಿದೆ ಕೇಂದ್ರ ಸರ್ಕಾರ ಬೆಂಗಳೂರು ನಗರವನ್ನು ಅಂತರರಾಷ್ಟ್ರೀಯ ಮಟ್ಟದಲ್ಲಿ ಮಾಡಬೇಕೆಂದು ಚಿಂತನೆ ಮಾಡಿದ್ದರೂ, ಅದನ್ನು ಸಮರ್ಪಕವಾಗಿ ವ್ಯಾಪಕವಾಗಿ ಉಪಯೋಗಿಸಿಕೊಳ್ಳುವುದರಲ್ಲಿ ರಾಜ್ಯ ಸರ್ಕಾರ ವೈಫಲ್ಯತೆ-ಯನ್ನು ಕಾಣುತ್ತಿದೆ ಬೆಂಗಳೂರು ನಗರಕ್ಕೆ ಎಲ್ಲಾ ಸೌಲಭ್ಯಗಳನ್ನು ಕೊಡುತ್ತೇವೆಂದು ಒಂದು ಕಡೆ ಭಾಷಣ ಮಾಡುತ್ತಿದ್ದೇವೆ ಇನ್ನೊಂದು ಕಡೆ ಸೌಲಭ್ಯ ನಮ್ಮ ಮನೆ ಬಾಗಿಲಿಗೆ ಒದ್ದು ಕೊಂಡು ಬಂದಿದ್ದರೂ, ಆ ಸೌಲಭ್ಯ ಉಪಯೋಗಿಸಿ ಕೊಳ್ಳುತ್ತಿಲ್ಲ ಅಧ್ಯಕ್ಷರೆ, ಬಡ ಜನತೆಗೋಸ್ಕರ slum ಗಳನ್ನು develop ಮಾಡಲು ಕೇಂದ್ರ ಸರ್ಕಾರ ಇವತ್ತು 50% grant ಅನ್ನು free ಆಗಿ ಕೊಡುತ್ತಿದೆ ರಾಜ್ಯ ಸರ್ಕಾರ 35%, BBMP 15% ಹಣ ಹಾಕಿಕೊಳ್ಳಲಾಗಿದೆ ಈ slum ಗಳನ್ನು develop ಮಾಡಬೇಕೆಂದು ಮಹಾರಾಷ್ಟ್ರದಲ್ಲಿ ಒಂದು Project ready ಆಯಿತು ಏನಪ್ಪ ಆ Project ಎಂದರೆ, apartment wise 1+3 ಕಟ್ಟುವುದು ಆ 1+3 apartment ಬೆಂಗಳೂರು ನಗರಕ್ಕೆ ಸೂಕ್ತವೇ? ಸೂಕ್ತವಲ್ಲವೇ? ಇದನ್ನು ಮಾಡಲಿಕ್ಕೆ ಸಾಧ್ಯವೇ? ಎನ್ನತಕ್ಕಂಥ ಒಂದು ಚಿಂತನೆಯನ್ನು ಮಾಡಲಿಕ್ಕೆ ಅಸಾಧ್ಯ ಪರಿಸ್ಥಿತಿಯಲ್ಲಿ ಯಾವುದಾದರೂ ನಗರಗಳು ಇದ್ದರೆ, ಅದು ಬೆಂಗಳೂರು ನಗರದ ಈ ರಾಜ್ಯ ಸರ್ಕಾರ ಮಾತ್ರ

ನಿಮಗೆ ಗೊತ್ತೇ? 2000ನೇ ಇಸವಿಯಲ್ಲಿ ಐದು slumಗಳನ್ನು ಮಾಡಬೇಕೆಂದು ಹೇಳಿ, ಅಂದಿನ ನಾವು ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ನಾವೇನು ನಿರ್ಣಯ ಮಾಡಿದ್ದೆವೋ, ಅದನ್ನು ಬಿಟ್ಟು ಇವತ್ತಿನವರೆಗೂ ಯಾವುದೇ Project ಅನ್ನು ಕೇಂದ್ರ ಸರ್ಕಾರದ ಮುಂದೆ ಇಡಲಿಕ್ಕೆ ರಾಜ್ಯ ಸರ್ಕಾರ ವೈಫಲ್ಯತೆ ಕಂಡಿದೆ ಯಾವುದೇ ಪ್ರಸ್ತಾವನೆ ಇದುವರೆಗೂ ಕಳುಹಿಸಿಲ್ಲ ಇವತ್ತು ಬೆಂಗಳೂರು ನಗರದ Soil testing ಆಗಿಲ್ಲ . ಒಂದೇ ಒಂದು Project ನಲ್ಲಿ 50% grant ಕೇಂದ್ರ ಸರ್ಕಾರ ಕೊಡುತ್ತದೆಂದು ಹೇಳಿದರೆ, ಅದನ್ನು ಉಪಯೋಗಿಸಿಕೊಂಡು ಈ ಬೆಂಗಳೂರಿನ ಬಡ ಜನತೆಗೆ ಒಂದು Cement Road Project ಆಗಲಿ, Slum ನಲ್ಲಿ ಒಂದು light ಆಗಲಿ, ಒಂದು toilet ಆಗಲಿ ಕೊಡತಕ್ಕಂಥ ಪರಿಸ್ಥಿತಿಯಲ್ಲಿ ಈ ರಾಜ್ಯ ಸರ್ಕಾರವಿಲ್ಲ ವೆಂದರೆ, ಇದಕ್ಕಿಂತ ಶೋಚನೀಯ ಪರಿಸ್ಥಿತಿ ಇನ್ನೊಂದಿಲ್ಲ ಇವರು ಬೆಂಗಳೂರು ಬಗ್ಗೆ ಏನು ಮಾಡುತ್ತಾರೆ? BBMP ಏನು ಮಾಡುತ್ತಿದೆ? ಯಾವ ಪುರುಷಾರ್ಥಕ್ಕೋಸ್ಕರ BBMP ಮಾಡಬೇಕು? ನಿಮಗೆ ಗೊತ್ತೇ? ಇವತ್ತು ಬೆಂಗಳೂರು ನಗರದಲ್ಲಿ ಕಸ ಗುಡಿಸುವುದಕ್ಕೆ ಮೇಲ್ವಿಚಾರಣೆ ಮಾಡುವುದಕ್ಕೆ ಒಬ್ಬ Health Inspector ಇಲ್ಲ, ಒಬ್ಬ ಇಂಜಿನಿಯರ್ ಇಲ್ಲ, ಒಬ್ಬ Clerk ಇಲ್ಲ ಮತ್ತು ಅವರಿಗೆ ಸಂಬಳವೂ ಇಲ್ಲ ನಾವು ಹೇಗೆ ಬದುಕಬೇಕು? ಹೇಗೆ ಬಾಳ್ವೆ ಮಾಡಬೇಕು? ಬೆಂಗಳೂರು ನಗರ dumping Yard ಆಗಿದೆ ನೌಕರರಿಲ್ಲ, ಸಂಬಳವಿಲ್ಲ, ಕೇಳುವವರಿಲ್ಲ, ಹೇಳುವವರಿಲ್ಲ, ನಿಮಗೆ ಗೊತ್ತಿದೆಯೇ? ಅಧ್ಯಕ್ಷರೆ ತಮಗೆ ಒಂದು ವಿಷಯ ಹೇಳುತ್ತೇನೆ ಕೇಳಿ ನಮ್ಮ BBMPಯಲ್ಲಿ ಇವತ್ತು ರಾಜ್ಯ ಸರ್ಕಾರದಿಂದ ಐಎಎಸ್ ಆಫೀಸರ್‌ಗಳನ್ನು ತುಂಬಿಕೊಂಡಿದ್ದಾರೆ, ಕೆಎಎಸ್ ಆಫೀಸರ್‌ಗಳನ್ನು ತುಂಬಿಕೊಂಡಿದ್ದಾರೆ, ಆದರೆ ನಮ್ಮ ಪರಿಸ್ಥಿತಿಯನ್ನು ಕೇಳುವುದಕ್ಕೆ ಯಾರೂ ಇಲ್ಲ ಇವತ್ತು 225 Sq Km ನ್ನು ನೀವು 814 Sq Km ಮಾಡಿದಿರಿ ಈ 814 Sq Km ಮಾಡಿ ಅದಕ್ಕೆ ತಕ್ಕ ಸೌಲಭ್ಯ ಒದಗಿಸಿಲ್ಲ ಅಧ್ಯಕ್ಷರೆ, ಇವತ್ತು ನನಗೆ ಬೆಂಗಳೂರು ನಗರದ 225 Sq Km ವ್ಯಾಪ್ತಿಯಲ್ಲಿರುವ ಜನಸಂಖ್ಯೆಗೆ ಕುಡಿಯುವುದಕ್ಕೆ 860 MLD water ಬೇಕು ಈ 860 MLD water ನಲ್ಲಿ 810 MLD water ಅನ್ನು ನಾವು ಕಾವೇರಿಯಿಂದ ತೆಗೆದುಕೊಳ್ಳುತ್ತಿದ್ದೇವೆ ಮಿಕ್ಕ MLD water ಅನ್ನು ನಾವು

ತಿಪ್ಪಗೊಂಡನಹಳ್ಳಿ ಯಿಂದ ತೆಗದುಕೊಳ್ಳಬೇಕಾಗಿದೆ ಇವತ್ತಿಗೆ ಈ ಲೆಕ್ಕ ಸರಿ ಹೋಗುತ್ತದೆ ಇವತ್ತು BBMP ಮಾಡಿದ್ದೀರಿ ಈ BBMP ವ್ಯಾಪ್ತಿಯ ಹಳೆಯ CMC ಗೆ ನೀರು ಕೊಡಬೇಕಾಗಿರುವುದನ್ನು ಯಾವತ್ತು ಕೊಡುತ್ತೇವೆ ಎಂದು ನೀವು ಹೇಳಿದ್ದೀರಾ? 2011ನೇ ಇಸವಿಗೆ 500 MLD ನೀರನ್ನು ಕೊಡುತ್ತೇವೆಂದು ನೀವು ಹೇಳಿದ್ದೀರಿ ಆದರೆ BBMP ಮಾಡಿದ್ದೀರಿ, ಇವತ್ತು ನೀರು ಎಲ್ಲಿಂದ ಕೊಡುತ್ತೀರಿ? ಇವತ್ತು NURM Project ನಲ್ಲಿ BBMP ಕೆಲವು ಕೆಲಸಗಳನ್ನು ಕೈಗೆತ್ತಿಕೊಂಡಿದೆ ನಾವು ಒಟ್ಟು 12 ಟಿಎಂಸಿ ನೀರನ್ನು ಕಾವೇರಿಯಿಂದ ತೆಗೆದುಕೊಳ್ಳುತ್ತಿದ್ದೇವೆ ಬೆಂಗಳೂರು ನಗರದಲ್ಲಿ 2004ನೇ ಇಸವಿಯಲ್ಲಿ ಒಟ್ಟು 950 mm ನಷ್ಟು ಮಳೆ ಬಿದ್ದಿತ್ತು June to September ಬಿದ್ದಂತಹ ಮಳೆ ಒಂದು ಬೆಳ್ಳಂದೂರು ಕೆರೆ ಮುಖಾಂತರ ದಕ್ಷಿಣ ಕಣ್ವ ನದಿಗೆ ಹೋಗುತ್ತದೆ, ಇನ್ನೊಂದು ಅರ್ಕಾವತಿ ಕೆರೆಗೆ ಹೋಗುತ್ತದೆ ಬೆಂಗಳೂರಿನಲ್ಲಿ ಬಿದ್ದು ಈ ಎರಡೂ ಕೆರೆಗಳಲ್ಲಿ ಸಂಗ್ರಹವಾಗಿರುವಂತಹ ಮಳೆ ನೀರಿನಲ್ಲಿ ಕೇವಲ 35% ನೀರನ್ನು ಉಪಯೋಗಿಸಿಕೊಂಡರೆ, ಈ ಬೆಂಗಳೂರಿಗೆ 12 ಟಿಎಂಸಿ ನೀರು ಉಳಿತಾಯವಾಗುತ್ತದೆ ಎಂದು 2004ನೇ ಇಸವಿಯಲ್ಲಿ ನಾವು report ವೊಂದನ್ನು ready ಮಾಡಿ ಕಳುಹಿಸಿದ್ದೆವು ನಮಗೆ ಬೇಕಾದ 12 ಟಿಎಂಸಿ ಕಾವೇರಿ ನೀರನ್ನು ಪಂಪ್ ಮಾಡುವುದಕ್ಕೆ ನಾವು ಈಗ ಎಷ್ಟು ವಿದ್ಯುತ್ ಅನ್ನು ಬಳಸಿಕೊಳ್ಳುತ್ತಿದ್ದೇವೋ, ಅದರ ಏಕಡ ಮೂರನೇ ಒಂದು ಭಾಗದಷ್ಟು ವಿದ್ಯುತ್ ಅನ್ನು ಉಪಯೋಗಿಸಿಕೊಂಡು ಬೆಂಗಳೂರು ನಗರಕ್ಕೆ ನಾವು ನೀರು ಕೊಡಬಹುದು ಎಂದು ನಾವಿದ್ದಾಗ ಒಂದು Project ಮಾಡಿದ್ದೇವೆ ರಾಜ್ಯ ಸರ್ಕಾರ ಆ Project ಅನ್ನು ತೆಗೆದುಕೊಂಡು, NURM ಅಡಿಯಲ್ಲಿ ಜಾರಿಗೊಳಿಸಿ, ಬೆಂಗಳೂರು ನಗರಕ್ಕೆ ನೀರು ಕೊಡುವುದಕ್ಕೆ ಯೋಚನೆ ಮಾಡುವುದಿಲ್ಲ ಎಂದರೆ, ಇನ್ನು ಎಂತಹ ಪರಿಸ್ಥಿತಿ ಈ ರಾಜ್ಯ ಸರ್ಕಾರಕ್ಕೆ ಇದೆ? ಎಂಬುದನ್ನು ತಾವೇ ಯೋಚನೆ ಮಾಡಬೇಕು ನಾವು ಬೆಂಗಳೂರು ನಗರವನ್ನು BBMP ಮಾಡುತ್ತೇವೆ, ಇಲ್ಲಿ ಸ್ವರ್ಗವನ್ನು Create ಮಾಡುತ್ತೇವೆ, ಇಂದ್ರ ಲೋಕವನ್ನು Create ಮಾಡುತ್ತೇವೆಂದು ಸರ್ಕಾರ ಹೇಳಿಕೊಳ್ಳುತ್ತಿದೆ ಆದರೆ ಇವತ್ತಿನ ದಿವಸ ಇವರು ಮಾಡುತ್ತಿರುವುದೇನು? ನಿಮಗೆ ಗೊತ್ತಿದೆಯೇ? ಈ ರಾಜ್ಯ ಸರ್ಕಾರ ಇವತ್ತು ಪುರಸಭೆಗಳ elections ಮಾಡುತ್ತಿಲ್ಲ ಈ ರಾಜ್ಯ ಸರ್ಕಾರ

ಬೆಂಗಳೂರು ಮಹಾನಗರ ಪಾಲಿಕೆಯ election ಮಾಡುತ್ತಿಲ್ಲ ಇವತ್ತು ಬೆಂಗಳೂರಿನ CDP release ಮಾಡಿದ್ದಾರೆ ಈ ರೀತಿ ರಾಜ್ಯ ಸರ್ಕಾರ CDP ಯನ್ನು release ಮಾಡುವಾಗ, ಕನಿಷ್ಠ ಸೌಜನ್ಯಕ್ಕಾದರೂ ಶಾಸಕರನ್ನು ಕೇಳಲಿಲ್ಲ ಬರೀ ಅಧಿಕಾರಿಗಳು ಹೇಳಿದನ್ನೇ ಜಾರಿಗೆ ತಂದಿದ್ದೀರಲ್ಲಾ, ಈ ಬೆಂಗಳೂರು ನಗರದಲ್ಲಿ Commomn man ಬದುಕುವುದು ಹೇಗೆ? ಮಾನ್ಯ ಅಧ್ಯಕ್ಷರೆ, You know that ನಾನು ಇನ್ನು ನಾಲ್ಕೇ ವಿಷಯವನ್ನು ಹೇಳ ಬಯಸುತ್ತೇನೆ Residential area ಗಳಲ್ಲಿ 20% Semi-commercial ಮಾಡಬಹುದು ಎಂದು ಮಾಡಿದ್ದಾರೆ ಈ 20% residential area ದಲ್ಲಿ ನಾಳೆ ಬೆಳಿಗ್ಗೆ ದನದ ಅಂಗಡಿಯೋ, ಮಾಂಸದ ಅಂಗಡಿಯೋ, ಕ್ಲಬ್ಬೋ, ರೆಸ್ಟೋರೆಂಟೋ ಬಂದರೆ ಹೇಗೆ? ನಾವು ನಾಗರಿಕರು ವಾಸ ಮಾಡುವ ಜಾಗದಲ್ಲಿ ಅವನು ಅಂಗಡಿ ತೆರೆದರೆ ನಾವು ಏನು ಮಾಡುವುದು? ನಾವು ಬದುಕುವುದು ಹೇಗೆ? Ring-1 ನಲ್ಲಿ 60X60, 3600 Sq ft ಗೆ, cellar ನಲ್ಲಿ ಐದು park ಮಾಡುವುದಕ್ಕೆ ಮಾತ್ರ provision ಎಂದು ನೀವು ಹೇಳಿದ್ದೀರಿ ಆದರೆ ಅದಕ್ಕೆ FIC ಸಿಗುವುದು 2 ಮಾತ್ರ ನಿಮ್ಮ CDP ಪ್ರಕಾರ 8000 Sq ft ನಾವು ಮನೆ ಕಟ್ಟಬಹುದು 8000 Sq ft ಮನೆ ಕಟ್ಟಬೇಕಾದರೆ, ನೀವು ಐದು parking ಮಾತ್ರ ಮಾಡಲಿಕ್ಕೆ Provision ಮಾಡಿದ್ದೀರಿ ನೀವು ಮನೆ ಕಟ್ಟಿದರೆ, 2700 Sq ft ಮಾತ್ರ ಕಟ್ಟುವುದಕ್ಕೆ ಸಾಧ್ಯ ಮಿಕ್ಕಿದ Sq ft ಯಾರು ಬಂದು ಕಟ್ಟಬೇಕು? ಅಭಾಸ ನೋಡುವವರು ಯಾರು? ನೀವು ಇವತ್ತು ಪ್ರಮುಖವಾಗಿ Commercialನಲ್ಲಿ ಇರತಕ್ಕಂಥ Areaಗಳನ್ನು residential area ಆಗಿ Convert ಮಾಡಲಿಕ್ಕೆ ಅವಕಾಶ ಮಾಡಿದ್ದೀರಿ ಮಾನ್ಯ ಅಧ್ಯಕ್ಷರೆ, ಕಟ್ಟುತ್ತಿರುವವರೆಲ್ಲಾ ಎಲ್ಲಿಗೆ ಹೋಗಬೇಕು? ಆಗಲೇ ನೋಟೀಸ್‌ಗಳನ್ನು ಕೊಡುತ್ತಿದ್ದಾರೆ Commercial road ನಲ್ಲಿ ಇರತಕ್ಕದ್ದನ್ನು residential ಗೆಂದು convert ಮಾಡಬಾರದು ಈಗ for example, DVG Road It was Commercial from the last 32 years CDP ಯಲ್ಲಿ ಇಷ್ಟು ವರ್ಷಗಳ ಕಾಲ ಅದು Comercial area ಆಗಿ ಬೆಳೆದುಕೊಂಡು ಬಂದಿದೆ ಇವತ್ತು ನೀವು ಅದನ್ನು residemtial ಎಂದು declare ಮಾಡಿದರೆ ಹೇಗೆ? ಜನ ಹೇಗೆ ಬದುಕಬೇಕು? ತಾವೇ ಹೇಳಿ ಇದು ಹುಚ್ಚರ

ಸಂತೆಯೇ? ಬಹಳ ಪ್ರಮುಖವಾಗಿ ಇವತ್ತು ನೀವು CDP ಯನ್ನು convert ಮಾಡಿದರಲ್ಲಾ, ನೀವು FAR ಮತ್ತು Set back ಅನ್ನು ಯಾವ ಆಧಾರದ ಮೇಲೆ ಇಟ್ಟುಕೊಂಡು ಮಾಡಿದ್ದೀರಿ? ಈ ಬಗ್ಗೆ ಜನಪ್ರತಿನಿಧಿಗಳನ್ನು ಕೇಳಿ, ಅವರ ಮುಖಾಂತರ ಜನಗಳ ಭಾವನೆಗಳನ್ನು ಅರ್ಥ ಮಾಡಿಕೊಂಡು, ನೀವು ಮಾಡದೇ ಜನಗಳಿಗೆ ಈ ರೀತಿ ತೊಂದರೆ ಕೊಡಲಿಕ್ಕೆ ಹೊರಟರ, ಜನಗಳು ಬದುಕುವುದಾದರೂ ಹೇಗೆ? ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಕಸ ತೆಗೆಯುವುದಕ್ಕೆ ಒಂದು ವರ್ಷಕ್ಕೆ 32 ಕೋಟಿ ರೂ ಗಳ ಟೆಂಡರ್ ಅನ್ನು ಕೊಟ್ಟಿದ್ದೆವು ಈಗ ಒಂದು ವರ್ಷಕ್ಕೆ ಕಸ ತೆಗೆಯುವುದಕ್ಕೆ ಒಂದು ವರ್ಷಕ್ಕೆ 32 ಕೋಟಿ ರೂ ಗಳ ಟೆಂಡರ್ ಅನ್ನು ಕೊಟ್ಟಿದ್ದೆವು ಈಗ ಒಂದು ವರ್ಷಕ್ಕೆ ಕಸ ತೆಗೆಯುವುದಕ್ಕೆ 97 ಕೋಟಿ ರೂ ಗಳನ್ನು ಕೊಡುತ್ತಿದ್ದಾರೆ ಬರೀ 215 Sq Km ನಲ್ಲಿ ಕಸ ತೆಗೆಯುವುದಕ್ಕೆ ಟೆಂಡರ್ ಕೊಟ್ಟಿರತಕ್ಕಂಥದ್ದು

ಅಧ್ಯಕ್ಷರು ಇನ್ನು ಐದು ನಿಮಿಷಗಳಲ್ಲಿ ತಾವು ಮಾತನಾಡುವುದನ್ನು ಮುಗಿಸಬೇಕು

ಶ್ರೀ ಕೆ ಚಂದ್ರಶೇಖರ್ ಮಾನ್ಯ ಅಧ್ಯಕ್ಷರೇ, ತಾವು 4 ಗಂಟೆಗೆ ನನಗೆ ಅವಕಾಶ ಕೊಟ್ಟು, 15 ನಿಮಿಷಗಳಲ್ಲಿ ಮುಗಿಸಬೇಕು ಎಂದು ಹೇಳಿದಿರಿ ಅದರಂತೆ ನಾನು ಮುಗಿಸುತ್ತೇನೆ ನಾನು ಅದಕ್ಕಿಂತ ಒಂದು ನಿಮಿಷವನ್ನೂ ಸಹ extra ತೆಗೆದುಕೊಳ್ಳುವುದಿಲ್ಲ ನಾನು ನಿಮ್ಮ ಮಾತಿಗೆ ಬದ್ಧನಾಗಿದ್ದೇನೆ

ಅಧ್ಯಕ್ಷರು ನಾನು 3 55 ಗಂಟೆಗೆ ಮಾತನಾಡಲು ಅವಕಾಶ ಕೊಟ್ಟಿದ್ದೇನೆ ಅದರಂತೆ ಇನ್ನು ಐದು ನಿಮಿಷಗಳಲ್ಲಿ ತಮ್ಮ ಭಾಷಣ ಮುಗಿಸಬೇಕಾಗಿದೆ ನಾನು ಟೈಮ್ ನೋಡಿಯೇ ನಿಮಗೆ ಅವಕಾಶ ಕೊಟ್ಟಿದ್ದೇನೆ

ಶ್ರೀ ಕೆ ಚಂದ್ರಶೇಖರ್ ಅಧ್ಯಕ್ಷರೆ, ನಿಮಗೆ ಗೊತ್ತೇ? ಈಗ ಈ ಕಸ ತೆಗೆಯತಕ್ಕಂಥ ಟೆಂಡರ್ 97 ಕೋಟಿ ರೂ ಗಳಾಗಿದೆ ಒಂದು ದಿವಸ ವಾದರೂ ಟೆಂಡರ್ Condition ಪ್ರಕಾರ ಬೆಂಗಳೂರು ನಗರದಲ್ಲಿ ಕಸ ತೆಗೆಸಲಿಕ್ಕೆ ಸಾಧ್ಯವಾಗಿದೆಯೇ? ಬೆಂಗಳೂರು ನಗರದಲ್ಲಿ ನಾವು ಸುಮಾರು 118 ಕೋಟಿ ರೂಪಾಯಿಗಳನ್ನು strom water drain consultantಗೆ ಕೊಡುತ್ತಿದ್ದೇವೆ 2000ನೇ ಇಸವಿಯಲ್ಲಿ Project management ನಾವು ಮಾಡಿದೆವು 2002-03 ರಲ್ಲಿ ಟೆಂಡರ್ ಕರೆದೆವು ಇವತ್ತು ಅವರಿಗೆ work

order ಕೊಡುತ್ತಿದ್ದೇವೆ 2000ನೇ ಇಸವಿಯಲ್ಲಿ ಮಾಡಿದಂತಹ estimateಗೆ 2007ರಲ್ಲಿ ಕೆಲಸ ಮಾಡು ಎಂದರೆ ಹೇಗೆ ಮಾಡುವುದು? ಹೇಗೆ ಸಾಧ್ಯ? Storm water drain ನಿಂದ ಜನಗಳು ಅಲ್ಲಿ ಸಾಯುತ್ತಿದ್ದಾರೆ Storm water drain ನಲ್ಲಿ ಒರಿ ಹೂಳು ತೆಗೆಯತಕ್ಕಂತಹ ಅವ್ಯವಹಾರ ಮಾಡಿಕೊಂಡು Construction ಮಾಡದೇ, ಇದರ ಬಗ್ಗೆ ನಿರ್ಧಾರ ತೆಗೆದುಕೊಳ್ಳುವ ಸ್ಥಿತಿಯಲ್ಲಿ ರಾಜ್ಯ ಸರ್ಕಾರ ಇಲ್ಲ Either they are not going for the new tender or not taking the decision ಇಲ್ಲಿರತಕ್ಕಂತಹ PWD(G) 69 Act ಉಪಯೋಗಿಸಿಕೊಂಡು, ಬೆಂಗಳೂರು ನಗರದಲ್ಲಿ ಜನಗಳು ಆ storm water drainನಲ್ಲಿ ಬಿದ್ದು, ಒದ್ದಾಡಿ ಸಾಯುತ್ತಿರುವುದನ್ನು ತಪ್ಪಿಸುವುದಕ್ಕೆ ರಾಜ್ಯ ಸರ್ಕಾರ ಏನು ಮಾಡುತ್ತಿದೆ? ಏತಕ್ಕೋಸ್ಕರ ಈ ರೀತಿ ಮಾಡುತ್ತಿದ್ದಾರೆ, ಬೆಳಿಗ್ಗೆ ಎದ್ದರೆ ಕಸ ತೆಗೆಯುವವರು ಇಲ್ಲವೆಂದು ಪೇಪರ್‌ನಲ್ಲಿ ಬರುತ್ತಿದೆ ಬೆಳಗ್ಗೆ ಎದ್ದರೆ ನಾಯಿ ಗಲಾಟೆ ಬೆಳಿಗ್ಗೆ ಎದ್ದರೆ storm water drain ಸಮಸ್ಯೆ ಯಾವ ಅಧಿಕಾರಿನೂ ಕೈಗೆ ಸಿಗುವುದಿಲ್ಲ ಯಾವಾಗ ಫೋನ್ ಮಾಡಿದರೂ ಮೀಟಿಂಗ್‌ಗೆ ಹೋಗಿದ್ದಾರೆಂದು ಹೇಳುತ್ತಾರೆ ಎರಡು ವರ್ಷದ ಹಿಂದೆ ಇದ್ದಂತಹ BMP ಗೂ ಇವತ್ತು ಇರುವಂತಹ BBMPಯ ಸತ್ಯಾಂಶ ಕಾಮಗಾರಿಗಳ ಪಟ್ಟಿ ತರಿಸಿ ನೋಡಲಿ ಬೆಂಗಳೂರು ಮಹಾನಗರ ಪಾಲಿಕೆ ಹೇಗೆ ನಡೆಯುತ್ತಿದೆ ಎಂದು ಒಂದು ಶ್ವೇತ ಪತ್ರ ತರಲಿ ಇವತ್ತು BDA ಸೈಟ್‌ಗಳನ್ನು ತಾವು ಕೊಟ್ಟು ಬಿಟ್ಟಿರಿ BDAನವರು ಹೇಳುತ್ತಾರೆ, ನಾವು ಸೈಟ್ ಕೊಟ್ಟಿದ್ದೇವೆ, ಒಂದೊಂದು ಎರಡೆರಡು ಮನೆಗಳವರು ಇದ್ದಾರೆ ಆ ಕಾರಣಕ್ಕಾಗಿ ಅವರು ಅಲ್ಲಿಗೆ ಹೋಗುತ್ತಿಲ್ಲವೆಂದು ಹೇಳುತ್ತಿದ್ದಾರೆ ಎಲಾನಮಿ groupಗೆ ಸೇರಿರುವವರಿಗೆ 30–40 ಸೈಟ್‌ಗಳಿಗೆ ಕಟ್ಟಿರತಕ್ಕಂತಹ ಗುಂಪಿನವರಿಗೆ ಸೈಟ್ ಕೊಟ್ಟಿದ್ದೀರಲ್ಲಾ, ಅಲ್ಲಿ ನೀವು ವಾಟರ್ ಸಪ್ಲೈ ಕೊಡುವುದು ಯಾವಾಗ? ಸ್ಯಾನಿಟರಿ ಕೊಡುವುದು ಯಾವಾಗ, ವಿದ್ಯುತ್ ಕೊಡುವುದು ಯಾವಾಗ? ಆ common man ಇಲ್ಲಿ ಬಾಡಿಗೆಯೂ ಕಟ್ಟಬೇಕು, ಅಲ್ಲಿ ನಿಮ್ಮ ಲೋನೂ ತೀರಿಸಬೇಕು, ಈ ಸೌಲಭ್ಯಗಳನ್ನು ಎಷ್ಟು ವರ್ಷಕ್ಕೆ ಕೊಡುವುದು ನೀವು? BDP CDP ತರುವಾಗ ಈ common man ಗೋಸ್ಕರ BDA ನವರು CDP ತಂದಿದ್ದ[illegible] ಅಭಿವೃದ್ಧಿ ಮಾಡತಕ್ಕಂತಹ

ಹಿನ್ನೆಲೆಯಲ್ಲಿ , ನಾವು ರೋಡ್‌ಗಳ widthನ್ನು ಎಷ್ಟು ದೊಡ್ಡದು ಇಡಬೇಕು, ಇವತ್ತು ಸಹ ಅದೇ ನಾಲ್ಕು ಫೀಟ್ ಅಧ್ಯಕ್ಷರೆ CITB ಯವರು 22 ವರ್ಷದ ಕೆಳಗಡೆ 20 ಅಡಿ ಮತ್ತು 30 ಅಡಿ ರೋಡ್‌ಗಳನ್ನು ಏನು ಮಾಡುತ್ತಿದ್ದರು, ಇವತ್ತು BDA ನವರೂ ಸಹ ಹೊಸ develop ಮಾಡುವಾಗ main road ಬಿಟ್ಟರೆ, ಎಲ್ಲಾ inner ರೋಡ್‌ಗಳನ್ನು 40 ಫೀಟ್‌ಗೆ ತಂದಿದ್ದಾರೆ ಈ ರೀತಿ ಬೆಂಗಳೂರು ನಗರವನ್ನು ವಿಶಿಷ್ಟವಾಗಿ ಯೋಚನೆ ಮಾಡದೇ ಬಂಗಳೂರಿನಲ್ಲಿ ಅಲ್ಲದೆ ಇಡೀ ಕರ್ನಾಟಕ ರಾಜ್ಯದಲ್ಲಿ ಎಲ್ಲಾ ನಗರ ಪಾಲಿಕೆಗಳಿಗೆ ಪುರಸಭೆಗಳಿಗೆ ಚುನಾವಣೆಯನ್ನು ಮಾಡುವುದಕ್ಕೆ ವೈಫಲ್ಯತೆ ಕಂಡು, ಜನವಿರೋಧಿ ನೀತಿಯನ್ನು ಅನುಸರಿಸಿಕೊಂಡು ಬರುತ್ತಿದೆ ಬೆಂಗಳೂರಿನಂತಹ ನಗರಕ್ಕೆ ಒಂದು ಸೆಪರೇಟ್ Act ನ್ನು ಮಾಡಿ, ಮೇಯರ್‌ಗೆ ಆಡಳಿತಾತ್ಮಕವಾದ ಅಧಿಕಾರವನ್ನು ಕೊಡಿ ಇವತ್ತಿನ ದಿವಸ ನೀವು ಸುಮ್ಮನೆ BBMP ಮಾಡಿಬಿಟ್ಟು, ಒಂದು ವರ್ಷ ಅಲ್ಲಿ ಮೇಯರ್ ಅನ್ನು ತಂದು ಕೂರಿಸಿದರೆ, ಏನು ಪ್ರಯೋಜನ? ನಿಮಗೆ ಗೊತ್ತಿದೆಯಾ ಎಷ್ಟೋ ಜನರಿಗೆ ಇಲ್ಲಿ ಗೊತ್ತಿಲ್ಲದೇ ಇರಬಹುದು ನಗರಸಭೆಗಳು 20 ಲಕ್ಷ ರೂಗಳ ಒಂದು ಟೆಂಡರ್ ಕರೆದರೆ ಕೆಲವು ನಗರಸಭೆಗಳು ಆ ಟೆಂಡರನ್ನು ಅಪ್ರೂವ್ ಮಾಡಿಸಿಕೊಳ್ಳಬೇಕಾದರೆ, ಸರ್ಕಾರಕ್ಕೆ ಬರಬೇಕಾಗಿದೆ ಬೆಂಗಳೂರಿನಂತಹ ನಗರದಲ್ಲಿ ಒಂದು ಕೋಟಿ ರೂಪಾಯಿ ಟೆಂಡರ್ ಕರೆದರೆ, ಅಪ್ರೂವ್ ಮಾಡುವುದಕ್ಕೆ ಸರ್ಕಾರಕ್ಕೆ ಬರಬೇಕಾಗಿದೆ ನಮ್ಮ ಸರ್ಕಾರದಲ್ಲಿ ಒಂದು ದೆವ್ವ, ಒಂದು ಭೂತ ಇದೆ ಆ ದೆವ್ವ ಭೂತ ಯಾವುದಪ್ಪ ಅಂದರೆ, ಈ Finance Department ಬೆಂಗಳೂರು ನಗರದ ಈ ಪ್ರಾಜೆಕ್ಟ್‌ಗಳು ಹಾಳಾಗುವುದಕ್ಕೆ ಈ Finance Departmentನ ಭೂತವೇ ಕಾರಣ ಬೆಂಗಳೂರು ನಗರದ ಎಲ್ಲಾ ಪ್ರಾಜೆಕ್ಟ್‌ಗಳೂ ಈ Finance Department ಗೆ ಬಂದರೆ ಕನಿಷ್ಟ ಎರಡು ವರ್ಷಗಳ ಕಡಿಮೆ ಅವರು ಅಪ್ರೂವ್ ಮಾಡಿಲ್ಲ ಅಂತಹ ಇತಿಹಾಸವೇ ಇಲ್ಲ ನಾನು 24 ವರ್ಷಗಳ ಕಾಲ Corporator ಆಗಿದ್ದೇನೆ ಮೇಯರ್ ಆಗಿದ್ದೇನೆ ಪೆಡಂಭೂತ ಆಗಿರತಕ್ಕಂತಹ Finance Department, It was extra account ಬೆಂಗಳೂರು ಮಹಾನಗರ ಪಾಲಿಕೆ ಯಾವುದೇ ಹಣಕಾಸಿಗೆ ರಾಜ್ಯ ಸರ್ಕಾರದ ಮೇಲೆ ಅವಲಂಬಿತವಾಗಿಲ್ಲ extra account ಇಟ್ಟುಕೊಂಡಿದೆ ತನ್ನ ಸ್ವಾವಲಂಬನೆಯನ್ನು ಸ್ವಾಧೀನ ಮಾಡಿದ ಆದರೆ ಈ

Finance Department ಇಲ್ಲರತಕ್ಕಂತಹ ಬುದ್ದಿ ಕೆಟ್ಟ ಅಧಿಕಾರಿಗಳು ಬಾಯಿಗೆ ಬಂದ ಹಾಗೆ ನಿರ್ಧಾರ ಮಾಡುತ್ತಿದ್ದಾರೆ ಹೇಳುವವರು ಇಲ್ಲ, ಕೇಳುವವರು ಇಲ್ಲ ಬೆಂಗಳೂರು ನಗರ ಹಾಳಾಗುತ್ತಿದೆ IT City BT City, International City ಎಂದು ಪ್ರಖ್ಯಾತ ಮಾಡಿದ ನಗರವನ್ನು ಇವತ್ತು ಹೇಳುವವರು ಇಲ್ಲದೇ dieing city ಮಾಡುತ್ತಿದ್ದಾರೆ ನನಗೆ 15 ನಿಮಿಷಗಳ ಕಾಲಾವಕಾಶ ಕೊಟ್ಟಿದ್ದೀರಿ ಬಹಳಷ್ಟು ವಿಷಯಗಳನ್ನು ಹೇಳಬೇಕಾಗಿತ್ತು, ಆದರೂ ನಿಮ್ಮ ಮಾತಿಗೆ ಗೌರವ ಕೊಟ್ಟು ಕುಳಿತುಕೊಳ್ಳುತ್ತೇನೆ Thankyou

ಶ್ರೀ ನ ಲ ನರೇಂದ್ರ ಬಾಬು (ರಾಜಾಜಿನಗರ) ಮಾನ್ಯ ಅಧ್ಯಕ್ಷರೆ, ಬಹಳ ಮುಖ್ಯವಾಗಿ 28 ಇಲಾಖೆಗಳ ಬಗ್ಗೆ ಮಾತನಾಡಬೇಕೆಂದು ಆಸೆ ಇದ್ದರೂ ಸಹ, ಹಲವಾರು ವಿಚಾರಗಳ ಬಗ್ಗೆ ಬೆಳಕು ಚೆಲ್ಲಬೇಕೆಂದು ಉತ್ಸುಕತೆ ಇದ್ದರೂ ಸಹ, ಆಡಳಿತ ವ್ಯವಸ್ಥೆಯಲ್ಲಿರತಕ್ಕಂತಹ ವೈಫಲ್ಯಗಳು ಬೇಡಿಕೆಗಳಲ್ಲಿ ಮಂಡನೆ ಆಗಿ, ಈ ಅಂಕಿ ಅಂಶಗಳಿಗೆ ಜೀವ ಬರದೇ, ನಿರ್ಜೀವವಾಗಿ, 39,000 ಅಥವಾ 40,000 ಕೋಟಿ ರೂಪಾಯಿಗಳ ಬಜೆಟ್ ನಾವು ರಾಜ್ಯದ ಜನತೆಗೋಸ್ಕರ ಇಟ್ಟಿದ್ದೇವೆಂದು ಹೇಳುತ್ತೇವೆ, ಆ 40,000 ರೂ ಗಳಲ್ಲಿ ಕೇವಲ ಸಂಬಳ ಬಿಟ್ಟರೆ, Pension ಬಿಟ್ಟರೆ, ಕೆಲವು ಕಮಿಷನ್‌ಗಳನ್ನು ಬಿಟ್ಟರೆ, ಇನ್ನು ಮಿಕ್ಕಿದ್ದು ಯಾವುದಕ್ಕೂ ಜೀವ ಬರುವುದಿಲ್ಲವೆಂದು ಬಹಳ ನೊಂದು ನಾನು ಇವತ್ತು ಹೇಳುತ್ತೇನೆ ಸನ್ಮಾನ್ಯ ಉಪ ಮುಖ್ಯಮಂತ್ರಿಗಳೂ ತಮ್ಮ ಭಾಷಣದಲ್ಲಿ ಕೊನೆಯಲ್ಲಿ ಹೇಳುತ್ತಾರೆ ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ಹೇಳಿರುವಂತೆ "ಪ್ರಜಾ ಸುಖೇ ಸುಕಂ ರಾಜ್ಞ ಪ್ರಜಾನಾ ಚ ಹಿತೇ ಹಿತಂ ನಾರ್ಮಪ್ರಿಯಂ ಹಿತಂ ರಾಜ್ಞ ಪ್ರಜಾನಾಂ ತು ಪ್ರಿಯಂ ಹಿತಂ" ಎಂದು ಹೇಳುತ್ತಾ, ಪ್ರಜೆಗಳಿಗೋಸ್ಕರ, ಪ್ರಜೆಗಳ ಸಂತೋಷಕ್ಕೋಸ್ಕರ, ಪ್ರಜೆಗಳ ಹಿತಕ್ಕೋಸ್ಕರ ಎಂದು ಮಂಡಿಸಿರತಕ್ಕಂತಹ, ಅದವಾ ನಾನು ಇದನ್ನು ಯಾವುದೇ ಸರ್ಕಾರವನ್ನು ಟೀಕೆ ಮಾಡುತ್ತಿಲ್ಲ ಇದನ್ನು ಇಟ್ಟುಕೊಂಡರೆ ಸನ್ಮಾನ್ಯ ಚಂದ್ರಶೇಖರ್‌ರವರು ಹೇಳಿದ ಹಾಗೆ, ಅಧಿಕಾರ ವರ್ಗ ಇದೆಯಲ್ಲಾ, ಇದರ ದೃಷ್ಟಿಕೋನ ಬದಲಾವಣೆ ಆಗದ ಹೊರತಾಗಿ, ಈ mindset ಬದಲಾವಣೆ ಮಾಡದ ಹೊರತಾಗಿ, ಈ ಅಂಕಿ ಅಂಶಗಳಿಗೆ ಜೀವ ಬರಲಿಕ್ಕೆ ಸಾಧ್ಯವಿಲ್ಲ ಎನ್ನತಕ್ಕಂತಹ ಮಾತನ್ನು ಈ ಸಂದರ್ಭದಲ್ಲಿ ನಾನು ಸ್ಪಷ್ಟವಾಗಿ ಹೇಳುವುದಕ್ಕೆ ಬಯಸುತ್ತೇನೆ ಈ ರಾಷ್ಟ್ರದ ಶಕ್ತಿ, ಈ ದೇಸದ ಯುವ ಶಕ್ತಿ, ಇವತ್ತು ಎಲ್ಲರೂ ಯುವ ಶಕ್ತಿ ಬಗ್ಗೆ

ಮಾತನಾಡುತ್ತಾರೆ ನಾನು ನೋಡುತ್ತಿದ್ದೆ, ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆ ಸಚಿವರಾದ ನಮ್ಮ ಆಲ್ಕೋಡ್ ಹನುಮಂತಪ್ಪನವರು ಕುಳಿತುಕೊಂಡಿದ್ದಾರೆ ನಾನು ಆಗಾಗ ಯೋಚನೆ ಮಾಡುತ್ತಿರುತ್ತೇನೆ ಯುವಕರು ಸಚಿವರಾಗಿದ್ದಾರೆ, ಈ ಇಲಾಖೆಯಲ್ಲಿ ಯುವತನವೇ ಕಾಣುತ್ತಿಲ್ಲ ಯುವ ಜನ ಇಲಾಖೆಯಲ್ಲಿ ಕ್ರೀಡೆ ನಮ್ಮ ದೇಶಕ್ಕೆ ಕೀರ್ತಿ ತಂದಿರತಕ್ಕಂತಹ ಇಲಾಖೆ Sports ಎಂದರೆ, ಕೀರ್ತಿ, ಸಾಮರಸ್ಯ, ಮತ್ತು ಸ್ನೇಹವನ್ನು ಅಂತರರಾಷ್ಟ್ರೀಯ ಮಟ್ಟದಲ್ಲಿ ಗಡಿಯನ್ನು ದಾಟಿ, ಜಾತಿ ದರ್ಮ ಎಲ್ಲ ದಾಟಿ, ಕೀರ್ತಿಯನ್ನು ತರತಕ್ಕಂತಹ ಇಲಾಖೆ ಇವತ್ತು ಬಹಳ ದುಃಖದಿಂದ ಹೇಳುತ್ತೇನೆ, Sports Authority of Karnataka ಎಂದು ಇದೆ ಇನ್ನೊಂದು Sports Authority of India ಎಂದು ಇದೆ ನಮ್ಮ ಸರ್ಕಾರದಲ್ಲಿ ನಮ್ಮ ಹಾಸ್ಟೆಲ್‌ಗಳಲ್ಲಿರತಕ್ಕಂತಹ ವಿದ್ಯಾರ್ಥಿಗಳಿಗೆ ಖರ್ಚು ಮಾಡುತ್ತಿರತಕ್ಕಂಥಾದ್ದು ಒಬ್ಬ ವಿದ್ಯಾರ್ಥಿಗೆ 60 ರೂ ಒಂದು ದಿನಕ್ಕೆ Sports Authority of India ದವರು ಒಂದು ದಿನಕ್ಕೆ ಒಬ್ಬ ವ್ಯಕ್ತಿಗೆ 120 ರೂ ಖರ್ಚು ಮಾಡುತ್ತಾರೆ ನೋಡಿ ಎಷ್ಟು ತಾರತಮ್ಯ ಇದೆ ನಮ್ಮ ಇಲಾಖೆಯಲ್ಲಿ ಕೆಲಸ ಮಾಡತಕ್ಕಂತಹ ತರಬೇತಿ ಕೊಡತಕ್ಕಂತಹ ಅಧಿಕಾರಿಗಳಿಗೆ ಇವತ್ತು ನಾವು ಗುತ್ತಿಗೆ ಮೇಲೆ ತೆಗೆದುಕೊಂಡು 5,200 ರೂ ಕೊಡುತ್ತಿದ್ದೇವೆ ಇದು permanent job ಅಲ್ಲ ಅದೇ Sports Authority of India ದವರು 20,000 ರೂ ಕೊಡುತ್ತಿದ್ದಾರೆ ಇದು permanent job ಆ ತರಬೇತಿಗಾರರಲ್ಲಿ ಎಷ್ಟು ಆಸಕ್ತಿ ಇರುತ್ತದೆ, ಈ ತರಬೇತಿಗಾರರಲ್ಲಿ ಎಷ್ಟು ಆಸಕ್ತಿ ಇರುತ್ತದೆ ಎಂದು ತಿಳಿದುಕೊಳ್ಳಬೇಕಾಗುತ್ತದೆ Why we are lagging behind the sports? ಕ್ರೀಡೆಯಲ್ಲಿ ನಮ್ಮ ಒಲಂಪಿಕ್ ಆಗಲಿ, ಮತ್ತೊಂದು ಮಗದೊಂದು ಬರುತ್ತಿಲ್ಲ, ಗ್ರಾಮೀಣ ಕ್ರೀಡೆಗಳು ಏಕೆ ಮುಂದಕ್ಕೆ ಬರುತ್ತಿಲ್ಲವೆಂದರೆ, ನಮ್ಮಲ್ಲಿ ಕಮಿಟ್‌ಮೆಂಟ್ ಇಲ್ಲ National Youth Policy ಆಗಿದೆ State Youth Policy ಏನು ಎಂದು ನಾನು ಮಾನ್ಯ ಕ್ರೀಡಾ ಸಚಿವರಲ್ಲಿ ಕೇಳುವುದಕ್ಕೆ ಇಷ್ಟಪಡುತ್ತೇನೆ ಬಜೆಟ್ ಎಷ್ಟು ಇಟ್ಟಿದ್ದೀರಿ? ಬಾರತ ದೇಶವನ್ನು Young India ಎಂದು ಕರೆಯುತ್ತಾರೆ ಇರತಕ್ಕಂತಹ ಜನಸಂಖ್ಯೆಯಲ್ಲಿ 60% ಯುವಕರು ಇರುವಂಥಾದ್ದು ನಮ್ಮ ಇಲಾಖೆಗೆ ಹಣ ಏಕೆ ಕೊಡುವುದಿಲ್ಲವೆಂದು ನಮ್ಮ ಸಚಿವರು ಪತ್ರಕರ್ತರ ಮುಂದೆ ಕಣ್ಣೀರು

ಹಾಕುವುದು ಮತ್ತು ಬೇಸರದಿಂದ ಮಾತನಾಡುವುದನ್ನು ನಾನು ಕೇಳಿದ್ದೇನೆ ಯುವಜನರು ಇವತ್ತು ದಿಕ್ಕು ದಾರಿ ತಪ್ಪುತ್ತಿರುವಂಥಾದ್ದು ಕಾಣುವುದಿಲ್ಲವಾ? ಅದರ ಬಗ್ಗೆ ಚಿಂತನೆ ಬೇಡವಾ? ಎಂದು ಈ ಸಂದರ್ಭದಲ್ಲಿ ಸರ್ಕಾರಕ್ಕೆ ಹಾಗೂ ಉಪ ಮುಖ್ಯಮಂತ್ರಿಗಳಿಗೆ ಕೇಳುವುದಕ್ಕೆ ಬಯಸುತ್ತೇನೆ ನಮ್ಮ Sports Authority of Karnatakaದಲ್ಲಿ ತರಬೇತಿ ಪಡೆದಂತಹ ಯುವಕರು ರಾಷ್ಟ್ರಮಟ್ಟದಲ್ಲಿ represent ಮಾಡಿರುವವರನ್ನು ನಾನು ಇಲ್ಲಿ ಉಲ್ಲೇಖ ಮಾಡುವುದಕ್ಕೆ ಬಯಸುತ್ತೇನೆ 23 ಕ್ರೀಡಾ ನಿಲಯಗಳನ್ನು ಮಾಡುತ್ತೇವೆಂದು ಹೇಳಿದ್ದೀರಿ ನಾನು ಒಂದು ಕೇಳುತ್ತೇನೆ, ನಾಲ್ಕು Training Centres ಮತ್ತು School ಗಳು ಇವೆ ಅವುಗಳಿಗೆ ನೀವು permanent ನೌಕರರನ್ನು ತೆಗೆದುಕೊಂಡಿಲ್ಲ ಆದುದರಿಂದ ಆ ತರಬೇತುದಾರರು ಬೇರೆ ರಾಜ್ಯಕ್ಕೆ ವಲಸೆ ಹೋಗುತ್ತಿದ್ದಾರೆ ಇಂದು ಯುವಜನರ ಬಗ್ಗೆ, ಕ್ರೀಡೆಯ ಬಗ್ಗೆ ಎಲ್ಲ ಕಡೆಯಲ್ಲಿಯೂ ಮಾತನಾಡುವವರೇ ಕಡಿಮೆಯಾಗಿದ್ದಾರೆ ಇಂದು ಮಕ್ಕಳು, ಮಹಿಳೆಯವರು ಮತ್ತು ಯುವಜನರ ಬಗ್ಗೆ ಹೆಚ್ಚು ಕಾರ್ಯಕ್ರಮಗಳನ್ನು ಹಾಕಿ ಒತ್ತನ್ನು ಕೊಡಲಿಲ್ಲವೆಂದರೆ ಮಾನವ ಸಂಪನ್ಮೂಲ ದೃಢಕಾಯವಾಗುವುದಿಲ್ಲ ಮತ್ತು ಭವಿಷ್ಯದ ಭಾರತ ಸದೃಢವಾಗುವುದಿಲ್ಲವೆನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ ಇವೊತ್ತು ಎಸ್ ಎ ಟಿ ಯಲ್ಲಿ ವೇತನದಲ್ಲಿ ತಾರತಮ್ಯ ಮಾಡುತ್ತಿರುವುದನ್ನು ನಾವು ಕಾಣುತ್ತಿದ್ದೇವೆ ಇಂದು ಕ್ರಿಕೆಟ್ ಬಿಟ್ಟರೆ ಬೇರೆ ಕ್ರೀಡೆಗಳ ಬಗ್ಗೆ ತಾರತಮ್ಯ ಜಾಸ್ತಿ ಇದೆ ಇಂದು ಕ್ರಿಕೆಟ್, ಟೆನ್ನಿಸ್ ಬಿಟ್ಟರೆ ಬೇರೆ ಯಾವುದೂ ಇಲ್ಲವೆನ್ನುವಂತೆ ತಿಳಿದು ಬೇರೆ ಕ್ರೀಡೆಗಳಿಗೆ ತಾರತಮ್ಯ ಮಾಡುತ್ತಿದ್ದಾರೆ ನಮ್ಮ ಇಂಡಿಯನ್ ಟೀಂ ಅನ್ನು ಕ್ಯಾಪ್ಟನ್ ಆಗಿ ರೆಪ್ರೆಸೆಂಟ್ ಮಾಡಿದ ಅಕ್ಷತಾ ಇದ್ದಾರೆ ಹರಿ ಎನ್ನುವವರು ಈಗಲೂ ಕೂಡ ಆಟವಾಡುತ್ತಿದ್ದು ಇಂಡಿಯನ್ ಟೀಂ ರೆಪ್ರೆಸೆಂಟ್ ಮಾಡುತ್ತಿದ್ದಾರೆ ಪವಿತ್ರ ಎನ್ನುವ ಉತ್ತಮ ಕ್ರೀಡಾಪಟು ಇದ್ದಾರೆ ಆದರೆ ಅಂಥವರಿಗೆ ಇದುವರೆಗೂ ಕೂಡ ನಾವು ಸನ್ಮಾನ ಮಾಡಲಿಲ್ಲ ನಮ್ಮ ರಾಜ್ಯದಲ್ಲಿ ಸುವರ್ಣ ಕರ್ನಾಟಕ ವರ್ಷಾಚರಣೆಯಾಯಿತು ಸಾನಿಯಾ ಮಿರ್ಜಾಗೆ 5 ಲಕ್ಷ ರೂಪಾಯಿಗಳನ್ನು ಕೊಡುತ್ತೀರಿ ಆದರೆ ನಮ್ಮ ಕ್ರೀಡಾಪಟುಗಳಿಗೆ ನೀವು ಯಾವಾಗ ಪ್ರೋತ್ಸಾಹ ಕೊಡುವುದು? ಪೊಲೀಸ್ ಡಿಪಾರ್ಟ್‌ಮೆಂಟ್, ಬಿ ಎಂ ಟಿ ಸಿ ಬಿಟ್ಟರೆ ಬೇರೆ ಯಾವ ಡಿಪಾರ್ಟ್‌ಮೆಂಟ್‌ನಲ್ಲೂ ಕ್ರೀಡೆಗೆ ಪ್ರೋತ್ಸಾಹ ಕೊಡುತ್ತಿಲ್ಲ ಐ ಟಿ, ಬಿ ಟಿ ಬಿಡಿ ಬೇರೆ

ಇನ್ನಾರಿಗೂ ನೀವು ಪ್ರೋತ್ಸಾಹವನ್ನೇ ಕೊಡುವುದಿಲ್ಲ ಯುವ ಜನರು ಎಂದರೆ ಇವರು ಕ್ರೀಡೆಗೆ ಸಂಬಂಧವೇ ಇಲ್ಲವೆನ್ನುವಂತೆ ನೋಡುತ್ತಿದ್ದೀರಿ ಆಲ್ಕೋಡ್ ಹನುಮಂತಪ್ಪನವರೆ, ದಯಮಾಡಿ ನೀವು ನಿಮ್ಮ ಬುದ್ಧಿ ಮತ್ತು ಚಾಣಾಕ್ಷತೆಯನ್ನು ಉಪಯೋಗಿಸಿ ನಿಮ್ಮ ಅಧಿಕಾರಿಗಳನ್ನು ಉಪಯೋಗಿಸಿ ಕೊಂಡು ಐ ಟಿ ಸೆಕ್ಟರ್ ಅನ್ನು ಇನ್‌ವಾಲ್ವ್ ಮಾಡಿಕೊಂಡು ಜಾಯಿಂಟ್ ವೆಂಚರ್‌ನಲ್ಲಿ ಸ್ಪೋರ್ಟ್ಸ್ ಅಂಡ್ ಕಲ್ಚರ್ ಅನ್ನು ಪ್ರಮೋಟ್ ಮಾಡುವುದಕ್ಕೆ ಚಿಂತನೆ ಮಾಡಿ ಎಂದು ನಾನು ನಿಮಗೆ ಸಲಹೆ ಕೊಡಬಯಸುತ್ತೇನೆ ಇನ್ನು Sports Authority of Karnataka ನಲ್ಲಿ Technical Training ಅಥವಾ Advanced technology ಇಲ್ಲ ಆದರೆ ಇದು ಸಾಯ್‌ನಲ್ಲಿ ಸಿಗುತ್ತದೆ ಇದೇ ರೀತಿ S A K ನಲ್ಲಿ ನಿಮಗೆ ಮಾಡುವುದಕ್ಕೆ ಏಕೆ ಆಗಿಲ್ಲ? ದಯವಿಟ್ಟು ಹಣವನ್ನು ಇಂಥದ್ದಕ್ಕೆ ಉಪಯೋಗಿಸಿ ಇವೊತ್ತು National Camp ಗಳು ಬೇರೆ ಕಡೆ ಏನು ನಡೆಯುತ್ತದೋ ಅದೇ ರೀತಿ ನಮ್ಮಲ್ಲಿ ಏಕೆ ನಡೆಯುವುದಿಲ್ಲ? ಈಗ ಮುಖ್ಯಮಂತ್ರಿಗಳು ಸದನದಲ್ಲಿ ಇಲ್ಲ ನಾನು ಹೇಳುವುದೇನೆಂದರೆ ನಮ್ಮ ಮಾನ್ಯ ಮುಖ್ಯಮಂತ್ರಿಗಳು ಇದುವರೆಗೂ ಕೂಡ Youth Sports ನಲ್ಲಿ ಒಂದರಲ್ಲಿಯೂ ಭಾಗವಹಿಸಿಲ್ಲ ಏಕೆ ಎಂದು ನಾನು ಈ ಸಂದರ್ಭದಲ್ಲಿ ಪ್ರಶ್ನೆ ಕೇಳುತ್ತೇನೆ ದಯವಿಟ್ಟು ಈ ಸದನದ ಮೂಲಕ ಮಾನ್ಯ ಮುಖ್ಯಮಂತ್ರಿಗಳಿಗೆ ಹೇಳುವುದೇನೆಂದರೆ ಇನ್ನು ಮುಂದೆ ಯುವ ಜನತೆಯ ಯಾವುದೇ ಕಾರ್ಯಕ್ರಮಗಳಿದ್ದರೂ ಅದರಲ್ಲಿ ಅವರು ಭಾಗವಹಿಸುವಂತಾಗಬೇಕು ಹಿಂದೆ ನಮ್ಮ ರಾಜೀವ್‌ಗಾಂಧಿಯವರು ಯುವಕರನ್ನು ಗಮನದಲ್ಲಿಟ್ಟು ಕೊಂಡು ರಾಷ್ಟ್ರೀಯ ಯುವ ದಿನವನ್ನು ಆಚರಣೆ ಮಾಡಿ ಎಂದು ಹೇಳಿದರು ಇವೊತ್ತು ಯಾವ ಯಾವುದೋ ದಿನಗಳನ್ನು ಕಾಲೇಜ್‌ಗಳಲ್ಲಿ ಆಚರಿಸುತ್ತಾರೆ ಕಡ್ಡಾಯವಾಗಿ Valentine's Day ನಿಂದ ಹಿಡಿದು ಇತರ ಎಲ್ಲ ದಿನಗಳನ್ನೂ ಆಚರಿಸುತ್ತಾರೆ ಆದರೆ Youth Day ಅನ್ನು ಆಚರಣೆ ಮಾಡತಕ್ಕಂಥದ್ದನ್ನು ನಾವು ಕಾಣಲಿಲ್ಲ ಇವೊತ್ತು ನಾನು ಹೇಳುತ್ತಿದ್ದೇನೆ, ನಮ್ಮ ಯುವ ಜನರಲ್ಲಿ ಸ್ಫೂರ್ತಿ ತುಂಬುವುದಕ್ಕೆ ರಾಜ್ಯ ಮಟ್ಟದಲ್ಲಿ Sports, culture, employment ಗಳ ಬಗ್ಗೆ ಶಾಶ್ವತ ನೆಲೆಗಟ್ಟನ್ನು ಹಾಕಬಲ್ಲಂಥದ್ದಕ್ಕೆ ನಿಮಗೆ idea ಇಲ್ಲದಿದ್ದರೆ ನಾವು ಕೊಡುತ್ತೇವೆ ನಮ್ಮ ಬಳಿ ಬನ್ನಿ ನಮ್ಮ ಯುವ ಶಾಸಕರ ವೇದಿಕೆ ಏನಿದೆ

ನಮ್ಮ ಜೊತೆ ಕುಳಿತುಕೊಂಡು ನಮ್ಮ ಸಲಹೆ ಮತ್ತು ಅನುಭವಗಳನ್ನು ಪಡೆದುಕೊಳ್ಳಿ ಈ ವಿಚಾರದಲ್ಲಿ ಆಡಳಿತ ಪಕ್ಷ ಮತ್ತು ಪ್ರತಿಪಕ್ಷ ಎನ್ನತಕ್ಕಂಥ ತಾರತಮ್ಯ ಬೇಡ ಯಾವುದೋ ಒಂದು ಟ್ರಾನ್ಸ್‌ಫರ್ ವಿಚಾರದಲ್ಲಿ ನಿಮಗೆ ಬಂದ ಹಾಗೆ ಮಾಡಿಕೊಳ್ಳಿ ಆದರೆ ಇಂಥ ವಿಷಯಗಳಲ್ಲಿ ತಾರತಮ್ಯ ಮಾಡಬೇಡಿ ರಾಜ್ಯದ ದೃಷ್ಟಿಯಿಂದ ನಾವು ನಿಮಗೆ ideas ಕೊಡುತ್ತೇವೆ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ ಇನ್ನು Athletic events ಬಗ್ಗೆ ಹೇಳಬೇಕೆಂದರೆ, ನಮ್ಮ ಬೆಂಗಳೂರು ನಗರದಲ್ಲಿ ಯಾವುದೇ ಸ್ಕೂಲ್‌ಗಳನ್ನು ತೆಗೆದುಕೊಳ್ಳಿ ಇಲ್ಲಿ Athletic eventಗೆ Play Ground ಇದೆಯೇ? ಯಾವುದಾದರೂ ಕಾಲೇಜ್‌ನಲ್ಲಿ Play Ground ಇದೆಯೇ? Athletic Event ಗಾಗಿ ಪ್ರಾಕ್ಟೀಸ್ ಮಾಡಬೇಕೆಂದರೆ ಬೆಂಗಳೂರಿನಲ್ಲಿ ಬೆಳಿಗ್ಗೆಯೇ ಎದ್ದು ಬಸ್ಸು, ಲಾರಿ ಹಿಂದೆ ಓಡಬೇಕಾಗಿದೆ ಬೆಳಿಗ್ಗೆ 4 30 ಕ್ಕೂ ಕೂಡ ಕಾರ್ಡ್ ರೋಡ್‌ನಂಥ ಜಾಗದಲ್ಲಿಯೂ ಕೂಡ ಸರಿಯಾದ ರೀತಿಯಲ್ಲಿ ಪ್ರಾಕ್ಟೀಸ್ ಮಾಡುವುದಕ್ಕೆ ಇಂದು ಆಗುತ್ತಿಲ್ಲ ಬೆಂಗಳೂರಿನಲ್ಲಿ ಇರುವ ಎಲ್ಲರೂ ಬೆಳಿಗ್ಗೆ ಎದ್ದು ಓಡುವುದಕ್ಕೆ ಸಾಯ್, ಕಂಠೀರವ ಸ್ಟೇಡಿಯಂಗೆ ಬರುವುದಕ್ಕೆ ಆಗುವುದಿಲ್ಲ ನಾನು ಸಲಹೆ ಮಾಡುವುದೇನೆಂದರೆ ಎಲ್ಲೆಲ್ಲಿ 1 ಲಕ್ಷ ಜನ ಯುವಜನತೆ ಇರುತ್ತಾರೆ ಅದನ್ನು ಪರಿಗಣಿಸಿ 224 ವಿಧಾನ ಸಭೆ ಕ್ಷೇತ್ರಗಳಲ್ಲೂ ಸ್ಟೇಡಿಯಂ ಮಾಡುವುದಕ್ಕೆ Comprehensive plan ಮಾಡಿ ಇದಕ್ಕೆ ಕೇಂದ್ರ ಸರ್ಕಾರದಿಂದ ಹಣವನ್ನು ತೆಗೆದುಕೊಳ್ಳುವುದಕ್ಕಾಗಿ ಪ್ರಸ್ತಾವನೆಯನ್ನು ಕಳುಹಿಸಿ ಇದನ್ನು ಮಾಡುವುದಕ್ಕೆ ನಿಮ್ಮಲ್ಲೇಕೆ political will ಇಲ್ಲ? ನಮ್ಮಲ್ಲಿ bureaucratical skill ಇಲ್ಲವೇ? ನೀವು long standing programme, permanent programme ಗಳನ್ನು ಮಾಡಬೇಕು ಎಂದು ನಾನು ಈ ಸಂದರ್ಭದಲ್ಲಿ ವಿನಂತಿ ಮಾಡುತ್ತೇನೆ ಇವತ್ತು ಇರತಕ್ಕಂತಹ Training Centre ವಿದ್ಯಾನಗರವಾಗಲಿ, ಅಥವಾ ಕೊಡಗಿನಲ್ಲಿರತಕ್ಕಂತಹ ಸಂಸ್ಥೆಯಾಗಲಿ ನಮ್ಮ ಕ್ರೀಡೆಗಳನ್ನು ಗುರುತಿಸತಕ್ಕಂತಹವರು, ರಾಜ್ಯಮಟ್ಟದಲ್ಲಿ ಇವತ್ತು ಬಹಳ ಕ್ರೀಡೆಗಳನ್ನು ಗುರುತಿಸುತ್ತಾರೆ ಇಂದು ಗ್ರಾಮೀಣ ಕ್ರೀಡೆಗಳು ಮರೆತು ಹೋಗುತ್ತಿವೆ ಇದಕ್ಕೆ ಮರುಜೀವ ಕೊಡಬೇಕಾಗಿದೆ ಇಂದು ಬೆಂಗಳೂರಿನಲ್ಲಿ ಸಕ್ಕರೆ ಕಾಯಿಲೆಯವರು ಜಾಸ್ತಿಯಾಗುತ್ತಿದ್ದಾರೆ ಇವೊತ್ತು ಬೆಳಿಗ್ಗೆ ಚುಕ್ಕೆ

ಗುರ್ತಿನ ಪ್ರಶ್ನೆಯೊಂದರಲ್ಲಿ ಬೆಂಗಳೂರು ನಗರದಲ್ಲಿ 13% ಸಕ್ಕರೆ ಕಾಯಿಲೆಯವರು ಇದ್ದಾರೆ ಎಂದು ಉತ್ತರಿಸಲಾಗಿದೆ ಬಹುಶಃ ಇನ್ನು ಜಾಸ್ತಿ ಇದ್ದಾರೆಂದು ನಾನು ಹೇಳಬಯಸುತ್ತೇನೆ ಇವೊತ್ತು ಚಿಕ್ಕ ಚಿಕ್ಕ ಮಕ್ಕಳಲ್ಲಿ, ಯುವ ಜನರಲ್ಲಿ ಸಕ್ಕರೆ ಕಾಯಿಲೆ ಇರುವುದು ಬಹುಶಃ ಕಂಡುಬರುತ್ತಿದೆ ಇದಕ್ಕೆ ಕಾರಣವೇನೆಂದರೆ ಟೆನ್‌ಶನ್ ಇನ್ನೊಂದು ಕಾರಣ sportsಗೆ ಸಂಬಂಧಪಟ್ಟಂತೆ ಅವಕಾಶಗಳಿಲ್ಲದಿರುವುದು ಬಿ ಡಿ ಎ ಅಧಿಕಾರಿಗಳು ಇದ್ದರೆ ನಾನು ಹೇಳುತ್ತೇನೆ, ಎಲ್ಲ ಕಡೆಗಳಲ್ಲಿಯೂ ಪ್ಲೇ ಗ್ರೌಂಡ್‌ಗಳನ್ನು ಚೆನ್ನಾಗಿ ಇಡಿ ನಾನು ಮೊನ್ನೆ ದಿವಸ ಮಾತನಾಡುವಾಗ ರಾಜಾಜಿನಗರದಲ್ಲಿ ನವರಂಗ್ ಚಿತ್ರಮಂದಿರದ ಪಕ್ಕ ಕೆ ಎಲ್ ಇ ಕಾಲೇಜ್ ಹತ್ತಿರ ಇರುವ ಆಟದ ಮೈದಾನದ ಬಗ್ಗೆ ಉಲ್ಲೇಖ ಮಾಡಿದ್ದೆ ಇದು ಬೆಂಗಳೂರಿನಲ್ಲಿರುವ ಎಲ್ಲರಿಗೂ ಗೊತ್ತು ಈಗ ಇದನ್ನೂ ಕೂಡ ಮಾರಾಟಕ್ಕೆ ಇಟ್ಟಿದ್ದಾರೆಂದರೆ ನೀವು imagine ಮಾಡಿಕೊಳ್ಳಿ Parks and Open space ಗಳನ್ನು ಉಳಿಸುವುದಕ್ಕಾಗಿಯೇ ಬೆಂಗಳೂರಿನಲ್ಲಿ Monitoring Committee ಆಗಬೇಕೆಂದು ನಾನು ಒತ್ತಾಯ ಮಾಡುತ್ತೇನೆ ಇನ್ನು job opportunities ನಮ್ಮ ಯುವ ಜನರಿಗೆ ಕಡಿಮೆ ಇರುವುದರಿಂದಲೆ ದಾರಿ ತಪ್ಪುತ್ತಿದ್ದಾರೆ ನೀವು ಸುವರ್ಣ ಕಾಯಕ ಎನ್ನುವ ಯೋಜನೆಯನ್ನು ಯುವ ಜನರಿಗಾಗಿ ಮಾಡಿದ್ದೀರಿ ನಾನು ಕೂಡ ನನ್ನ ಕ್ಷೇತ್ರದಲ್ಲಿ ಉದ್ಯೋಗ ಮೇಳ ಎನ್ನುವ ಹೊಸ ಕಾರ್ಯಕ್ರಮವನ್ನು ರೂಪಿಸಿದೆ ಅದು ಖಂಡಿತವಾಗಿಯೂ ಒಳ್ಳೆಯ ಕಾರ್ಯಕ್ರಮವಾಗಿತ್ತು ಅದನ್ನು ನೀವು ಏಕೆ ನಿಲ್ಲಿಸಿದಿರಿ? ಎನ್ನು ಬಹಳಷ್ಟು ಟ್ರೈನೀಸ್‌ಗಳಿಗೆ ಸ್ಟೈಫೆಂಡ್ ಕೊಡತಕ್ಕಂಥ ಕೆಲಸ ಆಗುತ್ತಿಲ್ಲ ಬಹಳಷ್ಟು ಅಂಗವಿಕಲರು ಬಂದು Complaint ಮಾಡುತ್ತಿದ್ದರು ದಯವಿಟ್ಟು ಸ್ಟೈಫೆಂಡ್ ಕೊಡುವುದನ್ನು ನಿಲ್ಲಿಸಬೇಡಿ ಬಿಂದೆ ಸಚಿವರಾಗಿದ್ದಂದವರಿಗೂ ನಾನು ಹೇಳಿದ್ದೆ ಇವೊತ್ತು employment exchange ಗಳು outdated concept ಗಳಾಗಿವೆ ಅದಕ್ಕೋಸ್ಕರ ಉದ್ಯೋಗ ಮೇಳಗಳನ್ನು ಮಾಡಿ ಮೆರಿಟ್ ವಿದ್ಯಾರ್ಥಿಗಳನ್ನು ಸೆಲೆಕ್ಟ್ ಮಾಡುವುದು ಆಗಬೇಕು ಇಂದಿನ ಅವಶ್ಯಕತೆಗಳಿಗೆ ಪೂರಕವಾಗಿ ವಿದ್ಯಾರ್ಥಿಗಳಿಗೆ ಸ್ಕಿಲ್ ಡೆವಲಪ್ ಮಾಡತಕ್ಕಂಥದ್ದನ್ನು, ಕಮ್ಯುನಿಕೇಶನ್ ಸ್ಕಿಲ್ ಡೆವಲಪ್ ಮಾಡತಕ್ಕಂದ ಟ್ರೈನಿಂಗ್‌ಗಳನ್ನು ಕೊಡತಕ್ಕಂಥದ್ದು ಆಗಬೇಕು ಇಂದು ಲೇಬರ್ ಡಿಪಾರ್ಟ್‌ಮೆಂಟ್ ಮತ್ತು ಯೂತ್ ಡಿಪಾರ್ಟ್‌ಮೆಂಟ್ ಕೋ–ಆರ್ಡಿನೇಶನ್‌ನಿಂದ ಕೆಲಸ

ಮಾಡತಕ್ಕಂಥದ್ದು ಆಗಬೇಕು ಇವೊತ್ತು ಬಹಳಷ್ಟು ಕಾಲೇಜ್‌ಗಳಲ್ಲಿ ಆಟದ ಮೈದಾನಗಳಿಲ್ಲ ಮೊನ್ನೆ ಯಾವುದೋ ಒಂದು ಕಂಪ್ಲೆಂಟ್ ಬಂತು ಅದನ್ನು ನಾನು ಈ ಸಂದರ್ಭದಲ್ಲಿ ಖುದ್ದಾಗಿ ಹೇಳುತ್ತಿದ್ದೇನೆ ತಮ್ಮ ಡಿಪಾರ್ಟ್‌ಮೆಂಟ್‌ಗಳು ಯಾವ ರೀತಿಯಲ್ಲಿ ಕೆಲಸ ಮಾಡಬೇಕಾಗಿತ್ತೋ ಆ ರೀತಿಯಲ್ಲಿ ಮಾಡುತ್ತಿಲ್ಲ ದಯವಿಟ್ಟು ತಾವು ಪರ್ಮನೆಂಟ್ ತರಬೇತುದಾರರನ್ನು ಹಾಕಬೇಕು ಅವರಿಗೆ ಒಳ್ಳೆಯ ಸ್ಯಾಲರಿಯನ್ನು ಕೊಡಿ ಒಳ್ಳೆಯ ಕ್ರೀಡಾಪಟುಗಳು ಬರಬೇಕೆಂದರೆ ಈ ಕೆಲಸವಾಗಬೇಕು ಇನ್ನು ನಮ್ಮ ಬೆಂಗಳೂರು ನಗರದ ಸಿ ಡಿ ಪಿ ಬಗ್ಗೆ ಈಗಾಗಲೇ ಕೆಲವರು ಮಾತನಾಡಿದ್ದಾರೆ ಬಹಳ ಆಶ್ಚರ್ಯಕರವಾದ ಸಂಗತಿಯೆಂದರೆ ಈ Open Spaceಗಳು ಹೇಗೆ ಕಡಿಮೆಯಾಗುತ್ತಿದೆ ಮತ್ತು ಎಷ್ಟು ಕಡಿಮೆಯಾಗುತ್ತದೆ ಎಂಬ ಬಗ್ಗೆ ನಾನು ರಿಸರ್ಚ್ ಮಾಡುತ್ತಿರುವ ಸ್ಟೂಡೆಂಟ್ಸ್‌ಗಳ ಜೊತೆ ಕುಳಿತು ಮಾತನಾಡಿದ್ದೇನೆ ಅವರಿಂದ ಬಂದ ಮಾಹಿತಿಗಳನ್ನು ಈ ಸದನದ ಮುಂದೆ ಹೇಳಬಯಸುತ್ತೇನೆ 1895 ರಲ್ಲಿ ಬೆಂಗಳೂರಿನಲ್ಲಿ ಜನಸಂಖ್ಯೆ 1 ಲಕ್ಷ 85 ಸಾವಿರ ಇತ್ತು ಆಗ ಬೆಂಗಳೂರಿನ ಟೋಟಲ್ ಏರಿಯಾ 24 31 ಸ್ಕ್ವೇರ್ ಕಿ ಮೀ ಆಗಿದ್ದು ಟೋಟಲ್ ಓಪನ್ ಸ್ಪೇಸ್ 9 72 ಇತ್ತು 1971 ರಲ್ಲಿ 18 64 ಲಕ್ಷ ಪಾಪ್ಯುಲೇಶನ್ ಇತ್ತು, ಟೋಟಲ್ ಏರಿಯಾ 23 25% ಇತ್ತು ಆದರೆ 2001ರಲ್ಲಿ 34 5 ಇತ್ತು ಆದರೆ 1995ನಲ್ಲಿ ಮಾಡಿದಂಥ ಸಿ ಡಿ ಪಿ ಯಲ್ಲಿ 14 15 ಅಚೀವ್ ಮಾಡುತ್ತೇವೆಂದು ಹೇಳಲಾಗಿತ್ತು ಆದರೆ ಅಚೀವ್ ಮಾಡಿರುವುದು ಕೇವಲ 7 ಈ ಓಪನ್ ಸ್ಪೇಸ್‌ಗಳನ್ನು ಜಾಸ್ತಿ ಮಾಡುವುದಕ್ಕೆ ಸಾಧ್ಯವೇ ಇಲ್ಲ ಈಗ ಮೊನ್ನೆ ಸಿ ಡಿ ಪಿ–2015 ಕ್ಕೆ ಏನು ಅಪ್ರೂವಲ್ ಆಯಿತೋ ಅದರ ಪ್ರಕಾರ ಎಕ್ಸಿಸ್ಟಿಂಗ್‌ಮಾಸ್ ರಿವೈಸ್‌ಪ್ಲಾನ್ 7 81 ಅಚೀವ್ ಮಾಡುತ್ತೇವೆಂದು ಹೇಳುತ್ತೀರಿ ಆದರೆ ಓಪನ್ ಸ್ಪೇಸ್ ಆಕ್ಟ್ ಇರುವುದು 10 ಪರ್ಸೆಂಟ್ ಇರಬೇಕು ಎಂದಿದೆ ಇವೊತ್ತು ಗ್ಲೋಬಲ್ ವಾರ್ಮಿಂಗ್ ಏಕೆ ಆಗುತ್ತದೆ? ಭೂಮಿಯ ಶಾಖ ಏಕೆ ಹೆಚ್ಚಾಗುತ್ತಿದೆ? ಇವೊತ್ತು ಬೆಂಗಳೂರು ನಗರದಲ್ಲಿ ಗ್ರೀನ್‌ಬೆಲ್ಟ್ ಏರಿಯಾ ಕಡಿಮೆ ಮಾಡಲಾಗುತ್ತಿದೆ ನಾನು ಒಂದು ಉಲ್ಲೇಖ ಕೊಡುತ್ತೇನೆ, ನನ್ನ ಕ್ಷೇತ್ರಕ್ಕೆ ಬಂದು ನೋಡಿ ವೆಸ್ಟ್ ಆಫ್ ಕಾರ್ಡ್‌ರೋಡ್‌ನಲ್ಲಿ ಕೆಂಗಲ್ ಗುಡ್ಡ ಎನ್ನುವುದು ಇತ್ತು ಮೊನ್ನೆ ಸಿ ಡಿ ಪಿ ಪ್ಲಾನ್ ತೆಗೆದು ನೋಡುತ್ತೇನೆ, ಹಳೆಯದರಲ್ಲಿ ಪಾರ್ಕ್ ಎನ್ನುವುದೆಲ್ಲಾ Residental lay out ಎಂದು ತೋರಿಸಿದ್ದಾರೆ ಪಕ್ಕದಲ್ಲಿಯೇ ಹೈಟೆನ್ಷನ್

ವೈರ್ ಹೋಗಿರತಕ್ಕಂಥ ಪ್ರದೇಶ ಮತ್ತು ಓಪನ್ ಸ್ಪೇಸ್ ಇತ್ತು ಈ ಜಾಗವನ್ನು residential ಎಂದು ತೋರಿಸಿದ್ದಾರೆ ಇವರೇನು ಇದನ್ನು ಮಾಡುವಾಗ ಕಣ್ಣಿಗೆ ಬಟ್ಟೆ ಕಟ್ಟಿಕೊಂಡಿದ್ದರೆ? ಈ ಸಿ ಡಿ ಪಿ ಮಾಡುವ ಮುಂಚೆ ಕ್ಷೇತ್ರವಾರು ಡಿಸ್‌ಕಸ್ ಮಾಡಬೇಕೆಂದು ಮಾನ್ಯ ಸಚಿವರಿಗೆ ನಾನು ಈ ಹಿಂದೆಯೇ ಹೇಳಿದ್ದೆ ಆದರೆ ಆ ರೀತಿ ಮಾಡಲಿಲ್ಲ ನೀವು ಮುಂದೆ ಓಪನ್ ಸ್ಪೇಸ್ 7 81 ಅಚೀವ್ ಮಾಡುತ್ತೇವೆಂದು ಹೇಳಿದ್ದೀರಿ ಇದು ಪ್ರಾಕ್ಟಿಕಲ್ ಆಗಿ ಆಗುತ್ತದೆಯೇ ನೀವು ಭೂಮಿಯನ್ನು ಏನು ಮಡುವುದಕ್ಕೆ ಹೊರಟಿದ್ದೀರಿ? ಬೆಂಗಳೂರು ನಗರವನ್ನು ನಾವು ಏನು ಮಾಡುವುದಕ್ಕೆ ಹೊರಟಿದ್ದೀವಿ ಎಂಬ ಬಗ್ಗೆ ನಾವು ಯೋಚನೆ ಮಾಡಬೇಕಾಗುತ್ತದೆ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ ಇನ್ನು ಇ–ಆಡಳಿತದ ಬಗ್ಗೆ ನಾನು ಹೇಳಬಯಸುವುದೇನೆಂದರೆ ಇದೊಂದು ವರ ಆದರೆ ಇಲ್ಲಿ ಅದು ಶಾಪವಾಗಿದೆ ಇವೊತ್ತು e-Governance ಅನ್ನು ಆಧುನಿಕ ಸರ್ಕಾರದಲ್ಲಿ ಅಳವಡಿಸಬೇಕೆಂದು ವಾರ್ಷಿಕ ವರದಿಯಲ್ಲಿ ಬಹಳ ಚೆನ್ನಾಗಿ ಹೇಳಿದ್ದಾರೆ ಇವೊತ್ತು ವಿಶ್ವಾದ್ಯಂತವಿರುವ ಉತ್ಕೃಷ್ಟ ಇ–ಆಡಳಿತ ಅಭ್ಯಾಸದ ಸಂಗತಿಗಳನ್ನು ಆಧುನಿಕ ಸರ್ಕಾರಕ್ಕೆ ಅಳವಡಿಸಬೇಕು e-Governance ಅನ್ನು ಯಾವ ಯಾವ ಇಲಾಖೆಯಲ್ಲಿ ಅಳವಡಿಸಿದ್ದೀರಿ? ನನಗೆ ಆಶ್ಚರ್ಯವಾಯಿತು, ನಮ್ಮ ವಿಧಾನ ಸೌಧದಲ್ಲಿಯೇ ಕೆಲವು ಕಡೆ ಕಂಪ್ಯೂಟರ್‌ನಲ್ಲಿ ಗೇಮ್ಸ್ ಆಡುತ್ತಿರುತ್ತಾರೆ ಇನ್ನೂ ಕೆಲವರು ಪರ್ಸನಲ್ ಕೆಲಸಗಳನ್ನು ಕಂಪ್ಯೂಟರ್‌ನಲ್ಲಿ ಮಾಡಿಕೊಳ್ಳುತ್ತಿರುತ್ತಾರೆ ಕೆಲವು ಸಾರಿ ಫ್ರೆಂಡ್ಸ್‌ಗಳ ಜೊತೆ ಕರೆಸ್ಪಾಂಡೆನ್ಸ್ ಮಾಡುತ್ತಿರುತ್ತಾರೆ ಇದಲ್ಲ e-Governance ನಾನು ಸರ್ಕಾರಕ್ಕೆ ಒಂದು ಸಲಹೆಯನ್ನು ಕೊಡಬಯಸುತ್ತೇನೆ, ದಯವಿಟ್ಟು ಅದನ್ನು ಪರಿಗಣಿಸಿ ಸಲಹೆಯನ್ನು ತೆಗೆದುಕೊಳ್ಳಬೇಕು ಹಿಂದೆ ರಾಜೀವ್ ಗಾಂಧಿಯವರು ಇದ್ದಾಗ ಹೇಗೆ ಎಸ್ ಟಿ ಡಿ ಬೂತ್‌ಗಳನ್ನು ಮಾಡಿದರೋ ಅದೇ ರೀತಿಯಲ್ಲಿ ಈ–ಕಿಯಾಸ್ಕ್‌ಗಳನ್ನು ಮಾಡಿ ಪ್ರತಿಯೊಂದು ಹಳ್ಳಿಹಳ್ಳಿಗೂ ಇದನ್ನು ಕೊಡಿ Old age pension ಗೆ application ಹಾಕಿದ್ದು ಯಾವಾಗ? ಅದರ ಬಗ್ಗೆ ಏನಾಯಿತು ಎಂದು ನೋಡುವುದಕ್ಕೆ -ಇರುವಂತಹ ಸ್ಥಳದಲ್ಲಿ ಎರಡು ರೂಪಾಯಿ ಕೊಟ್ಟು ನೋಡಿಕೊಳ್ಳುವ ಹಾಗೆ ಇರಲಿ ಆದರೆ 20 ರೂಪಾಯಿ Bus charge ಕೊಟ್ಟು ಬಿಟ್ಟು time waste ಮಾಡಿಕೊಳ್ಳುವ ರೀತಿಯಲ್ಲಿ ಬೇಡ ಆ ರೀತಿ

ಒಂದು employment create ಆಗುತ್ತದೆ ಆ ರೀತಿಯಾದ concept create ಮಾಡಿ

ಶ್ರೀ ವಾಟಾಳ್ ನಾಗರಾಜ್ ಮಾನ್ಯ ಶಂಕರಮೂರ್ತಿಯವರು ಇವತ್ತು ನಮ್ಮ ಸದನದಲ್ಲಿ ಬಹಳ ಹೊತ್ತು ಕುಳಿತ್ತಿದ್ದಾರೆ, ಬಹಳ ಸಂತೋಷ ಅವರು ಇಲ್ಲಿಗೆ ಬರುವುದೇ ಇಲ್ಲ ಅವರು ಬರುವುದು ಬಹಳ ಅಪರೂಪ ನೀವು ಆ ಸದನದ ನಾಯಕರು ಇಲ್ಲಿ ಇಷ್ಟೊತ್ತು ಕುಳಿತಿರುವಂತಹ ವಿಸೇಷತೆ ಏನು ಎಂದು ನಮಗೆ ಮತ್ತು ಖರ್ಗೆಯವರಿಗೆ ಆಶ್ಚರ್ಯವಾಗುತ್ತಿದೆ ನಿಜಕ್ಕೂ ಸಂತೋಷಪಡುವಂತಾದ್ದು ಸದನದಲ್ಲಿ ನೀವು ಯಾವತ್ತು ಇಷ್ಟೊತ್ತು ಕುಳಿತಿರಲಿಲ್ಲ ಇವತ್ತು ಏಕೆ ಇಷ್ಟೊತ್ತು ಕುಳಿತ್ತಿದ್ದೀರಿ? ಆ ಸದನವನ್ನು ಏಕೆ ಬಿಟ್ಟು ಬಂದಿದ್ದೀರಿ? ಕಾರಣ ಏನೆಂದು ನಮಗೆ ಗೊತ್ತಾಗುತ್ತಿಲ್ಲ ನಿಜಕ್ಕೂ ಕೂಡ ನಮಗೆ ಸಂತೋಷವಾಗುತ್ತದೆ ಅದು ಏಕೆ ಎಂದು ನನಗೆ ಅರ್ಥವಾಗುತ್ತಿಲ್ಲ

ಶ್ರೀ ಮಲ್ಲಿಕಾರ್ಜುನ ಖರ್ಗೆ ಮಾನ್ಯ ಶಂಕರಮೂರ್ತಿಯವರೆ, ತಾವು ಸುಂದರ ಸಭಾ ಮಂಟಪ ಬಿಟ್ಟು ಈ ಸಭಾ ಗೃಹಕ್ಕೆ ಬಂದಿರುವಂತಹ ಕಾರಣವೇನು ಎಂದು ಕೇಳುತ್ತಿದ್ದೇನೆ?

ಶ್ರೀ ನೆ ಲ ನರೇಂದ್ರ ಬಾಬು ನಾನು ಸರ್ಕಾರವನ್ನು ಮತ್ತು ಅಲ್ಲಿ ಕುಳಿತಿರುವಂತಹ ನಮ್ಮ ರಾಜ್ಯದ ಉನ್ನತಾಧಿಕಾರಿಗಳಿಗೆ ವಿನಂತಿ ಮಾಡಿಕೊಳ್ಳುತ್ತೇನೆ ದಯವಿಟ್ಟು ಇ-ಆಡಳಿತ ಆಗುವಂತಹ ದಿಕ್ಕಿನಲ್ಲಿ ತಾವು ಕೆಲಸ ಮಾಡಬೇಕು ಜನಸಾಮಾನ್ಯರಿಗೆ ಎಟಕುವಂತಹ ದಿಕ್ಕಿನಲ್ಲಿ ತಾವು ಕೆಲಸವನ್ನು ಮಾಡಬೇಕು ಬಹಳಷ್ಟು Computer Purchase ಮಾಡುವಾಗ 10 GB ಮತ್ತು 20 GB maximum ಸಾಕು ದೊಡ್ಡ ದೊಡ್ಡ 80 GB capacity ಇರುವಂತಹ 20 ಸಾವಿರ ರೂಪಾಯಿಯ Computer ಗೆ 40 ಸಾವಿರ ರೂಪಾಯಿ ಕೊಡುವಂತಹ ಅವಶ್ಯಕತೆ ಇಲ್ಲ police website ಗೆ ಹೋದಾಗ ಬಹಳ ಅಶ್ಲೀಲವಾದ ಚಿತ್ರಗಳು ಬರುತ್ತಿದ್ದವು ಅದು ಪತ್ರಿಕೆಗಳಲ್ಲಿ ಕೂಡ ಮೂಡಿಬಂತು ದಯವಿಟ್ಟು ನೀವು update ಮಾಡಿಕೊಳ್ಳಿ ನಾನು ನನ್ನ ಕ್ಷೇತ್ರದಲ್ಲಿ ಆಡಳಿತ ವ್ಯವಸ್ಥೆಯಲ್ಲಿ e-Governance ತರುವಂತಹ ಪ್ರಯತ್ನವನ್ನು ಮಾಡಿದ್ದೇನೆ ಯಾವುದಾದರೂ ಇಲಾಖೆಗಳಲ್ಲಿ ಕೂಡ mail ಕಳುಹಿಸಿ reply ತೆಗೆದುಕೊಳ್ಳೋಣವೆಂದರೆ ಯಾವುದೂ ಕೂಡ update

ಆಗಿಲ್ಲ OLMS ಎಂದರೆ On Line Monitoring System ನಲ್ಲಿ update ಮಾಡಿಕೊಳ್ಳಿ ಇದು ಮಾಡಿದರೆ ಜನಸಾಮಾನ್ಯರಿಗೆ ಅನುಕೂಲವಾಗುತ್ತದೆ Websiteನಲ್ಲಿ ಇನ್ನೂ ಹಳೆಯ ಸಚಿವರ ಹೆಸರುಗಳೇ ಇವೆ ಅದನ್ನೆಲ್ಲಾ update ಮಾಡಿಕೊಳ್ಳುವುದು ಸೂಕ್ತ ನಾನು ಪರಿಸರ ಮತ್ತು ಜೀವಿಶಾಸ್ತ್ರಕ್ಕೆ ಸಂಬಂಧಪಟ್ಟ ಹಾಗ ಒಂದು ವಿಚಾರವನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ ನಾನು ಬನ್ನೇರುಘಟ್ಟದಲ್ಲಿ ಆಕಸ್ಮಿಕವಾಗಿ ಒಂದು ಮದುವೆಗೆ ಹೋಗಿದ್ದೆನು ಕಾಡಿನ ಪಕ್ಕದಲ್ಲಿ ಮನೆಗಳು ಇನ್ನು ಕಾಡು ಪ್ರಾಣಿಗಳು ಊರಿಗೆ ಬರದೇ ಇರುತ್ತವೆಯೇ? ಕೋತಿಗಳು ಬೆಂಗಳೂರು ನಗರಕ್ಕೆ ಬರುತ್ತಿವೆ ಎಂದರೆ, ನಾವು ಪ್ರಾಣಿಗಳು ವಾಸ ಮಾಡುವುದಕ್ಕೆ ಎಷ್ಟು ಜಾಗವನ್ನು ಇಡಬೇಕೋ ಅಷ್ಟನ್ನು ಇಡದೇ, ಅವುಗಳಿಗೆ ಅವಶ್ಯಕತೆಗೆ ಅನುಗುಣವಾಗಿ ಜಾಗವನ್ನು ಬಿಡದೇ, ಇವತ್ತು ಮನುಷ್ಯನಿಗೆ ಎಷ್ಟು ಹಕ್ಕಿದೆಯೋ ಹಾಗೆ ಕ್ರಿಮಿಗಳಿಗೆ, ಪಶು, ಪಕ್ಷಿಗಳಿಗೆ, ಕಾಡು ಪ್ರಾಣಿಗಳಿಗೆ, ಜಲ ಜಂತುಗಳಿಗೆ, ಭೂಮಿ ಹಾಗೂ ನೀರಿನಲ್ಲಿರುವಂತಹ ಎಲ್ಲಾದಕ್ಕೂ ಕೂಡ ಅಷ್ಟೇ ಹಕ್ಕನ್ನು ಕೊಡಬೇಕಾಗಿ ರುವುದು ಬಹಳ ಮುಖ್ಯ ಇವತ್ತು Pollution Control Board ಅಂತೂ Collection Board ಆಗಿಬಿಟ್ಟಿದೆ ಇದನ್ನು ನಾನು ಬಹಳ ನೊಂದು ಹೇಳುತ್ತೇನೆ ಯಾರಿಗೆ Pollution ಬಗ್ಗೆ ಚಿಂತನೆ ಇದೆ? ಎಷ್ಟು action ತೆಗೆದುಕೊಂಡಿದ್ದಾರೆ? ಏನಾದರೂ ದೂರು ಕೊಟ್ಟರೆ ಅದನ್ನು ವ್ಯಾಪಾರ ಮಾಡಿಕೊಳ್ಳುತ್ತಾರೆ ಇದರ ಬಗ್ಗೆ ದಯವಿಟ್ಟು pollution Control Board ಗೆ ಸಂಬಂಧಪಟ್ಟವರು ಹೇಳಬೇಕು ಮೊನ್ನೆ ನಮಗೆ ಹಾಲ್ ಗೋರೆಯವರು ಅಮೆರಿಕದ Vice President ರವರ ಬಗ್ಗೆ ಮಾಡಿರುವಂತಹ documentary film ಅನ್ನು ಮಾನ್ಯ ವಿಶ್ವೇಶ್ವರ ಕಾಗೇರಿಯವರು ತೋರಿಸಿದರು ನಾನು ಇದನ್ನು ಏಕೆ ಹೇಳುತ್ತೇನೆಂದರೆ ಭೂಮಿಯ temperature ಜಾಸ್ತಿಯಾಗಿ ಸಮುದ್ರದಲ್ಲಿ ಉಕ್ಕಿದಾಗ, ಆವಿಯಾಗಿ ಅದು ಮಳೆ ಬರುತ್ತದೆ ಆಗ ನಾವು ಜಾಸ್ತಿ ಮಳೆಯಾಯಿತು, ಒಳ್ಳೆಯದಾಯಿತು ಎಂದು ಹೇಳುತ್ತೇವೆ ಖಂಡಿತವಾಗಿ ಅದು ಒಳ್ಳೆಯದಲ್ಲ ಅತಿವೃಷ್ಟಿ ಒಳ್ಳೆಯದಲ್ಲ ಹಾಗೂ ಅನಾವೃಷ್ಟಿ ಕೂಡ ಒಳ್ಳೆಯದಲ್ಲ ಇವೆಲ್ಲವೂ equilibrium ಆಗಿ ಬರಬೇಕು ಇದು ಆಗುತ್ತಿಲ್ಲ ನಾನು ಒಂದು ವಿಚಾರವನ್ನು ಹೇಳುವುದಕ್ಕೆ ಬಯಸುತ್ತೇನೆ ಶಿಕ್ಷಣ ಇಲಾಖೆಯಲ್ಲಿ ಬೈಸಿಕಲ್

ಕೊಡುವಾಗ ನೋಡಿದೆ ಅವುಗಳಿಗೆ 2,000 ಚಿಲ್ಲರೆ ರೂಪಾಯಿಗೆ ತೆಗೆದುಕೊಂಡು ಕೊಟ್ಟಿದ್ದಾರೆ ಇದರಲ್ಲಿ ಯಾರಿಗಾದರೂ common sense ಎನ್ನುವುದು ಇದ್ದರೆ, ತಾವು ದಯವಿಟ್ಟು ಸದನದಲ್ಲಿ ಅನುಮತಿಯನ್ನು ಕೊಟ್ಟರೆ ಇಲ್ಲಿಗೆ ತೆಗೆದುಕೊಂಡು ಬಂದು ತೋರಿಸುತ್ತೇನೆ ಅಷ್ಟು ಕೆಟ್ಟ ದರ್ಜೆಯ ಸೈಕಲ್‌ಗೆ ಅಷ್ಟೊಂದು ದುಡ್ಡು ಕೊಡುವ ಅವಶ್ಯಕತೆ ಇತ್ತೇ? ನೀವು ಕೊಟ್ಟಿರುವಂತಹ amountಗೆ ಇನ್ನೂ ಒಳ್ಳೆಯ ಸೈಕಲ್ ಬರುತ್ತದೆ ಇನ್ನು ಎಷ್ಟೋ ಶಾಲೆಗಳಲ್ಲಿ toilet ಗಳು ಇಲ್ಲ ಶಾಸಕರಾಗಿ ನಾವು ಎಷ್ಟೋ ಕಡೆ ನಮ್ಮ ನಿಧಿಯಿಂದ ಕೊಟ್ಟು private out source ನಿಂದ ಮಾಡಿಸುತ್ತಿದ್ದೇವೆ Toilet facility ಕೊಡುವಂತಹ ಒಂದು ವ್ಯವಸ್ಥೆಯನ್ನು ಮಾಡಬೇಕು ನಾನು ಇದೇ ಸದನದಲ್ಲಿ ಮಾನ್ಯ ಶಿಕ್ಷಣ ಸಚಿವರಾದ ಹೊರಟ್ಟಿಯವರಿಗೆ ಒಂದು ವರ್ಷದ ಹಿಂದೆ ನೀವು print ಮಾಡಿ ಕೊಡುತ್ತಿರುವಂತಹ ಪುಸ್ತಕ ಈ standard ಇದೆ, ಇಂತಾದ್ದಕ್ಕೆ ನೀವು ದುಡ್ಡು ಕೊಡುತ್ತಿದ್ದೀರಿ ಎಂದು ಒಂದು ಪುಸ್ತಕವನ್ನು ಕೊಟ್ಟೆನು ಇದುವರೆಗೂ reply ಬರಲಿಲ್ಲ, ಅದರ ಬಗ್ಗೆ ವರದಿ ಕೂಡ ಬರಲಿಲ್ಲ ನಾನು Police Department ಬಗ್ಗೆ ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ ನಮ್ಮೆಲ್ಲರನ್ನು ರಕ್ಷಣೆ ಮಾಡುವುದಕ್ಕೆ Police Department ಇದೆ ನಾನು ಒಬ್ಬ ಜನಪ್ರತಿನಿಧಿಯಾಗಿ 18 ವರ್ಷದಿಂದ ಬೆಂಗಳೂರಿನಲ್ಲಿ ಕೆಲಸವನ್ನು ಮಾಡುತ್ತಿದ್ದೇನೆ 1975ನೇ ಇಸವಿಯಿಂದ ಬೆಂಗಳೂರಿನಲ್ಲಿ ಸಾರ್ವಜನಿಕ ಕ್ಷೇತ್ರದಲ್ಲಿ ಕೆಲಸವನ್ನು ಮಾಡುತ್ತಿದ್ದೇನೆ ಇವತ್ತು ಬೆಂಗಳೂರು ನಗರದಲ್ಲಿ Police Department ಇರುವಂತಹ ಎಲ್ಲಾ ಅಧಿಕಾರಿಗಳ ಬಗ್ಗೆ ಹೇಳುತ್ತಿಲ್ಲ ಅವರಿಗೆ phone ಮಾಡಿದರೆ reply ಮಾಡುವುದಿಲ್ಲ ಒಂದು ಶಿಷ್ಟಾಚಾರ, ಸೌಜನ್ಯವಿರುವುದಿಲ್ಲ ಯಾರೂ phone ಮಾಡಿದರೂ ಕೂಡ ಅವರು ಎಲ್ಲೆಲ್ಲಿ ಇರುತ್ತಾರೆ ಎಂದರೆ Club ಗಳಲ್ಲಿ Collection ಮಾಡುತ್ತಿರುತ್ತಾರೆ ಎಲ್ಲೆಲ್ಲಿ ದಂಧೆ ನಡೆಯುತ್ತದೆ, ಅಲ್ಲಿಗೆ Collection ಗೋಸ್ಕರ ಬೆಂಗಳೂರು ನಗರಕ್ಕೆ ಬರುತ್ತಾರೆ ಎಂದು ನಾನು ಸಂಶಯ ಪಡುತ್ತೇನೆ ನಾನು ಮಾನ್ಯ ಗೃಹ ಸಚಿವರಿಗೂ ಕೂಡ ಗಮನಕ್ಕೆ ತಂದಿದ್ದೇನೆ ಅವರು ಬರೀ land ಮಾಫಿಯಾ ಜೊತೆ ಹಾಗೂ dispute ಗಳ ಬಗ್ಗೆ ಶಾಮೀಲಾಗಿರುವುದು ಇದೆ ದಯವಿಟ್ಟು ಕಾನೂನು ರಕ್ಷಣೆ

ಮಾಡುವಂತಹ ಅಧಿಕಾರಿಗಳನ್ನು ಹಾಕಬೇಕೆಂದು ಕೇಳಿಕೊಳ್ಳುತ್ತಾ, ಈ ಸಂದರ್ಭದಲ್ಲಿ ನಾನು ಒಂದು CAG report ಓದುತ್ತಿದ್ದೆನು ಪೊಲೀಸಿನವರಿಗೆ ಕೊಡುವುದಕ್ಕೆ ಲಾರಿ ಕೊಂಡುಕೊಂಡಿದ್ದಾರೆ ನಾವೆಲ್ಲಾ ಇರಬೇಕಾದರೆ ಲಾರಿ ಎಂತಾದ್ದು ಇತ್ತು? ಬೆತ್ತದ ಲಾರಿ ಇರುತ್ತಿತ್ತು ಅದಕ್ಕೆ ಬೆಲೆ 17 ರೂಪಾಯಿ ಇತ್ತು ನಮ್ಮಲ್ಲಿ ಬುದ್ಧಿವಂತರು ಏನು ಮಾಡಿದ್ದಾರೆಂದರೆ ಹಿಂದೆ polycarbonate ಲಾರಿಗಳನ್ನು ಅಧಿಕ ವೆಚ್ಚ ಕೊಟ್ಟು ಖರೀದಿ ಮಾಡಿದ್ದಾರೆ 15 ರೂಪಾಯಿಯ ಲಾರಿಯನ್ನು 157ರಿಂದ 203 ರೂಪಾಯಿ ಕೊಟ್ಟು ಖರೀದಿ ಮಾಡಿದ್ದಾರೆ ಎಂದರೆ ಇವರ ವಿವೇಚನೆ ಎಷ್ಟಿದೆ ಎನ್ನುವುದನ್ನು ಲೆಕ್ಕ ಹಾಕಿ ಹಿಂದೆ ನೀವು ನೋಡಿರಬಹುದು ಲಾರಿ ಬರುತ್ತಿತ್ತು ಕಡಿಮೆ ಬೆಲೆಯ ಬೆತ್ತದ ಲಾರಿಯ ಜಾಗದಲ್ಲಿ ಅತೀ ಹೆಚ್ಚು ಬೆಲೆಯ polycarbonate ಲಾರಿಗಳ ವಿವೇಚನಾರಹಿತ ಖರೀದಿಯನ್ನು ತಪ್ಪಿಸಬಹುದಾಗಿತ್ತು ಎಂದು ಭಾರತ ಲೆಕ್ಕ ನಿಯಂತ್ರಕರ ಮತ್ತು ಲೆಕ್ಕ ಪರಿಶೋಧಕರ ವರದಿಯಲ್ಲಿ ಕೊಟ್ಟಿದೆ ನಮ್ಮವರು ಲಾರಿನಲ್ಲೂ ಬಿಡುವುದಿಲ್ಲ ಅದರಲ್ಲೂ commission ಬೇಕು ಬೆಂಗಳೂರು ನಗರದಲ್ಲಿ ಇವತ್ತು ಜನವಿರೋಧವಾಗಿ ಮತ್ತು ಕಾನೂನು ಬಾಹಿರವಾಗಿ ಏಕೆ ಕೊಲೆಯಾಗುತ್ತಿದೆ? ರೌಡಿಗಳ ದಂಧೆ ಏಕೆ ಜಾಸ್ತಿಯಾಗುತ್ತಿದೆ, land ಮಾಫಿಯಾಗಳು ಪಟ್ಟಭದ್ರ ಹಿತಾಸಕ್ತಿಗಳು ಇವತ್ತು ಎದ್ದು ಕುಣಿಯುತ್ತಿವೆ ಎಂದರೆ ಇಂತಹ ಪೊಲೀಸ್ ಅಧಿಕಾರಿಗಳಿಂದ ಇವತ್ತು Housing ಸಚಿವರು ಇಲ್ಲ ನಾನು ಎರಡು ವರ್ಷಗಳಿಂದ ಗುಂಡೂರಾವ್ slum ಬಿದ್ದು ಹೋಗುತ್ತಿದೆ, ದಯವಿಟ್ಟು ಬೇಗ ಕಟ್ಟಿಸಿ ಎಂದು ಹೇಳುತ್ತಿದ್ದೇನೆ ನಾನು ಮೊನ್ನೆ ಸಚಿವರನ್ನು ಕೇಳಿದೆ, ಅದಕ್ಕೆ ಅವರು ಏನು ಮಾಡುವುದು, ಅದಕ್ಕೆ tender ಕರೆದರೆ ಯಾರೂ ಬರುವುದಿಲ್ಲವೆಂದು ಹೇಳಿದರು ಇದರ ಬಗ್ಗೆ ಎಷ್ಟು ಜನರಿಗೆ ಏಟು ಬಿತ್ತು ಎಂದು ಪೇಪರ್‌ನಲ್ಲಿ ವರದಿಯಾಗಿತ್ತು ವಸತಿ programme ಬಗ್ಗೆ ಬೆಂಗಳೂರು ನಗರದ ನಾನು ಅಂಕಿ ಅಂಶಗಳನ್ನು ತೆಗೆದುಕೊಂಡು ನೋಡಿದರೆ ನನ್ನ constituency ಮಟ್ಟಿಗೆ zero progress ಬೇರೆ constituency ಮಟ್ಟಿಗೆ ಏನಿರಬಹುದು? ಜನಗಳಿಗೆ ನಾನು ಏನು ಉತ್ತರ ಕೊಡಲಿ? ರೋಟಿ, ಕಪಡ ಔರ್ ಮಕಾನ್ ಎಂದು ಊಟ, ಬಟ್ಟೆ ಮತ್ತು ತಲೆ ಮೇಲೆ ಸೂರು ಎಂದು ಹೇಳುತ್ತೇವೆ What is the progress?

Ultimately, ನಾವು 224 ಜನ ಜನಗಳ ಮುಂದೆ ಮತ್ತೆ ಅಗ್ನಿ ಪರೀಕ್ಷೆಗೆ ಹೋಗಬೇಕಲ್ಲ, ಆಗ ಏನು ಉತ್ತರ ಕೊಡಬೇಕು? ನಾವೆಲ್ಲ ಅಲ್ಲಿ ಕುಳಿತುಕೊಳ್ಳುವುದಕ್ಕಾಗುವುದಿಲ್ಲ, ಸಂಬಂಧಪಟ್ಟ ಸಚಿವರು ಮಾಡಿ ತೋರಿಸಿ Take the Confidence ರಾಜಕೀಯ ಬಿಟ್ಟು ಬೇರೆಯದಕ್ಕೆ ಹೆಚ್ಚು ಒತ್ತು ಕೊಟ್ಟು ಕೆಲಸವನ್ನು ಮಾಡಿ ಇವತ್ತು ಬೆಂಗಳೂರು ನಗರದಲ್ಲಿ ಶ್ರೀಮಂತರಿಗೆ ಮನೆ ಇದೆ ಒಂದು ಕೋಟಿ, 50 ಲಕ್ಷ, 70 ಲಕ್ಷ ರೂಪಾಯಿಗೆ flat ಸಿಗುತ್ತವೆ ಆದರೆ ಬಡವರಿಗೆ slum ಗಳಲ್ಲಿ ಒಂದು ಸಾವಿರ ರೂಪಾಯಿಗೆ ಒಂದು ಮನೆ ಸಿಗುವುದಿಲ್ಲ ಗೊತ್ತೇ? ಬಡವರು ಹೇಗೆ ಬದುಕುವುದಕ್ಕೆ ಸಾಧ್ಯ? ದಯವಿಟ್ಟು ನಾನು ಒಂದು ವಿನಂತಿಯನ್ನು ಮಾಡುತ್ತೇನೆ, ತಾವು housing policy ಯನ್ನು ತೆಗೆದುಕೊಂಡು ಬನ್ನಿ ಏನೇ ಮನೆಗಳನ್ನು build ಮಾಡಲಿ Government ನಲ್ಲಿ ಹೇಗಿದೆಯೋ ಮಾನದಂಡ ಅದೇ ರೀತಿ private ನವರು ಮಾಡಿದರೂ ಸಹ public ಗೆ 50% Below Poverty Line ಗೆ reserve ಮಾಡಿ Flat ಗಳನ್ನು ಕಟ್ಟುತ್ತಾರ, ಅಲ್ಲಿ ಕೆಲಸ ಮಾಡುವರು ಸುತ್ತಮುತ್ತ 20 ಕಿ.ಮೀ ದೂರದಿಂದ ಬರಬೇಕು Traffic impact ಏನಾಗುತ್ತದೆ? ನಾನು Child labour ಬಗ್ಗೆ ಬಹಳ ಮಾತನಾಡ ಬೇಕೆಂದು ಇದ್ದೆನು ಸಮಯ ಆಗಲಿಲ್ಲ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವಿಚಾರದಲ್ಲಿ ಒಂದು ವಿನಂತಿ ಮಾಡುತ್ತೇನೆ ಅಲ್ಲಿ ಏನೂ ಮಾಡುವುದು ಬೇಡ Delhi ಯಿಂದ Bangalore ಗೆ ಬರುವಂತಹ Aeroplaneನಲ್ಲಿ ಕನ್ನಡ Paper ಇಡಿ ಸ್ವಾಮಿ ದೆಹಲಿಯಲ್ಲಿ ನಮ್ಮ ಕರ್ನಾಟಕ ಭವನದಲ್ಲಿ ಸಾಯಂಕಾಲದವರೆಗೂ ಕನ್ನಡ paper ಸಿಗುವುದಿಲ್ಲ ಇದು ಎಷ್ಟು ಜನ ಸಚಿವರಿಗೆ ಹಾಗೂ ಶಾಸಕರಿಗೆ ಅನುಭವವಾಗಿದೆ? ನಾನು ಹೋದಾಗೆಲ್ಲ ಬೆಳಗಿನ flight ನಲ್ಲಿ ಕನ್ನಡ ಪೇಪರ್ ತರಿಸಿಕೊಳ್ಳಿ ಎಂದು ವಾದ ಮಾಡುತ್ತಿರುತ್ತೇನೆ ಇಲ್ಲಿಂದ ಅಲ್ಲಿಗೆ ನಮ್ಮ ಕರ್ನಾಟಕ ಭವನಕ್ಕೆ ಕನ್ನಡ ಪೇಪರ್ ತೆಗೆದುಕೊಂಡು ಹೋಗುವುದಕ್ಕಾಗುವುದಿಲ್ಲ ಆದರೆ ಅದೇ ನಮಗೆ ತಮಿಳು ಪೇಪರ್, ತೆಲುಗು ಪೇಪರ್ ಸಿಗುತ್ತದೆ ಇದು ನಮ್ಮ ಕನ್ನಡದ ಅವನತಿ ಇವತ್ತು ನಾವು ಸುವರ್ಣ ಕರ್ನಾಟಕದಲ್ಲಿದ್ದೇವೆ ದಯವಿಟ್ಟು airport ಗಳಲ್ಲಿ ಕನ್ನಡ ಪೇಪರ್‌ಗಳನ್ನು ಮಾರುವ ಹಾಗೆ ಮಾಡಿ Air hostess ಹುದ್ದೆಗೆ ಬೆಂಗಳೂರು ಕನ್ನಡ ಮಾತನಾಡುವವರನ್ನು ನೇಮಕ

ಮಾಡಿ ಏಕೆ ಆಗುವುದಿಲ್ಲ? ಕನ್ನಡ ಭಾಷೆ ಗೊತ್ತಿಲ್ಲವೆಂದರೆ ಅವರಿಗೆ training ಕೊಡಿ ಎಂದು ಹೇಳಿ ಇವತ್ತು ಎಲ್ಲಾ ವಿಚಾರಗಳಿಗೆ ಕರ್ನಾಟಕ ಬೇಕು, ಆದರೆ ಕನ್ನ ಭಾಷೆ ಬೇಡವೇ? ಇವತ್ತು ಬಹಳ ಪ್ರಮುಖವಾಗಿ ವಿದ್ಯುತ್ ಇಲಾಖೆ ಬಗ್ಗೆ

ಅಧ್ಯಕ್ಷರು ನಾನು ನೋಡುತ್ತಿದ್ದೇನೆ, ಆ ಇಲಾಖೆ, ಈ ಇಲಾಖೆ ಎಂದು ಎಲ್ಲಾ ಶುರು ಮಾಡುತ್ತಿದ್ದೀರಿ ನೋಡಿ ನೀವು ಪ್ರಾರಂಭ ಮಾಡಿ 25 ನಿಮಿಷವಾಯಿತು

ಶ್ರೀ ನೆ ಲ ನರೇಂದ್ರ ಬಾಬು ಇನ್ನು ಬೇರೆ ವಿಚಾರಗಳನ್ನು ನಾನು ಬೇರೆ ಸಂದರ್ಭದಲ್ಲಿ ಪ್ರಸ್ತಾಪ ಮಾಡುತ್ತೇನೆ ಮಾನ್ಯ ಅಧ್ಯಕ್ಷರೆ ತಾವು ಸಮಯವನ್ನು ಕೊಟ್ಟಿದ್ದಕ್ಕೆ ಧನ್ಯವಾದ ನಮ್ಮ ಪಕ್ಷದ ನಾಯಕರಿಗೂ ಧನ್ಯವಾದ ನಾನು ಒಂದೇ ಒಂದು ಮನವಿಯನ್ನು ಇಡುತ್ತೇನೆ ಈ ಒಂದು ವಿಚಾರ ಮಂಥನ ಅನುಭವ ಮಂಟಪ ಏನಿದೆ ರಾಜ್ಯದ ಅಭಿವೃದ್ಧಿ ಬಗ್ಗೆ ಚಿಂತನೆ ಮಾಡುವಂತಾದ್ದು ಆಗಿದೆ ಈ ಹಣವನ್ನು ನಾವು blind ಆಗಿ ಕುಳಿತುಕೊಂಡು Pass ಮಾಡಿಬಿಟ್ಟರೆ ನಾಳೆ ದಿವಸ ಜನರು ನೀವು ರಬ್ಬರ್ ರೀತಿಯಲ್ಲಿ ಇದ್ದಿರಾ ಎಂದು ಕೇಳುತ್ತಾರೆ ಆದುದರಿಂದ ಇದರ ಬಗ್ಗೆ ಯಾವ್ಯಾವ ಇಲಾಖೆಗಳನ್ನು ಟಚ್ ಮಾಡಿಲ್ಲವೋ, ಅದಕ್ಕೆ ನಾವು ಪ್ರಯತ್ನ ಪಟ್ಟೆ, ನಾನು ಹಲವಾರು ವಿಚಾರಗಳನ್ನು ಪ್ರಸ್ತಾಪ ಮಾಡಬೇಕೆಂದು ಇದ್ದರೂ ಸಹ, ಸಮಯದ ಅಭಾವದಿಂದ ಮತ್ತು ಬೇರೆ ಸ್ನೇಹಿತರು ಮಾತನಾಡಬೇಕಾ ಗಿರುವುದರಿಂದ, ನಾನು ತಮಗೆ ಧನ್ಯವಾದಗಳನ್ನು ಹೇಳುತ್ತಾ, ಈ ಬೇಡಿಕೆಗಳು ಖಂಡಿತವಾಗಿ ಹೇಳುತ್ತೇನೆ ಇದು ಜನರ ಹಿತದ ಬಗ್ಗೆ ಗುರಿಯಿಲ್ಲದೇ, ಕೇವಲ ಪ್ರಚಾರದ ಹಿತವನ್ನು ಇಟ್ಟುಕೊಂಡು ಜನಗಳ ಹಿತವನ್ನು ಹತ ಮಾಡಿದೆಯೆಂದು ಹೇಳುತ್ತಾ, ನನ್ನ ಮಾತನ್ನು ಮುಗಿಸುತ್ತೇನೆ

ಅಧ್ಯಕ್ಷರು ಮಾನ್ಯ ಧ್ರುವನಾರಾಯಣರವರೆ ನಿಮಗೆ ಕಾಲಾವಕಾಶ 15 ನಿಮಿಷಗಳಿದೆ ಈಗಲೇ ನೋಡಿ ಕೊಳ್ಳಿ, ಆಮೇಲೆ ತಕರಾರು ಇಟ್ಟುಕೊಳ್ಳಬೇಡಿ

ಶ್ರೀ ಆರ್ ಧ್ರುವನಾರಾಯಣ (ಸಂತೇಮಾರೇನಹಳ್ಳಿ) ಮಾನ್ಯ ಅಧ್ಯಕ್ಷರೆ, ನನಗೆ ಮಾತನಾಡಲು ಸಮಯವನ್ನು ಕೊಟ್ಟದ್ದಕ್ಕೆ ತಮಗೆ ವಂದನೆಗಳನ್ನು ಹೇಳುತ್ತೇನೆ ನಾನು ಸಮಾಜ ಕಲ್ಯಾಣ ಇಲಾಖೆಯ ಬಗ್ಗೆ 10

ನಿಮಿಷಗಳ ಕಾಲ ಮಾತನಾಡಿ, ಇನ್ನು ಉಳಿದ ಸದಸ್ಯರು ಮಾತನಾಡುವುದಕ್ಕೆ ಅವಕಾಶವನ್ನು ಮಾಡಿಕೊಡುತ್ತೇನೆಂಬ ಮಾತನ್ನು ತಿಳಿಸಿ, ನನ್ನ ಮಾತನ್ನು ಪ್ರಾರಂಭ ಮಾಡುತ್ತೇನೆ ಸಮಾಜ ಕಲ್ಯಾಣ ಇಲಾಖೆ ಬಹಳ ಜವಾಬ್ದಾರಿಯುತವಾದ ಇಲಾಖೆಯಾಗಿದ್ದು, ಇಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗ, ಅಲ್ಪಸಂಖ್ಯಾತರ, ಸಮಗ್ರ ಅಭಿವೃದ್ಧಿ ಕಾರ್ಯಕ್ರಮಗಳನ್ನು ಹೊಂದಿದಂಥಾ ಇಲಾಖೆಯಾಗಿದೆ ಈ ಇಲಾಖೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಮತ್ತು ಹಿಂದುಳಿದ ವರ್ಗದವರ ಸ್ಥಿತಿಗತಿಗಳನ್ನು ಅವಲೋಕನ ಮಾಡಿದಾಗ, ಸುಮಾರು ಶೇ 75 ರಿಂದ 80 ಭಾಗ ಗ್ರಾಮಾಂತರ ಪ್ರದೇಶದಲ್ಲಿ ವಾಸವಾಗಿರುವಂಥಾದ್ದನ್ನು ನಾವು ಕಾಣುತ್ತೇವೆ ಅದರಲ್ಲೂ ವಿಶೇಷವಾಗಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದವರು ಶೇ 80 ರಷ್ಟು ಕೃಷಿ ಕಾರ್ಮಿಕರು ಇದ್ದಾರೆ ಇವತ್ತು ಮಾತನಾಡಿದಂಥಾ ಎಲ್ಲಾ ಸದಸ್ಯರು ರೈತರ ಬಗ್ಗೆ ಬಹಳಷ್ಟು ವಿಚಾರಗಳನ್ನು ತಿಳಿಸಿದ್ದಾರೆ ರೈತ ಕಂಗಾಲಾಗಿದ್ದಾನೆ, ರೈತರ ಆತ್ಮಹತ್ಯೆಯಾಗಿದೆಯೆಂಬ ಮಾತನ್ನು ಹೇಳಿದ್ದಾರೆ ಆದರೆ ಕೃಷಿ ಕಾರ್ಮಿಕರು ಹೊಲಗಳಲ್ಲಿ ದುಡಿಮೆ ಮಾಡುವಂಥಾ ಕೃಷಿ ಕಾರ್ಮಿಕರ ಬಗ್ಗೆ ಒಬ್ಬರೂ ಕೂಡ ಮಾತನಾಡಲಿಲ್ಲವೆಂಬ ನೋವು ನನಗಾಗಿದೆ ಇವತ್ತು ನಿಜವಾಗಿಯೂ ನಾವು ಕೃಷಿ ಕಾರ್ಮಿಕರ ಬಗ್ಗೆ ಯೋಚನೆ ಮಾಡಿದಾಗ, ವಿಚಾರ ವಿನಿಮಯ ಮಾಡಿದಾಗ, ನಮ್ಮ ಕರ್ನಾಟಕ ರಾಜ್ಯದಲ್ಲಿ ಬಹುತೇಕ ಜಿಲ್ಲೆಗಳಿಂದ ಕೃಷಿ ಕಾರ್ಮಿಕರು ವಲಸೆ ಹೋಗುತ್ತಿದ್ದಾರೆ ನಮ್ಮ ಬಿಜಾಪುರದ ಮಂತ್ರಿಗಳಾದ ಆಹಾರ ಇಲಾಖೆಯ ಸಚಿವರು ಇಲ್ಲೇ ಇದ್ದಾರೆ ನಾನು ಸುಮಾರು 20 ವರ್ಷಗಳ ಹಿಂದೆ ಗೋವಾಕ್ಕೆ ಹೋಗಿದ್ದಾಗ, ದಕ್ಷಿಣ ಜಿಲ್ಲೆಗೆ ಹೋಗಿದ್ದಾಗ, ಬಿಜಾಪುರದ ಕೃಷಿ ಕಾರ್ಮಿಕರು ಅಲ್ಲಿಗೆ ಕೆಲಸಕ್ಕೆ ವಲಸೆ ಹೋಗಿರುವಂಥಾದ್ದನ್ನು ನಾವು ಕಾಣುತ್ತೇವೆ ಅದೇ ರೀತಿಯಲ್ಲಿ ನಮ್ಮ ಚಾಮರಾಜನಗರದ ಕೃಷಿ ಕಾರ್ಮಿಕರು ಕೊಡಗು ಜಿಲ್ಲೆಯಲ್ಲಿ ಕಾಫಿ ಪ್ಲಾಂಟೇಷನ್‌ಗಳಲ್ಲಿ ಕೆಲಸ ಮಾಡುವಂಥಾದ್ದನ್ನು ನೋಡಿದ್ದೇವೆ ಪಕ್ಕದ ರಾಜ್ಯವಾದ ಊಟಿಯಲ್ಲಿ ಕೆಲಸ ಮಾಡುವಂಥಾದ್ದನ್ನು ನೋಡಿದ್ದೇವೆ ನಾವು ನಿಜವಾಗಿಯೂ ಯೋಚನೆ ಮಾಡಬೇಕು ಕೃಷಿ ಕಾರ್ಮಿಕರು ಉದ್ಯೋಗವನ್ನು ಹುಡುಕಿಕೊಂಡು ಬೇರೆ ಜಿಲ್ಲೆಗಳಿಗೆ, ಬೇರೆ ರಾಜ್ಯಗಳಿಗೆ ವಲಸೆ ಹೋಗುತ್ತಾರೆ ಅವರ ಹೆಂಡತಿ, ಮಕ್ಕಳ ಸ್ಥಿತಿಗತಿಗಳೇನು? ಅವರು ವಾಸ ಮಾಡುವಂಥಾ ಜಾಗದ ಪರಿಸ್ಥಿತಿ ಏನೆಂಬ ಬಗ್ಗೆ ನಾವು ಚಿಂತೆ

ಮಾಡಬೇಕಾಗಿದೆ ಇವತ್ತು ಬೆಂಗಳೂರು ನಗರದಲ್ಲೂ ಕೂಡ ಗುಲ್ಬರ್ಗಾ, ಬಿಜಾಪುರ, ಬಹುತೇಕ ಎಲ್ಲಾ ಜಿಲ್ಲೆಯವರು ಬೆಂಗಳೂರು ನಗರಕ್ಕೆ ಬಂದಿದ್ದಾರೆ ಅವರಿಗೆ ಉಳಿದು ಕೊಳ್ಳುವುದಕ್ಕೆ ಸ್ಥಳವಿಲ್ಲ ಅವರ ವಾಸ್ತವ್ಯ ಎಲ್ಲಿ ಎಂದರೆ ಬಸ್‌ಸ್ಟ್ಯಾಂಡ್ ಮತ್ತು ರೈಲ್ವೆಸ್ಟೇಷನ್, ಬೇರೆ ಬೇರೆ ಜಾಗಗಳಲ್ಲಿ, ಆಗಿದೆ ಆದುದರಿಂದ ರಾಜ್ಯ ಸರ್ಕಾರ ಈ ಕೃಷಿ ಕಾರ್ಮಿಕರ ಬಗ್ಗೆ ಸಮಗ್ರವಾಗಿ ಚಿಂತನೆ ಮಾಡಬೇಕಾಗಿದೆ ಇವತ್ತು ಮಾನ್ಯ ಕೃಷಿ ಮಂತ್ರಿಯವರು ಇಲ್ಲೇ ಇದ್ದಾರೆ ಅವರು ಕುರಿಗೆ ವಿಮೆ ಮಾಡುವ ಯೋಜನೆಯನ್ನು ಜಾರಿಗೆ ತಂದಿದ್ದಾರೆ ಆದರೆ ನಾನು ರಾಜ್ಯ ಸರ್ಕಾರವನ್ನು ಒತ್ತಾಯ ಮಾಡುವುದೇನೆಂದರೆ, ಈ ಕೂಲಿ ಕಾರ್ಮಿಕರಿಗೆ ಭವಿಷ್ಯ ವಿಮೆಯನ್ನು ಜಾರಿಗೆ ತರಬೇಕೆಂದು ಒತ್ತಾಯ ಮಾಡುತ್ತೇನೆ ಇವತ್ತು ನಮ್ಮ ಜಾಗಗಳಲ್ಲಿ ಹೊಲ, ಗದ್ದೆಗಳಲ್ಲಿ ಕೃಷಿ ಕಾರ್ಮಿಕರು ಕೆಲಸ ಮಾಡುವಂಥಾ ಸಂದರ್ಭದಲ್ಲಿ ಅವರಿಗೆ ಹಾವು ಕಚ್ಚಿದರೆ ಯಾವುದೇ ರೀತಿಯ ಪರಿಹಾರ ಸಿಗುವುದಿಲ್ಲ, ಅದೇ ಜಮೀನು ಇರುವ ರೈತನೊಬ್ಬ ಹಾವು ಕಡಿದು ಸತ್ತರೆ, ಅವನಿಗೆ APMC ಯಿಂದ ಪರಿಹಾರ ಸಿಗುತ್ತದೆ ಆದರೆ ಕೃಷಿ ಕಾರ್ಮಿಕನಿಗೆ ಯಾವುದೇ ರೀತಿಯ ಪರಿಹಾರ ಸಿಗುವುದಿಲ್ಲ ದಯಮಾಡಿ ಇದರ ಬಗ್ಗೆ ರಾಜ್ಯ ಸರ್ಕಾರ ಸಮಗ್ರವಾಗಿ ಚಿಂತನೆ ಮಾಡಬೇಕೆಂದು ಹೇಳುತ್ತೇನೆ ಕೃಷಿ ಕಾರ್ಮಿಕರಿಗೆ ಒಂದು ವಿಮೆ ಯೋಜನೆಯನ್ನು ತಂದು, ಅದನ್ನು ರಾಜ್ಯ ಸರ್ಕಾರವೇ, ವಿಮೆ ಹಣವನ್ನು ಭರ್ತಿ ಮಾಡುವಂಥಾದ್ದು ಆಗಬೇಕು ಆ ನಿಟ್ಟಿನಲ್ಲಿ ಈ ವರ್ಷದಿಂದಲೇ ಈ ಕೃಷಿ ಕಾರ್ಮಿಕರಿಗೆ ಸರ್ಕಾರ ವಿಮೆ ಯೋಜನೆಯನ್ನು ತರುವಂಥಾದ್ದನ್ನು ಮಾಡಬೇಕು ಇನ್ನು ಎಲ್ಲಕ್ಕೂ ನಾವು ಬೆಂಗಳೂರಿಗಿಂತ ಚಾಮರಾಜನಗರದವರೆಗೆ ಕೊಯಮತ್ತೂರು, ಸತ್ಯಮಂಗಲ, ಈರೋಡು ಬಹಳ ಹತ್ತಿರವಿದೆ ನಾವು ಅಲ್ಲಿ ನೋಡಿರುವಂಥಾದ್ದು ತಮಿಳುನಾಡಿನ ಒಂದೊಂದು ಜಿಲ್ಲೆಗೂ ಒಂದೊಂದು ವಿಶೇಷತೆ ಇದೆ ಕೊಯಮತ್ತೂರು ಜಿಲ್ಲೆಗೆ ಹೋದರೆ, ಅಲ್ಲಿ ಸ್ಪೇರ್‌ಪಾರ್ಟ್ಸ್‌ಗೆ ಬಹಳ ಹೆಸರುವಾಸಿಯಾಗಿದೆ ನಾವು ಯಾರು ಬೆಂಗಳೂರಿಗೆ ಬರುವುದಿಲ್ಲ ಯಾವುದೇ ಆಟೋಮೊಬೈಲ್‌ಗೆ, ಸ್ಪೇರ್‌ಪಾರ್ಟ್ಸ್‌ಗೆ, ಪಂಪ್‌ಸೆಟ್‌ಗೆ ಇದಕ್ಕೆಲ್ಲಾ ನಾವು ಕೊಯಮತ್ತೂರಿನ ಈ ಭಾಗಗಳಿಗೆ ಹೋಗುತ್ತೇವೆ ಅಂದರೆ ಆ ಜಿಲ್ಲೆ ಸಂಪೂರ್ಣವಾಗಿ ಎಲ್ಲ ಭಾಗಗಳಲ್ಲೂ ಕೂಡ ಸ್ಪೇರ್‌ಪಾರ್ಟ್ಸ್‌ಗಳನ್ನು ತಯಾರಿಸುವಂಥಾ ಕಾರ್ಖಾನೆಗಳು ಇವೆ ಅದೇರೀತಿಯಲ್ಲಿ ಪಕ್ಕದಲ್ಲಿರುವ ಈರೋಡ್ ಜಿಲ್ಲೆಗೆ ಬಂದರೆ, ಇಲ್ಲಿ ಟೆಕ್ಸ್‌ಟೈಲ್ಸ್‌ಗೆ ಬಹಳ

ಹೆಸರುವಾಸಿಯಾಗಿದೆ ಇಲ್ಲಿ ಗಾರ್ಮೆಂಟ್ ಫ್ಯಾಕ್ಟರಿ ಇರುವಂಥಾದ್ದು, ಇವತ್ತು ನಮ್ಮ ಜಿಲ್ಲೆಯ ಕೃಷಿ ಕಾರ್ಮಿಕರು ಬೇರೆ ಕಡೆಗೆ ವಲಸೆ ಹೋಗುತ್ತಿದ್ದಾರೆಂದರೆ, ಕಾಲ ಕಾಲಕ್ಕೆ ಮಳೆಯಾಗದೇ, ಅವರು ಕೆಲಸ ಸಿಗದೇ, ಬೇರೆ ರಾಜ್ಯಗಳಿಗೆ, ಬೇರೆ ಜಿಲ್ಲೆಗಳಿಗೆ ವಲಸೆ ಹೋಗುತ್ತಿದ್ದಾರೆ ಆ ದೃಷ್ಟಿಯಲ್ಲಿ ಇವತ್ತು ಎಲ್ಲಾ ಲೋಡನ್ನು ನಾವು ಬೆಂಗಳೂರಿಗೆ ಕೊಡುತ್ತಿದ್ದೇವೆ ಎಲ್ಲಾ ಗಾರ್ಮೆಂಟ್ ಫ್ಯಾಕ್ಟರಿ, ಎಲ್ಲಾ ಕಾರ್ಖಾನೆಗಳನ್ನು ಕೇಂದ್ರ ಸರ್ಕಾರದ್ದು, ರಾಜ್ಯ ಸರ್ಕಾರದ್ದು ಬೆಂಗಳೂರಿನಲ್ಲೇ ಮಾಡುತ್ತಿದ್ದೇವೆ ಇವತ್ತು ಎಲ್ಲಾ ಶಾಸಕರುಗಳು ಸೈಟ್ ಅನ್ನು ಸಹ ಬೆಂಗಳೂರಿನಲ್ಲೆ ಕೇಳುತ್ತೇವೆ ನಾನು ಚಾಮರಾಜನಗರದಲ್ಲಿ ಕೊಡಿಯೆಂದು ಕೇಳುವುದಿಲ್ಲ ಮಂಡ್ಯದವರು ಮಂಡ್ಯದಲ್ಲಿ ಸೈಟ್ ಕೊಡಿಯೆಂದು ಕೇಳುವುದಿಲ್ಲ ನಾವೆಲ್ಲರೂ ಬೆಂಗಳೂರಿನಲ್ಲೇ ಕೊಡಿಯೆಂದು ಕೇಳುತ್ತೇವೆ ಅಂದರೆ ಸಮಗ್ರ ಅಬಿವೃದ್ಧಿ ಈ ಜಿಲ್ಲೆಗೆ ಓವರ್ ಲೋಡ್ ಆಗಿರುವಂಥಾ, ಈ ಸಂದರ್ಭದಲ್ಲಿ ರಾಜ್ಯ ಸರ್ಕಾರ ಒಂದು ತೀರ್ಮಾನವನ್ನು ತೆಗೆದುಕೊಳ್ಳಬೇಕು ಯಾವುದೇ ಒಂದು ಫ್ಯಾಕ್ಟರಿಗಳಾಗಲಿ, ಹೊಸ ಹೊಸ ಕಾರ್ಖಾನೆಗಳನ್ನಾಗಲಿ, ಬೇರೆ ಜಿಲ್ಲೆಗಳಲ್ಲಿ ಮಾಡುವಂಥಾದ್ದನ್ನು ಮಾಡಬೇಕು ಬೆಂಗಳೂರಿನಲ್ಲಿ ಆಗಿರುವಂಥಾದ್ದು ಸಾಕೆಂಬ ಬಗ್ಗೆ ಒಂದು ಕಾನೂನನ್ನು ತಂದು, ಬೇರೆ ಜಿಲ್ಲೆಗಳು ಸಹ ಸರಿಯಾದ ರೀತಿಯಲ್ಲಿ ಅಭಿವೃದ್ಧಿಯಾದರೆ, ಈ ಕೃಷಿ ಕಾರ್ಮಿಕರು ಹೊರ ಜಿಲ್ಲೆಗಳಿಗೆ ಹೋಗುವಂಥಾ ಅವಕಾಶವಿರುವುದಿಲ್ಲ ಇಲ್ಲಿಗೆ ಸಮಾಜ ಕಲ್ಯಾಣ ಇಲಾಖೆಯ ಸಚಿವರು ಸಕಾಲಕ್ಕೆ ಬಂದಿದ್ದಾರೆ ನಾನು ಆ ಇಲಾಖೆಯ ಬಗ್ಗೆಯೆ ಮಾತನಾಡುತ್ತಿದ್ದೇನೆ ಗ್ರಾಮಾಂತರ ಪ್ರದೇಶದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಕೂಲಿ ಕಾರ್ಮಿಕರ ಸಂಖ್ಯೆ ಶೇ. 75 ಭಾಗದಷ್ಟು ಇದೆ ಇವತ್ತು ಅವರು ಬಹಳ ಸಂಕಷ್ಟಕ್ಕೆ ಈಡಾಗಿದ್ದಾರೆ ಆ ಕಾರ್ಮಿಕರಿಗೆ ಒಂದು ಭವಿಷ್ಯ ನಿಧಿ ತರುವಂಥಾದ್ದು ಆಗಬೇಕು ಇವತ್ತು ಕುರಿಗೆ ವಿಮೆ ಇದೆ, ಇವತ್ತು ಜನರಿಗೆ ವಿಮೆ ಇಲ್ಲ, ಬಡ ಕೂಲಿ ಕಾರ್ಮಿಕ ಇವತ್ತು ಸತ್ತರೆ ಯಾರು ಕೇಳುವವರಿಲ್ಲ ಇವತ್ತು ಹಸಿವಿನಿಂದ ಸಾವಿರಾರು ಜನರು ಸಾಯುತ್ತಿದ್ದಾರೆ ಆದರೆ ಒಬ್ಬ ರೈತ ಸತ್ತರೆ, ಅವನಿಗೆ ಎಲ್ಲಾ ಕಡೆಯಿಂದ ಸಹಾನುಭೂತಿ ಸಿಗುತ್ತದೆ ಆದರೆ ಒಬ್ಬ ಬಡ ಕೂಲಿ ಕಾರ್ಮಿಕ ಸತ್ತರೆ, ಇವತ್ತು ಸಾವಿರಾರು ಜನರು ಹಸಿವಿನಿಂದ ಸಾಯುತ್ತಿದ್ದಾರೆ ಅವರ ಹೆಂಡತಿ, ಮಕ್ಕಳು ಊರುಗಳಲ್ಲಿ ಇರುತ್ತಾರೆ ಅವರನ್ನು ಕೇಳುವವರು ಇಲ್ಲ ಆದುದರಿಂದ ದಯಮಾಡಿ ಆ ಕೃಷಿ ಕಾರ್ಮಿಕರು ಶೇ 75 ರಷ್ಟು ಏನು

ಇದ್ದಾರೆ ಅವರು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರು, ಹಿಂದುಳಿದ ವರ್ಗದವರು, ಹಾಗೂ ಬುಡಕಟ್ಟು ಜನಾಂಗದವರು, ಇವರು ಬಹಳಷ್ಟು ಕಡೆ ವಲಸೆ ಹೋಗಿದ್ದಾರ ದಯಮಾಡಿ ಅವರಿಗೆ ವಿಮೆ ತರುವಂಥಾದ್ದನ್ನು ತಮ್ಮ ಕಾಲದಲ್ಲಿ ಮಾಡಬೇಕೆಂದು ನಾನು ಹೇಳುತ್ತೇನೆ ಅವರಿಗೆ ಗೌವರ್ನಮಂಟ್ ಪ್ರೀಮಿಯಂ ಕಟ್ಟಬೇಕೆಂದು ಒತ್ತಾಯವನ್ನು ಮಾನ್ಯ ಅಧ್ಯಕ್ಷರ ಮುಖೇನ ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ ಇನ್ನು ಕ್ಷೇತ್ರ ಪುನರ್ ವಿಂಗಡನೆಯಾಗುತ್ತಿದೆ 2010ರ ಸೆನ್ಸಸ್ ಪ್ರಕಾರ ಜನಸಂಖ್ಯೆಯ ಆಧಾರಿತವಾಗಿ ಇವತ್ತು ಮೀಸಲು ಕ್ಷೇತ್ರಗಳು ಸಹ ಹೆಚ್ಚಾಗುತ್ತಿವೆ ಇವತ್ತು 4 ಪರಿಶಿಷ್ಟ ಜಾತಿಯವರಿಗೆ ಇದ್ದಂಥಾ ಲೋಕಸಭಾ ಕ್ಷೇತ್ರ 5ಕ್ಕೆ ಹೆಚ್ಚಾಗಿದೆ ಅದೇ ರೀತಿಯಲ್ಲಿ ಪರಿಶಿಷ್ಟ ಪಂಗಡಕ್ಕೂ ಹೆಚ್ಚಾಗುತ್ತಿದೆ ಅದೇ ರೀತಿಯಲ್ಲಿ ಜನಸಂಖ್ಯೆಗೆ ಅನುಗುಣವಾಗಿ ರಾಜ್ಯ ಸರ್ಕಾರ ಇವತ್ತು ಮೀಸಲಾತಿ ಪ್ರಮಾಣವನ್ನು ಹೆಚ್ಚು ಮಾಡಬೇಕೆಂಬ ಒತ್ತಾಯವನ್ನು ಮಾಡುತ್ತೇನೆ ಇವತ್ತು ಜನಸಂಖ್ಯೆ 22.5% SC/ST Population increase ಆಗಿದೆ ಅದಕ್ಕೆ ಅನುಗುಣವಾಗಿ 18% ಇನು ಮೀಸಲಾತಿ ಇದೆ ಅದನ್ನು 22.5% ಆಗಬೇಕೆಂಬ ಒತ್ತಾಯವನ್ನು ನಾನು ಮಾಡುತ್ತೇನೆ ನಾವು ಎಲ್ಲಾ ಸರ್ಕಾರಗಳಲ್ಲೂ ಬಹಳಷ್ಟು ಭರವಸೆಗಳನ್ನು ಕೊಡುತ್ತೇವೆ ಇದಕ್ಕೆ ನಮ್ಮ ದಲಿತ ಕವಿ ಸಿದ್ದಲಿಂಗಯ್ಯನವರು ಒಂದು ಕವನವನ್ನು ರಚಿಸಿದ್ದಾರೆ ಆ ಕವನವನ್ನು ತಮ್ಮ ಮುಂದಿಡುತ್ತೇನೆ

"ಸುತ್ತ ಮುತ್ತ ಹಸಿರು ಮಳೆ
ಬೆಳೆಯುತ್ತಾರೆ ಬೆಂಕಿ ಬೆಳೆ
ಕಪ್ಪು ಜನರ ತಲೆಯ ಮೇಲೆ
ಬಿಳಿ ಬಿಳಿ ಮಡಕೆ,
ಪಾತಾಳದ ಆಳದಲಿ,
ಭರವಸೆಗಳ ಕೊಳದಲಿ
ನರಳುತ್ತಾದೆ, ಉರುಳುತ್ತಾದೆ,
ಜನರ ಜಂಗುಳಿ"

ಅಂದರೆ ಭರವಸೆಯೆಂಬ ಬೇಡಿಗಳಲ್ಲಿ ದಲಿತರು ದಿನಗಳನ್ನು ಕಳೆಯುತ್ತಿದ್ದಾರೆಂಬ ಅರ್ಥ ಬರುವಂಥಾದ್ದನ್ನು ಮಾನ್ಯ ಸಿದ್ದಲಿಂಗಯ್ಯನವರು ಕವನದ ಮೂಲಕ ತಿಳಿಸಿದ್ದಾರೆ ಆದುದರಿಂದ ಮಾನ್ಯ ಸಚಿವರು ಸಹ ಪರಿಶಿಷ್ಟ ಪಂಗಡಕ್ಕೆ ಸೇರಿದವರು ತಾವು ಒತ್ತಾಯ ಮಾಡಿ ರಾಜ್ಯದ

ಮುಖ್ಯಮಂತ್ರಿಯವರ ಮತ್ತು ಉಪ ಮುಖ್ಯಮಂತ್ರಿಯವರ ಗಮನಕ್ಕೆ ತಂದು, ಮೀಸಲಾತಿ ಪ್ರಮಾಣ ಏನು 18% ಇದೆ ಅದನ್ನು 22 5% ಗೆ ತಾವು ಏರಿಕೆ ಮಾಡಬೇಕೆಂಬ ಒತ್ತಾಯವನ್ನು ಇಲ್ಲಿ ನಾನು ಮಾಡಲಿಚ್ಛಿಸುತ್ತೇನೆ ಇನ್ನು ಬ್ಯಾಕ್‌ಲಾಗ್ ಹುದ್ದೆಗಳ ಭರ್ತಿ ಕೆಲಸ ಮಂದಗತಿಯಲ್ಲಿ ಆಗುತ್ತಿದೆ ಅದಕ್ಕೆ ಮಾನ್ಯ ಉಪ ಮುಖ್ಯಮಂತ್ರಿ ಯವರು ಈ ಬ್ಯಾಕ್‌ಲಾಗ್ ಕಮಿಟಿಗೆ ಅಧ್ಯಕ್ಷರಾಗಿದ್ದಾರೆ ಮಾನ್ಯ ಎಸ್ ಎಂ ಕೃಷ್ಣ ರವರು ಮುಖ್ಯಮಂತ್ರಿಯಾಗಿದ್ದಾಗ, ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಅಧ್ಯಕ್ಷರಾಗಿದ್ದರು ಸುಮಾರು 18,000 ಬ್ಯಾಕ್‌ಲಾಗ್ ಹುದ್ದೆಗಳನ್ನು ಗುರುತಿಸಿ, 13,000 ಹುದ್ದೆಗಳನ್ನು ಭರ್ತಿ ಮಾಡುವ ಕೆಲಸ ಆಗ ಆಯಿತು ಇನ್ನು 7,000 ಹುದ್ದೆಗಳು ಖಾಲಿ ಇದೆ ದಯಮಾಡಿ ಸಮಾಜ ಕಲ್ಯಾಣ ಇಲಾಖೆಯ ಸಚಿವರು ಹಾಗೂ ಬಹಳಷ್ಟು ಇಲಾಖೆಯ ಸಚಿವರು ಇಲ್ಲೆ ಇದ್ದಾರೆ ದಯಮಾಡಿ ತಮ್ಮ ತಮ್ಮ ಇಲಾಖೆಗಳಲ್ಲಿರುವಂಥಾ ಬ್ಯಾಕ್‌ಲಾಗ್ ಹುದ್ದೆಗಳನ್ನು ತ್ವರಿತಗತಿಯಲ್ಲಿ ತುಂಬಬೇಕೆಂಬ ಒತ್ತಾಯವನ್ನು ನಾನು ಮಾಡುತ್ತೇನೆ ಇನ್ನು ಮಾನ್ಯ ಉಪ ಮುಖ್ಯಮಂತ್ರಿಯವರು ಇಲ್ಲಿಗೆ ಬಂದಿದ್ದಾರೆ ಅವರು ಬ್ಯಾಕ್‌ಲಾಗ್ ಕಮಿಟಿಯ ಉಪ ಸಮಿತಿಯ ಅಧ್ಯಕ್ಷರಾಗಿದ್ದಾರೆ ನಾನು ಮಾನ್ಯ ಉಪ ಮುಖ್ಯಮಂತ್ರಿಯವರ ಹತ್ತಿರ ಕೇಳುವಂಥಾದ್ದು ಏನೆಂದರೆ, ಈ ಖಾಲಿ ಇರುವ ಬ್ಯಾಕ್‌ಲಾಗ್ ಹುದ್ದೆಗಳು ಸುಮಾರು 7,000 ಏನು ಇವೆ, ಅದನ್ನು ತತ್‌ತಕ್ಷಣ ತುಂಬಬೇಕೆಂಬ ಒತ್ತಾಯವನ್ನು ನಾನು ಈ ಸಂದರ್ಭದಲ್ಲಿ ಮಾಡಲಿಚ್ಛಿಸುತ್ತೇನೆ ಇನ್ನು SC/ST Corporation ಇದೆ, ಡಾ ಬಿ ಆರ್ ಅಂಬೇಡ್ಕರ್ ಅಭಿವೃದ್ಧಿ ನಿಗಮವೆಂದು ಇದೆ ಇಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನರಿಗೆ ಅನುಕೂಲವನ್ನು ಮಾಡಿಕೊಡುವಂಥಾದ್ದು, ಭೂಮಿಯನ್ನು ಕೊಡುವಂಥಾ ಯೋಜನೆ ಆಗಿದೆ ಕಳೆದ ವರ್ಷ 10 ಕೋಟಿ ರೂಪಾಯಿಗಳನ್ನು ಆ ನಿಗಮದಲ್ಲಿ ಮುಡುಪಾಗಿ ಇಟ್ಟಿದ್ದಾರೆ ನಾನು ಮಂತ್ರಿಗಳನ್ನು ಕೇಳುತ್ತೇನೆ, ಆ ಹತ್ತು ಕೋಟಿ ರೂಪಾಯಿಗಳು ಯಾವುದಕ್ಕೂ ಸಾಲುವುದಿಲ್ಲ, ದಯಮಾಡಿ ನೂರು ಕೋಟಿ ರೂಪಾಯಿಗಳನ್ನು ಭೂಮಿ ಖರೀದಿ ಯೋಜನೆಗೆ ತಾವು ಒದಗಿಸಿ ಕೊಡಬೇಕು ಹಲವಾರು ಇಲಾಖೆಗಳಲ್ಲಿ S C P ಹಣ ಬಳಕೆಯಾಗಿಲ್ಲ ನೀರಾವರಿ ಇಲಾಖೆಯಲ್ಲಿ ಬಳಕೆಯಾಗಿಲ್ಲ, P W D ಇಲಾಖೆಯಲ್ಲಿ ಬಳಕೆಯಾಗಿಲ್ಲ ಈ ಹಣವನ್ನು ತಾವು ವಾಪಸ್ಸು ತೆಗೆದುಕೊಂಡು, ಅದನ್ನು

ಡಾ ಬಿ ಆರ್ ಅಂಬೇಡ್ಕರ್ ನಿಗಮಕ್ಕೆ ಹಾಕಿಕೊಂಡು, ಭೂಮಿಯನ್ನು ಖರೀದಿ ಮಾಡಿ ಬಡ ಕೂಲಿ ಕಾರ್ಮಿಕರಿರತಕ್ಕಂಥ ದಲಿತರಿಗೆ, ಪರಿಶಿಷ್ಟ ಜಾತಿ, ವರ್ಗದವರಿಗೆ ತಾವು ಅನುಕೂಲ ಮಾಡಿಕೊಡಬೇಕು ಎನ್ನುವ ಒತ್ತಾಯವನ್ನು ಈ ಸಂದರ್ಭದಲ್ಲಿ ಮಾಡಲಿಕ್ಕೆ ಇಚ್ಛೆಪಡುತ್ತೇನೆ ಗಂಗಾ ಕಲ್ಯಾಣ ಯೋಜನೆಯಲ್ಲಿ ತಾವು ಈಗಾಗಲೇ ಸಾಕಷ್ಟು ಕೊಳವೆ ಬಾವಿಗಳನ್ನು ಕೊಡುತ್ತಿದ್ದೀರಿ ಪ್ರತಿಯೊಂದು ಕ್ಷೇತ್ರಕ್ಕೂ 70 ರಿಂದ 80 ಕೊಳವೆ ಬಾವಿಗಳನ್ನು ಕೊಡುತ್ತಿದ್ದೀರಿ ಬೇರೆ ಯಾವ ಇಲಾಖೆಗಳಲ್ಲಿ S C P ಹಣವನ್ನು ಉಪಯೋಗಿಸಿಕೊಂಡಿಲ್ಲ, ಆ ಹಣವನ್ನು ಅಲ್ಲಿಂದ Withdraw ಮಾಡಿ, ಕೊಳವೆ ಬಾವಿ ಕೊರೆಯುವ ಗಂಗಾ ಕಲ್ಯಾಣ ಯೋಜನೆಗೆ ಇನ್ನೂ ಹೆಚ್ಚಿನ ಹಣವನ್ನು ಕೊಡಬೇಕು ಇದರಿಂದ ರೈತರಿಗೆ ಬಹಳ ಅನುಕೂಲ ವಾಗುತ್ತದೆ ಈ ಯೋಜನೆಯಲ್ಲಿ ತಾವು ಒಂದೊಂದು ಘಟಕಕ್ಕೆ ಒದಗಿಸತಕ್ಕಂಥ ಹಣವನ್ನು ಹೆಚ್ಚಳ ಮಾಡಿ ಕಳೆದ ಸಾರಿ ತಾವು ಅದನ್ನು 65 ಸಾವಿರ ರೂಪಾಯಿಗಳಿಂದ 85 ಸಾವಿರ ರೂಪಾಯಿಗಳಿಗೆ ಹೆಚ್ಚಿಸಿದ್ದೀರಿ ಅದನ್ನು ಇನ್ನೂ ಹೆಚ್ಚು ಮಾಡಬೇಕು ಎನ್ನುವ ಮಾತನ್ನು ಈ ಸಂದರ್ಭದಲ್ಲಿ ತಿಳಿಸುತ್ತೇನೆ

ಇನ್ನು ಸ್ವಯಂ ಉದ್ಯೋಗ ಯೋಜನೆ ಬಗ್ಗೆ ಹೇಳುವುದಾದರೆ, ನಿರುದ್ಯೋಗಿ ಯುವಕರು ಬಹಳಷ್ಟು ಜನ ಬಹಳಷ್ಟು ಕಡೆಗಳಲ್ಲಿದ್ದಾರೆ S S L C pass ಆದವರಿಗೆ, P U C pass ಆದವರಿಗೆ, degree ಆದವರಿಗೆ ಇವತ್ತು ಉದ್ಯೋಗವಿಲ್ಲ ಸ್ವಯಂ ಉದ್ಯೋಗ ಯೋಜನೆಯಲ್ಲಿ ನಿರುದ್ಯೋಗಿ ಯುವಕರಿಗೆ ತರಬೇತಿ ಕೊಟ್ಟಂದ ಸಂದರ್ಭದಲ್ಲಿ ಅವರಿಗೆ ಸ್ವಯಂ ಉದ್ಯೋಗಕ್ಕಾಗಿ ಸಹಾಯಧನವನ್ನು ಪೂರ್ಣ ಪ್ರಮಾಣದಲ್ಲಿ ಕೊಡಿ ಈಗ ಒಂದು ಘಟಕಕ್ಕೆ 50 ಸಾವಿರ ರೂಪಾಯಿಗಳನ್ನು ಕೊಡುತ್ತಿದ್ದರೆ, ಅದರಲ್ಲಿ 10 ಸಾವಿರ ರೂಪಾಯಿಗಳು ಮಾತ್ರ ಸಹಾಯಧನವಾಗಿರುತ್ತದೆ ಉಳಿದ 40 ಸಾವಿರ ರೂಪಾಯಿಗಳನ್ನು ತನ್ನ ಕೈಯಿಂದ ಹಾಕಿಕೊಂಡು ಉದ್ಯೋಗ ಮಾಡಲಿಕ್ಕೆ ಕೂಲಿ ಕಾರ್ಮಿಕರು ನಿರುದ್ಯೋಗಿ ಯುವಕರು ತಯಾರಿರುವುದಿಲ್ಲ ಅವರು ಅಷ್ಟೊಂದು ಶಕ್ತರಾಗಿರುವುದಿಲ್ಲ ಆದ್ದರಿಂದ ದಯಮಾಡಿ ಸಹಾಯಧನವನ್ನು ಹೆಚ್ಚಳ ಮಾಡಿ ಮತ್ತು ಬ್ಯಾಂಕುಗಳಿಂದಲೂ ಕೂಡ ಅವರಿಗೆ ಕಡಿಮೆ percentage ಬಡ್ಡಿದರದಲ್ಲಿ ಸಾಲವನ್ನು ಕೊಡಿಸಬೇಕು ಎನ್ನುವ ಒತ್ತಾಯವನ್ನು ನಾನು ಈ ಸಂದರ್ಭದಲ್ಲಿ

ಮಾಡುತ್ತೇನೆ ಮಾನ್ಯ ಯಡಿಯೂರಪ್ಪನವರು ರೈತರ 25 ಸಾವಿರ ರೂಪಾಯಿಗಳ ಸಾಲವನ್ನು ಮನ್ನಾ ಮಾಡಿದ್ದಾರೆ S C/S T Corporation ನಲ್ಲಿ ಮತ್ತು ಹಿಂದುಳಿದ ವರ್ಗದವರ ಕಾರ್ಪೋರೇಷನಿನಲ್ಲಿ ಬಹಳಷ್ಟು ಜನ ದಲಿತರು ಮತ್ತು ಹಿಂದುಳಿದವರು ಸಾಲವನ್ನು ತೆಗೆದುಕೊಂಡಿದ್ದಾರೆ ಅದೇನು ಬಹಳ ಹೆಚ್ಚಾಗುವುದಿಲ್ಲ ದಯಮಾಡಿ ಆ ಸಾಲವನ್ನೂ ಕೂಡ ಮನ್ನಾ ಮಾಡಬೇಕು ಎನ್ನುವ ಒತ್ತಾಯವನ್ನು ಮಾನ್ಯ ಉಪ ಮುಖ್ಯಮಂತ್ರಿಗಳಿಗೆ ನಾನು ಈ ಸಂದರ್ಭದಲ್ಲಿ ತಮ್ಮ ಮುಖೇನ ಮಾಡಲಿಕ್ಕೆ ಇಚ್ಛೆಪಡುತ್ತೇನೆ SC, ST ಮಕ್ಕಳಿಗೆ IAS, IPS ಮತ್ತು IFS ಗೆ Coaching ಕೊಡತಕ್ಕಂಥ ಒಂದು ಪರೀಕ್ಷಾ ಪೂರ್ವ ತರಬೇತಿ ಕೇಂದ್ರ ಬೆಂಗಳೂರಿನಲ್ಲಿದೆ ಈ ಕೇಂದ್ರದಿಂದ ಎಷ್ಟು ಜನ IAS IPS, IFS ಅಭ್ಯರ್ಥಿಗಳು pass ಆಗುತ್ತಿದ್ದಾರೆ ಎನ್ನುವುದನ್ನು ತಾವು review ಮಾಡಿರುವಿರೋ ಏನೋ ಗೊತ್ತಿಲ್ಲ ನನಗೆ ತಿಳಿದಿರುವ ಮಾಹಿತಿ ಪ್ರಕಾರ ಇದುವರೆಗೂ ಅಲ್ಲಿ ತರಬೇತಿ ಹೊಂದಿದವರು ಯಾರೂ pass ಆಗಿಲ್ಲ ಎನ್ನುವ ಅಂಶ ನನ್ನ ಗಮನಕ್ಕೆ ಬಂದಿದೆ ಮೂರು ವರ್ಷಗಳ ಹಿಂದೆ JSS ಸಂಸ್ಥೆಯವರು ಇದೇ ರೀತಿಯ ಒಂದು ತರಬೇತಿ ಸಂಸ್ಥೆಯನ್ನು ತೆಗೆದಿದ್ದಾರೆ ಅಲ್ಲಿ ಪ್ರತಿವರ್ಷ 4 ರಿಂದ 5 ಜನ IAS, IPS, IFS, ಅಭ್ಯರ್ಥಿಗಳು pass ಆಗುತ್ತಿದ್ದಾರೆ ದಯಮಾಡಿ ತಾವು ಆ ಒಂದು ತರಬೇತಿ ಕೇಂದ್ರಕ್ಕೆ ಭೇಟಿ ನೀಡಿ, ಅಲ್ಲಿ ಸಮಗ್ರವಾದ ಬದಲಾವಣೆಗಳನ್ನು ತರಬೇಕು ಏಕೆಂದರೆ, ಆ ತರಬೇತಿ ಸಂಸ್ಥೆಗೆ ನೀವು ಪ್ರತಿವರ್ಷವೂ 50 ಲಕ್ಷ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೀರಿ ಆದರೆ result ಶೂನ್ಯವಾದರೆ ಆ ತರಬೇತಿ ಕೇಂದ್ರವನ್ನು ಮಾಡಿಯೂ ಏನು ಪ್ರಯೋಜನವಾಗುತ್ತದೆ? ದಯಮಾಡಿ ತಾವು ಆ ತರಬೇತಿ ಕೇಂದ್ರವನ್ನು ವೀಕ್ಷಣೆ ಮಾಡಿ, ಅಲ್ಲಿ ಬದಲಾವಣೆ ತರತಕ್ಕಂಥ ಕೆಲಸವನ್ನು ಮಾಡಬೇಕು ಸುಳ್ಳು ಜಾತಿ ಪ್ರಮಾಣ ಪತ್ರಗಳ ಬಹಳಷ್ಟು ಪ್ರಕರಣಗಳಾಗಿವೆ ಆದರೆ ಮೊಕದ್ದಮೆ ಹೂಡಿ, ಕ್ರಮಗಳನ್ನು ತೆಗೆದುಕೊಂಡಿರತಕ್ಕಂಥಾದ್ದು ಬಹಳ ಕಡಿಮೆ ಇದುವರೆಗೂ ಸುಮಾರು 1,628 ಪ್ರಕರಣಗಳಲ್ಲಿ ಸುಳ್ಳು ಜಾತಿ ಪ್ರಮಾಣ ಪತ್ರಗಳನ್ನು ಸಲ್ಲಿಸಿ ಉದ್ಯೋಗವನ್ನು ಪಡೆದಿದ್ದಾರೆ 1,628 ಪ್ರಕರಣಗಳಿದ್ದರೂ ಮೊಕದ್ದಮೆ ಹೂಡಿರುವ ಪ್ರಕರಣಗಳು ಮಾತ್ರ 85 ದಯಮಾಡಿ ಮಾನ್ಯ ಸಚಿವರು ಇದರ ಬಗ್ಗೆ ಕಠಿಣವಾದಂಥ ಕ್ರಮವನ್ನು ತೆಗೆದುಕೊಳ್ಳಬೇಕು ಸುಳ್ಳು ಜಾತಿ ಪ್ರಮಾಣ

ಪತ್ರಗಳನ್ನು ಕೊಡುವವರ ಮೇಲೆ ಉಗ್ರ ಕ್ರಮ ತೆಗೆದುಕೊಂಡು, ಅವರ ಮೇಲೆ ಮೊಕದ್ದಮೆ ಹೂಡತಕ್ಕಂಥ ಕೆಲಸವನ್ನು ತಕ್ಷಣ ಮಾಡಬೇಕು ಮೀಸಲಾತಿಯನ್ನು ಉಲ್ಲಂಘಿಸಿರುವ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಬೇಕು ನನಗೆ ತಿಳಿದ ಹಾಗೆ, ನೀವು ಇದುವರೆಗೆ ಒಬ್ಬ ಅಧಿಕಾರಿಯ ಮೇಲೂ ಕ್ರಮ ತೆಗೆದುಕೊಂಡಿಲ್ಲ, ತೆಗೆದುಕೊಂಡರೆ ಸಂತೋಷ ಬಹಳಷ್ಟು ಕಡೆಗಳಲ್ಲಿ ಮೀಸಲನ್ನು ಉಲ್ಲಂಘನೆ ಮಾಡಿದ ಅಧಿಕಾರಿಗಳಿದ್ದಾರೆ ಅವರ ಮೇಲೆ ತಾವು ಕ್ರಮವನ್ನು ತೆಗೆದುಕೊಳ್ಳಬೇಕು ವಿಶೇಷ ಘಟಕ ಯೋಜನೆಯಡಿಯಲ್ಲಿ ಕಳೆದ ವರ್ಷ 3,500 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೀರಿ ಜನಸಂಖ್ಯೆಗನುಗುಣವಾಗಿ ಕೊಡಬೇಕೆಂದರೆ ಇನ್ನೂ 500 ಕೋಟಿ ರೂಪಾಯಿಗಳನ್ನು ಕೊಡಬೇಕಾಗುತ್ತದೆ ತಾವು ಸರ್ಕಾರಕ್ಕೆ ಒತ್ತಾಯ ಮಾಡಿ 4 ಸಾವಿರ ಕೋಟಿ ರೂಪಾಯಿಗಳನ್ನು Special Component Programmeಗೆ ಮೀಸಲಾಗಿಡಬೇಕು ಮತ್ತು ಆ ಹಣ ಸರಿಯಾದ ರೀತಿಯಲ್ಲಿ ಸದ್ಬಳಕೆಯಾಗಬೇಕು ಆ ಹಣ ಸರಿಯಾದ ರೀತಿಯಲ್ಲಿ ಸದ್ಬಳಕೆಯಾಗುತ್ತಿಲ್ಲ ಎನ್ನುವುದನ್ನು ನಿನ್ನೆಯೂ ಕೂಡ ಬಹಳಷ್ಟು ಶಾಸಕರು ಮಾತನಾಡುವ ಸಂದರ್ಭದಲ್ಲಿ ತಿಳಿಸಿದ್ದಾರೆ ನಿನ್ನೆ ಬಹಳಷ್ಟು ವಿಷಯಗಳನ್ನು Special Component Programme ಬಗ್ಗೆ ಮಾತನಾಡಿದ್ದೇವೆ ದಯಮಾಡಿ ಸಚಿವರು ಈ ಬಗ್ಗೆ ಸರಿಯಾದಂಥ ಒಂದು review ಮಾಡಿ, ಯಾವ ಯಾವ ಇಲಾಖೆಗಳಲ್ಲಿ ಈ ಹಣ ಸದ್ಬಳಕೆಯಾಗಿಲ್ಲ, ಸರಿಯಾದ ರೀತಿಯಲ್ಲಿ ಫಲಾನುಭವಿಗಳಿಗೆ ತಲುಪಿಲ್ಲ ಎನ್ನುವ ವಿಚಾರದಲ್ಲಿ ಸಂಪೂರ್ಣವಾದಂಥ ಸಮಗ್ರ ತನಿಖೆಯನ್ನು ಮಾಡಿಸಿ, ಆ ಇಲಾಖೆಗಳಿಂದ ಬಡಜನರಿಗೆ ಅನುಕೂಲವಾಗಬೇಕು ಎನ್ನುವ ಮಾತನ್ನು ಆ ಸಂದರ್ಭದಲ್ಲಿ ತಿಳಿಸಿ, ಮಾತನಾಡಲು ನನಗೆ ಅವಕಾಶ ಮಾಡಿಕೊಟ್ಟಂಥ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ

ಶ್ರೀ ಬಿ ಎ ಜೀವಿಜಯ (ಸೋಮವಾರಪೇಟೆ) ಸನ್ಮಾನ್ಯ ಸಭಾಧ್ಯಕ್ಷರೇ, ಕೊನೆಗೂ ಕೂಡ ನನಗೆ ಮಾತನಾಡಲಿಕ್ಕೆ ಅವಕಾಶ ಮಾಡಿಕೊಟ್ಟಂಥ ತಮಗೆ ಧನ್ಯವಾದಗಳನ್ನು ಅರ್ಪಿಸುತ್ತಾ, ನಾನು ಎಲ್ಲ ವಿಷಯಗಳ ಬಗ್ಗೆ ಮಾತನಾಡಲಿಕ್ಕೆ ಹೋಗುವುದಿಲ್ಲ ಅರಣ್ಯ ಇಲಾಖೆಯ ಬಗ್ಗೆ, ಅರಣ್ಯದ ಬಗ್ಗೆ ಕೆಲವು ಮಾತುಗಳನ್ನು ಆಡಬೇಕೆಂದು ಇಚ್ಛೆಪಡುತ್ತಿದ್ದೇನೆ

(ಈ ಹಂತದಲ್ಲಿ ಉಪಾಧ್ಯಕ್ಷರು ಪೀಠವನ್ನಲಂಕರಿಸಿದರು)

Introduction ನಲ್ಲಿ ಹೇಳುತ್ತಾರೆ the planet is witnessing unprecedented changes in the quality of environment, forest are being lost at unparallel phase, soil losses due to erosion or assuming acid proportions by use of unsustainable and inappropriate technologies is polluting the air we breath and water we drink In the sense of green house gases are changing the climate at rapid rate These changes have great consequences for the health of earth as well for the physical and economic well being of human society Natural eco system are under tremendous pressure Human activities are causing large scale up gradation on land and water Deforesting, silting and pollution of rivers and losses pf wet lands, have severe ecological and economic consequences ಡಿಪಾರ್ಟ್‌ಮೆಂಟಿನವರು ಹೇಳುತ್ತಾರೆ, ನಮ್ಮ ಕರ್ನಾಟಕದಲ್ಲಿ ಬರೀ 3 9% cover ಇದೆ, forest over 20 2% ಇದೆ, totally 24 1% of the geographical area ಎಂದು ಹೇಳುತ್ತಾರೆ ವಿಶ್ವ ಪರಿಸರದಲ್ಲಿ ಯಾವ ರೀತಿಯ ಒಂದು ಬದಲಾವಣೆ ಯಾಗಿದೆ ಎಂದರೆ, ನಾನು ಕೆಲವು ಸಮಯದಲ್ಲಿ B B C ಯನ್ನು ನೋಡುತ್ತಿರುತ್ತೇನೆ ಅದರಲ್ಲಿ ಹೇಳುತ್ತಾರೆ, the earth can supply all our needs but it cannot meet our green We are destroying very nature which is nurturing us It is time to save our mother erath and save ourselves from calamity ಇದನ್ನು ಮುಂದುವರೆಸುತ್ತಾ, Tender in Forest in the world ಪ್ರಪಂಚದಲ್ಲಿ, ನಮ್ಮ ಭಾರತ ದೇಶವೂ ಸೇರಿದಂತೆ, ಪ್ರಪಂಚದ percentage of forest 26 6% ಇದೆ ಏಷಿಯಾದು 16 4%, ಆಫ್ರಿಕದ್ದು 17 7%, ಯೂರೋಪಿನದು 41 3%, ಏಷಿಯಾ ಖಂಡದ್ದು ಹೇಳಬೇಕಾದರೆ, ಚೈನಾದು 14 3%, ಪಾಕಿಸ್ತಾನದ್ದು 2 3%, ನೇಪಾಳದ್ದು 33 7%, ಬಾಂಗ್ಲಾ ದೇಶದ್ದು 7 8%, ಶ್ರೀಲಂಕಾ 27 8%, ಥೈಲ್ಯಾಂಡ್ ಮತ್ತು ಕಾಂಬೋಡಿಯಾಗಳಲ್ಲಿ ಇಲ್ಲ, ಇಂಡೋನೇಷಿಯಾದಲ್ಲಿ ಅತಿ ಹೆಚ್ಚು ಎಂದರೆ 60 6%, ಮಲೇಷಿಯಾದಲ್ಲಿ 47 1%, ಫಿಲಿಪೈನ್ಸ್ 22 7% ಜಪಾನ್‌ನಲ್ಲಿ 66 8%, U S A ನಲ್ಲಿ 23 8% ಇದೆ State of world Forest F A O

1999 ರ ಪ್ರಕಾರ ಇಂಡಿಯಾದಲ್ಲಿ 15 7%, ನಮ್ಮ ಪ್ರಕಾರ 15 5% ಇದೆ ಸರ್, ನಾನು

(5-00 PM)

ಈಗ ಹೇಳುತ್ತಿದ್ದೆ ಪ್ರಪಂಚದ ವಾತಾವರಣದಲ್ಲಿ World global warming ನಿಂದಾಗಿನ ice ಕರಗುತ್ತಿದೆ ಅನೇಕ ಕಡೆ forest ಎಲ್ಲ de-forestation ಆಗುತ್ತಿದೆ Sea level raise ಆಗುತ್ತಿದೆ ಅದರಿಂದ ವಾತಾವರಣದಲ್ಲಿ ಮಲಯ ಮಾರುತಗಳಲ್ಲಿ ಯಾವ ರೀತಿ ದಿಕ್ಕನ್ನು ಬದಲಾಯಿಸುತ್ತಿದೆ ಎನ್ನುವುದು ನಮ್ಮ ಮಾನವ ಕುಲಕ್ಕೆ ಯಾವ ರೀತಿಯ ಗಂಡಾಂತರ ಪರಿಣಾಮವನ್ನು ಬೀರುತ್ತದೆ ಎಂದು ಹೇಳುವಂಥದ್ದನ್ನು ಕೂಡ ನಾವು ಈ ದಿವಸ ಗಮನಿಸಬೇಕಾಗಿದೆ Sir, first in Canada, ಅವರು ಯಾವ ರೀತಿ Special forest management ಮಾಡುತ್ತಿದ್ದಾರೆ ಎನ್ನುವುದನ್ನು ನೋಡಿದರೆ ನಮ್ಮವರೆಲ್ಲ ಕಲಿಯಬೇಕು Japanese Banking of International Cooperation ಎಂದು ಹೇಳಿ 5 35 ಮತ್ತು 7 ಮತ್ತು 8 ರೂಪಾಯಿಗಳನ್ನು ಖರ್ಚು ಮಾಡುತ್ತಿದೆ ಈಗ ಅದೆಲ್ಲ ಖರ್ಚು ಆಗಿ ಹೋಗಿಬಿಟ್ಟಿದೆ Canadaದಲ್ಲಿ ಹೇಗೆ ಮಾಡುತ್ತಿದ್ದಾರೆ ನ್ನುವುದನ್ನು ನೋಡೋಣ Canadaದಲ್ಲಿ ಇವರು ಹೇಳುವುದೇನೆಂದರೆ, Most of the forests are owned by the public, 71% is controlled by the provinces, 23% by federal hold, some are managed by or in cooperation with territorial Governments and balance in private hands Out of 417 6 million hectares, 22 8 million hectares are recognized as heritage forests ಇಲ್ಲಿ ನಮ್ಮ reserve forest ಎಂದು ಏನು ಕರೆಯುತ್ತಾರೆ ಅಲ್ಲಿ they call it as heritage forest, and as such by law is to be left in their own state They don't interfere in heritage forests or what is called as reserve forests in India or Karnataka Another 17 5 million hectares are considered as protection forest where timber harvesting is excluded by policy Commercial forest capable of producing timer along with other variety is 235 million hectares Of these 119 million hectares i e 28 5% of the total forest area are managed for timber production ಇದರಲ್ಲಿ

ಅವರು statistics ಕೊಟ್ಟಿದ್ದರು ಬಹುಶಃ ನಮಗೂ ಕೂಡ ಇದನ್ನು ನಾವು ಜಾರಿಗೆ ತಂದುಕೊಂಡರೆ ಎಷ್ಟು ಅನುಕೂಲವಾಗುತ್ತದೆ ಎನ್ನುವ ವಿಚಾರವಾಗಿ ನಾನು ಹೇಳಲಿಕ್ಕೆ ಇಚ್ಛೆಪಡುತ್ತಿದ್ದೇನೆ About 337 communities in Canada defend largely on forestry and more than 8,38,000 Canadians work in the wood and paper industries or of the organizations associated with it They pay out more than 11 1 billion dollars per year as wages 8 ಲಕ್ಷದ 30 ಸಾವಿರ Canadians ಗೆ ಈ wood industryಯಿಂದ ಸಿಗತಕ್ಕಂಥ ಸಂಬಳ ಒಂದು ವರ್ಷಕ್ಕೆ 11 1 billion dollar In 1995 ಅವರು ಏನು export ಮಾಡಿದ್ದರೋ forest product ನಿಂದ 71 4 billion dollars Canada ಕ್ಕೆ foreign exchange ಸಿಕ್ಕಿದೆ ಅದೆಷ್ಟು ಎಂದರೆ 1995 they exported worth 32 1 billion dollars to countries, the net balance of trade almost equal to energy, fishing mining, and agriculture, Fish ಎಲ್ಲ ಬೇಕಾದಷ್ಟು export ಮಾಡುತ್ತಾರೆ ಇದರಲ್ಲಿ ಬಹಳ ವಿಶೇಷವಾಗಿರತಕ್ಕಂಥದ್ದು ಈಗ Amazon river

ಶ್ರೀ ಎನ್ ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು) ಮಾನ್ಯ ಪ್ರಕಾಶ್‌ರವರೆ, ನಮ್ಮ ಸದಸ್ಯರು ಸಾಲ ಮನ್ನಾ, ಬೇಡಿಕೆ, finance ಅದರ ಮೇಲೆ ಮಾತನಾಡುತ್ತಿದ್ದಾರೆ ಬಹಳಷ್ಟು home work ಮಾಡಿ ಇವತ್ತು ಬಂದು ಮಾತನಾಡುತ್ತಿದ್ದಾರೆ ಇದನ್ನು ಯಾರಿಗೆ ಹೇಳಬೇಕು? ಸದನದಲ್ಲಿ Forest Minister ಇಲ್ಲ ಇಲ್ಲಿ ಕೇಳಬೇಕೆಂದರೆ ನೀವೇ ಕುಳಿತು note ಮಾಡಿಕೊಂಡು ನೀವೇ ಉತ್ತರ ಕೊಡಬೇಕು ಇಲ್ಲಿ ಯಾರ್‍ಯಾರು ಶಾಸಕರು ಮಾತನಾಡುತ್ತಾರೋ ಅದು ಸುಮ್ಮನೆ ದಾಖಲೆಗೆ ಹೋಗಲಿ ಎಂದಲ್ಲ ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡುತ್ತಾರೆ ಜೀವಿಜಯರವರು ಆ ಒಂದು ಜಿಲ್ಲೆಯಿಂದ ಬಂದಂಥವರು Forest ನಲ್ಲಿ he is comparing with oher countries ಎಲ್ಲಾ ಕಡೆ ಏನಿದೆ, ಯಾರು note ಮಾಡಿಕೊಳ್ಳುತ್ತಾರೆ, ಯಾರು ಉತ್ತರ ಹೇಳುತ್ತಾರೆ? ಏನಿದು? I cannot understand ಯಾರು ಕೂಡ ಏನಾದರೂ ಕೂಡ ಅಲ್ಲಿ Council ನಲ್ಲಿ ಕೆಲಸ ಇದ್ದರೆ ಹೋಗಬೇಕು ನೀವು ಕೂಡ attentive ಆಗಿ hear ಮಾಡುತ್ತಿದ್ದೀರಿ I am very glad

But ಅವರು ಹೇಳುವ ವಿಷಯಕ್ಕೆ ಉತ್ತರ ಕೊಡತಕ್ಕಂಥವರು ಬೇಕಲ್ಲವೇ? ಅವರು ಇದ್ದಿದ್ದರೂ ಅವರಿಗೆ ಗೊತ್ತಾಗುತ್ತಿರಲಿಲ್ಲ ಅವರು ಏನು ಹೇಳುತ್ತಿದ್ದಾರೆನ್ನುವುದು ಚೆನ್ನಿಗಪ್ಪನ ತಲೆಗೆ ಹೋಗುತ್ತಿರಲಿಲ್ಲ ನೀವಾದರೂ ಆ ಬಗ್ಗೆ ಗಮನಹರಿಸಿ ನಾವು ನಿಮಗೇ ಕೇಳುತ್ತಿದ್ದೇವೆ ಯಡಿಯೂರಪ್ಪ ನವರಿದ್ದರೂ ಕೂಡ ನೀವು ಇದ್ದು ನೋಟ್ ಮಾಡಿಕೊಂಡು ಸರಿಯಾದ ರೀತಿಯಲ್ಲಿ ಉತ್ತರ ಕೊಡಬೇಕಾಗುತ್ತದೆ

ಶ್ರೀ ಬಿ ಎ ಜೀವಿಜಯ ದುರಂತವೆಂದರೆ, ಈ Forest Department has become a Transfer Department Nothing but transfer ಅಲ್ಲೀಗ ಏನು ಕೆಲಸವಾಗುತ್ತಿದೆ? ಎಲ್ಲಿಯಾದರೂ Forest ಗಳನ್ನು ನೋಡಿದ್ದೀರಾ? Western Ghats ನೋಡಿದ್ದೀರಾ? ನಮ್ಮ Western Ghats ನಲ್ಲಿ ನೀರನ್ನು ಕೊಡುವ ಎಲ್ಲ rivers originate ಆಗುತ್ತದೆ ಕೊಡಗಿನ ಬಾರ್ಡರ್‌ನಿಂದ ಹಿಡಿದು ಮಹಾರಾಷ್ಟ್ರದ ಬಾರ್ಡರ್‌ವರೆಗೆ Western Ghats ಇವೆ Western Ghats ನಲ್ಲಿ ಕುಂಭದ್ರೋಣ ಮಳೆಯಾಗಿ ನಮಗೆಲ್ಲ ನೀರು ಕೊಡುತ್ತದೆ, ಅಣೆಕಟ್ಟುಗಳು ತುಂಬುತ್ತವೆ ಅದು ನಮ್ಮ ಬದುಕಿನ ಸ್ಥಾವರ ನಾನು ಅಮೇಜಾನ್ ಬಗ್ಗೆ ಹೇಳುತ್ತಿದ್ದೆ ಅಮೇಜಾನ್ river it travels through Suriname, Guyana, Venegeula, Columbia, Equador, French Guyana, Peru, Bolivia, Brazil ಇದು ಎಷ್ಟು ದೊಡ್ಡದೆಂದರೆ, 40% of South American continent ಕವರ್ ಮಾಡುತ್ತದೆ, About 48 countries an area of United States ಅಮೇಜಾನ್ ಏರಿಯಾ ಇಲ್ಲೇನಾಗಿದೆ ಎಂದರೆ, between May 2000 and Aug 2005, Brazil lost more than 1,32,000 sq Kms of forest an area larger than Greece Since 1970 over 6 million sq Km or 2,32,000 Sq miles of Amazon rainfall have been destroyed, Similarly else where also Destruction of forest on the one hand ಆದರೆ, Europen countries, they are developed countries Ours is a developing country, Under-developed countries ಇವೆಯಲ್ಲ, ಅಲ್ಲಿಂದ ಇವರು ಟಿಂಬರ್ export ಮಾಡಿಕೊಳ್ಳುತ್ತಾರೆ What is the picture in Europe? European countries form less than 10% cover because there is Iceland and Island, but upto more than 60% of forest cover is in

Fınland and Sweden The ever green forest areas ın Europe ıs 44% plus an addıtıonal wooded forest ıs 4% The reported forest area ın Europe ıs 119 93 mıllıon hectares ın 2005, an ıncrease of 7% ನಮ್ಮ global area ದಲ್ಲಿ ıt has decreased by 3% ಈ ರೀತಿಯ destructıon forestನಿಂದ ಏನಾಗುತ್ತದೆ, ನಮಗೆ ಈ ವರ್ಷ ಮಳೆಗಾಲ ಪ್ರಾರಂಭವಾಗಿರುವುದು ಬಹಳ late ಆಯಿತು ನಮ್ಮ ಕರ್ನಾಟಕ ಗತಿ ಏನಾಗುತ್ತದೆಂದು, ನಮ್ಮ ಅಣೆಕಟ್ಟೆಗಳು ತುಂಬುತ್ತದೋ ಇಲ್ಲವೋ ಎನ್ನುವ ಭಯ ನನಗಾಗಿತ್ತು ನಮ್ಮ ಕೊಡಗು ಜಿಲ್ಲೆಯಲ್ಲಿ ಈ ವರ್ಷ ಮಳೆ ಬೇಗ ಪ್ರಾರಂಭವಾಗಲಿಲ್ಲ ಅಥವಾ ನಮ್ಮ ಕರ್ನಾಟಕದ Western Ghats ನಲ್ಲಿ ಆರಿದ್ರ ಮಳೆ ಮಾತ್ರ ಪ್ರಾರಂಭವಾಯಿತು ಆರಿದ್ರ ಮಳೆ ಪ್ರಾರಂಭವಾಗಿ ಒಂದೇ ಸಮನೆ ಒಂದೇ ಸಲ ಮಳೆ ಸುರಿಯಿತು ಇದಕ್ಕೆ ಕಾರಣಗಳೇನು?

ಈ ದಿವಸ ವಿಶ್ಲೇಷಣೆ ಮಾಡುವುದಕ್ಕೆ ಟೈಂ ಇಲ್ಲ ಅಥವಾ ಸಮಯದ ಅಭಾವವಿದೆ ಆದರೆ, world weather change ಆಗಲಿಕ್ಕೆ Natıonal Geographıc ನಲ್ಲೊಂದು artıcle ಬಂದಿದೆ ಅದರಲ್ಲಿ, thıs curıous phenomena ıs known as EI Nıno It ıs a manıfestatıon of an oscıllatory change ın atmosphere pressure over Southern Pacıfic Ocean Normally hıgh pressure belt hovers over south east pacıfic ocean and ıslands and travels over Indonesıa These two engage ın see-saw behavıor called southern oscıllatıon When ıt dıffers, the pressure becomes abnormally low and the trade wınds ın eastern pacıfic collapses resultıng ın extensıve warmıng of ocean water that ıs much hıgher than normal ಆ ಟೈಂನಲ್ಲಿ ಇಡೀ ಪ್ರಪಂಚದಲ್ಲಿ ವಾತಾವರಣದಲ್ಲಿ ಬದಲಾವಣೆಯಾಗುತ್ತದೆ ಅಲ್ಲಿ Spacıfic regıon ocean ನಲ್ಲಿ ಹೆಚ್ಚು ಕಡಿಮೆ ಸೆಂಟ್ರಲ್ ಅಮೆರಿಕಾದ ಫಿಲಿಫೈನ್ಸ್ Islands ನಿಂದ 8 ಸಾವಿರ ಮೈಲಿವರೆಗೆ sea warm ಆಗುತ್ತದೆ Trade wınds ಅಂದರೆ ಮಲಯಮಾರು ತಗಳೆಂದು ಏನು ಹೇಳುತ್ತೇವೆ, ಅವು ತದ್ವಿರುದ್ಧ ದಿಕ್ಕಿನಲ್ಲಿ ಸಂಚರಿಸುವುದರಿಂದ ಈ ಅನಾಹುತಗಳೆಲ್ಲ ಆಗುತ್ತವೆ ಈಗ ಪರಿಸರದಲ್ಲಿ ಬಹಳ ಬದಲಾವಣೆಯಾಗಿರುವುದರಿಂದ, ನಮ್ಮ ದೇಶದಲ್ಲಿ ಅರಣ್ಯ ಪ್ರದೇಶ 15% ಇದೆ, ಅದನ್ನು 33% ಮಾಡಬೇಕೆಂದು ನಾವು ಪ್ರಯತ್ನಪಡುತ್ತಿದ್ದೇವೆ ನಾನು ಅರಣ್ಯ ಮಂತ್ರಿಯಾಗಿದ್ದಾಗಲೂ ಕೂಡ

ಕರ್ನಾಟಕದಲ್ಲಿ 20% ಅರಣ್ಯ ಪ್ರದೇಶವಿತ್ತು ಅವರಿಲ್ಲಿ statistics ಕೊಟ್ಟು 23% ಇದೆ ಎಂದು ಕೊಡುತ್ತಾರೆ 23% ಎಲ್ಲಾಗಿದೆ? Tree cover ಇರುವಂಥಾದ್ದು ಕೇವಲ 3% ಎಂದು satellite imaginary ಹೇಳುತ್ತದೆ ಇವರು tree cover 15% ಎಂದು ಹೇಳುತ್ತಾರೆ 20–25 ವರ್ಷಗಳಾದರೂ ಕೂಡ ಅನೇಕ ಯೋಜನೆಗಳನ್ನು ಜಾರಿಗೆ ತಂದರೂ ಕೂಡ, ಕೊಟ್ಯಾಂತರ ರೂಪಾಯಿ ಖರ್ಚು ಮಾಡಿದರೂ ಕೂಡ ಈ ದಿವಸ ನಾವು forest cover increase ಮಾಡಲಿಕ್ಕೆ ಸಾಧ್ಯವಾಗಿಲ್ಲ ಇವರದು plans ಬೇಕಾದಷ್ಟಿದೆ World Bank ನಿಂದ ನಮಗೆ ಹಣ ಸಿಕ್ಕಿದೆ Overseas Development Bank of United Kingdom ನಿಂದ ಹಣ ಸಿಕ್ಕಿದೆ ಈಗ JBIC – Japanese Banking International Co operation ನವರು Karnataka sustainable forest management and bio diversity project ಎಂದು ಕರೆಯುತ್ತಾರೆ First Phaseನಲ್ಲಿ 566 55 ಕೋಟಿ ರೂ ಇದೆ ಈ ಸಾರಿ JBIC ಯಲ್ಲಿ 2005–06 ರಿಂದ 2012–13 ರವರೆಗೆ ಇವರು ಇದನ್ನು implement ಮಾಡಬೇಕು JBICಯವರು 745 ಕೋಟಿ ರೂ ಗಳನ್ನು ಖರ್ಚು ಮಾಡುತ್ತಾರೆ ಇವರು Programme ಹಾಕಿಕೊಂಡಿದ್ದಾರೆ ಮೊದಲು ಈ Projectನಲ್ಲಿ 16 districts ಗೆ 17,025 sq Kms ಅರಣ್ಯೀಕರಣ ಮಾಡಬೇಕು ಆ degradable forest ಅನ್ನು improve ಮಾಡುವುದು, ಹೊಸ ಅರಣ್ಯ ಬೆಳೆಸುವುದು ಮಾಡಬೇಕು ಯಾವ್ಯಾವ ಜಿಲ್ಲೆಗಳಲ್ಲಿ ಅಂದರೆ, ಬೆಂಗಳೂರು, ಬೆಳಗಾಂ, ಬಳ್ಳಾರಿ, ಬೀದರ್, ಬಿಜಾಪುರ, ಚಿಕ್ಕಮಗಳೂರು, ಚಿತ್ರದುರ್ಗ, ಧಾರವಾಡ, ಗುಲ್ಬರ್ಗಾ, ಹಾಸನ ಕೋಲಾರ, ಮಂಡ್ಯ, ಮೈಸೂರು, ರಾಯಚೂರು ಮತ್ತು ಶಿವಮೊಗ್ಗ ಮತ್ತು ತುಮಕೂರು ಇದರಲ್ಲಿ Management of Ecology, sensitive archeologically important wild life potential area 20,000 hectares ಇದೆಯೆಂದು ಹೇಳಿದ್ದಾರೆ ಇದು ಆಗಿ ಹೋಗಿದೆ Protection and regeneration of degraded mature forest 80,000 hectares ಇದೆಯಂದು ಹೇಳುತ್ತಾರೆ Multi purpose forest area 46,000 hectares Government lands ನಲ್ಲಿ 23,500 hectares, institutional lands ನಲ್ಲಿ 1000 hectares, total

1,69,500 hectares ಇವರು 3 ಲಕ್ಷ hectaresನಲ್ಲಿ Farm forestry ಮಾಡುತ್ತೇವೆಂದು ಹೇಳುತ್ತಾರೆ JBIC component ನಲ್ಲಿ ನಮಗೆ 0 75% interest charge ಮಾಡಿದ್ದಾರೆ Afforestation 1,85,000 hectares ಇಲ್ಲಿ ಒಟ್ಟು 27 ಜಿಲ್ಲೆಗಳಲ್ಲಿಯೂ ಕೂಡ ಮಾಡುತ್ತಾರೆ Farm forestryಗೆ 76 million seedlings ಹಂಚುತ್ತಾರೆ ಇವರು 397 ಕೋಟಿ ರೂ, ಖರ್ಚು ಮಾಡಿ 1,85,000 hectares ಮಾಡುತ್ತೇವೆಂದು ಹೇಳಿಕೊಂಡಿದ್ದಾರೆ, 42 20 ಕೋಟಿ ರೂ ಗಳಲ್ಲಿ farm forestry ಮಾಡುತ್ತೇವೆಂದು ಹೇಳುತ್ತಾರೆ ಅಂಕಿ-ಅಂಶ ಇದೆ ಇವರು 1 ರಿಂದ 14 ರವರೆಗೆ modles ಇಟ್ಟುಕೊಂಡಿದ್ದಾರೆ 1997-98ರಿಂದ 2004-05ರವರೆಗೆ ಇವರು ಖರ್ಚು ಮಾಡಿರುವುದು 527 ಕೋಟಿ ರೂ ಗಳು ಇದು financial target ಆಗಿದೆ ಇವರು financial target 202 ಲಕ್ಷದ 45 ಸಾವಿರ 254 hectares ಎಂದು ಹೇಳುತ್ತಾರೆ ಕೇವಲ 2 lakhs hectares ಅರಣ್ಯ ಬೆಳೆಸಿದ್ದೇವೆಂದು ಹೇಳುತ್ತಾರೆ ಅವರದೇ statistics ಪ್ರಕಾರ ನೋಡಿದರೆ ನನಗೆ ಆಶ್ಚರ್ಯವಾಗುತ್ತದೆ Forest protection and management and Forest resource management ಎಂದಿದೆ ಈ Forest protection management ಗೆ ಇವರು 1,462 million rupees ಖರ್ಚು ಮಾಡುತ್ತಾರೆ Forest protection managementಗೋಸ್ಕರವಾಗಿ 2,517 million ಅಂದರೆ ಒಟ್ಟಿಗೆ ಸೇರಿ 398 ಕೋಟಿ ರೂ ಖರ್ಚು ಮಾಡುತ್ತಾರೆ ಮತ್ತೆ, ಇವರು tree based form, agro based form, institutional plantation ಇದಕ್ಕೆ 422 ಕೋಟಿ ರೂ ಗಳನ್ನು ಖರ್ಚು ಮಾಡುತ್ತಾರೆ ಇದಕ್ಕೆ 54% ಹಣವನ್ನು ಖರ್ಚು ಮಾಡುತ್ತಾರೆ ಇದಕ್ಕೆ 6%ನಲ್ಲಿ 76 million trees ಬೆಳೆಯುತ್ತೇವೆಂದು ಹೇಳುತ್ತಾರೆ ಒಂದು ಹೆಕ್ಟೇರ್‌ಗೆ 100 ಮರ ನೆಟ್ಟರೆ ಅದು ಒಂದು ಹೆಕ್ಟೇರ್ ಎಂಬುದು ಅವರ ಲೆಕ್ಕ Spacing ಹಾಗೆ ಇದೆ ಆ ರೀತಿ ಇವರು ಮಾಡುವುದಕ್ಕೆ ಹೋದರೆ, 398 ಕೋಟಿ ರೂ ಖರ್ಚು ಮಾಡಿ 1 ಲಕ್ಷ 85 ಸಾವಿರ ಹೆಕ್ಟೇರ್ ಮಾಡುತ್ತಾರೆ Farm forestryಯಲ್ಲಿ ಅವರ ಲೆಕ್ಕವನ್ನೇ ತೆಗೆದುಕೊಳ್ಳುವುದಕ್ಕೆ ಹೋದರೆ, Spacing ತೆಗೆದುಕೊಳ್ಳುವುದಕ್ಕೆ ಹೋದರೆ, ಕೇವಲ 42 ಕೋಟಿ ರೂ ಗೆ 7 ಲಕ್ಷದ 60 ಸಾವಿರ ಹೆಕ್ಟೇರ್

ಎನ್ನುತ್ತಾರೆ ಇದು ಹೇಗೆಂದು ನೋಡಿ? ಡಿಪಾರ್ಟ್‌ಮೆಂಟ್‌ನವರು 398 ಕೋಟಿ ರೂ ಖರ್ಚು ಮಾಡಿ 1 ಕೋಟಿ 95 ಲಕ್ಷ ಹೆಕ್ಟೇರ್, ಅವರದೇ formula ತೆಗೆದುಕೊಂಡರೆ, farm forestry ಯಲ್ಲಿ 7 ಲಕ್ಷದ 60 ಸಾವಿರ ಹೆಕ್ಟೇರ್ ಇದೆ ಇದು ಹೇಗೆ? Farm forestryಯಲ್ಲಿ ಎಷ್ಟು ಅರಣ್ಯ ಬೆಳೆಯುವುದಕ್ಕಾಗುತ್ತದೆ? ಇವರ ಡಿಪಾರ್ಟ್‌ಮೆಂಟ್ ಮಾಡಿದ್ದು, 1 ಲಕ್ಷ 85 ಸಾವಿರ ಹೆಕ್ಟೇರ್ ಬೆಳೆಯಲಿಕ್ಕೆ ಸಾಧ್ಯವಾಗುತ್ತದೆ ಇದೆಂಥ ಪವಾಡ? ಅದಕ್ಕೋಸ್ಕರವಾಗಿ ಈ ದಿವಸ ಈ ಡಿಪಾರ್ಟ್‌ಮೆಂಟ್‌ನಿಂದ ಏನು ಶೇಕಡಾ 33 ರಷ್ಟು ಅರಣ್ಯ ಬೆಳೆಸಬೇಕೆಂದು ಪ್ರಯತ್ನಪಡುತ್ತಿದ್ದಾರೆ, ಆ ರೀತಿ ಟಾರ್ಗೆಟ್ ಹಾಕಿಕೊಂಡಿದ್ದಾರೆ, ಇವತ್ತೂ ಕೂಡ ಏನು ಅರಣ್ಯ ಪ್ರದೇಶವಿತ್ತು, ಅಲ್ಲಿ ಅವರು ನಾವು plantation ಮಾಡಿದ್ದೇವೆಂದು ಹೇಳಿಕೊಳ್ಳುವುದು ಅಲ್ಲಿ ಯಾರೂ ಇಲ್ಲ ನಾನು ಮಾತನಾಡುವುದು ಮಾತನಾಡಬೇಕಲ್ಲ? ವಿಷಯ ಹೇಳಬೇಕಲ್ಲ? ನಾವು ಲೋನ್ ತೆಗೆದುಕೊಳ್ಳುತ್ತಿದ್ದೇವೆ ಈಗ buildingಗೆ 56 4 ಕೋಟಿ ಹಣವನ್ನು ಖರ್ಚು ಮಾಡುತ್ತಾರೆ ಅಷ್ಟು ಹಣವೇಕೆ? Forest ಬೆಳೆಯುವವರು ಅಷ್ಟು ಹಣವನ್ನೇಕೆ ಖರ್ಚು ಮಾಡಬೇಕು? ಇನ್ನೊಂದು ಭಾರೀ ತಮಾಷೆಯಾಗಿದೆ Soil Conservation measuresಗೆ 59 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ ಇದರ ಬಗ್ಗೆ ಬಯಲು ಸೀಮೆಯಲ್ಲಿರತಕ್ಕಂಥವರು ಹೇಳಬೇಕು ಇವತ್ತಿನ ದಿವಸ ಕೆರೆ ಎಲ್ಲಾಗಿದೆ? ಮತ್ತೆ soil conservation ಎಲ್ಲಾಗಿದೆ? ಇದರ ದುಡ್ಡು ಎಲ್ಲಿಗೆ ಹೋಯಿತು? ಇದಕ್ಕಾಗಿ ವಿದೇಶದಿಂದ ಸಾಲದ ರೂಪದಲ್ಲಿ ಕೊಡತಕ್ಕಂಥ ಹಣವನ್ನು ವ್ಯವಸ್ಥಿತವಾಗಿ ಖರ್ಚು ಮಾಡದಿದ್ದರೆ ನಮ್ಮ ಅರಣ್ಯ ಅಬಿವೃದ್ಧಿಯಾಗುವುದು ಹೇಗೆ? How you can change the environment? How you can save the earth? Is the department meant only for forest officials? ಅರಣ್ಯ ಇಲಾಖೆಯಲ್ಲಿ ಎಷ್ಟು ಜನ officials ಇದ್ದಾರೆಂದು ಮಾನ್ಯ ರಮೇಶ್‌ಕುಮಾರ್‌ರವರು ಹಿಂದೆ ಒಂದು ಪ್ರಶ್ನೆಯನ್ನು ಕೇಳಿದ್ದರು ಇದರ ಬಗ್ಗೆ ನನಗೆ ನೆನಪಿದೆ ಕರ್ನಾಟಕದಲ್ಲಿ 164 IFS officials ಇದ್ದಾರೆಂದು ಉತ್ತರ ಕೊಟ್ಟಿದ್ದರು ನಾನು ಅರಣ್ಯ ಮಂತ್ರಿಯಾಗಿದಂದ ಸಂದರ್ಬದಲ್ಲಿ ಕೊಡಗು, ನಾರ್ಥ್ ಕೆನರಾ, ಬೆಳಗಾಂ, ಶಿವಮೊಗ್ಗ, ಮೈಸೂರು, ಬೆಂಗಳೂರು, ಬಳ್ಳಾರಿ, ಗುಲ್ಬರ್ಗಾ ಈ ಜಿಲ್ಲೆಗಳಲ್ಲಿ ಮಾತ್ರ ಸರ್ಕಲ್‌ಗಳಿದ್ದವು ಆದರ ಈಗ 27 ಸರ್ಕಲ್‌ಗಳಿವೆ ಒಂದೊಂದು ಸರ್ಕಲ್‌ಗೆ

ಒಬ್ಬೊಬ್ಬ Conservator ಇದ್ದಾರೆ ಮತ್ತೆ DFO 55 ಜನ ಮತ್ತೆ Conservator of forest 25 ಜನ, Principal CCF ಇಬ್ಬರಿದ್ದಾರೆ

ಶ್ರೀ ಕೆ ಆರ್ ರಮೇಶ್‌ಕುಮಾರ್ ಮಾನ್ಯ ಅಧ್ಯಕ್ಷರೆ, ಈ ರಾಜ್ಯದಲ್ಲಿ IFS ಅಧಿಕಾರಿಗಳ ಸಂಖ್ಯೆ ಎಷ್ಟೆಂದು ನಾನು ಪ್ರಶ್ನೆ ಕೇಳಿದ್ದೆ ಇವರು ಇಷ್ಟು ಅನುಪಾತದಲ್ಲಿರಬೇಕೆಂದು DPAR ನಲ್ಲಿದೆ ಆದರೆ ನಮ್ಮಲ್ಲಿ ಅಗತ್ಯಕ್ಕಿಂಥ ಹೆಚ್ಚು ಜನರನ್ನು ಇಟ್ಟುಕೊಂಡಿದ್ದಾರೆ ಇದರ ಬಗ್ಗೆ ನಾನು ಪ್ರಶ್ನೆಯನ್ನು ಕೇಳಿ ಉತ್ತರವನ್ನು ಪಡೆದುಕೊಂಡಿದ್ದೆ ಹೆಚ್ಚು ಜನರನ್ನು ತೆಗೆದುಕೊಂಡು ಕಾಡನ್ನು ನೀವು ಅಭಿವೃದ್ಧಿ ಮಾಡದಿದ್ದರೆ ಪರವಾಗಿಲ್ಲ ಅವರು ಬೇರೆ ಬೇರೆ ಇಲಾಖೆಗಳಿಗೆ ಮತ್ತು ಜಿಲ್ಲಾ ಪಂಚಾಯತ್‌ಗೆ CEO ಗಳಾಗಿ ಬರುತ್ತಿದ್ದಾರೆ ಇವರು ಮೇಯುವುದಕ್ಕೆ ಕರ್ನಾಟಕ ರಾಜ್ಯ ಒಂದು ರೀತಿ ಹುಲ್ಲುಗಾವಲು ಇದ್ದ ಹಾಗೆ ಆದಕ್ಕೋಸ್ಕರ ಹೆಚ್ಚಿನ ಸಂಖ್ಯೆಯಲ್ಲಿ ಇಲ್ಲಿಗೆ ಬರುತ್ತಾರೆ ಇವರುಗಳನ್ನು ಕರೆದುಕೊಂಡು ಬಂದು ಇಲ್ಲಿ ಸಾಕುವುದಕ್ಕೆ ನಮ್ಮ ಸರ್ಕಾರಕ್ಕಿಂಥ ಬೇರೆ ಯಾರು ಸಲೀಸಾಗಿರುತ್ತಾರೆ ಹೇಳಿ? ಈಗ ಇರತಕ್ಕಂಥ cadres strength ಇದೆಯಲ್ಲ, we have more than what is required by Karnataka

ಶ್ರೀ ಬಿ ಎ ಜೀವಿಜಯ ಮಾನ್ಯ ಅಧ್ಯಕ್ಷರೆ, ಮೊದಲು ಕೇವಲ 6 ಸರ್ಕಲ್ ಇತ್ತು ಈಗ 27 ಸರ್ಕಲ್ ಮಾಡಲಾಗಿದೆ ಇದು ಏಕೆ ಬೇಕು? ಒಂದು ಇಂಚಿನಷ್ಟು ಅರಣ್ಯವನ್ನು ಹೆಚ್ಚಿಗೆ ಮಾಡಿದ್ದೇವೆಯೇ? ಇವತ್ತಿನ ದಿವಸ DFO, Conservators ಎಷ್ಟು ಜನರಿದ್ದಾರೆ? ಪ್ರತಿಯೊಂದು ಗಿಡಕ್ಕೆ ಒಬ್ಬ Conservator ಬೇಕೇ? ಪ್ರತಿಯೊಂದು ಮರಕ್ಕೆ ಒಬ್ಬ DCF ಬೇಕೇ? What is happening in the State? ನಮ್ಮ ಅರಣ್ಯವನ್ನು ಸಂರಕ್ಷಣೆ ಮಾಡಬೇಕಾದರೆ ಮತ್ತು ಉಳಿಸಿಕೊಳ್ಳಬೇಕಾದರೆ ಇವತ್ತಿನ ದಿವಸ ಫಾರೆಸ್ಟ್ ಗಾರ್ಡ್‌ಗಳು ಸುಮಾರು 2000 ಜನರಿಗಿಂಥ ಹೆಚ್ಚು ಬೇಕಾಗುತ್ತಾರೆ ಇದುವರೆಗೂ ನೇಮಕಾತಿ ಮಾಡುವುದಕ್ಕೆ ಇವರಿಗೆ ಸಾಧ್ಯವಾಗಿಲ್ಲ This is most unfortunate ಬಳ್ಳಾರಿಯಲ್ಲಿರುವ ಚಿಲಕನಹಳ್ಳಿಯಲ್ಲಿ, JBS ಮುಖಾಂತರ Complete ಆಗಿ afforestation ಆಗಿದೆ ಎಂದು ವರದಿಯಲ್ಲಿ ಹೇಳಿದ್ದಾರೆ ಆದ್ದರಿಂದ, ಅಲ್ಲಿ ಆಗಿದೆಯೇ ಎಂದು ಮಾನ್ಯ ಗೃಹ ಮಂತ್ರಿಗಳು ಹೇಳಬೇಕು ಮತ್ತೆ ಯಾದಗಿರಿ ಮತ್ತು ಗುಲ್ಬರ್ಗಾದ ಚಿಂಚೋಳಿ ಅರಣ್ಯದಲ್ಲಿ

ಮತ್ತೆ State forest in Chitradurga, Nagapuri in Arasikere, Savanadurga forest in Bangalore district ಎಲ್ಲಾ ಕಡೆ ಇದು ಆಗಿದೆಯೇ? ಇದು ಕೇವಲ ಪೇಪರ್‌ನಲ್ಲಿ ಮಾತ್ರ ಇದೆ ಹಾಗಾದರೆ, ಈ ದುಡ್ಡು ಎಲ್ಲಿಗೆ ಹೋಯಿತು? 1300 ಕೋಟಿ ರೂಪಾಯಿ ಹಣವನ್ನು Japanese Banking of International Co-operationಗೆ ತೆಗೆದುಕೊಳ್ಳುತ್ತೇವೆ The main purpose is to increase forest area in Karnataka State, to bring it to the level of 33% The money is being spent The afforestation work has not been taken Place What has happened to the money? Evaluation ಮಾಡಬೇಕಲ್ಲವೇ? ಮಾನ್ಯ ಉಪಾಧ್ಯಕ್ಷರಿಗೆ ಕಲವು ಫೋಟೋಗಳನ್ನು ಕಳುಹಿಸಿಕೊಡುತ್ತೇನೆ ಎಲಿಫೆಂಟ್ ಟ್ರಂಚ್ ಮಾಡುತ್ತಿದ್ದಾರೆ ರೆಗ್ಯುಲರ್ ಪ್ರೋಗ್ರಾಮ್ ಬೇರೆ ಇದೆ ಮತ್ತೆ JBIC Programme ಬೇರೆ ಇದೆ ಎಷ್ಟು ಜನ ಸತ್ತು ಹೋಗಿದ್ದಾರೆಂದು ನನ್ನ ಹತ್ತಿರ ಅಂಕಿ-ಅಂಶಗಳಿವೆ Crop damageದು 78,548 cases, cattle killed-7448, Human death 446, permanent injury 1877 ಇವರು Japanese Banking of International Co operation ನಲ್ಲಿ ಸಾಲ ತೆಗೆದುಕೊಂಡು International training and training out side the State ಹೆಚ್ಚುಕಡಿಮೆ 35 ಕೋಟಿ ಖರ್ಚು ಮಾಡುತ್ತಾರೆ ಅವರಿಗ ಏನು ತರಬೇತಿ ಸಿಕ್ಕಿದೆ? ಅವರೇನು ಜಿಂಬಾಬ್ವೆ, ಮಚಾಂಬಿಕೆ ಅಥವಾ ಕೀನ್ಯಾ ದೇಶಕ್ಕೇನಾದರೂ ಹೋಗಿದ್ದಾರೆಯೇ? ಅಲ್ಲಿ ಆನೆಯನ್ನು ಯಾವ ರೀತಿ ಕಂಟ್ರೋಲ್ ಮಾಡುತ್ತಾರೆಂಬುದನ್ನು ಅವರು ನೋಡಿದ್ದಾರೆಯೇ? ಫಾರಿನ್ ಟೂರ್‌ಗೆಂದು ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೀರಿ ನಾವು ಕಾಡನ್ನು ಅಭಿವೃದ್ಧಿ ಮಾಡಬೇಕೆಂದು ಹೇಳಿ ವಿದೇಶದಿಂದ ಸಾಲ ಪಡೆದುಕೊಂಡಿ-ರುತ್ತೇವೆ ಆದರೆ, ಟೂರ್ ಪ್ರೋಗ್ರಾಮ್ ಹಾಕಿಕೊಳ್ಳುವುದಕ್ಕಾ ಈ ಹಣ ಇರುವುದು? ಆನೆ ಇರತಕ್ಕಂಥ ಯಾವ ಅರಣ್ಯದಲ್ಲಿ ಇವರು ಕೆರೆಯನ್ನು ತೋಡಿದ್ದಾರೆಂದು ಮತ್ತು ಎಲ್ಲಿ Soil Conservation ಮಾಡಿದ್ದಾರೆಂಬುದನ್ನು ಇವರು ಹೇಳಬೇಕು ಈ ಕಾರ್ಯಕ್ರಮಗಳ ಬಗ್ಗೆ ಹೇಳಿಕೊಂಡು ಹೋದರೆ ಹೇಗಾಗುತ್ತದೆಂದರೆ, ಅರಣ್ಯ ಇಲಾಖೆ ಬಗ್ಗೆ ಮಾತನಾಡುವುದು ಕೇವಲ ಅರಣ್ಯರೋದನವಷ್ಟೆ ಇದರಿಂದ ಫಲಶ್ರುತಿ ಏನು ಬರುವುದಿಲ್ಲ ಇದನ್ನು

ಯಾವ ರೀತಿಯಾಗಿ ರಿಪೇರಿ ಮಾಡಬೇಕೆಂಬುದು ಗೊತ್ತಿಲ್ಲ ಇವತ್ತಿನ ದಿವಸ ಅರಣ್ಯ ಇಲಾಖೆ ಯಾವ ಮಟ್ಟಕ್ಕೆ ತಲುಪಿದೆ ಎಂದರೆ, we must cry ಈ ದಿವಸ ನಾವು ಅಳಬೇಕಾಗುತ್ತದೆ ಅರಣ್ಯ ಬೆಳೆಸುವುದಕ್ಕೋಸ್ಕರ ಕೋಟ್ಯಾಂತರ ರೂಪಾಯಿಗಳನ್ನು ಸಾಲ ಪಡೆದುಕೊಂಡು ಆ ಹಣವನ್ನು ಯಾವ ರೀತಿಯಾಗಿ ಖರ್ಚು ಮಾಡುತ್ತಿದ್ದೇವೆಂದರೆ, ಇದು ಪ್ರಯೋಜನವಾಗುತ್ತಿದೆಯೇ ಅಥವಾ ದುರುಪಯೋಗವಾಗುತ್ತಿದೆಯೇ ಎಂಬ ಪ್ರಶ್ನೆಯನ್ನು ನಾನು ಕೇಳುವುದಕ್ಕೆ ಬಯಸುತ್ತೇನೆ ಹೆಚ್ಚಿಗೆ ಸಮಯವಿಲ್ಲದೇ ಇರುವುದರಿಂದ ನಾನು ಹೆಚ್ಚಿಗೆ ಮಾತನಾಡುವುದಕ್ಕೆ ಇಚ್ಛೆ ಪಡುವುದಿಲ್ಲ ಕೊನೆಯಲ್ಲಿ ಕೊಡಗಿನ ಜ್ವಲಂತ ಸಮಸ್ಯೆ ಬಗ್ಗೆ ಹೇಳುವುದಕ್ಕೆ ಇಚ್ಛೆಪಡುತ್ತೇನೆ ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡಿದರು ಕೂಡ ಅರಣ್ಯವನ್ನು ಬೆಳೆಸಿಲ್ಲ ಕೊಡಗಿನಲ್ಲಿ ಜಮ್ಮ ಮಲ್ಯೆ ಎಂದು ಇದೆ ಜಮ್ಮಾ ಜಾಗ ಬೇರೆ, ಬಾಣೆ ಜಾಗ ಮಲ್ಯೆ ಬೇರೆ ಇದು 7,841 64 ಎಕರೆಗಳಷ್ಟಿದೆ ಅಲ್ಲಿ ಹೋಗಿ ಅಲ್ಲಿರತಕ್ಕಂಥ ಮರವನ್ನು ನೋಡಬೇಕಾಗುತ್ತದೆ ಅಲ್ಲಿರತಕ್ಕಂಥ ಒಂದೊಂದು ಮರ ಆಕಾಶದಷ್ಟು ಎತ್ತರಕ್ಕೆ ಬೆಳೆದಿದೆ ಅಲ್ಲಿರುವ ಒಂದೊಂದು ಮರ 60 ಕ್ಯೂಬಿಕ್ ಮೀಟರ್ಸ್ ಆಗುತ್ತದೆ ಅದು ನಿತ್ಯ ಹರಿದ್ವರ್ಣ evergreen Forest ಕಾಡು It is a rain forest One of the hot place in the world ಅಲ್ಲಿರತಕ್ಕಂಥ 7,841 64 ಎಕರೆ ಜಮ್ಮ ಮಲ್ಯೆ ಇದೆ ಇದನ್ನು ಸರ್ಕಾರಕ್ಕೆ ಕೊಡುತ್ತೇವೆಂದು ಹೇಳುತ್ತಾರೆ

(5-30 PM)

ಇದಕ್ಕೆ ಸಂಬಂಧಪಟ್ಟಂತೆ Principal Chief Conservator of Forest ರವರು ಸರ್ಕಾರಕ್ಕೆ ಒಂದು ಪತ್ರವನ್ನು 2005ನೇ ಇಸವಿಯಲ್ಲಿ ಬರೆಯುತ್ತಾರೆ ಈ ಪತ್ರದಲ್ಲಿರುವುದನ್ನು ಸಭೆಯ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ "Bangalore, dated 3-3-2005, "Acquisition of Jamma, Malais in Kodagu district Latter dated 30-6-2004 from the President, Coorg Wild Life Society, Madikeri In this, all the available records reveal that the Kadma Malai have heredity rights over these areas for cultivation of Kadma In additional, they have several other rights for collection of leaves, fodder, fire, timber and so on The western chats of forests are extremely sensitive to echo system and their preservation is of

vital importance, Particularly for the perennials of the rivers that originate for the conservation of bio diversity At this juncture, one this Kadma Malais have come forward to surrender their hereditary rights It should be wel comed by us The State Government has determined the net present Value of every bit of land in western Chats at NPV , "NPV ಅಂದರೆ ನಿವ್ವಳ ವರ್ತಮಾನ ಬೆಲೆ "The State Government has determined the Net Present Value of every bit of land in western Chats to be at Rs 9 2 lakh per hectare It would be extremely reasonable for us to offer at least 15% of this value i e, Rs 1,40,000 par hectare to these right holders The money collected under NPV available with the State Government can be disbursed to them over a period of three years I am in full and strong support of this initiative Copy of the letter dated 30-6-2004 of the Coorg Madikeri Wild Life Society for reference "

State Government ಹತ್ತಿರ deposit of camp ಶೀರ್ಷಿಕೆಯಲ್ಲಿ ಇದೆ ದಿನಾಂಕ 31-12-2000ಕ್ಕೆ 327,68,34,745 ರೂಪಾಯಿ NPA account ನಲ್ಲಿದೆ Principal Chief Conservator ರವರು ಸರ್ಕಾರಕ್ಕೆ 2004ರಲ್ಲಿ ಒಂದು ಪತ್ರ ಬರೆಯುತ್ತಾರೆ ಇದರ ಬಗ್ಗೆ ಒಂದು ತೀರ್ಮಾನ ತೆಗೆದುಕೊಳ್ಳುವುದಕ್ಕೆ ಸರ್ಕಾರಕ್ಕೆ ಇದುವರೆಗೂ ಸಹ ಆಗಿಲ್ಲ ಇವರು ಕೋಟ್ಯಂತರ ರೂಪಾಯಿ ಖರ್ಚು ಮಾಡಿ ಕಾಡನ್ನು ಬೆಳೆಸುವುದಕ್ಕೆ ಇವರಿಗೆ ಸಾಧ್ಯವಾಗಿಲ್ಲ ನಿತ್ಯ ಹರಿದ್ವರ್ಣ ಕಾಡಿನಲ್ಲಿರತಕ್ಕಂಥ 7841 ಹೆಕ್ಟೇರ್ ಜಾಗವನ್ನು ಅರಣ್ಯ ಇಲಾಖೆಗೆ ಕೊಡುತ್ತೇವೆಂದು ಕೊಡಗಿನವರು ಹೇಳುತ್ತಾರೆ ಆದರೆ, ಇದರ ಬಗ್ಗೆ ತೀರ್ಮಾನ ತೆಗೆದುಕೊಳ್ಳುವುದಕ್ಕೆ ಇವರಿಗೆ ಆಗಿಲ್ಲ ಈ ಇಲಾಖೆ ಇರುವುದೇಕೆ? ಇವರ ಕಾಡು ಬೆಳೆಸುವುದಕ್ಕೆ ಮತ್ತು ಪರಿಸರವನ್ನು ಉಳಿಸುವುದಕ್ಕೆ ಇದ್ದಾರಾ? What is this? ನಿಜವಾಗಿಯೂ ಕೂಡ ಇದೊಂದು ದುರಂತ ನನಗೆ ಹೆಚ್ಚಿನ ಸಮಯದ ಅವಕಾಶ ಇಲ್ಲದೇ ಇರುವುದರಿಂದ ಕೊನೆಯಲ್ಲಿ ಒಂದು ಸಲಹೆ ಕೊಡುವುದಕ್ಕೆ ಬಯಸುತ್ತೇನೆ ನಮ್ಮಲ್ಲಿ ಆನೆಗಳ ಕಾಟ ಜಾಸ್ತಿ ಇದೆ ನನ್ನ ತೋಟಕ್ಕೆ 23 ಆನೆಗಳು ಬಂದಿದ್ದವು ಏನು ಮಾಡಬೇಕೆಂದು ನನ್ನ ತೋಟದ ಸಿಬ್ಬಂದಿಗಳು

ಕೇಳಿದರು ಏನು ಮಾಡುವುದಕ್ಕೆ ಹೋಗಬೇಡಿ ಗೆಸ್ಟ್‌ಗಳು ಬಂದಿದ್ದಾರೆ, ಅವರಷ್ಟೆ ಹೋಗಲಿ ಸುಮ್ಮನಿರಿ ಎಂದು ನಾನು ಹೇಳಿದೆ ಒಂದು ವೇಳೆ ಅವರೇನಾದರೂ ಬೆದರಿಸುವುದಕ್ಕೆ ಹೋಗಿದ್ದರೆ ನಮ್ಮ ತೋಟವೆಲ್ಲಾ ನಾಶವಾಗುತ್ತಿತ್ತು ಈಗ ನಮ್ಮಲ್ಲಿ ನಕ್ಸಲೈಟ್ ಪ್ರಾಬ್ಲಮ್ ಪ್ರಾರಂಭವಾಗಿದೆ ಇದಕ್ಕೆ ಯಾರು ಕಾರಣ? ಈ ವಿಷಯದ ಬಗ್ಗೆ ಇಲ್ಲಿ ಸುಮಾರು ಜನ ಸದಸ್ಯರು ಮಾತನಾಡಿದ್ದಾರೆ The root cause is our officials ಇನ್ನೊಂದು ವಿಷಯವನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ The Government of India ದವರು "The Scheduled Tribes and other Traditional Forest Dwellers (Recognition of Forest Rights) Act, 2006 This is gazetted by the Government of India on 2-1-2007 ಅದರ ಪ್ರಕಾರ ರೆಗ್ಯುಲರೈಸ್ ಮಾಡುವುದಕ್ಕೆ ಇಷ್ಟು ಹೊತ್ತಿಗೆ ರಾಜ್ಯ ಸರ್ಕಾರ ಕಮಿಟಿಗಳನ್ನು ರಚನೆ ಮಾಡಬೇಕಾಗಿತ್ತು "The Gram Sabha Shall be the authority to initiate the process for determining the nature and extent of individual or community forest rights or both that may be given to the forest dwelling Scheduled Tribes and other tradional forest dwellers within the local limits of its jurisdiction under this Act by receiving Claims, Consolidating and verifying them and preparing a map delineating the area of each recommended claim in such manner as may be prescribed for exercise of such rights and the Gram Sabha Shall, than, pass are solution to that effect and thereafter forward a copy of the same to the Sub Divisional Level Committee" ಇವತ್ತಿನವರೆಗೆ ಸಬ್ ಡಿವಿಜನಲ್ ಲೆವೆಲ್ ಕಮಿಟಿಯನ್ನು ಸರ್ಕಾರ ಮಾಡಿದೆಯೇ? Have thay done it? "Any person aggrieved by the resolution of the Grama Sabha may prefer a petition to the Sub-Divisional Level Committee " ಸಬ್ ಡಿವಿಜನಲ್ ಲೆವೆಲ್ ಕಮಿಟಿಯಾಗದಿದ್ದರೆ he should go to the District Level Committee District Level Committee ಯಲ್ಲಿ ಏನಾದರೂ ತೊಂದರೆಯಾದರೆ, he should go to the State Level Committee Government of India, Act ಜಾರಿಗೆ ಬಂದು ಇಷ್ಟು ದಿವಸ ಆಗಿದೆ ಆದರೆ, ಈ ಪಾಳಿಗೆವರೆಗೆ ಕಮಿಟಿಗಳನ್ನು

ರಚನೆ ಮಾಡುವುದಕ್ಕೆ ಇವರಿಗೆ ಆಗಿಲ್ಲ What is the impact? ತಲತಲಾಂತರಗಳಿಂದ ಕಾಡಿನಲ್ಲಿ ವಾಸ ಮಾಡತಕ್ಕಂಥ ಷಡ್ಯುಲ್ಡ್ ಟ್ರೈಬ್ ಜನಾಂಗವನ್ನು ಅಲ್ಲಿಂದ ಒಕ್ಕಲೆಬ್ಬಿಸುವಂಥ ಪ್ರಯತ್ನವನ್ನು ಇವತ್ತು ಕೂಡ ಮಾಡುತ್ತಿದ್ದಾರೆ ಇದಕ್ಕೆ ಕಂದಾಯ ಇಲಾಖೆ ಬೇರೆ ಇದೆ ಜಮ್ಮಾ, ಬಾಣೆ ಖಾನೆ, ಕುಮ್ಕಿ ಯಾವುದಕ್ಕೂ ಸಹ ಹಕ್ಕುಪತ್ರ ಇಲ್ಲ

ಶ್ರೀ ಕೆ ಜಯಪ್ರಕಾಶ್ ಹೆಗ್ಡೆ ಮಾನ್ಯ ಜೀವಿಜಯಾರವರೆ, ಖಾನೆ, ಬಾಣೆ, ಜಮ್ಮಾ, ಕುಮ್ಕಿ ಜಮೀನಿಗೆ ಹಕ್ಕುಪತ್ರ ಸಿಗುತ್ತದೆಂಬ ಕಾರಣದಿಂದ, ಅಲ್ಲಿ ಸಾಕಷ್ಟು ಮರಗಳಿವೆ ಸರ್ಕಾರದ ವಶದಲ್ಲಿರುವ ಅರಣ್ಯದಲ್ಲಿ ಎಷ್ಟು ಮರಗಳಿವೆ ಎಂದು ಮತ್ತು ಖಾನೆ, ಬಾಣೆ, ಜಮ್ಮಾ, ಕುಮ್ಕಿ ಲ್ಯಾಂಡ್‌ನಲ್ಲಿ ಎಷ್ಟು ಮರಗಳಿವೆ ಎಂದು ನೀವೊಂದು ಸರ್ವೆ ಮಾಡಿಸಿ ಸಂಪೂರ್ಣವಾಗಿ ಇದು ಸರ್ಕಾರದೆಂದು ಪುನಃ ತೀರ್ಮಾನ ತೆಗೆದುಕೊಂಡರೆ, ನೀವು ತೆಗೆದುಕೊಳ್ಳುವ ತೀರ್ಮಾನ ಬೇರೆ, ನಿಮ್ಮ ಕಾರ್ಯದರ್ಶಿಯವರು ತೆಗೆದುಕೊಳ್ಳುವ ತೀರ್ಮಾನವೇ ಬೇರೆ, ಇದು ಬೇರೆ ವಿಷಯ ಆದರೆ, ಮುಂದೆ ಏನಾಗುತ್ತದೆಂಬುದರ ಬಗ್ಗೆ ಆಲೋಚನೆ ಮಾಡಬೇಕು ಈ ವ್ಯವಸ್ಥೆಯಲ್ಲಿ ಎಲ್ಲವನ್ನು ಕದ್ದು ಮಾಡುವುದಕ್ಕೆ ಬಿಟ್ಟರೆ ಬೇರೇನು ಇದರಲ್ಲಿಲ್ಲ ಆದ್ದರಿಂದ, ಮಾನ್ಯ ಜಗದೀಶ್‌ಶೆಟ್ಟರ್‌ರವರು ತೆಗೆದುಕೊಂಡಿರುವ ತೀರ್ಮಾನವನ್ನು ದಯವಿಟ್ಟು ಜಾರಿಗೆ ತೆಗೆದುಕೊಂಡು ಬರಬೇಕೆಂದು ಕೇಳಿಕೊಳ್ಳುತ್ತೇನೆ ಪ್ರಧಾನ ಕಾರ್ಯದರ್ಶಿ ಮತ್ತು ನಿಮ್ಮ ಭಿನ್ನಭಿಪ್ರಾಯದಿಂದ ಜನ ಸಫರ್ ಆಗಬಾರದು

ಶ್ರೀ ಜಿ ವಿ ಶ್ರೀರಾಮರೆಡ್ಡಿ 69 Statementಗೆ ನೀವು ಸಹಿ ಹಾಕಿಲ್ಲ ಅವರು ಒಂದು ಆದೇಶ ಮಾಡುತ್ತಾರೆ, ಇದು ನಮಗೆ ಅರ್ಥವಾಗುತ್ತಿಲ್ಲ ಅಂದರೆ, ಮಂತ್ರಿಯವರು ಅದಕ್ಕೆ ಸಹಿ ಹಾಕುವುದಿಲ್ಲವೆಂದು ಹೇಳುತ್ತಾರೆ ಆದರೆ, ಅವರು ಆರ್ಡರ್ ಮಾಡುತ್ತಾರೆ ಇದರ ಪರಿಸ್ಥಿತಿ ಏನೆಂಬುದು ನಮಗೆ ಅರ್ಥವಾಗುತ್ತಿಲ್ಲ ಪ್ರಧಾನ ಕಾರ್ಯದರ್ಶಿಯವರು ಈಗಾಗಲೇ ಸುತ್ತೋಲೆಯನ್ನು ಹೊರಡಿಸಿದ್ದಾರೆ

ಶ್ರೀ ಕೆ ಜಯಪ್ರಕಾಶ್ ಹೆಗ್ಡೆ ಪ್ರಧಾನ ಕಾರ್ಯದರ್ಶಿಯವರು ಹೊರಡಿಸಿರುವ ಸುತ್ತೋಲೆ ಮಾನ್ಯ ಮಂತ್ರಿಗಳ ಗಮನಕ್ಕೆ ಬಂದಿಲ್ಲ

ಶ್ರೀ ಜಿ ವಿ ಶ್ರೀರಾಮರೆಡ್ಡಿ ಪ್ರಧಾನ ಕಾರ್ಯದರ್ಶಿಯವರು ಒಂದು ಸುತ್ತೋಲೆಯನ್ನು ಇಷ್ಯೂ ಮಾಡುತ್ತಾರೆ 69ಕ್ಕೆ ಒಂದು ಉತ್ತರ ಟೈಪ್ ಮಾಡಿ

ಅವರು ಕಳುಹಿಸಿದ್ದಾರೆ, ಅದಕ್ಕೆ ಮಾನ್ಯ ಜಗದೀಶ್‌ಶೆಟ್ಟರ್‌ರವರು ಸಹಿ ಮಾಡಿಲ್ಲ He has refused to sign ಆದರೆ ಅವರು ಸುತ್ತೋಲೆ ಮಾಡಿ ಕಳುಹಿಸುತ್ತಾರೆ

ಶ್ರೀ ಬಿ ಎ ಜೀವಿಜಯ He says that the Circular is the Government order

ಶ್ರೀ ಕೆ ಜಯಪ್ರಕಾಶ್ ಹೆಗ್ಡೆ How can a Circular be a Government order?

Sri B A JIVIJAYA That is what he says He has sent it to Deputy Commissioner He arrogates the post of the Ministers He arrogates the Power of the Cabinet He Thinks he himself is the Government That is the situation here, in Karnataka now ನಂಬಿಕೆಗೆ ಮಾತ್ರ ಅವಮರ್ಯಾದೆ ಮಾಡಿಲ್ಲ ಇಡೀ ಸದನಕ್ಕೆ ಅವಮರ್ಯಾದೆ ಮಾಡಿದ್ದಾರೆ Transfer of business ಗೊತ್ತಿಲ್ಲ, ಒಬ್ಬ ಮಂತ್ರಿಗಳು direction ಕೊಟ್ಟು implement ಮಾಡುವುದಿಲ್ಲ Do you call this a Government?

ಶ್ರೀ ಜಿ ವಿ ಶ್ರೀರಾಮರೆಡ್ಡಿ ಅವರು ಬರೆದು ಕೊಟ್ಟಾಗ ನೀವು ಸಹಿ ಮಾಡದಿರುವುದಕ್ಕೆ ಕಾರಣವೇನು? ನೀವು ಕಂದಾಯ ಮಂತ್ರಿಗಳಾಗಿ ನಿಮ್ಮ ತೀರ್ಮಾನ ಏನು ಎಂದು ಹೇಳಬೇಕಲ್ಲಾ

ಶ್ರೀ ಕೆ ಜಯಪ್ರಕಾಶ್ ಹೆಗ್ಡೆ ಇವರ ಅಭಿಪ್ರಾಯ ಅದು ಆಗಿರಲಿಲ್ಲ, ಅದಕ್ಕೆ ಇವರು ಸಹಿ ಮಾಡಿರಲಿಕ್ಕೆ ಇಲ್ಲವೆಂದು ಕಾಣುತ್ತದೆ That is what we will have to assume

ಶ್ರೀ ಬಿ ಎ ಜೀವಿಜಯ This Act, ಬರೀ ಷೆಡ್ಯೂಲ್ ಟ್ರೈಬ್‌ಗೆ ಒಂದೇ ಅಲ್ಲ ಇದರಲ್ಲಿ ಹೇಳುತ್ತಾರೆ

> "Other traditional forest dwellers means any member or Community who has for at least three generations prior to the 13th day of December, 2005 primly resided in and who Depend on the forest land for bonafide livelihood needs For the purpose of clause 'generation' means a period Comprising of 25 years"

ಒಂದು ಜನರೇಶನ್ ಅಂದರೆ, ಅಲ್ಲಿ 20-25 ವರ್ಷದಿಂದ ಅಲ್ಲಿಯೆ ವಾಸವಾಗಿರಬೇಕೆಂದು ಒಂದು ಅರ್ಥ Forest Rights ಏನು?

> "Right to hold and live in the forest land under the individual or common occupation for habitation, for self cultivation,for Livelihood by members of the far dwelling Scheduled Tribe or other traditional forest dwellers "

This is very important ಇದರ ಬಗ್ಗೆ ನಾನು ಮಾನ್ಯ ಮಂತ್ರಿಯವರಲ್ಲಿ ಕೇಳತಕ್ಕಂಥದ್ದು Government of India ಅವರು Gazette Notification ಕಳುಹಿಸಿದ್ದಾರೆ ನೀವು sub Division Committee ಮಾಡಬೇಕಾಗಿತ್ತು District level Committee ಮಾಡಬೇಕಾಗಿತ್ತು State level Committee ಮಾಡಬೇಕಾಗಿತ್ತು ಇದುವರೆಗೆ ಮಾಡಲಿಲ್ಲ ಇದರ ಬಗ್ಗೆ ಆದಷ್ಟು ಜಾಗ್ರತೆಯಾಗಿ ಗಮನವನ್ನು ಹರಿಸಬೇಕು ಏನು ಜ್ವಲಂತ ಸಮಸ್ಯೆಗಳು ಪಶ್ಚಿಮ ಘಟ್ಟದಲ್ಲಿ ಇದೆ, ಅಥವಾ ಬೇರೆ ಅರಣ್ಯ ಪ್ರದೇಶದಲ್ಲಿ ಇರುವಂಥದು, ಅದರಲ್ಲಿಯೂ ನಾವು ಮಲೆನಾಡಿನಲ್ಲಿ ವಾಸ ಮಾಡತಕ್ಕಂಥ ನಮ್ಮ ಜನಗಳಿಗೆ ಏನು ಬೇರೆ ರೀತಿಯ ನಿಬಂಧನೆಗಳ ಜಾಗಗಳು ಇರಬಹುದು ಅದನ್ನು ಸಕ್ರಮಗೊಳಿಸುವುದಕ್ಕೆ ಈ Act ನಿಂದ ಸಾಧ್ಯವಾಗುತ್ತದೆ ಈಗ ಕೇರಳದಲ್ಲಿ ಯಾವ ರೀತಿ ಇದೆ, 'People Forest' ಎಂದು ಹೇಳತಕ್ಕಂಥ ಒಂದು ರೀತಿಯಲ್ಲಿ ಯೋಜನೆಯನ್ನು ಹಾಕಿಕೊಂಡು ಜನರನ್ನು ಹೆಚ್ಚಿಗೆ involve ಮಾಡಿಕೊಳ್ಳಬೇಕಾಗುತ್ತದೆ ಏಕೆಂದರೆ ಸರ್ ಇವರಿಗೆ ಯಾವ ರೀತಿ ಹೆಚ್ಚಿಗೆ ಅರಣ್ಯ ಜಾಸ್ತಿ ಮಾಡಬೇಕೆಂದು ಹೇಳುವುದಕ್ಕೆ ನನಗೆ ಸಾಧ್ಯವಾಗುವುದಿಲ್ಲ ಏಕೆಂದರೆ total geographic area 109500 hectares ಅದರಲ್ಲಿ Agricultureಗೆ 123 hectares ಆಗುತ್ತದೆ 'ಎಲ್ಲಿ ನಮಗೆ ಸಾಗುವಳಿ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ ಎಲ್ಲಿ cultivation ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ ಅಲ್ಲಿಗೆ ಹೆಚ್ಚಿನ ಮಟ್ಟಿನ ಜನರನ್ನು involve ಮಾಡಿಬಿಟ್ಟು ಅರಣ್ಯವನ್ನು trees ಹೆಚ್ಚಿಗೆ ಮಾಡಿದರೆ ಮಾತ್ರ ಅರಣ್ಯದ percentage ನ್ನು ಹೆಚ್ಚಿಗೆ ಮಾಡುವುದಕ್ಕೆ ಸಾಧ್ಯವಾಗುತ್ತದೆ ಎಲ್ಲಾ

deemed forest ಎಂದು ಹೇಳತಕ್ಕಂಥದ್ದು 25 ಮರ ಇದ್ದರು ಅದು definition of forest ಅಡಿಯಲ್ಲಿ ಬರುತ್ತದೆ ಆದರೆ ವಿಧಾನಸೌಧ, ಕಬ್ಬನ್ ಪಾರ್ಕ್, ಲಾಲ್‌ಬಾಗ್, ಬೆಂಗಳೂರು ಎಲ್ಲಾ ಫಾರೆಸ್ಟ್ ಆಗಬೇಕು ಇದು ಅರ್ಥವಾಗುವುದಿಲ್ಲ ಯಾವ ರೀತಿಯ ಒಂದು ವಿವೇಚನ ರಹಿತವಾದ ನಿರ್ಣಯವನ್ನು ಕೈಗೊಳ್ಳುತ್ತಾರೆ? ಆದ್ದರಿಂದ ಕೇಂದ್ರ ಸರ್ಕಾರದ ಒಂದು Gazette Notification ಇದೆ ಅದನ್ನು ಜಾರಿಗೊಳಿಸಬೇಕೆಂದು ಹೇಳಿ, ನಾನು ಬೇರೆ ವಿಷಯಗಳನ್ನು ಮಾತನಾಡುವುದಕ್ಕೆ ಹೋಗುವುದಿಲ್ಲ ಒಂದು ವಿಷಯವನ್ನು ಮಾನ್ಯ ಉಪ ಮುಖ್ಯಮಂತ್ರಿಯವರಿಗೆ,

ಉಪಾಧ್ಯಕ್ಷರು ಶ್ರೀರಾಮರೆಡ್ಡಿಯವರೆ, ನೀವು ಸ್ವಲ್ಪ ಉಪ ಮುಖ್ಯಮಂತ್ರಿಗಳನ್ನು ಬಿಟ್ಟುಕೊಡಿ ಅವರು ಏನೋ ಅವರನ್ನು ಪ್ರಶ್ನೆ ಕೇಳಬೇಕಂತೆ

ಶ್ರೀ ಜಿ ವಿ ಶ್ರೀರಾಮರೆಡ್ಡಿ ಅವರು ಇಲ್ಲಿಯೇ ಸಮೀಪದಲ್ಲಿ ಬಂದು ಕೇಳುತ್ತಿದ್ದಾರೆ

ಶ್ರೀ ಬಸವರಾಜ ರಾಯರೆಡ್ಡಿ ಕಮ್ಯುನಿಷ್ಟ್‌ದವರಿಗೂ ಬಿಜೆಪಿಯವರಿಗೂ ಏನು ಸಂಬಂಧ?

ಶ್ರೀ ಜಿ ವಿ ಶ್ರೀರಾಮರೆಡ್ಡಿ ಏನು ಸಂಬಂಧವೆಂದರೆ ಅವರು Deputy Finance Minister Sir ಇಲ್ಲಿ ನಾವು ಶಾಸಕರು

(ಗೊಂದಲ)

ಶ್ರೀ ಬಸವರಾಜ ರಾಯರೆಡ್ಡಿ ಅಲಾಯನ್ಸ್ ಏನಾದರೂ ಇದೆಯಾ?

ಶ್ರೀ ಜಿ ವಿ ಶ್ರೀರಾಮರೆಡ್ಡಿ ಅದು ನಮಗೆ ಅಲ್ಲ, ಅದು ಎಲ್ಲಾ ನಿಮಗೆ ಬಿಟ್ಟುಕೊಟ್ಟಿರತಕ್ಕಂಥದು ಸ್ವಾಮಿ ನಾವು ಅವರು ಸೀನಿಯರ್ ಲೀಡರ್ ನಮ್ಮ Deputy Chief Minister We will respect him

ಉಪಾಧ್ಯಕ್ಷರು ಮಾನ್ಯ ಜೀವಿಜಯರವರೆ, ತಾವು ಮುಗಿಸಿ

ಶ್ರೀ ಬಿ ಎ ಜೀವಿಜಯ ಸರ್ಕಾರ ಯಾವ ರೀತಿ function ಮಾಡುತ್ತದೆ ಎನ್ನುವುದರ ಬಗ್ಗೆ ನಾನು ಒಂದು ವಿಷಯವನ್ನು ಈಗ ಹೇಳುತ್ತೇನೆ ಇದು ಸೋಮವಾರಪೇಟೆಯ ಕುಡಿಯುವ ನೀರಿನ ಒಂದು ವಿಷಯ ನಾನು ಮಾನ್ಯ ಮುಖ್ಯಮಂತ್ರಿಯವರನ್ನು ಒಂದು ಪ್ರಶ್ನೆ ಕೇಳಿದ್ದೆ ಅವರು 6-2-2007ಕ್ಕೆ ಉತ್ತರ ಕೊಟ್ಟಿದ್ದಾರೆ ಸೋಮವಾರಪೇಟೆ ಪಟ್ಟಣಕ್ಕೆ ಹಾರಂಗಿ ಯೋಜನೆಯಿಂದ ನೀರು ಸರಬರಾಜು ಮಾಡುವುದಕ್ಕೆ ಕೇಂದ್ರ

ಸರ್ಕಾರದಿಂದ ಅನುಮತಿ ದೊರಕಿದ್ದು ನಿಜವಲ್ಲವೇ? ಹೌದು ಎಂದು ಮುಖ್ಯಮಂತ್ರಿಯವರು ಹೇಳುತ್ತಾರೆ ಹಾಗಿದ್ದಲ್ಲಿ ಟೆಂಡರ್ ಆಗಿ ಕಾಮಗಾರಿಯನ್ನು ಪ್ರಾರಂಭಿಸಿದ್ದರು ಸಹ ರಾಜ್ಯ ಸರ್ಕಾರ ತನ್ನ ಪಾಲಿನ ಹಣವನ್ನು ಬಿಡುಗಡೆ ಮಾಡದಿರಲು ಕಾರಣವೇನು? ರಾಜ್ಯ ಸರ್ಕಾರ ಈ ಯೋಜನೆಗೆ 406 8 ಲಕ್ಷ ರೂ ಗಳನ್ನು ಬಿಡುಗಡೆ ಮಾಡಬೇಕಾಗಿದ್ದು ಇದರಲ್ಲಿ 45 96 ಲಕ್ಷ ರೂ ಗಳನ್ನು ಈಗಾಗಲೇ ಬಿಡುಗಡೆ ಮಾಡಲಾಗಿದೆ ಈ ಯೋಜನೆಗೆ ಬಿಡುಗಡೆಯಾಗಿರುವ ಮೊತ್ತ ಈ ರೀತಿಯಾಗಿ ಇದೆ ರಾಜ್ಯ ಸರ್ಕಾರದ ಅನುದಾನ 45 96 ಲಕ್ಷ ರೂ ಗಳು, ಕೇಂದ್ರ ಸರ್ಕಾರದ ಅನುದಾನ 45 96 ಲಕ್ಷ ರೂ ಗಳು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಹಣ 112 ಲಕ್ಷ ರೂ ಗಳು, ಒಟ್ಟು 203 32 ಲಕ್ಷ ರೂ ಗಳು ಈ ಕಾರ್ಯದ ಯೋಜನೆಗೆ ಹಣವನ್ನು ಯಾವಾಗ ಬಿಡುಗಡೆ ಮಾಡಲಾಗುವುದು? ಈ ಯೋಜನೆಯ ಕಾರ್ಯಕ್ಕೆ ಮೇಲೆ ನಮೂದಿಸಿದ 203 92 ಲಕ್ಷ ರೂ ಗಳನ್ನು ಬಿಡುಗಡೆ ಮಾಡಲಾಗಿದೆ ಬಾಕಿ ಹಣವನ್ನು ಅವಶ್ಯಕತೆಗೆ ಅನುಗುಣವಾಗಿ ಹಣವನ್ನು ಬಿಡುಗಡೆ ಮಾಡಲಾಗುವುದು ಎಂದು ಉತ್ತರವನ್ನು ಕೊಡುತ್ತಾರೆ ಇದರ ಬಗ್ಗೆ ನಾನು ಮೊನ್ನೆ ಬಂದು ಕೇಳಿದೆ ನಾನು ಇಲಾಖೆಯವರನ್ನು ಕೇಳಿದಾಗ ಇದಕ್ಕೆ ಅನುಮತಿಯನ್ನು ಕೊಟ್ಟಿಲ್ಲವೆಂದು ಹೇಳಿದರು ತಾವು ಇದು ನನ್ನ ಗಮನಕ್ಕೆ ಬಂದಿಲ್ಲವೆಂದು ಹೇಳಿದಿರಿ ನಾನು ಮೊನ್ನೆ ಮತ್ತೊಂದು ಪ್ರಶ್ನೆಯನ್ನು ಹಾಕಿದ್ದೆ ಅದಕ್ಕೆ ಪೌರಾಡಳಿತ ಸಚಿವರು ಉತ್ತರವನ್ನು ಕೊಡುತ್ತಾರೆ ಕೊಡಗು ಜಿಲ್ಲೆಯ ಈ ಪುರಸ್ಕೃತ ಯೋಜನೆಯನ್ನು ತ್ವರಿತ ನೀರು ಪೂರೈಕೆ ಯೋಜನೆಯಲ್ಲಿ ಸೇರಿಸಲಾಗಿದ್ದು, ಆಡಳಿತಾತ್ಮಕ ಮಂಜೂರಾತಿಯನ್ನು ನೀಡುವ ಬಗ್ಗೆ ಅಗತ್ಯ ಕ್ರಮವನ್ನು ಕೈಗೊಳ್ಳಲಾಗಿದೆ ಮುಖ್ಯಮಂತ್ರಿಗಳು ಹೇಳುತ್ತಾರೆ, ನಾವು ಆಡಳಿತಾತ್ಮಕ ಮಂಜೂರಾತಿಯನ್ನು ಕೊಟ್ಟಿದ್ದೇವೆ, ಹಣವನ್ನು ರಿಲೀಸ್ ಮಾಡುತ್ತೇವೆಂದು, ನಿಮ್ಮ ಪೌರಾಡಳಿತ ಸಚಿವರು ಮಂಜೂರಾತಿಗಾಗಿ ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದು ಹೇಳುತ್ತಾರೆ ಆರ್ಥಿಕ ಮಂಜೂರಾತಿ ಯನ್ನು ನೀಡಿದ ಕೂಡಲೇ ಕಾಮಗಾರಿಯನ್ನು ಪ್ರಾರಂಭ ಮಾಡಿಸಲು ಕ್ರಮ ಕೈಗೊಳ್ಳುತ್ತೇವೆಂದು ಇವರು ಈಗ ಹೇಳುತ್ತಾರೆ ಮುಖ್ಯಮಂತ್ರಿಗಳು ಇದಕ್ಕೆ ಈಗಾಗಲೇ ಅನುಮತಿಯನ್ನು ಕೊಟ್ಟಿದ್ದೇವೆಂದು ಹೇಳುತ್ತಾರೆ ಅದಕ್ಕಾಗಿ ಇದರ ಸಲುವಾಗಿ ನಾನು ಪ್ರಾರ್ಥನೆ ಮಾಡಿಕೊಳ್ಳುವುದು ಸೋಮವಾರ ಪೇಟೆಗೆ ಕುಡಿಯುವ ನೀರಿಗೆ ಬಹಳ ಸಮಸ್ಯೆಯಾಗಿದೆ ಹಾರಂಗಿಯಿಂದ

ನೀರನ್ನು ತೆಗೆದುಕೊಂಡು ಹೋಗಬೇಕು ಇದಕ್ಕೆ ತಾವು ಕೂಡಲೇ ಮಂಜೂರಾತಿಯನ್ನು ಕೊಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ ನನಗೆ ಹೆಚ್ಚಿನ ವಿಷಯಗಳನ್ನು ಮಾತನಾಡಲು ಸಮಯದ ಅಭಾವ ಇರುವುದರಿಂದ ನನಗೆ ಈ ದಿವಸ ಮಾತನಾಡಲು ಅವಕಾಶವನ್ನು ಕೊಟ್ಟಿರುತ್ತೀರಿ, ಇವತ್ತು ಏನು ಬಜೆಟ್‌ನ್ನು ಮಂಡಿಸಿದ್ದಾರೆ, ಕೆಲವು ಉತ್ತಮ ಯೋಜನೆಗಳನ್ನು ಹಾಕಿಕೊಂಡಿದ್ದಾರೆ ಕೆಲವೊಂದು implement ಮಾಡಲು ಸಾಧ್ಯವಿಲ್ಲ ಆದುದರಿಂದ ಈ ಬಜೆಟ್ ಅನ್ನು ನಾನು ವಿರೋಧಿಸುತ್ತೇನೆ

ಶ್ರೀ ಹೆಚ್ ಆಂಜನೇಯ (ಭರಮಸಾಗರ) ಮಾನ್ಯ ಉಪಾಧ್ಯಕ್ಷರೇ, ಈ ಒಂದು ಮದ್ಯಂತರ ಬಜೆಟ್ ಅನ್ನು ಹಣಕಾಸಿನ ಸಚಿವರು ಮಂಡಿಸಿರುವುದನ್ನು ನಾನು ಇಲ್ಲಿ ಸ್ವಾಗತಿಸುತ್ತಾ, ಕರ್ನಾಟಕ ಸರ್ಕಾರ ಅಸ್ಥಿತ್ವಕ್ಕೆ ಬಂದ ನಂತರ ಅಂದರೆ ಮಾನ್ಯ ಕುಮಾರಸ್ವಾಮಿ ಮತ್ತು ಯಡಿಯೂರಪ್ಪನವರ ನೇತೃತ್ವದ ಸರ್ಕಾರ ಅಸ್ಥಿತ್ವಕ್ಕೆ ಬಂದ ನಂತರ ಅನೇಕ ಒಳ್ಳೆಯ ಕಾರ್ಯಕ್ರಮಗಳನ್ನು ಮಾಡಿದ್ದಾರೆ ಅದರಲ್ಲಿ ನನಗೆ ಬಹಳ ಪ್ರಿಯವಾದುದು ಎಂದರೆ, ಸಾರಾಯಿ ನಿಷೇಧ, ಈ ಸಾರಾಯಿ ನಿಷೇಧದ ಬಗ್ಗೆ ನಿನ್ನೆ ದಿನ ಮಾತನಾಡುತ್ತಾ ಅನೇಕ ಜನ ಹಿರಿಯರು ಇದರ ನಿಷೇಧದಿಂದ ಕಳ್ಳಭಟ್ಟಿ ಪ್ರಾರಂಭವಾಗಿಬಿಟ್ಟಿದೆ, ಕುಡಿಯುವವರ ಸಂಖ್ಯೆ ಕಡಿಮೆಯಾಗಿಲ್ಲವೆಂದು ಹೇಳಿದರು ನಾನು ಶನಿವಾರ ಮತ್ತು ಭಾನುವಾರ ಹಳ್ಳಿಗಳಲ್ಲಿ ಪ್ರವಾಸವನ್ನು ಮಾಡುತ್ತೇನೆ ಕುಟಿಗನಹಳ್ಳಿ ಎನ್ನುವಂತಹ ಒಂದು ಊರು, ಅಲ್ಲಿ ಕುಡುಕರ ಸಂಖ್ಯೆ ಜಾಸ್ತಿ ಇದೆ, ಅಲ್ಲಿ ನಾನು ಶಾಲೆಯ ಉದ್ಘಾಟನೆಯ ಕಾರ್ಯಕ್ರಮಕ್ಕೆ ಹೋಗಿದ್ದೆ ಅಲ್ಲಿ ಮಹಿಳೆಯರು ಇದ್ದರು, ಅಲ್ಲಿ ಹಳ್ಳಿಗಾಡಿನ ಕೃಷಿ ಕಾರ್ಮಿಕರು ಬಹಳಷ್ಟು ಜನರು ಸೇರಿದ್ದರು ನಾನು ಹಿಂದೆ ಅದೇ ಒಂದು ಕಾರ್ಯಕ್ರಮವನ್ನು ಬೇರೆ ಒಂದು ಕಾರ್ಯಕ್ರಮಕ್ಕೂ ಕೂಡ ಹೋಗಿದ್ದೆ ಅಲ್ಲಿ 5–6 ಜನರು ಕುಡಿದು ಏನೇನೋ ಹೇಳುತ್ತಾ ಮಧ್ಯದಲ್ಲಿ ನನಗೆ ಮನೆ ಬಂದಿಲ್ಲವೆಂದು ಪಹಣಿಯನ್ನು ಕೊಟ್ಟಿಲ್ಲ, ಇನ್ನೊಬ್ಬರು ಸೆಕ್ರೆಟರಿಯವರು ಬಂದಿಲ್ಲವೆಂದು ಹೇಳಿದರು ಅಲ್ಲಿ ಈ ರೀತಿಯಾಗಿ ಮಾತನಾಡುವಂತಹ ಜನರು ಇರುವುದು ಮೊನ್ನೆ ನಾನು ಹೋದಂತಹ ಸಂದರ್ಭದಲ್ಲಿ ಅಲ್ಲಿ ಯಾರು ಒಬ್ಬರು ಕೂಡ ಕುಡುಕರು ಇರಲಿಲ್ಲ ಎಲ್ಲರೂ ಬಹಳ ನಿಶಬ್ಧದಿಂದ ನಮ್ಮ ಮಾತನ್ನು ಕೇಳುತ್ತಾ ಬಹಳ ಗಂಭೀರವಾಗಿ ಕುಳಿತಿರುವುದನ್ನು ನೋಡಿ ನನಗೆ ಬಹಳ ಸಂತೋಷವಾಯಿತು ಅಲ್ಲಿ ಹೆಣ್ಣುಮಕ್ಕಳು ಇದ್ದರು, ಏನಮ್ಮಾ ಇವತ್ತು

ಯಾರು ಕುಡುಕರು ಕಾಣುತ್ತಿಲ್ಲವಲ್ಲಾ ಎಂದು ಕೇಳಿದೆ, ಯಾರು ಕುಡಿಯುತ್ತಿಲ್ಲ ಸ್ವಾಮಿ, ಸಾರಾಯಿ ಎಲ್ಲಾ ನಿಷೇಧ ಆಗಿದೆಯಲ್ಲಾ ಸ್ವಾಮಿ, 1ನೇ ತಾರೀಖಿನಿಂದ ಎಲ್ಲಾ ಕುಡಿಯುವವರ ಸಂಖ್ಯೆ ಕಡಿಮೆಯಾಗಿದೆ ಸ್ವಾಮಿ ಎಂದು ಹೇಳಿದರು ಒಬ್ಬ ಹೆಣ್ಣುಮಗಳು ಏನು ಹೇಳಿದಳು ಅಂದರೆ ನಮ್ಮವರಿಗೆಲ್ಲಾ ಏನಾಗಿದೆ ಎಂದರೆ ತಾಯಿ ಮೊಲೆ ಹಾಲು ಕುಡಿಯುತ್ತಿದ್ದರಲ್ಲಾ, ತಾಯಿಯ ಮೊಲೆ ಹಾಲು ನಿಂತಾಗ ಏನು ಆಗಿತ್ತೋ ಹಾಗೆ ಆಗಿಬಿಟ್ಟಿದೆ ಎಂದಳು ನನಗೆ ಬಹಳ ಸಂತೋಷವಾಯಿತು ಹಳ್ಳಿಗಳಲ್ಲಿ ಇವತ್ತು ಈ ಸಾರಾಯಿ ನಿಷೇಧದಿಂದ ಅನೇಕ ಜನ ಬಡವರು ಕೂಲಿ ಕಾರ್ಮಿಕರು, ದಲಿತ ವರ್ಗದವರು, ಅದರಲ್ಲೂ ವಿಶೇಷವಾಗಿ ಹರಿಜನರು ಮತ್ತು ಗಿರಿಜನರು ಅವರೇ ಸಾರಾಯಿಗೆ ಮಾರು ಹೋಗುತ್ತಿದ್ದರು, ಬಹಳಷ್ಟು ಜನರು ಕುಡುಕರ ಸಂಖ್ಯೆ ನಮ್ಮ ಜನಾಂಗದಲ್ಲಿ ಜಾಸ್ತಿ ಇರುವುದು ಇವತ್ತು ಹರಿಜನರ ಕಾಲೋನಿಯಲ್ಲಿ ನೋಡಿ ಕುಡುಕರೇ ಇಲ್ಲವೆನ್ನುವಂತಹ ವಾತಾವರಣವನ್ನು ನೋಡಿ ಬಹಳ ಸಂತೋಷವಾಯಿತು ಇವತ್ತು ಅಂತಹ ಒಂದು ಘನವಾದಂತಹ ಒಂದು ಕ್ರಾಂತಿಕಾರಕವಾದಂತಹ ಕಾರ್ಯಕ್ರಮವನ್ನು ಇಟ್ಟುಕೊಂಡು ನಮ್ಮ ಸಮ್ಮಿಶ್ರ ಸರ್ಕಾರ ಇವತ್ತು ಸಾರಾಯಿ ನಿಷೇಧ ಏನು ಮಾಡಿದೆ ಇದು ಬಡವರನ್ನು ಉದ್ಧಾರ ಮಾಡುವಂತ, ಈ ಒಂದು ಬಡವರನ್ನು ರಾಷ್ಟ್ರದ ಅಭಿವೃದ್ಧಿಯಲ್ಲಿ ಮುಖ್ಯವಾಹಿನಿಯಲ್ಲಿ ತರುವಂತಹ ದಿಟ್ಟವಾದ ಕ್ರಮವೆಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ ನಮ್ಮ ಹಿರಿಯರಾದಂತಹ ಶ್ರೀಮಾನ್ ಮಲ್ಲಿಕಾರ್ಜುನ ಖರ್ಗೆಯವರು ನಿನ್ನೆ ದಿನ ಹೇಳುತ್ತಿದ್ದರು ಏನು ನೀವು ಭಾರಿ ಬೆನ್ನುತಟ್ಟಿಕೊಳ್ಳುತ್ತಿದ್ದೀರಿ ನಾವು ಕೂಡ ಮಾಡಿದ್ದೇವೆಂದು ಹೇಳಿದರು ಏನು ಮಾಡಿದರು ಅಂದರೆ ಹೆಂಡ ನಿಷೇಧವನ್ನು ಮಾಡಿದರು ಇದನ್ನು ಯಾವ ರೀತಿಯಾಗಿ ನಿಷೇಧ ಮಾಡಿದರು ಎಂದರೆ, ಈಚಲು ಮರಗಳೆಲ್ಲವೂ ನಾಶವಾಗಿ ಹೋಗಿದ್ದವು ಅಲ್ಲಿ ಕಲಬೆರಕೆಯಾಗಿ ಜನರು ಸಾಯುತ್ತಿದ್ದರು ಅದರ ಬದಲು ಪ್ಯಾಕೆಟ್‌ನಲ್ಲಿ ಅದೇ ತರಹ ಸಾರಾಯಿಯನ್ನು introduce ಮಾಡಿದಿರಿ ಸಾರಾಯಿ ಮಾರಾಟ ಮಾಡುವುದನ್ನು ಮಾಡಿದ್ದೀರಿ ಸಾರಾಯಿ ನಿಷೇಧ ಮಾಡುವಂತಹ ಕೆಲಸವನ್ನು ಮಾಡಲಿಲ್ಲ ಇವತ್ತು ಮೊದಲನೆಯ ಹಂತವಾಗಿ ಪಾನ ನಿಷೇಧಕ್ಕೆ ಬಡವರು ಕುಡಿಯುತ್ತಿದ್ದಂತಹ ಸಾರಾಯಿಯನ್ನು ಇವತ್ತು ನಿಷೇಧ ಮಾಡಿದ್ದಾರೆ ನಿನ್ನೆ ದಿವಸ ಮಾನ್ಯ ಹಿಂದಿನ ಹಣಕಾಸು ಮಂತ್ರಿಗಳು ಸಿದ್ದರಾಮಯ್ಯನವರು ಹೇಳಿದರು

ಸಾರಾಯಿ ನಿಷೇಧದಿಂದ ಇವತ್ತು ಕ್ವಾರ್ಟರ್ ಏನು ಬಾಟಲಿ ಇದೆಯಲ್ಲಾ, ಅದರಲ್ಲಿ ಕುಡಿಯುತ್ತಿರುವವರ ಸಂಖ್ಯೆ ಜಾಸ್ತಿಯಾಗಿದೆ ಹಿಂದೆ ಇಷ್ಟು ಲಕ್ಷ ಕೇಸ್‌ಗಳು ಮಾರಾಟವಾಗುತ್ತಿದ್ದವು ಅದರ ಎರಡರಷ್ಟು ಈಗ ಆಗಿದೆ ಅದು ಬೆಂಗಳೂರಿನಲ್ಲಿ ವಾಸ ಮಾಡುವಂತಹ ಪ್ರದೇಶಗಳು ಇರಬಹುದು, ಅಥವಾ ದೊಡ್ಡದೊಡ್ಡ ನಗರಗಳಲ್ಲಿ ಇರಬಹುದು ಹಳ್ಳಿಯಲ್ಲಿ ಏನಾಗಿತ್ತು ಅಂದರ ಚಹಾ ಅಂಗಡಿಯಲ್ಲಿ ಹೋದರೂ ಕೂಡ ಸಾರಾಯಿ ಪ್ಯಾಕೇಟ್ ಸಿಗುತ್ತಿತ್ತು ಕಿರಾಣಿ ಅಂಗಡಿಗೆ ಹೋದರೂ ಕೂಡ ಸಾರಾಯಿ ಪ್ಯಾಕೇಟ್ ಸಿಗುತ್ತಿತ್ತು ಶೇವಿಂಗ್ ಶಾಪ್‌ಗೆ ಹೋದರೂ ಕೂಡ ಸಾರಾಯಿ ಮಾರಾಟ ಮಾಡುವಂತಹ ಕೆಟ್ಟ ವಾತಾವರಣವನ್ನು ನಾವು ನೋಡುತ್ತಿದ್ದೆವು ಇವತ್ತು ಸಂಪೂರ್ಣವಾಗಿ ಸಾರಾಯಿ ನಿಷೇಧವಾಗಿದ್ದರಿಂದ ಅಲ್ಲಲ್ಲಿ ಸ್ವಲ್ಪ ಸಾರಾಯಿ ಇದೆ ಎಂದು ಹೇಳುತ್ತಾರೆ ಜುಲೈ 1ನೇ ತಾರೀಖಿಗೆ ನಿಷೇಧವಾಯಿತಲ್ಲಾ, ಇದನ್ನು ಬಹಳಷ್ಟು ಕಾರ್ಖಾನೆ ಮಾಲೀಕರು ತಯಾರು ಮಾಡಿ ಅಲ್ಲಲ್ಲಿ ಕೊಟ್ಟಂತೆ ಕಾಣುತ್ತಾರೆ ಅಮಾಯಕರು ಪಾಪ ಗೊತ್ತಿಲ್ಲದೇ ಸಾರಾಯಿ ಪ್ಯಾಕೇಟ್‌ಗಳನ್ನು ಇಟ್ಟುಕೊಂಡಿರಬಹುದು, ಆದ್ದರಿಂದ ತಾವು ಈ ಕಳ್ಳಭಟ್ಟಿಯನ್ನು, ಇದನ್ನು ತಯಾರು ಮಾಡುವಂತಹ ಗ್ಯಾಂಗ್‌ನವರ ಮೇಲೆ ಸರ್ಕಾರ ಉಗ್ರವಾದಂತಹ ಕ್ರಮವನ್ನು ಕೈಗೊಳ್ಳಬೇಕು ಗೂಂಡಾ ಕಾಯಿದೆಯಡಿಯಲ್ಲಿ ಅವರನ್ನು ಬಂಧಿಸುವಂತಹ ಕ್ರಮ ಆಗಬೇಕು ಮಾನ್ಯ ಯಡಿಯೂರಪ್ಪನವರೇ ಈ ಸಾರಾಯಿ ನಿಷೇದ ಏನು ಮಾಡಿದ್ದೀರಿ, ಮತ್ತೆ ನಿವೇನಾದರೂ ಸಿಎಲ್-2, ಸಿಎಲ್-9, ಹಳ್ಳಿಗಳ ಕಡೆಗೆ ಕೊಟ್ಟರೆ ಮತ್ತೆ ಆ ನಮೂನೆ ಸಾರಾಯಿಯನ್ನು ಮತ್ತೆ introduce ಮಾಡಿದಂತಾಗುತ್ತದೆ ಯಾವ ಕಾರಣಕ್ಕೂ ಕೂಡ ಹಳ್ಳಿಯಲ್ಲಿ ಸಿಎಲ್-2 ಇರಬಹುದು, ಸಿಎಲ್-9 ಆಗಿರಬಹುದು, ಬ್ರಾಂದಿ ಅಂಗಡಿಯನ್ನು ಹಳ್ಳಿಗಳಲ್ಲಿ ತೆರೆಯುವಂತಹ ಕೆಲಸವನ್ನು ಮಾಡಬಾರದು ನೀವೇನಾದರೂ ತೆರೆಯುವುದು ಇದ್ದರೆ ಏನು ಇದೆಯೋ ಅದು ಇರಲಿ, ಸಿಟಿಗಳಲ್ಲಿ ಮತ್ತು ಪಟ್ಟಣಪ್ರದೇಶಗಳಲ್ಲಿ, ತಾಲ್ಲೂಕು ಕೇಂದ್ರಗಳಲ್ಲಿ ನಗರಸಭೆ ಹಾಗೂ ಪುರಸಭೆಗಳಲ್ಲಿ ಇರಲಿ, ಆದರೆ ಅದು ಗ್ರಾಮಪಂಚಾಯಿತಿಯಾಗಲಿ, ಒಂದು ಗ್ರಾಮಾಂತರ ಪ್ರದೇಶಗಳಾಗಲಿ, ಅವುಗಳನ್ನು ತೆರೆಯುವಂತಹ ಕೆಲಸವನ್ನು ತಾವು ಮಾಡಬಾರದು ಎಂದು ನಾನು ತಮ್ಮಲ್ಲಿ ಕಳಕಳಿಯಿಂದ ವಿನಂತಿ ಮಾಡುತ್ತೇನೆ ಇದರಿಂದ ಕೋಟ್ಯಾಂತರ ರೂಪಾಯಿಗಳು ನಷ್ಟವಾದರೂ ಕೂಡ ಪರವಾಗಿಲ್ಲ, ಈ ಜನರಿಗೆ ವಿಷ ಉಣಿಸುವಂತಹ ಕೆಲಸ ಏನು ನಡೆದಿದೆ ಅದು ಸಾರಾಯಿ

ಕುಡಿಸುವಂತಹದ್ದು ಒಂದೇ, ಈ ಸಮಾಜಕ್ಕೆ ವಿಷವನ್ನು ಕುಡಿಸುವಂತಹದ್ದು ಕೂಡ ಒಂದೇ ಆಗಿರುತ್ತದೆ ಇವತ್ತು ನೀವು ಅಮೃತವನ್ನು ಉಣಿಸುವಂತಹ ಕೆಲಸವನ್ನು ತಾವು ಮಾಡಿದ್ದೀರಿ ಅದಕ್ಕೋಸ್ಕರ ನಾನು ನಿಮಗೆ ಅಭಿನಂದಿಸುತ್ತೇನೆ ಲಾಟರಿಯನ್ನು ಎಲ್ಲಾ ಬಡವರು, ಕಾರ್ಮಿಕರು, ಮಧ್ಯಮವರ್ಗದವರು, ಈ ಲಾಟರಿಯಲ್ಲಿ ಏನಾದರೂ ಜೂಜಿನಲ್ಲಿ ನಾವು ಗೆದ್ದು ಬಿಡುತ್ತೇವೆ ಏನು ದಿನ ನಿತ್ಯದ ದುಡಿಮೆಯಲ್ಲಿ ಅವರುಗಳು ಲಾಟರಿಯನ್ನು ಆಡುತ್ತಿದ್ದರು ಅವರುಗಳು ಲಾಟರಿ ಟಿಕೇಟನ್ನು ಖರೀದಿ ಮಾಡುತ್ತಿದ್ದರು ಬಹಳ ವರ್ಷಗಳ ಕಾಲ ಈ ಲಾಟರಿ ನಿಷೇಧವಾಗಬೇಕೆಂದು ಬಹಳಷ್ಟು ಜನರು ಹೋರಾಟವನ್ನು ಮಾಡಿದ್ದರು ಆದರೆ ಲಾಟರಿಯನ್ನು ಯಾರೂ ಕೂಡ ನಿಷೇಧ ಮಾಡುವುದಕ್ಕಾಗಲಿಲ್ಲ ಲಾಟರಿಯನ್ನು ಕೂಡ ನಿಷೇಧ ಮಾಡುವುದರ ಮೂಲಕ ಇವತ್ತು ಆ ಜನರಿಗೂ ಕೂಡ ಇವತ್ತು ಒಳ್ಳೆಯ ಕೆಲಸವನ್ನು ಮಾಡಿದ್ದೀರಿ ಈ ಜೂಜು ಕೋರರನ್ನು ಹತ್ತಿಕ್ಕುವಂತಹದ್ದು, ಮತ್ತು ಅವರ ಆರ್ಥಿಕ ಉಳಿತಾಯಕ್ಕೆ ನೆರವಾಗುವಂತಹ ಕೆಲಸ ಈ ಸರ್ಕಾರದಿಂದ ಆಗಿದೆ ಇದರಿಂದ ಎಷ್ಟೋ ಜನ ಹಳ್ಳಿಗಳಲ್ಲಿ ಇರುವಂತಹ ಹೆಣ್ಣುಮಕ್ಕಳು ಲಾಟರಿಯನ್ನು ಖರೀದಿ ಮಾಡುತ್ತಿದ್ದರು ಎಲ್ಲರ ಕೈಯಲ್ಲಿ 10–15 ಟಿಕೇಟ್‌ಗಳನ್ನು ನೋಟುಗಳ ತರಹ ಹಿಡಿದುಕೊಂಡಿ-ರುವುದನ್ನು ನಾನು ನೋಡಿದ್ದೇನೆ ಇವತ್ತು ಅವರುಗಳ ಕೈಯಲ್ಲಿ ಯಾವುದೇ ಲಾಟರಿ ಟಿಕೇಟುಗಳು ಸಹ ಇಲ್ಲ ಅವರುಗಳ ಕೈಯಲ್ಲಿ ಇವತ್ತು ನೋಟುಗಳು ಇದೆ ಅವರು ಉಳಿತಾಯ ಮಾಡುವಂತಹ ಕ್ರಮ ಇದೆ ಈ ಲಾಟರಿ ನಿಷೇಧವೂ ಕೂಡ ಒಂದು ಜನಪರವಾಗಿರುವಂತಹ ಕ್ರಮವಾಗಿದೆ ಇವತ್ತು ಮಾನ್ಯ ಮುಖ್ಯಮಂತ್ರಿಗಳು ಕುಮಾರಸ್ವಾಮಿಯವರು ಹಳ್ಳಿಗಾಡಿನಲ್ಲಿ ವಾಸ್ತವ್ಯವನ್ನು ಮಾಡುವುದರ ಮೂಲಕ ಇಡೀ ಸರ್ಕಾರವನ್ನು ಗ್ರಾಮಾಂತರ ಪ್ರದೇಶಕ್ಕೆ ತರುವಂತಹ ಕೆಲಸವನ್ನು ಮಾಡಿದ್ದಾರೆ ಇವತ್ತು ಅವರು ವಾಸ್ತವ್ಯವನ್ನು ಮಾಡುವುದನ್ನು ಅನೇಕ ಜನರು ಅವರದೇ ದಾಟಿಯಲ್ಲಿ ಟೀಕೆ ಮಾಡುತ್ತಿದ್ದಾರೆ ರಾಜಕೀಯವಾಗಿ ಟೀಕೆ ಮಾಡುವುದು ಬೇರೆ, ಆದರೆ ವಾಸ್ತವವಾಗಿ ನೋಡಿದಾಗ ನಾನು ಒಂದು ದಿನ ಈ ಒಂದು ಚಳಿಗೆರೆಹಳ್ಳಿಗೆ ಹೋಗಿದ್ದೆ, ಅಲ್ಲಿ ಒಂದು ಲಂಬಾಣಿ ತಂಡದಲ್ಲಿ ಮಾನ್ಯ ಮುಖ್ಯಮಂತ್ರಿಗಳ ವಾಸ್ತವ್ಯದ ಕಾರ್ಯಕ್ರಮ ಇತ್ತು ಅವರ ಹೆಂಚಿನ ಮನೆಯಲ್ಲಿ ಮುಖ್ಯಮಂತ್ರಿಯವರು ಮೂರು ಗಂಟೆಗಳಲ್ಲಿ ಎಲ್ಲಾ ಜನರ ಅಹವಾಲು-ಗಳನ್ನು ಸ್ವೀಕಾರ ಮಾಡಿ ಎಲ್ಲರ ಜೊತೆಯಲ್ಲಿಯೂ ಕೂಡ ಮಾತನಾಡಿ

ಅಧಿಕಾರಿಗಳ ಜೊತೆಯಲ್ಲಿಯೂ ಕೂಡ ಮಾತನಾಡಿ ಅವರು ಊಟ ಮಾಡಿರುವುದು ಸುಮಾರು ರಾತ್ರಿ 3 ಗಂಟೆಯಲ್ಲಿ ಅವರು 4 ಗಂಟೆಯಲ್ಲಿ ಮಲಗುವುದಕ್ಕೆ ಸಿದ್ಧರಾದರು ಅವರಿಗೆ ಹೊಸ ಕಾಟು, ಬೆಡ್‌ಶೀಟ್, ಅದನ್ನು ತಂದಿರಬಹುದು ಎಂದು ನೋಡಿದೆ ಅಲ್ಲಿ ಯಾವುದು ಕೂಡ ಇರಲಿಲ್ಲ ಅವರ ಮನೆಯವರು ಹಾಕಿದಂತಹ ನೆಲದ ಮೇಲೆ ಹಾಕಿರುವಂತಹ ಹಾಸಿಗೆಯ ಮೇಲೆ ಮಲಗಿದರು ಅವರಿಗೆ ನಾವು ಗುಡ್‌ನೈಟ್ ಹೇಳದೆಯೇ ಗುಡ್ ಮಾರ್ನಿಂಗ್ ಸಾರ್ ಎಂದು ಹೇಳಿ ಹೊರಗೆ ಬಂದೆ ಬರೀ ಅಷ್ಟೇ ಅಲ್ಲಾ ಏಡ್ಸ್ ಪೀಡಿತವಾಗಿರುವಂತಹ ಒಬ್ಬರ ಮನೆಯಲ್ಲಿ ಯಾರೂ ಕೂಡ ಅವರನ್ನು ಮುಟ್ಟುವುದಿಲ್ಲ ಅವರನ್ನು ನೋಡಿದರೆ ದೂರ ಸರಿಯುತ್ತಾರೆ ಇಡೀ ಸಮಾಜ ಬಹಿಷ್ಕರಿಸುವಂತಹ ಏಡ್ಸ್ ಪೀಡಿತರ ಮನೆಯಲ್ಲಿ ಇವತ್ತು ಮಾನ್ಯ ಮುಖ್ಯಮಂತ್ರಿಗಳು ಮಲಗುತ್ತಾರೆ ಅವರ ಮನೆಯಲ್ಲಿ ಮಲಗಿರುವುದು ಮಾತ್ರವಲ್ಲ, ಅವರ ಕೈಯಲ್ಲಿ ಮಾಡಿರುವಂತಹ ಪದಾರ್ಥಗಳನ್ನು ಸೇವಿಸಿ ಊಟವನ್ನು ಮಾಡಿ ಅವರು ಅಲ್ಲಿಯೇ ಮಲಗಿ ಅವರ ಬದುಕಿನಲ್ಲಿ ಆತ್ಮ ಸ್ಥೈರ್ಯವನ್ನು ತುಂಬುವಂತಹ ಒಂದು ಧೈರ್ಯವನ್ನು ತುಂಬಿ ಸಮಾಜದಲ್ಲಿ ಎಲ್ಲರೂ ಕೂಡ ಇವರನ್ನು ಪ್ರೀತಿಸಬೇಕು ಎಂದು ಒಂದು ನೆಮ್ಮದಿಯನ್ನು ಅಲ್ಲಿ ತೆಗೆದುಕೊಂಡು ಬಂದಿದ್ದಾರೆ ಇವತ್ತು ಇಂಡಿಯಾ ದೇಶದಲ್ಲಿ ಯಾವ ಒಬ್ಬ ಮುಖ್ಯಮಂತ್ರಿಯೂ ಕೂಡ ಮಾಡದಂತಹ ಒಂದು ಸಾಹಸದ ಕಾರ್ಯವನ್ನು ಇವತ್ತು ನಮ್ಮ ಕುಮಾರಸ್ವಾಮಿಯವರು ಮಾಡಿದ್ದಾರೆ, ಅದೇ ರೀತಿಯಾಗಿ ಯಡಿಯೂರಪ್ಪನವರು ಕೂಡ 5–6 ಹಳ್ಳಿಗಳಲ್ಲಿ ಕೂಡ ಮಲಗಿದ್ದಾರೆ ಈ ಒಂದು ಗ್ರಾಮ ವಾಸ್ತವ್ಯ ಏನಾಗಿದೆ ಎಂದರೆ ಹಳ್ಳಿಗಾಡಿನ ಜನರಿಗೆ ಇವತ್ತು ಒಂದು ಹೊಸ ವಾತಾವರಣವನ್ನು ಒಂದು ಹೊಸ ಹುರುಪನ್ನು ಮೂಡಿಸಿದ ಅಲ್ಲಿ ಒಂದು ಹೊಸ ಯುಗವೇ ಆರಂಭವಾಗಿಬಿಟ್ಟಿದೆ ಎಲ್ಲಾ ರೀತಿಯ ಪ್ರಗತಿ ಪರವಾದ ಕಾರ್ಯಕ್ರಮಗಳು ನಡೆಯುತ್ತಿವೆ ಮುಖ್ಯಮಂತ್ರಿಗಳು ಬರುತ್ತಾರೆಂದರೆ ಸಾಕು ಜಿಲ್ಲಾ ಪಂಚಾಯತಿ, ತಾಲ್ಲೂಕು ಪಂಚಾಯತಿ, ಗ್ರಾಮ ಪಂಚಾಯಿತಿಯಲ್ಲಿರುವಂತಹ ಎಲ್ಲ ಹಣವನ್ನು ಹಾಕಿ ಅಲ್ಲಿ ರಸ್ತೆಗಳು ಇರಬಹುದು, ಸ್ಕೂಲ್ ಮಾಡುವಂತಹದ್ದು ಇರಬಹುದು, ಉದ್ಯಾನವನ ಮಾಡುವುದು ಇರಬಹುದು, ಎಲ್ಲಾ ಪ್ರಗತಿಪರವಾದ ಕಾರ್ಯಕ್ರಮಗಳನ್ನು ತಿಂಗಳಿನಿಂದ ಪ್ರಾರಂಭವಾಗಿ ಇಡೀ ಒಂದು ಗ್ರಾಮ ಪಂಚಾಯಿತಿಯನ್ನು ಒಂದು ಮಾದರಿ ಪಂಚಾಯಿತಿಯನ್ನಾಗಿ ಮಾಡುವ ವಾತಾವರಣವನ್ನು

ನಾವು ನೋಡುತ್ತಿದ್ದೇವೆ ಅವರ ಒಂದು ಜನಪ್ರಿಯವಾದ ಕಾರ್ಯಕ್ರಮ ಇವತ್ತು ಎಲ್ಲರೂ ಕೂಡ ಮೆಚ್ಚಿಕೊಳ್ಳಬೇಕು, ಇದನ್ನು ರಾಜಕೀಯವಾಗಿ ನಾವು ಟೀಕೆ ಮಾಡಬೇಕು ಎಂದು ಮಾಡಿದರೆ, ಅದಕ್ಕೆ ಯಾರು ಏನು ಮಾಡುವುದಕ್ಕಾಗುವುದಿಲ್ಲ ಈ ಒಂದು ವಾಸ್ತವ್ಯದ ಕಾರ್ಯಕ್ರಮದಲ್ಲಿ ಮಾನ್ಯ ಹಿರಿಯರಾದಂತಹ ಶ್ರೀ ವಾಟಾಳ್ ನಾಗರಾಜ್‌ರವರು ನಿನ್ನೆ ದಿನ ಹೇಳುತ್ತಿದ್ದರು

ಮಾನ್ಯ ವಾಟಾಳ್ ನಾಗರಾಜ್‌ರವರು ಮಾತನಾಡುವಾಗ ಮಾನ್ಯ ಮುಖ್ಯಮಂತ್ರಿಗಳು ಗ್ರಾಮ ವಾಸ್ತವ್ಯ ಹೂಡಿದರಲ್ಲಿ ಆ ಮನೆಯಲ್ಲಿ ಅವರಿಗೆ ಕೊಟ್ಟಿದ್ದ ಬೆಡ್‌ಶೀಟ್, ಕಾಟ್, ರಗ್ಗು, ಜಮಖಾನಾ, ತಲೆದಿಂಬು ಇವೆಲ್ಲಾ ಎಲ್ಲಿ ಹೋಯಿತು ಎಂದು ಕೇಳುತ್ತಿದ್ದರು ಅದನ್ನು ಸರ್ಕಾರದವರು ಯಾರು ಕೊಡಿಸುವುದಿಲ್ಲ ಮುಖ್ಯಮಂತ್ರಿಗಳು ಬರುತ್ತಾರೆಂದು ಸರ್ಕಾರದಿಂದ ಬೆಡ್, ಕಾಟ್, ರಗ್ಗು ಇವೆಲ್ಲಾ ಯಾರೂ ಖರೀದಿ ಮಾಡಿ ಅವರಿಗೆ ಕೊಡುವುದಿಲ್ಲ ಅಲ್ಲಿಯ ಜನ ಯಾರ ಮನೆಗೆ ಮುಖ್ಯಮಂತ್ರಿಗಳು ಹೋಗುತ್ತಾರೋ ಅತಿಥಿಗಳು ಯಾರಾದರೂ ಒಬ್ಬರು ಮನೆಗೆ ಬರುತ್ತಾರೆಂದ ಮೇಲೆ ಅವರೇ ಅದರ ವ್ಯವಸ್ಥೆಯನ್ನು ಮಾಡುತ್ತಾರೆ

(ಗೊಂದಲ)

ಉಪಾಧ್ಯಕ್ಷರು ಮಹದೇವ್ ಅವರು ಮಾತನಾಡಲಿ, ಸುಮ್ಮನೆ ಕುಳಿತುಕೊಳ್ಳಿ

ಶ್ರೀ ಮಹದೇವ್ ಉಪಾಧ್ಯಕ್ಷರೇ, ಒಂದು ಸಬ್‌ಮಿಷನ್ ಇದೆ

ಶ್ರೀ ಹೆಚ್ ಆಂಜನೇಯ ಆದ್ದರಿಂದ ಈ ರೀತಿ ಟೀಕೆ ಮಾಡುವುದು ಸರಿಯಲ್ಲ ಅವರು ಹೇಳುವುದನ್ನು ಹೇಳಲಿ ವಾಟಾಳ್ ನಾಗರಾಜ್‌ರವರು ಬೆಡ್‌ಶೀಟ್ ಎಲ್ಲಿ ಹೋಯಿತು ಎಂದು ಕೇಳಿದರು, ಇದು ಸರಿಯಲ್ಲ ಏಕೆ ಅವರು ಹೇಳಬೇಕು, ನೀವು ಸುಮ್ಮನಿರಿ

ಶ್ರೀ ಮಹದೇವ್ ಈಗ ಚರ್ಚೆ ಬಹಳ ಚೆನ್ನಾಗಿ ನಡೆಯುತ್ತಿದೆ, ಅದರ ಮೇಲೆ ನಾವು ಸಲಹೆ ಸಹಕಾರಗಳನ್ನು ಕೊಡಬೇಕು ಅವರ ಕಾಲದಲ್ಲಿ ಏನೇನು ಮಾಡಿದ್ದಾರೆಂದು ಕೇಳಬೇಕು ಯಾವ್ಯಾವ ಗ್ರಾಮದಲ್ಲಿ ವಾಸ್ತವ್ಯ ಹೂಡಿದ್ದಿರಿ

(ಗೊಂದಲ)

ಉಪಾಧ್ಯಕ್ಷರು ಮಹದೇವ ಈಗ ಒಂದು ನಿಮಿಷ ಅವರು ಮಾತನಾಡಲಿ, ಸುಮ್ಮನೆ ಕುಳಿತುಕೊಳ್ಳಿ

(ಗೊಂದಲ)

ಶ್ರೀ ಎಂ ಆರ್ ಸೀತಾರಾಂ ಅವರಿಗೆ ಬೇಡಿಕೆಗಳ ಮೇಲೆ ಚರ್ಚೆ ಮಾಡಲಿಕ್ಕೆ ಹೇಳಿ

(ಗೊಂದಲ)

ಶ್ರೀ ಮಹದೇವ್ ಸದನದಲ್ಲಿ ಮಧ್ಯೆ ಮಾತನಾಡುವಾಗ ಯಾರೂ ಕೂಡ permission ತೆಗೆದುಕೊಂಡು ಮಾತನಾಡುವುದಿಲ್ಲ

ಉಪಾಧ್ಯಕ್ಷರು ಆಂಜನೇಯ ವಿಷಯದ ಬಗ್ಗೆ ಮಾತನಾಡಿ, ಎಲ್ಲೋ ಹೋಗಬೇಡಿ,

ಶ್ರೀ ಎಂ ಆರ್ ಸೀತಾರಾಂ ಅವರಿಗೆ ಬೇಡಿಕೆಗಳ ಮೇಲೆ ಮಾತನಾಡಲಿಕ್ಕೆ ಹೇಳಿ, ವೈಯಕ್ತಿಕ ವಿಚಾರದ ಮೇಲೆ ಮಾತನಾಡುವುದು ಸರಿಯಲ್ಲ

ಉಪಾಧ್ಯಕ್ಷರು ಒಂದು ನಿಮಿಷ ಕುಳಿತುಕೊಳ್ಳಿ, ಆಂಜನೇಯ ಸಬ್ಜೆಕ್ಟ್ ಬಗ್ಗೆ ಮಾತನಾಡಿ, ಅವರು ಮಾಡಿರುವ ಕಾರ್ಯಕ್ರಮಗಳ ಬಗ್ಗೆ ಮಾತನಾಡಿ

(ಗೊಂದಲ)

ಶ್ರೀ ಹೆಚ್ ಆಂಜನೇಯ ಬೆಡ್‌ಶೀಟ್, ತಲೆದಿಂಬು ಎಲ್ಲಿ ಹೋಯಿತು, ಕಾಟ್ ಎಲ್ಲಿ ಹೋಯಿತು ಎಂದು ವಾಟಾಳ್ ನಾಗರಾಜ್‌ರವರು ಕೇಳಿದ್ದಕ್ಕೆ ನಾನು ಹೇಳುತ್ತಿದ್ದೇನೆ, ನಾನು ವಿಷಯದ ಬಗ್ಗೆ ಮಾತನಾಡುತ್ತಿದ್ದೇನೆ

(ಗೊಂದಲ)

ಉಪಾಧ್ಯಕ್ಷರು ಜಿಲ್ಲೆ, ಜಿಲ್ಲೆಯವರು ಈ ರೀತಿ ಈಲ್ಡ್ ಆದರೆ ಹೇಗೆ ಉಮಾಪತಿಯವರೇ ಕುಳಿತುಕೊಳ್ಳಿ

(ಗೊಂದಲ)

ಶ್ರೀ ಹೆಚ್ ಆಂಜನೇಯ ನಾನು ವಿಷಯದ ಬಗ್ಗೆ ಮಾತನಾಡುತ್ತಿದ್ದೇನೆ

ಶ್ರೀ ಎಂ ಪಿ ವೆಂಕಟೇಶ್ ನಿಮಗೆ ಆ ಯೋಗ್ಯತೆ ಇದ್ದಿದ್ದರೆ ನೀವು ಏತಕ್ಕೆ ಆ ಕಾರ್ಯಕ್ರಮವನ್ನು ಮಾಡಲಿಲ್ಲ ನಿಮಗೆ ಅಧಿಕಾರ ಇತ್ತಲ್ಲ, ಆಗ ಏತಕ್ಕೆ ಮಾಡಲಿಲ್ಲ ಮಾತನಾಡದೆ ಸುಮ್ಮನೆ ಕುಳಿತುಕೊಳ್ಳಿ

(ಗೊಂದಲ)

ಶ್ರೀ ಎಂ ಆರ್ ಸೀತಾರಾಂ ಉಪಾಧ್ಯಕ್ಷರೇ ಅವರಿಗೆ ಸಬ್ಜೆಕ್ಟ್ ಮೇಲೆ ಮಾತನಾಡಲಿಕ್ಕೆ ತಾವು ರೂಲಿಂಗ್ ಕೊಡಿ

ಶ್ರೀ ಮಹದೇವ್ ನೀವು ಡಿಮ್ಯಾಂಡ್ಸ್ ಮೇಲೆ ಮಾತನಾಡಿ, ಮುಖ್ಯಮಂತ್ರಿಗಳು ಯಾವ್ಯಾವ ಊರಿಗೆ ಹೋಗಿದ್ದರು? ಈ ರೀತಿ ವೈಯಕ್ತಿಕವಾಗಿ ಮಾತನಾಡುವುದು ಸರಿಯಲ್ಲ

(ಗೊಂದಲ)

ಉಪಾಧ್ಯಕ್ಷರು ಒಂದು ನಿಮಿಷ ಕುಳಿತುಕೊಳ್ಳಿ ಮಹದೇವ್, ವೆಂಕಟೇಶ್, ವಿಶ್ವನಾಥ್ ಕುಳಿತುಕೊಳ್ಳಿ ಆಂಜನೇಯರವರೇ ವಿಷಯದ ಬಗ್ಗೆ ಸೀಮಿತವಾಗಿರಲಿ, divert ಮಾಡಬೇಡಿ ನೀವು ಚೆನ್ನಾಗಿ ಮಾತನಾಡು ತ್ತಿದ್ದೀರಿ, ಬೇಡಿಕೆಗಳ ಬಗ್ಗೆ ಚರ್ಚೆ ಮಾಡಿ, ಅವರು ಮಾಡಿರುವ ಕಾರ್ಯಕ್ರಮಗಳ ಬಗ್ಗೆ ಮಾತನಾಡಿ

(ಗೊಂದಲ)

ಶ್ರೀ ಹೆಚ್ ಆಂಜನೇಯ . ಸಬ್ಜೆಕ್ಟ್ ಮೇಲೆ ಸರಿಯಾಗಿ ಯಾರು ಮಾತನಾಡಿದ್ದಾರೆಂದು ಹೇಳಲಿ, ಎಲ್ಲರೂ ಅವರಿಗೆ ಬೇಕಾದ ವಿಷಯದ ಬಗ್ಗೆ ಮಾತನಾಡುತ್ತಾರೆ

(ಗೊಂದಲ)

ಶ್ರೀ ಎಂ ಪಿ ವೆಂಕಟೇಶ್ ಅವರಿಗೆ ಬೇಕಾದ ಹಾಗೆ ಮಾತನಾ ಡಬಹುದೆ?

(ಗೊಂದಲ)

ಉಪಾಧ್ಯಕ್ಷರು ಒಂದು ನಿಮಿಷ, ಈಗ ಕೊಟ್ಟಿರುವ ಸಮಯದಲ್ಲಿ ಮಾತನಾಡಿ ಮುಗಿಸಿ

ಶ್ರೀ ಹೆಚ್ ಆಂಜನೇಯ ಮಾನ್ಯ ಉಪಾಧ್ಯಕ್ಷರೇ, ನಮ್ಮ ಕ್ಷೇತ್ರದಲ್ಲಿ ಏನಾದರೂ ರೋಡ್ಸ್ ಅಭಿವೃದ್ಧಿ ಆಗುತ್ತಿದೆಯೆಂದರೆ, ಎಲ್ಲಾದರೂ ಒಂದೊಂದು Power Station ನಿರ್ಮಾಣವಾಗುತ್ತಿದ್ದರೆ ಅದು ನಮ್ಮ ರೇವಣ್ಣನವರ ಪರಿಶ್ರಮದಲ್ಲಿ ಆಗುತ್ತಿದೆ ಆದರೆ ಕೆಲವರಿಗೆ ರೇವಣ್ಣನವರೆಂದರೆ ಸಿಂಹಸ್ವಪ್ನವಾಗಿದ್ದಾರೆ

(ಗೊಂದಲ)

ಶ್ರೀ ಆರ್ ಧ್ರುವನಾರಾಯಣ್ ಸಿ ಆರ್ ಎಫ್ ಫಂಡ್‌ನಿಂದ

ಶ್ರೀ ಹೆಚ್ ಆಂಜನೇಯ ಎಲ್ಲದಕ್ಕೂ ರೇವಣ್ಣ, ಕೆಲಸ ಆಗಿಲ್ಲವೇ? ನಬಾರ್ಡ್ ಇರಬಹುದು, ಸಿ ಆರ್ ಎಫ್ ಫಂಡ್ ಒಂದೇ ಅಲ್ಲ, ರಾಜ್ಯದ ಫಂಡ್ ಇರಬಹುದು, ಸರ್ಕಾರದ ಕಾರ್ಯಕ್ರಮ ಇದು

ಶ್ರೀ ಎಂ ಪಿ ವೆಂಕಟೇಶ್ ಹಿಂದಿನ ಸರ್ಕಾರ ಇದ್ದಾಗ ನೀವು ಏನು ಮಾಡಿದ್ದೀರಿ ಹೇಳಿ

(ಗೊಂದಲ)

ಉಪಾಧ್ಯಕ್ಷರು ಆಂಜನೇಯ ಈ ಕಡೆ ನೋಡಿ, ಸ್ವಲ್ಪ ಬೇಗ ಮಾತನಾಡಿ ಮುಗಿಸಿಬಿಡಿ ಇನ್ನೂ ಪ್ರಶ್ನೋತ್ತರ ಇದೆ

ಶ್ರೀ ಹೆಚ್ ಆಂಜನೇಯ ಯಾರ‍್ಯಾರು ಏನೇನು ಮಾತನಾಡುತ್ತಿದ್ದಾರೆ, ಅವರ ಮಾತುಗಳನ್ನು ನಾವು ಮೂರು ತಿಂಗಳ ಕಾಲದಿಂದ ಇಲ್ಲಿ ಕುಳಿತುಕೊಂಡು ಸಮಾಧಾನದಿಂದ ಕೇಳುತ್ತಿದ್ದೇವೆ ಆಮೇಲೆ ಅವರು ಸರ್ಕಾರದ ಮೇಲೆ ಮಾಡಿರುವ ಗದಾ ಪ್ರಹಾರವನ್ನು ಕೇಳಿದ್ದೇವೆ ಅವರ ಕೆಲವು ಮಾತುಗಳಿಂದ ನಾವು ಪ್ರೇರಣೆ ಆಗಿದ್ದೇವೆ ಮುಂದಿನ ದಿನಗಳಲ್ಲಿ ನಮಗೆ ಅಂಥ ಅವಕಾಶ ಸಿಕ್ಕಿದರೆ ನಾವು ಕೂಡ ಆ ರೀತಿ ಮಾತನಾಡಬಹುದೆಂದು ಅವರಿಂದ ನಾವು ಕಲಿತಿದ್ದೇವೆ ಎಲ್ಲವನ್ನು ಹೇಳುವಾಗ ಸಾರಾಯಿ ನಿಷೇಧ ಸರಿಯಿಲ್ಲವೆಂದರೆ ಹೇಗೆ, ಸರಿಯೆಂದು ಹೇಳಬೇಕಾಗುತ್ತದೆ ಏಕೆಂದರೆ ಇವತ್ತು ಈ ಸರ್ಕಾರವನ್ನು ಎಷ್ಟೋ ಜನ ಹೆಣ್ಣುಮಕ್ಕಳು ನೆನಸುತ್ತಿದ್ದಾರೆ

(ಗೊಂದಲ)

ಉಪಾಧ್ಯಕ್ಷರು ನಾಗರಾಜ್ ಅವರು ಮಾತನಾಡುತ್ತಿದ್ದಾಗ ಅವರು ಹಾಗೆ ಮಾತನಾಡಿದ್ದಾರೆಯೇ? ವೈಯಕ್ತಿಕವಾಗಿ ಅವರ ಮನಸ್ಸಿನ ವಿಚಾರವನ್ನು ಹೇಳುತ್ತಿದ್ದಾರೆ ನೀವು ಮಾತನಾಡುವಾಗ ನೀವು ಮಾತನಾಡಿ, ವೈಯಕ್ತಿಕವಾಗಿ ಅಭಿಪ್ರಾಯವನ್ನು ತಿಳಿಸಿದರೆ ಅದಕ್ಕೆ ಏಕೆ ಅಡ್ಡಿಪಡಿಸುತ್ತೀರಿ

(ಗೊಂದಲ)

ಉಪಾಧ್ಯಕ್ಷರು ಆಯಿತು, ಈಗ ಮುಗಿಸುತ್ತಾರೆ ಸುಮ್ಮನೆ ಕುಳಿತುಕೊಳ್ಳಿ ಮಹದೇವ್ ನೀವು ವೆಂಕಟೇಶ್‌ಗೆ ಮೆಲ್ಲಗೆ ಎತ್ತಿಕೊಡುತ್ತೀರಿ, ಕುಳಿತುಕೊಂಡುಬಿಡುತ್ತೀರಿ, ಅವರು ಮಾತನಾಡುತ್ತಾರೆ, ತಪ್ಪೇನಲ್ಲ, ವಿಶ್ವಾಸದಿಂದ ಹೇಳುತ್ತಿದ್ದೇನೆ ನಿಮ್ಮ ಮೇಲೆ ಕೆಟ್ಟ ಅಭಿಪ್ರಾಯಕ್ಕೆ ಹೇಳುತ್ತಿಲ್ಲ

ಶ್ರೀ ಮಹದೇವ್ ಸಬ್ಜೆಕ್ಟ್ ಮೇಲೆ ಮಾತನಾಡಿ ಎಂದು ಹೇಳುವುದು ತಪ್ಪೇ?

(ಗೊಂದಲ)

ಉಪಾಧ್ಯಕ್ಷರು ಈಗ ನೀವು ಯಾರು ಮಾತನಾಡಿದ್ದೂ record ಗೆ ಹೋಗುವುದಿಲ್ಲ ದಯವಿಟ್ಟು ಯಾರೂ record ತೆಗೆದುಕೊಳ್ಳಬೇಡಿ ಅವರು ಎದ್ದಿರುವುದು, ನಿಂತಿರುವುದು, ಅವರ ಹೇಳಿಕೆಗಳು ಯಾವುದನ್ನೂ record ತೆಗೆದುಕೊಳ್ಳಬೇಡಿ ಮಾನ್ಯ ಆಂಜನೇಯ ನೀವು ಮಾತನಾಡಿ ಎರಡು ನಿಮಿಷದಲ್ಲಿ ಮುಗಿಸಬೇಕು

ಶ್ರೀ ಹೆಚ್ ಆಂಜನೇಯ ಹೀಗೆ ಮಾತನಾಡಬೇಕು, ಹಾಗೆಯೇ ಮಾತನಾಡಬೇಕು ಇದನ್ನು ಅಲ್ಲಿ ಹೋಗಿ ಹೇಳಿರಿ ಎಂದು ಹೇಳಿ ಯಾರೂ ಹೇಳಬಾರದು

ಉಪಾಧ್ಯಕ್ಷರು · ಈಗ ಮತ್ತೆ ಅಲ್ಲಿಯೇ ಹೋಗುತ್ತೀರಲ್ಲ ಮುಂದಕ್ಕೆ ಬನ್ನಿ

ಶ್ರೀ ಹೆಚ್ ಆಂಜನೇಯ ನಾನು ಹೇಳಬೇಕು ಸಾರ್ ಇದೇ ರೀತಿ ಮಾತನಾಡಬೇಕು, ಅದೇ ರೀತಿ ಮಾತನಾಡಬೇಕೆಂದು ಹೇಳಿ ಮಧ್ಯೆ ಪ್ರವೇಶ ಮಾಡುವುದಾದರೆ ನಾಳೆ ಅವರ ನಾಯಕರು ಮಾತನಾಡುವಾಗ ನಾವೂ ಹೀಗೆಯೇ ಎದ್ದೇಳುತ್ತೇವೆ ಆವಾಗ ನೀವು ಕೂಡ ಉತ್ತರ ಕೊಡಬೇಕಾಗುತ್ತದೆ Subject ಮೇಲೆ ಮಾತನಾಡುತ್ತೀರಾ? ಹಾಗಾದರೆ Subject ಮೇಲೆಯೇ ಹಾಗಾದರೆ ಮಾತನಾಡಲಿ ಅದಕ್ಕೂ ನಾವು ತಯಾರಾಗಿದ್ದೇವೆ ಅದರಿಂದ ಇವತ್ತು

(ಗೊಂದಲ)

ಈ ಸಾರಾಯಿ ನಿಷೇಧ ಇರಬಹುದು ಈ ಸಾರಾಯಿ ನಿಷೇಧದಿಂದ ಇಡೀ ರಾಜ್ಯದ ಬಡವರು ಏನ್ನಿದ್ದಾರೆ? ಅವರೆಲ್ಲರೂ ಕೂಡ ನಿಟ್ಟುಸಿರನ್ನು ಬಿಡತಕ್ಕ ಒಂದು ವಾತಾವರಣ ನಿರ್ಮಾಣ ಆಗಿದೆ ಒಂದು ಹೊಸ ಯುಗ ಆರಂಭವಾಗಿದೆ ಎಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆ ಪಡುತ್ತೇನೆ ಇತ್ತೀಚೆಗೆ ಈ ಪೌರ ಕಾರ್ಮಿಕರ ವಿಚಾರ ನೀವು ಏನಾದರೂ ಅನ್ನಿ ನಾನು ಇಂತಹವನ್ನು ಬಹಳ ನೋಡಿದ್ದೇನೆ ನಾನು ಕೇರ್ ಮಾಡುವುದಿಲ್ಲ ನೀವಿನ್ನೂ ಈಗ ಬಂದಿದ್ದೀರಿ ನಾವು ಈ ಮನೆಗೆ ಬಂದಿರುವುದು ಹೊಸದಿರಬಹುದು 30 ವರ್ಷ ಇಂಥವನ್ನೆಲ್ಲಾ ನೋಡಿ ಬಂದಿರುವವನು ನೀವು ಪ್ಯಾದೆ ಎಂದಾದರೂ ಅಂದುಕೊಳ್ಳಿ ಏನಾದರೂ

ಅಂದು ಕೊಳ್ಳಿ ನಾವು ಕೇರ್ ಮಾಡುವುದಿಲ್ಲ ನೀವು ಏನಾದರೂ ಅಂದು ಕೊಳ್ಳಿ ನಿಮ್ಮ ನಾಯಕರು ಮಾತನಾಡಲಿ

(ಗೊಂದಲ)

ಉಪಾಧ್ಯಕ್ಷರು ಮಾನ್ಯ ಆಂಜನೇಯ ಅವರೇ, ಇವೆಲ್ಲಾ ಈಗ ನೀವು ಯಾವ ಕಡೆ ನೋಡಿ ಮಾತನಾಡುತ್ತೀರಿ? ಯಾರಿಗೋಸ್ಕರ ನೀವು ಮಾತನಾಡುತ್ತೀರಿ? ಅಲ್ಲ ಒಂದು ನಿಮಿಷ ಇರಿ ನೀವು ಯಾರಿಗೋಸ್ಕರ ಮಾತನಾಡುತ್ತಿದ್ದೀರಿ? ಯಾವ ಕಡೆ ಮಾತನಾಡುತ್ತೀರಿ? ನೀವು ಈ ಕಡೆ ನೋಡಿ ಮಾತನಾಡಿ ನೀವು ಛೇರ್‌ಗೆ ಹೇಳಿ ಅವರು ಮಾತನಾಡಿದರೆ ನೀವೇಕೆ ಆ ಕಡೆ ತಿರುಗುತ್ತೀರಿ? ಇಲ್ಲಿ ನೋಡಿ ಮಾತನಾಡಿ

ಶ್ರೀ ಹೆಚ್ ಆಂಜನೇಯ . ಈಗ ವ್ಯಾಜ್ಯ, ನ್ಯಾಯ ಎಂದು ಹೇಳುತ್ತಿದ್ದಾರೆ ಪಾಪ ಅವಕ್ಕೆ ಅದೇನೂ ಗೊತ್ತಾಗುವುದಿಲ್ಲ ಅದರಿಂದ ಸ್ವಲ್ಪ ಅವರಿಗೆ ಸರಿಯಾಗಿ ತಿಳುವಳಿಕೆ ಹೇಳಿ ನಾಳೆ ಅವರು ಮಾತನಾಡುವಾಗ ನಾವು ಕೂಡ ಬಹಳ ಜನ ಇದ್ದೇವೆ

ಉಪಾಧ್ಯಕ್ಷರು . ಈಗ ನೀವು ಬೇಗ ಮುಗಿಸಿ

ಶ್ರೀ ಹೆಚ್ ಆಂಜನೇಯ ಈಗ ನಾನು ಮಾತನಾಡುತ್ತಿದ್ದೇನೆ ಮಾತನಾಡುವಾಗ ಮಧ್ಯದಲ್ಲಿ ನಮಗೆ disturb ಮಾಡಬೇಕು?

ಉಪಾಧ್ಯಕ್ಷರು ಈಗ ಯಾರೂ ಮಾತನಾಡುವುದಿಲ್ಲ ನೀವು ಮಾತನಾಡಿ ಮುಗಿಸಿ ಬಿಡಿ

ಶ್ರೀ ಹೆಚ್ ಆಂಜನೇಯ ಇವರು ಮಾತನಾಡುವಾಗ ನಾವು ಬಾಯಿ ಮುಚ್ಚಿಕೊಂಡು ಕೇಳುವುದಿಲ್ಲವಾ?

ಶ್ರೀ ಎಂ ಆರ್ ಸೀತಾರಾಮ್ ಅವರು ಈ ಮನೆಗೆ ಈ ವರ್ಷ ಬಂದಿರಬಹುದು ಆದರೆ ಅವರು 30 ವರ್ಷ ಕಾಂಗ್ರೆಸ್‌ನಲ್ಲಿದ್ದರು ಎಂಬುದನ್ನು ಮರೆಯಬಾರದು

(ಗೊಂದಲ)

ಶ್ರೀ ಹೆಚ್ ಆಂಜನೇಯ ಎಲ್ಲರೂ ಒಂದೊಂದು ಪಾರ್ಟಿಯಲ್ಲಿ ತಯಾರಾಗಿ ಬಂದಿದ್ದಾರೆ

ಉಪಾಧ್ಯಕ್ಷರು ನೀವು ಆ ಕಡೆ ಹೋಗಬೇಡಿ ನೀವು ಮುಗಿಸಿ ಬಿಡಿ

ಶ್ರೀ ಹೆಚ್ ಆಂಜನೇಯ ನಾನು ಆ ಕಡೆಗೆ ಹೋಗುತ್ತಿಲ್ಲ ಅವರು ಕೇಳುತ್ತಿದ್ದಾರೆ

ಶ್ರೀ ಎಂ ಆರ್ ಸೀತಾರಾಮ್ ಅವರು ದಯವಿಟ್ಟು ಮುಗಿಸಿದರೆ ಸಾಕಾಗಿದೆ

ಶ್ರೀ ಸಿ ಎಂ ಉದಾಸಿ ತಮಗೆ ಗೊತ್ತಿಲ್ಲ Front bench ನಲ್ಲಿ ಶ್ರೀ ಆರ್ ವಿ ದೇಶಪಾಂಡೆಯವರು, ಶ್ರೀ ಸಿದ್ಧರಾಮಯ್ಯನವರು, ಶ್ರೀ ರಮೇಶ್ ಕುಮಾರ್ ಅವರು ಈ ಕಡೆ ಇದ್ದವರಲ್ಲವಾ? ಅದರ ಬಗ್ಗೆ ಏಕೆ ಮಾತನಾಡುವುದು?

ಶ್ರೀ ಎಂ ಆರ್ ಸೀತಾರಾಮ್ ಉದಾಸಿಯವರೇ, ಈ ಕಡೆ ಆ ಕಡೆ ಅಧಿಕಾರ ಇದೆಯಲ್ಲಾ? ಆ ಕಡೆ ಇದ್ದವರು ಈ ಕಡೆಗೆ ಬನ್ನಿ, ಈ ಕಡೆ ಇದ್ದವರು ಆ ಕಡೆ ಹೋಗಲಿ

ಶ್ರೀ ಬಿ ಎ ಉಮಾಪತಿ 23 ವರ್ಷ ಕಾಂಗ್ರೆಸ್ ಅನುಭವದಿಂದ ಬಂದಿರುವವರು ಎಂದು ಹೇಳುತ್ತೇನೆ ಅಷ್ಟೇ

ಉಪಾಧ್ಯಕ್ಷರು ಅವೆಲ್ಲಾ ವೈಯಕ್ತಿಕ ವಿಚಾ೦ಗಳು ಯಾರ್ಯಾರು ಯಾವ ಕಡೆಗೆ ಹೋಗುತ್ತಾರೋ, ಬರಲಿ ಮಾನ್ಯ ಆಂಜನೇಯ ಅವರೇ ಹೇಳಿ

ಶ್ರೀ ಹೆಚ್ ಆಂಜನೇಯ ಮಾನ್ಯ ಉಪಾಧ್ಯಕ್ಷರೇ ಈಗ ಇತ್ತೀಚೆಗೆ ರಾಜ್ಯದಲ್ಲಿ ಪೌರ ಕಾರ್ಮಿಕರು, ಪೌರ ಸೇವಾ ನೌಕರರು ತಮ್ಮ ಹೋರಾಟವನ್ನು ಮಾಡುತ್ತಿದ್ದಾರೆ ಮುಷ್ಕರವನ್ನು ಮಾಡುತ್ತಿದ್ದಾರೆ ಇಲ್ಲಿ ಸರ್ಕಾರ ಬಹಳ ಗಂಭೀರವಾಗಿ ವಿಚಾರ ಮಾಡಬೇಕು ಮಾನ್ಯ ಯಡಿಯೂರಪ್ಪನವರು ಇವತ್ತು ಪರಿಶಿಷ್ಟ ಜಾತಿಯವರಿಗೆ, ಪರಿಶಿಷ್ಟ ವರ್ಗದವರಿಗೆ ಬೇಕಾದಷ್ಟು ಉಪಕಾರವನ್ನು ಮಾಡಿದ್ದೀರಿ ಈ ಒಂದು ಪೌರ ಕಾರ್ಮಿಕ ವೃತ್ತಿಯನ್ನು ಈ ಸ್ವಚ್ಛತೆಯನ್ನು ಮಾಡತಕ್ಕಂಥವರು, ನಿಮ್ಮೆಲ್ಲರ ಮಲ ಮೂತ್ರವನ್ನು ಹೊತ್ತು ಸಾಗಿಸತಕ್ಕವರು ಅವರ ಆರೋಗ್ಯವನ್ನು ಬಲಿ ಕೊಟ್ಟು ಬೇರೆಯವರ ಆರೋಗ್ಯವನ್ನು ಕಾಪಾಡತಕ್ಕಂಥ ಪೌರ ಕಾರ್ಮಿಕನ ಸ್ಥಿತಿ ಇವತ್ತು ಚಿಂತಾಜನಕ ಆಗಿದೆ ಇಲ್ಲಿ ಏನಾಗಿದೆ ಎಂದು ಹೇಳಿದರೆ ಮಾಜಿ ಮೇಯರ್ ಮತ್ತು ಈಗಿನ ಸದಸ್ಯರಾದ ಮಾನ್ಯ ರಮೇಶ್ ಅವರು ಮಾತನಾಡುತ್ತಾ ಹೇಳಿದರು 97 ಕೋಟಿ ರೂಪಾಯಿಯನ್ನು ಸ್ವಚ್ಛತೆಗಾಗಿ ಗುತ್ತಿಗೆ ಕೊಡುತ್ತಿದ್ದಾರೆ ಅದು ಹತ್ತಾರು ಜನರ ಉದ್ಧಾರಕ್ಕೋಸ್ಕರ ಇರತಕ್ಕಂಥದ್ದು ಆ ಹತ್ತಾರು ಜನ ಗುತ್ತಿಗೆ ಪಡೆದವರು ಏನಿದ್ದಾರಲ್ಲ, ಲಕ್ಷಾಂತರ ಜನ ಈ ಬಡಪಾಯಿ ಜನರನ್ನು ಇವತ್ತು ಜೀತಕ್ಕೆ ಇಟ್ಟುಕೊಂಡಿದ್ದಾರೆ ಈ ಸ್ವಚ್ಛತೆ ಕಾರ್ಯಕ್ರಮ ಏನು ಮಾಡುತ್ತಿದ್ದಾರಲ್ಲ,

ಅವರಿಗೆ ಯಾವುದೇ ರೀತಿಯ ಬದ್ಧತೆ ಇಲ್ಲ ಅದರಿಂದ ಈ IPD Salappa ನವರ ವರದಿಯನ್ನು ಈ ಸರ್ಕಾರ ಒಪ್ಪಿಕೊಂಡಿದೆ ಈ ಜನಸಂಖ್ಯೆಗೆ ಅನುಗುಣವಾಗಿ ಪೌರ ಕಾರ್ಮಿಕರನ್ನು ಖಾಯಂ ಆಗಿ ನೇಮಕ ಮಾಡತಕ್ಕ ಪ್ರಕ್ರಿಯೆ ಮಾಡಿದರೆ ಇಡೀ ಅವರ ಕುಟುಂಬ ಉದ್ಧಾರ ಅಂತಹ ಒಂದು ಕಾರ್ಯಕ್ರಮವನ್ನು ನಮ್ಮ ಸರ್ಕಾರ ಮತ್ತು ಮಾನ್ಯ ಉಪ ಮುಖ್ಯಮಂತ್ರಿಗಳು ಮಾಡಬೇಕೆಂದು ನಾನು ಈ ಸಂದರ್ಬದಲ್ಲಿ ಮನವಿ ಮಾಡುತ್ತೇನೆ ಏಕೆಂದರೆ ಇವತ್ತು ಅವರ ಸ್ಥಿತಿ ನೋಡಿದರೆ ಬಹಳ ಬೇಸರ ಆಗುತ್ತದೆ

ಶ್ರೀ ವಿ ಸೋಮಣ್ಣ ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಆಂಜನೇಯ ಅವರು ತುಂಬಾ ಗಂಭೀರವಾದಂತಹ ವಿಚಾರವನ್ನು ಚರ್ಚೆ ಮಾಡಿದರು ಈ ಪೌರ ಕಾರ್ಮಿಕರಿಗೆ ಏನಿವತ್ತು ಯಾವುದೇ ವಿಧವಾದ ಒಂದು ಬದ್ಧತೆ ಜೀವನದಲ್ಲಿ ಇಲ್ಲ ಎನ್ನುವುದನ್ನು ಏನು ಹೇಳಿದ್ದಾರೆ? ಇವತ್ತು ಇಡೀ ನಗರದ ನೈರ್ಮಲ್ಯವನ್ನು ಕಾಪಾಡತಕ್ಕ ಜನ ಅವರು ಆದರೆ ಆ ಜನರಿಗೆ ಎಲ್ಲೋ ಒಂದು ಕಡೆ, ವಿಶೇಷವಾಗಿ ಮುನಿಸಿಪಾಲಿಟಿಗಳಲ್ಲಿ, ಬೇರೆ ಬೇರೆ ನಗರಪಾಲಿಕೆಗಳಲ್ಲಿ ಸರಿಯಾಗಿ ಅವರಿಗೆ ಇವತ್ತು ಸಂಬಳ ಇಲ್ಲದೇ ಇದ್ದಾರೆ ಅವರ ಬದ್ಧತೆ ಕೂಡ ಇಲ್ಲ ಅವರ ಮನಸ್ಸಿಗೆ ಒಂದು ತರಹ, ಅವರಿಗೆ ಒಂದು ಸರಿಯಾದ ನೆಲಗಟ್ಟು ಇಲ್ಲ ಅವರ ನೌಕರಿಗೆ ಯಾವುದೇ ವಿಧವಾದ ಒಂದು ಭದ್ರವಾದ ನೆಲೆಗಟ್ಟು ಇಲ್ಲ ಈ ನೆಲೆಗಟ್ಟನ್ನು ಯೋಜನೆ ಮಾಡುವಾಗ ಹಿಂದಿನ ಈ ಮನೆಯ ಸದಸ್ಯರಾಗಿದ್ದಂತಹ ದಿವಂಗತ ಶ್ರೀಯುತ ಸಾಲಪ್ಪನವರು ಒಂದು ಒಳ್ಳೆಯ ವಿಶೇಷವಾದ ವರದಿಯನ್ನು ಕೊಟ್ಟಿದ್ದಾರೆ ಆ ವರದಿಯನ್ನು ದಯಮಾಡಿ ಮಾನ್ಯ ಉಪ ಮುಖ್ಯಮಂತ್ರಿಗಳು ತರಿಸಿಕೊಂಡು, ಅದನ್ನು ಅನುಷ್ಠಾನಗೊಳಿಸುವುದಾದರೆ, ಯಾವ ವರ್ಗದ ಜನ ಈ ನಗರದ ನೈರ್ಮಲ್ಯವನ್ನು ಕಾಪಾಡತಕ್ಕಂಥದ್ದಕ್ಕೆ ಈ ನಗರದಲ್ಲಿರತಕ್ಕಂಥ ಎಲ್ಲಾ ಕೊಳಕನ್ನು ಕೂಡ ತೊಳೆಯತಕ್ಕಂಥದ್ದಕ್ಕೆ ಅವರ ಹೃದಯ ಶ್ರೀಮಂತಿಕೆಯ ಕೆಲಸ ಏನಿದೆ? ಇದನ್ನು ನಿಜವಾಗಿಯೂ ಕೂಡ ಮೆಚ್ಚತಕ್ಕಂಥದ್ದು ದಯಮಾಡಿ ತಾವು ಸುಮಾರು ವರ್ಷಗಳಿಂದ ಅದು ಹಾಗೆಯೇ ಬಿದ್ದಿದೆ ಅದನ್ನು ತರಿಸಿ, ಅದನ್ನು ಕಾರ್ಯರೂಪಕ್ಕೆ ತರುವಂತಹ ಒಂದು ಕೆಲಸವನ್ನು ಮಾಡಬೇಕೆಂದು ತಮ್ಮ ಮೂಲಕ ವಿನಂತಿ ಮಾಡುತ್ತೇನೆ

ಉಪಾಧ್ಯಕ್ಷರು ಮಾನ್ಯ ಆಂಜನೇಯ ಅವರೇ, ಬೇಗ ಮುಗಿಸಿ, ಇನ್ನೂ ಬಹಳ ಜನ ಇದ್ದಾರೆ

ಶ್ರೀ ಹೆಚ್ ಆಂಜನೇಯ ಈ ಒಂದು ಪೌರ ಕಾರ್ಮಿಕರ ಸ್ಥಿತಿ ಬಗ್ಗೆ ತಾವು ವಿಶೇಷವಾದ ಏನಾದರೊಂದು ಆಯೋಗವನ್ನು ರಚನೆ ಮಾಡಿ, ಇದೇನು ಲೂಟಿ ಆಗುತ್ತಿದೆ ಇದೇನು ಜೀತಗಾರಿಕೆ ಸ್ವಚ್ಛತೆ ಕಾರ್ಯಕ್ರಮದಲ್ಲಿ ನಡೆಯುತ್ತಿದೆ? ಯಾವ ಅಧಿಕಾರಿಗಳು ಮತ್ತು ಗುತ್ತಿಗೆದಾರರು ಶಾಮೀಲಾಗಿ ಬಿಟ್ಟು ಇವತ್ತು ಬೆಂಗಳೂರಿನಂತಹ ಮಹಾನಗರ ಪಾಲಿಕೆಯಲ್ಲಿ 97 ಕೋಟಿ ರೂಪಾಯಿ ಸ್ವಚ್ಛತೆಗೆ ಕೊಡಬೇಕಾದರೆ, ನೋಡಿ ಸ್ವಾಮಿ ಇದೇ ಹಣವನ್ನು ಅದೇ ಪೌರ ಕಾರ್ಮಿಕರಿಗೆ ಸಮಾನವಾಗಿ ಹಂಚಿ ಕನಿಷ್ಠ ಒಂದು ಕೂಲಿ ಎಂತಾದರೂ ಕೊಟ್ಟರೆ ಅವನು ನೆಮ್ಮದಿಯಿಂದ ದುಡಿದು ಉದ್ಧಾರವಾಗಬಲ್ಲ ಅವನಿಗೆ ಕೊಡತಕ್ಕದ್ದು ಬರೀ 500 ರೂಪಾಯಿ 500 ರೂಪಾಯಿಯಿಂದ ಒಂದು ಸಾವಿರ ರೂಪಾಯಿಗೆ ಕೊಡುತ್ತಾರೆ ಯಾವುದೇ ರೀತಿಯ ಬದ್ಧತೆ ಇಲ್ಲ ಇದೂ ಒಂದು ರೀತಿಯ ಜೀತಗಾರಿಕೆ, ಅದರಿಂದ ಸ್ವಚ್ಛತೆಯಲ್ಲಿ ಗುತ್ತಿಗೆ ಕೊಡತಕ್ಕಂಥ ಈ ಪದ್ಧತಿ ಏನು ಇದೆಯಲ್ಲಾ? ಆ ಪದ್ಧತಿಗೆ ಇತಿಶ್ರೀ ಹಾಡತಕ್ಕಂಥ ಕಾರ್ಯಕ್ರಮವನ್ನು ಕೂಡ ನಾವು ತೆಗೆದುಕೊಳ್ಳಬೇಕೆಂದು ವಿನಂತಿ ಮಾಡುತ್ತೇನೆ ಇವತ್ತು ಅಂಬೇಡ್ಕರ್ ಅಭಿವೃದ್ಧಿ ನಿಗಮ ಇದೆ SC ST Corporation ಇದೆ ತಾವು ಇವತ್ತು ರೈತರಿಗೆ ಬಡ್ಡಿ ಎಲ್ಲಾ ಮನ್ನಾ ಮಾಡಿದ್ದೀರಿ ಸಾಲ ಮನ್ನಾ ಮಾಡಿದ್ದೀರಿ ರೈತರು ಪಡೆಯುವ ಒಂದು ಸಾಲಕ್ಕೆ 4% ಬಡ್ಡಿ ನಿಗದಿ ಆಗಿದೆ India ದೇಶದಲ್ಲಿಯೇ ಯಾವ ಒಬ್ಬ ಮುಖ್ಯಮಂತ್ರಿಯೂ ಕೊಡದಂತಹ, ಯಾವುದೇ ರಾಜ್ಯದಲ್ಲಿ ಯಾವುದೇ ಸರ್ಕಾರನೂ ಕೊಡದೇ ಇರತಕ್ಕಂಥ ಕಾರ್ಯಕ್ರಮ ಇವತ್ತು ಕರ್ನಾಟಕ ರಾಜ್ಯದಲ್ಲಿ ಇದೆ ತಮ್ಮ ನೇತೃತ್ವದಲ್ಲಿ ಇವತ್ತು ರೈತರಿಗೆ 4% ನಲ್ಲಿ ಇವತ್ತು ಸಾಲ ಕೊಡತಕ್ಕಂಥ ಒಂದು ಯೋಜನೆ ಇದೆ ಸಾಲ ಕೊಡಲಿಕ್ಕೆ 4% ಇಂಟರೆಸ್ಟ್ ಅವರ ಬಡ್ಡಿಯನ್ನು ಮನ್ನಾ ಮಾಡಿದ್ದೀರಿ 25 ಸಾವಿರ ರೂಪಾಯಿಗಳ ಸಾಲವನ್ನು ಮನ್ನಾ ಮಾಡಿದ್ದೀರಿ ಇವತ್ತು ರೈತರಿಗೆ ಬಿತ್ತನೆ ಬೀಜ ಇರುವಂತಹ ಸಂದರ್ಭ ಇದೆ 75% ಇವತ್ತು ನೀವು ಸಬ್ಸಿಡಿ ನೀಡುವ ಮೂಲಕ ರೈತರಿಗೆ ಉತ್ತೇಜನ ನೀಡಿದ್ದೀರಿ, ರೈತರಿಗೆ ಬಲವನ್ನು ತುಂಬಿದ್ದೀರಿ ಇಂತಹ ಸಂದರ್ಭದಲ್ಲಿ ಕೂಲಿ-ನಾಲಿ ಮಾಡತಕ್ಕಂಥ ಈ ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗದ ಜನರು ಏನು ಅಂಬೇಡ್ಕರ್ ಅಭಿವೃದ್ಧಿ ನಿಗಮದಿಂದ

ಪಡೆದಿರತಕ್ಕಂಥ ಸಾಲಕ್ಕೆ ನೀವು ಏನಾದರೂ ಮಾಡಿ One time Settlement ಎಂತಾದರೂ ಕೊಡಿ ಇಲ್ಲ ಅವರು ಎಷ್ಟು ಸಾಲ ತೀರಿಸಿದ್ದಾರೆ? ಅದನ್ನು ನೋಡಿ settlement ಮಾಡಿ ಅದೇನು ಬಹಳ ಆಗಲ್ಲ ಕೋಟ್ಯಾಂತರ ರೂಪಾಯಿ, 200, 300 ಕೋಟಿ ರೂಪಾಯಿ ರೈತರ ಸಾಲದ ಬಡ್ಡಿಯನ್ನು ಇವತ್ತು ನೀವು ಮನ್ನಾ ಮಾಡಿದ್ದೀರಿ ಕೇವಲ 50 ಕೋಟಿ ರೂಪಾಯಿ ಆಗಬಹುದು ಈ SC ST Corporation ನ ಸಾಲ ಅದರಿಂದ ದಯಮಾಡಿ ಆ ಸಾಲವನ್ನೂ ಕೂಡ ಮನ್ನಾ ಮಾಡುವಂತಹ ಒಂದು ಕ್ರಾಂತಿಕಾರಕವಾದ ಹೆಜ್ಜೆಯನ್ನು ತಾವು ಇಡಬೇಕೆಂದು ಹೇಳಿ ನಾನು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತಿದ್ದೇನೆ ಇನ್ನೊಂದು ವಿಚಾರ ಇವತ್ತು ರಸ್ತೆಗಳು ಒತ್ತುವರಿ ಆಗುತ್ತಿವೆ ಎಲ್ಲಿ ಹೋದರೂ ಕೂಡ ತಿಳಿದೋ, ತಿಳುವಳಿಕೆ ಇಲ್ಲದೆಯೋ ಗೊತ್ತಿಲ್ಲ ಇವತ್ತು ರಸ್ತೆಯ ಮೇಲೆ ಕಣಗಳನ್ನು ಮಾಡಿಕೊಂಡಿದ್ದಾರೆ ಸಾರ್ ಯಾರೂ ಕಣ ಮಾಡುವುದಕ್ಕೆ ರೆಡಿ ಇಲ್ಲ ಎಲ್ಲಾ ರಸ್ತೆಗಳು ಕೂಡ ಕಣಗಳಾಗಿ ಬಿಟ್ಟಿವೆ ಏನಾಗಿದೆ ಅಂದರೆ two wheeler ಗಾಡಿ, Hero Honda ದಲ್ಲಿ ಹೋಗತಕ್ಕ ನಮ್ಮ ಹೀರೋಗಳೆಲ್ಲರೂ ಒಂದಲ್ಲಾ ಒಂದು ಕಣದಲ್ಲಿ ದಿನ ನಿತ್ಯನೂ ಒಬ್ಬೊಬ್ಬನು ಸಾಯುತ್ತಿರುತ್ತಾನೆ ಅಲ್ಲಿ ಏನಾಗಿದೆ ಗೊತ್ತಿಲ್ಲ ಕೈ ಮುರಿಯುತ್ತದೆ, ಕಾಲು ಮುರಿಯುತ್ತದೆ, ಜೀವಗಳು ಕೂಡ ಹೋಗಿರತಕ್ಕಂಥ ಉದಾಹರಣೆ ಇದೆ ಇದಕ್ಕೇನಾದರೂ ಮಾನ್ಯ ಕಂದಾಯ ಮಂತ್ರಿಗಳು ಮತ್ತು ಲೋಕೋಪಯೋಗಿ ಮಂತ್ರಿಗಳು ಗಮನ ಹರಿಸಬೇಕು ಹಳ್ಳಿಗಾಡಿನಲ್ಲಿ ನಮ್ಮ ರೈತರೆಲ್ಲರೂ ರಸ್ತೆಗಳನ್ನು ಒತ್ತುವರಿ ಮಾಡುತ್ತಿದ್ದಾರೆ ರಸ್ತೆಗಳು ಕಣಜಗಳನ್ನಾಗಿ ಮಾಡಿಕೊಂಡಿದ್ದಾರೆ ಹೋಬಳಿ ಹೆಡ್ ಕ್ವಾರ್ಟರ್‌ಗಳಲ್ಲಿ ಕಣಗಳನ್ನು ಮಾಡುವುದಕ್ಕಾಗಿ 30,000 ರೂ ಗಳ ಫಂಡ್ ಕೊಡುತ್ತಿದ್ದಾರೆ ಇದಕ್ಕೆ ಹೆಚ್ಚು ಹಣವನ್ನು ನೀಡಿ ಎಲ್ಲಾ ಕಡೆಗಳಲ್ಲಿ ಒಂದೊಂದು ಕಣಗಳನ್ನು ಸರ್ಕಾರ ನಿರ್ಮಾಣ ಮಾಡಲಿ ಅದಕ್ಕೆ ವಿಶೇಷವಾದ ಒಂದು ಯೋಜನೆಯನ್ನು ಹಾಕಿಕೊಳ್ಳಬೇಕು ರೈತರು ಇವತ್ತು ರಸ್ತೆಗಳ ಮೇಲೆ ಮಲಗುವುದು ಬೇಡ ಎಷ್ಟೋ ಜನ ರೈತರು ಕಂಬಳಿ ಒದ್ದುಕೊಂಡು ಮಲಗಿರುವಂತಹ ಸಂದರ್ಭದಲ್ಲಿ ಅವರ ಮೇಲೆ ವಾಹನಗಳನ್ನು ಓಡಿಸಿಕೊಂಡು ಹೋಗಿರುವಂತಹ ನಿದರ್ಶನಗಳಿವೆ ಕಣ ಎಂದು ತಿಳಿದು ಅವರ ಮೇಲೆ ಲಾರಿಗಳು ಹರಿದು ಹೋಗಿವೆ

ಶ್ರೀ ಜೆ ಸಿ ಮಾಧುಸ್ವಾಮಿ ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಬಂಡೆಪ್ಪನವರೇ, ಕಣ ಮಾಡಲಿಕ್ಕೆ 30,000, 50,000 ರೂಪಾಯಿಗಳು ಎಂದು ಕೊಡುತ್ತಾರೆಂದು ಮಾನ್ಯ ಆಂಜನೇಯರವರು ಮಾತನಾಡುತ್ತಿದ್ದಾರೆ ನೀವು ಆರು ಇಂಚು, 8 ಇಂಚು ಕಾಂಕ್ರೀಟ್ ಹಾಕಿ ಕಣ ಮಾಡಿ ಎಂದರೆ ಮಾಡುವುದಕ್ಕಾಗುವುದಿಲ್ಲ ಬಜೆಟ್ ಜಾಸ್ತಿ ಮಾಡಿಸಿ ಹಳ್ಳಿಗಳಲ್ಲಿ ಕಣ ಮಾಡಿಸಿ

ಶ್ರೀ ವಾಟಾಳ್ ನಾಗರಾಜ್ ಬಹಳ ಹಿಂದೆ ಪ್ರತಿ ಹಳ್ಳಿಗಳಲ್ಲೂ ಕಣ ಎಂದು ಇತ್ತು ಕಣ ಗೋಮಾಳ ಇವೆಲ್ಲಾ ಸರ್ಕಾರದವರು ಮಾಡಬೇಕು ಮೊದಲು ಕಲ್ಲು ಗುಂಡು ಇತ್ತು ಆ ಕಲ್ಲು ಗುಂಡು ಈಗಲೂ ಹಳ್ಳಿಗಳಲ್ಲಿ ಇತಿಹಾಸ ಪ್ರಸಿದ್ಧವಾಗಿ ಉಳಿದಿದೆ ಕಣ ಮಾಡದೇ ಇರುವುದರಿಂದ ಎಲ್ಲಾ ರಸ್ತೆಗಳು ಕಣಗಳಾಗಿವೆ

ಶ್ರೀ ಬಂಡೆಪ್ಪ ಕಾಶಂಪೂರ್ ಮಾನ್ಯ ಅಧ್ಯಕ್ಷರೆ, ನಾವು ಕಣಗಳನ್ನು ಮಾಡುತ್ತಿದ್ದೇವೆ ವರದಿ ತರಿಸಿಕೊಂಡು ಇನ್ನು ಹೆಚ್ಚಿನ ಹಣ ಒದಗಿಸುವುದಕ್ಕೆ ವ್ಯವಸ್ಥೆ ಮಾಡುತ್ತೇನೆ

ಶ್ರೀ ಜಿ ವಿ ಶ್ರೀರಾಮರೆಡ್ಡಿ ನೀವು ಏನು dimension fix ಮಾಡಿದ್ದೀರಿ, ಆ dimensionಗೂ ನೀವು ಕೊಟ್ಟಿರತಕ್ಕಂತಹ ಹಣಕ್ಕೂ ಸಾಕಾಗುವುದಿಲ್ಲ ಅದು ಅದು ಅರ್ಧಂಬರ್ಧ ಮಾಡಿ ನಿಲ್ಲಿಸಿ ಬಿಡುತ್ತಾರೆ ದುಡ್ಡೂ ಹೋಗುತ್ತದೆ, ಕೆಲಸವೂ ಆಗುವುದಿಲ್ಲ ಹಾಗಾಗುತ್ತದೆ

ಶ್ರೀ ಬಂಡೆಪ್ಪ ಕಾಶಂಪೂರ್ ವರದಿ ತರಿಸಿಕೊಂಡು ಯಾವುದೇ ಕಾರಣಕ್ಕೂ ಒಳ್ಳೆಯದನ್ನು ಮಾಡುವಂತಹ ಕೆಲಸವನ್ನು ಮಾಡುತ್ತೇನೆ

ಶ್ರೀ ಎ ವಿ ಉಮಾಪತಿ ಮಾನ್ಯ ಅಧ್ಯಕ್ಷರೆ, ಕಣ ಎಂದರೆ, ಕೊನೇ ಪಕ್ಷ ಒಂದೊಂದು ಹಳ್ಳಿಯಲ್ಲಿ ಎರಡು ಎಕರೆ, ಮೂರು ಎಕರೆ ಕಣ ಮಾಡಿದರೆ, ಇಡೀ ಹಳ್ಳಿಯ ರೈತ ಸಮುದಾಯದವರು ಅವರು ಬೆಳೆದಂತಹ ಬೆಳೆಗಳನ್ನು ಒಕ್ಕಲಿಕ್ಕೆ ಅವಕಾಶವಾಗುತ್ತದೆ ನೀವು 10 ಕುಂಟೆ 5 ಕುಂಟೆ ಒಳಗೆ ಮಾಡಿದರೆ ಸಾಕಾಗುವುದಿಲ್ಲ ಅದನ್ನು ತಾವು ಗಮನಿಸಬೇಕು

ಶ್ರೀ ಹೆಚ್ ಆಂಜನೇಯ ಮಾನ್ಯ ಉಪಾಧ್ಯಕ್ಷರೆ, ರೈತರ ಪರವಾಗಿ ಹೋರಾಟ ಮಾಡಿಕೊಂಡು ಬಂದಿರತಕ್ಕಂತಹ ಶ್ರೀಮಾನ್ ಯಡಿಯೂರಪ್ಪ ನವರಿಗೆ ರೈತರ ಬಗ್ಗೆ ಚೆನ್ನಾಗಿ ಗೊತ್ತಿದೆ ನೀವೂ ಕೂಡ ಹಳ್ಳಿಗಳಲ್ಲಿ ಎಲ್ಲಾ ಕಡೆಗಳಲ್ಲಿ ಓಡಾಡುತ್ತಿರುತ್ತೀರಿ ನಮ್ಮ ಸಣ್ಣ ಪುಟ್ಟ ರೈತರು ರಸ್ತೆಗಳ ಮೇಲೆ

ಕಣಗಳನ್ನು ಮಾಡಿಕೊಂಡು ಜಾಗವೇ ಇರುವುದಿಲ್ಲ ದೊಡ್ಡ ದೊಡ್ಡ ರೈತರು ಅವರವರ ಹೊಲಗಳಲ್ಲಿ ಕಣಗಳನ್ನು ಮಾಡಿಕೊಂಡಿರುತ್ತಾರೆ ಸಣ್ಣ ಪುಟ್ಟ ರೈತರೆಲ್ಲರೂ ಕೂಡ ರಸ್ತೆಗಳ ಮೇಲೆ ಹಾಕಿಕೊಂಡು, ಊರುಗಳಲ್ಲಿ ರಸ್ತೆಗಳಲ್ಲಿ ಏನಾಗುತ್ತದೆ ಎಂದು ನೀವು ನೋಡಿದೀರೋ ಇಲ್ಲವೋ ಗೊತ್ತಿಲ್ಲ ಬೆಳಗಿನ ಸಮಯದಲ್ಲಿ ಒಂದು ಕಡೆ ಹೆಣ್ಣು ಮಕ್ಕಳು, ಒಂದು ಕಡೆ ಪುರುಷರು ರಸ್ತೆಗಳ ಮೇಲೆಲ್ಲಾ ಗಲೀಜು ಮಾಡಿರುತ್ತಾರೆ ಅದರ ಮೇಲೆ ಹಾದು ಬರುವಂತಹ ವಾಹನಗಳು ಆ ಗಲೀಜನ್ನು ಹಚ್ಚಿಕೊಂಡು ರಾಗಿ ಹುಲ್ಲಿನ ಮೇಲಿನಿಂದ ಹಾದು ಹೋಗುತ್ತಾರೆ ಅದನ್ನು ಈ ಜನ ತಿನ್ನಬೇಕಾಗಿದೆ ಇಂತಹ ಒಂದು ದುಸ್ಥಿತಿ ಇವತ್ತು ನಾವು ನೋಡುತ್ತಿದ್ದೇವೆ ಆದ್ದರಿಂದ ಈ ರೈತರ ಕಣಕ್ಕಾಗಿ ವಿಶೇಷವಾದ ನಿಧಿಯನ್ನು ಇಟ್ಟು, ತಾವು ಮಾಡಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತಾ, ಸರ್ಕಾರ ತಂದಿರತಕ್ಕಂತಹ ವಿವಿಧ ಬೇಡಿಕೆಗಳಿರಬಹುದು, ಜನಪರವಾದ ಮಧ್ಯಮಾವದಿಯ ಬಜೆಟ್ ಏನಿದೆ, ಇದು ರಾಜ್ಯದ ಅಭಿವೃದ್ಧಿಯ ದೃಷ್ಟಿಯಿಂದ ಮತ್ತು ಬಡವರ ಅಭಿವೃದ್ಧಿ ದೃಷ್ಟಿಯಿಂದ ರೈತರ ಅಭಿವೃದ್ಧಿ ದೃಷ್ಟಿಯಿಂದ, ನಾಡಿನ ಶೋಷಿತರು ಮತ್ತು ದಲಿತರ ದೃಷ್ಟಿಯಿಂದ ನಾನು ಹೃತ್ಪೂರ್ವಕವಾಗಿ ಸ್ವಾಗತ ಮಾಡುತ್ತಾ, ಇನ್ನು ಹೆಚ್ಚು ಹೆಚ್ಚು ಬಡವರ ಪರವಾಗಿ ಮತ್ತು ದಲಿತರ ಪರವಾಗಿ ಮತ್ತು ಶೋಷಿತರ ಪರವಾಗಿ ಒಳ್ಳೊಳ್ಳೆಯ ಕಾರ್ಯಕ್ರಮಗಳನ್ನು ಈ ಸರ್ಕಾರ ಹಾಕಿಕೊಳ್ಳಲಿ ಎಂದು ನಾನು ವಿನಂತಿ ಮಾಡಿಕೊಂಡು ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಂತಹ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ

ಶ್ರೀ ಎನ್ ಎಸ್ ಭೋಸರಾಜು (ಮಾನ್ವಿ) ಮಾನ್ಯ ಅಧ್ಯಕ್ಷರೆ, ನಾವೆಲ್ಲರೂ ರೈತರ ವಿಷಯದ ಬಗ್ಗೆ ಬಹಳ ಮಾತನಾಡುತ್ತೇವೆ ಈ ಸರ್ಕಾರ ರೈತರಿಗೆ ಅತಿ ಮುಖ್ಯವಾಗಿ ಬೇಕಾಗಿರತಕ್ಕಂತಹ ನೀರಾವರಿಗೆ ಸಾಕಷ್ಟು ಹಣ ಕೊಡದೇ, ಇವತ್ತು ಅನೇಕ ಕಡೆಗಳಲ್ಲಿರುವ Projectಗಳಿಗೆ ಹೆಚ್ಚಿನ ಕೆಲಸಕ್ಕೆ ಅವಕಾಶ ಕೊಡದೇ ಇರುವಂತಹ ರೀತಿಯಲ್ಲಿ, ಸಾಕಷ್ಟು Projectಗಳ ಕೆಲಸ ನಡೆಯಲಾರದೇ ಇರುವುದು ನಾವು ಈಗಾಗಲೇ ನಮ್ಮ ಕ್ಷೇತ್ರಗಳಲ್ಲಿ ನೋಡುತ್ತಿದ್ದೇವೆ ಇವತ್ತು ರಾಜ್ಯದಲ್ಲಿರುವಂತಹ ಹೊಸ ಪ್ರಾಜೆಕ್ಟ್‌ಗಳ ಜೊತೆಯಲ್ಲಿ ಹಳೆಯ ಪ್ರಾಜೆಕ್ಟ್ ಗಳನ್ನು ಸಹಿತ ನಾವು ಸರಿಯಾದ ರೀತಿಯಲ್ಲಿ ನೋಡಿಕೊಂಡು ಹೋಗದೇ ಇದ್ದರೆ, ಇರತಕ್ಕಂತಹ ಪ್ರದೇಶ

ಸಾಕಷ್ಟು ತೊಂದರಗೊಳಗಾಗಿರತಕ್ಕಂತಹ ವಿಷಯವನ್ನು ಅನೇಕ ಬಾರಿ ನಾವು ಈ ಸರ್ಕಾರದ ಗಮನಕ್ಕೆ ತಂದಿದ್ದೇವೆ ಉದಾಹರಣೆಗೆ ಹೇಳಬೇಕೆಂದರೆ, ನಮ್ಮ ತುಂಗಭದ್ರಾ ಪ್ರಾಜೆಕ್ಟ್ ರಾಯಚೂರು, ಕೊಪ್ಪಳ ಮತ್ತು ಬಳ್ಳಾರಿ ಜಿಲ್ಲೆಗಳಿಗೆ ಸೇರಿರತಕ್ಕಂತಹ ಇದು, 54 ವರ್ಷಗಳ ಹಳೆಯ ಪ್ರಾಜೆಕ್ಟ್ ಆಗಿ, ಕರ್ನಾಟಕದ ಷೇರಿಗೆ ಸಂಬಂಧಪಟ್ಟ ಹಾಗೇ ಸುಮಾರು 10 ಲಕ್ಷ ಎಕರೆ ನೀರಾವರಿಯನ್ನು ನಾವು ಕೃಷಿಗೆ ಒಳಪಟ್ಟಿರತಕ್ಕಂಥಾದ್ದು 54 ವರ್ಷಗಳ ನೀರಾವರಿ ಪ್ರದೇಶಕ್ಕೆ ಅಲ್ಲಿರುವಂತಹ ರೈತರು ಸಾಕಷ್ಟು ವೆಚ್ಚ ಮಾಡಿ, ಅಭಿವೃದ್ಧಿಗೊಳಿಸಿರತಕ್ಕಂತಹ ಭೂಮಿಗೆ ಇವತ್ತು ಅನೇಕ ಕಾಲುವೆ, ಉಪ ಕಾಲುವೆಗಳಲ್ಲಿ ಟ್ರೈಲ್ಯಾಂಡ್ ಪ್ರದೇಶವಾಗಿ ನೀರು ಸಿಗಲಾರದ ಪರಿಸ್ಥಿತಿಯನ್ನು ಇವತ್ತು ಎದುರಿಸುತ್ತಿದ್ದಾರೆ ಇಂತಹ ಸಂದರ್ಭದಲ್ಲಿ ತಾವು ತುಂಗಭದ್ರಾ ಎಡದಂಡೆ ಮುಖ್ಯ ಕಾಲುವೆ ನೋಡಿದಾಗ ಅದು 226 ಕಿ.ಮೀ. ಉದ್ದ, 92 TMC allocation, ಆರು ಲಕ್ಷ ಎಕರೆ ಅಂದಾಜಿಗೆ ಕೊಪ್ಪಳ ಮತ್ತು ರಾಯಚೂರು ಜಿಲ್ಲೆಗಳಲ್ಲಿ ನೀರಾವರಿ ಆಗುವಂತಹ 50 ವರ್ಷದ ಹಳೆಯ ಪ್ರಾಜೆಕ್ಟ್ ಆಗಿದೆ ಅನೇಕ ವರ್ಷಗಳಿಂದ ಸಾಕಷ್ಟು ಬ್ರಿಡ್ಜಸ್ ಮತ್ತು ಬಂಡ್‌ಗಳ ಮುಖಾಂತರ ಪ್ರತಿ ಸಾರಿ ಸಾಕಷ್ಟು ರೈತರು ನಷ್ಟಕ್ಕೆ ಒಳಗಾಗಿರತಕ್ಕಂಥಾದ್ದು ಸರ್ಕಾರದ ಗಮನಕ್ಕೆ ಬಂದಿದೆ ಹಾಗಾಗಿ ಬಂದಿರತಕ್ಕಂತಹ ಸರ್ಕಾರಗಳು, ಕೇವಲ ಟೆಂಪರರಿ ರಿಪೇರಿ ಮಾಡಲಿಕ್ಕೆ ಪ್ರತಿ ವರ್ಷ 10, 15, ಮತ್ತು 20 ಕೋಟಿ ರೂ.ಗಳನ್ನು ಕೊಡುವುದರ ಮುಖಾಂತರ Permanent ಆಗಿ ಆ ಕೆನಾಲ್ ದುರಸ್ತಿ ಮಾಡತಕ್ಕಂತಹ ಕೆಲಸವನ್ನು ಮಾಡುವುದಕ್ಕೆ ಅವಕಾಶ ಸಿಗಲಿಲ್ಲ ಹಾಗಾಗಿ ಹಿಂದಿನ ಶ್ರೀಮಾನ್ ಧರ್ಮ್‌ಸಿಂಗ್‌ಜೀಯವರ ಸರ್ಕಾರದಲ್ಲಿ ಶ್ರೀಮಾನ್ ಮಲ್ಲಿಕಾರ್ಜುನ ಖರ್ಗೆಯವರು ನೀರಾವರಿ ಸಚಿವರಾಗಿದ್ದಂತಹ ಸಂದರ್ಭದಲ್ಲಿ ಈ ಕಾಲುವೆಯನ್ನು Permanent ಆಗಿ ರಿಪೇರಿ ಮಾಡಲಿಕ್ಕೆ ಏನೇನು ಬೇಕು ಎಂದು ಅಧ್ಯಯನ ಮಾಡಿ ಒಂದು ವರದಿ ಕೊಡಬೇಕೆಂದು ಚಿನಿವಾಲ ಕಮಿಟಿ ಎಂದು ಒಂದು ಕಮಿಟಿಯನ್ನು ಹಾಕಿದ್ದಾರೆ ಆ ಕಮಿಟಿಯ ವರದಿ ಈಗಾಗಲೇ ಈ ಸಮ್ಮಿಶ್ರ ಸರ್ಕಾರದ ಮುಂದೆ ಬಂದಿದೆ ನಾಲ್ಕು ವರ್ಷಗಳ ಕಾಲದಲ್ಲಿ 810 ಕೋಟಿ ರೂ.ಗಳನ್ನು ವೆಚ್ಚ ಮಾಡುವುದರ ಮುಖಾಂತರ ಪ್ರತಿ ವರ್ಷ 210 ಕೋಟಿ ರೂ. ಆ ಕಾಲುವೆ ರಿಪೇರಿಗೆ ವೆಚ್ಚ ಮಾಡಿ, ಮುಖ್ಯ ಕಾಲುವೆ, ಹಾಗೂ ಉಪ ಮುಖ್ಯ ಕಾಲುವೆಗಳು ರಿಪೇರಿ ಮಾಡುವುದರ ಮುಖಾಂತರ ಅಲ್ಲಿರುವಂತಹ ಹಳೆಯ

ಅಚ್ಚುಕಟ್ಟನ್ನು ಅಲ್ಲಿರುವಂತಹ ರೈತರಿಗೆ ಅನುಕೂಲ ಮಾಡಿಕೊಡುವಂತಹ ಪ್ರಯತ್ನ ಮಾಡಬೇಕೆಂದು ಹೇಳಿ, ವರದಿಯನ್ನು ಕೊಟ್ಟು, ಇದು 2006-07 ರಿಂದ 210 ಕೋಟಿ ರೂ ಗಳನ್ನು ಪ್ರತಿ ವರ್ಷ ಕೊಡುವಂತಹ ಪ್ರಯತ್ನ ಮಾಡಬೇಕೆಂದು ಹೇಳಿ ಚಿನಿವಾಲ ವರದಿ ಸರ್ಕಾರಕ್ಕೆ ಕೊಟ್ಟಿದೆ ಈ ಸರ್ಕಾರಕ್ಕೆ ಆ ವರದಿ ಬಂದ ನಂತರ ಅನೇಕ ಬಾರಿ ನಮ್ಮ ಅತ್ಯಂತ ಉತ್ಸಾಹಿಗಳು ಮತ್ತು ಸಾಕಷ್ಟು ಸ್ಪಂದಿಸಿದಂತಹ ಶ್ರೀಮಾನ್ ಈಶ್ವರಪ್ಪನವರು ಸಹಿತ ನಮಗೆ ಆಶ್ವಾಸನೆ ಕೊಟ್ಟಿದ್ದರು, ಹೋದ ವರ್ಷ ಮತ್ತೆ ಅದೇ ಕೆನಾಲ್ 19 ನೇ ಮೈಲಿನ ಮಸ್ಕಿ ಹತ್ತಿರ ರೀಚ್ ಆಗಿರತಕ್ಕಂತಹ ಸಂದರ್ಭದಲ್ಲಿ ಅಲ್ಲಿ ಮಾನ್ಯ ಉಪ ಮುಖ್ಯಮಂತ್ರಿಗಳು ಬಂದಿದ್ದರು ನೀರಾವರಿ ಸಚಿವರು ಬಂದಿದ್ದರು, ಮಾನ್ಯ ವಿರೋಧ ಪಕ್ಷದ ನಾಯಕರೂ ಸಹ ಬಂದಿದ್ದರು ಆ ಸಂದರ್ಭದಲ್ಲಿ ಶ್ರೀಮಾನ್ ಯಡಿಯೂರಪ್ಪನವರು ಸಹಿತ ಸಂದರ್ಭದಲ್ಲಿ ನಾನು ಮತ್ತು ಶ್ರೀಮಾನ್ ಅಮರೇಗೌಡರು ಅನೇಕ ರೈತ ಸಂಘದ ಮುಖಂಡರ ಜೊತೆ represent ಮಾಡಿದಾಗ "ಈ ವರ್ಷ ನಿಮಗೆ 250 ಕೋಟಿ ರೂ ಗಳನ್ನು ನಿಮಗೆ ಕೊಟ್ಟೇ ಕೊಡುತ್ತೇವೆ, ಚಿನಿವಾಲ ವರದಿ ಕಾರ್ಯಕ್ರಮಗಳನ್ನು ನಾವು ಪ್ರಾರಂಭ ಮಾಡುತ್ತೇವೆ, ನಾಲ್ಕು ವರ್ಷಗಳಲ್ಲಿ ನಿಗದಿತ ಸಮಯದಲ್ಲಿ ನಾವು ಅದನ್ನು ಪೂರೈಸುತ್ತೇವೆ ನೀವು ಹೆದರುವಂತಹ ವಿಷಯವಿಲ್ಲ ನಾವು ರೈತರಿಗಾಗಿ ಸರ್ಕಾರ ನಡೆಸುತ್ತಿದ್ದೇವೆ ಆದ್ಯತೆ ಮೇಲೆ 250 ಕೋಟಿ ರೂಪಾಯಿಗಳನ್ನು ಕೊಟ್ಟು ಎಡದಂಡೆ ಮುಖ್ಯ ಕಾಲುವೆ ಶಾಶ್ವತ ರಿಪೇರಿ ಮಾಡಿಸುತ್ತೇವೆ" ಎನ್ನುವಂತಹ ಮಾತನ್ನು ನಮ್ಮ ಅರ್ಥ ಸಚಿವರು ಹೇಳಿದ್ದಾರೆ ಅದರ ಜೊತೆಯಲ್ಲಿ ಈಶ್ವರಪ್ಪನವರು ಸಹಿತ ನಾಲ್ಕಾರು ಬಾರಿ ಮೀಟಿಂಗ್‌ಗಳನ್ನು ಕರೆದರು ಎಲ್ಲಾ ಮೀಟಿಂಗ್ ಗಳಲ್ಲಿಯೂ ಸಹ ಅವರು ಆಶ್ವಾಸನೆ ನೀಡಿದರು ಆದರೆ ಈ ವರ್ಷ ಚಿನಿವಾಲ ಕಮಿಟಿಯ ವರದಿಗೆ ಅನುಗುಣವಾಗಿ ಒಂದು ರೂಪಾಯಿ ಕೂಡ implementation ಮಾಡುವುದಕ್ಕೆ ಬಜೆಟ್‌ನಲ್ಲಿ ಕೊಟ್ಟಿಲ್ಲ ಕೇವಲ 20 ಕೋಟಿ ರೂಪಾಯಿ ಸರ್ಕಾರ ಕೊಟ್ಟಿರತಕ್ಕಂತಹ ರೀತಿಯಲ್ಲಿ ಮುಖ್ಯ ಕಾಲುವೆ ರಿಪೇರಿಗೆ ಮಾತ್ರ ಕೊಟ್ಟಿದ್ದಾರೆ ಹಾಗಾಗಿ ಇವತ್ತು ಹಳೆಯ ಪ್ರಾಜೆಕ್ಟ್‌ನಲ್ಲಿ ನಮ್ಮ ಅಚ್ಚುಕಟ್ಟು ಪ್ರದೇಶದಲ್ಲಿ ರೈತರಿಗೆ ನೀರಿನ ಸರಬರಾಜಿನಲ್ಲಿ ಸಾಕಷ್ಟು ತೊಂದರೆಗಳು ಆಗುತ್ತಿದೆ ಅದೇ right bank canal LFC ಮತ್ತು HFC ಏನು ಇದೆ ಅದೇ Project ಮೂಲಕ ಆಂಧ್ರ ಪ್ರದೇಶಕ್ಕೆ ಹೋಗತಕ್ಕ 3 ಲಕ್ಷ

ಎಕರೆ ನೀರು, ಅವರು ಈಗಾಗಲೇ 250-300 ಕೋಟಿ ರೂಪಾಯಿ ವೆಚ್ಚ ಮಾಡಿ ಆ ಕಾಲುವೆಗಳಲ್ಲಿ ಸಿಮೆಂಟ್ ಲೈನಿಂಗ್ ಮಾಡಿದ್ದಾರೆ ಆದರೆ ಹತ್ತು ಲಕ್ಷ ಎಕರೆಗೆ ಬರತಕ್ಕ ಕರ್ನಾಟಕದ ಷೇರಿನ ನೀರಿನಲ್ಲಿ ಸಾಕಷ್ಟು ತೊಂದರೆಯಾಗಿದೆ ಆದ್ದರಿಂದ ನಾನು ತಮ್ಮ ಮೂಲಕ ಸರ್ಕಾರಕ್ಕೆ ಒತ್ತಾಯಿಸುತ್ತೇನೆ ಈಗಾಗಲೇ ಮಾತು ಕೊಟ್ಟಿರುವ ರೀತಿಯಲ್ಲಿ ಸಾಕಷ್ಟು ಆಶ್ವಾಸನೆ ಕೊಟ್ಟಿರುವ ರೀತಿಯಲ್ಲಿ ಚಿನಿವಾಲ್ ಸಮಿತಿಯ ವರದಿಯ ಮೂಲಕ 210 ಕೋಟಿ ರೂಪಾಯಿ ಈ ವರ್ಷ ರಿಲೀಸ್ ಮಾಡುವುದರ ಮೂಲಕ, ಇವತ್ತು ನಮ್ಮ ರೈತರು ಒಂದು ಬೇಸಿಗೆ ಬೆಳೆಯನ್ನು ಬಿಡಲು ತಯಾರಿದ್ದಾರೆ 6 ತಿಂಗಳ ಕಾಲಾವಕಾಶ ಕೊಡಲು ತಯಾರಿದ್ದಾರೆ ಆದರೆ ಈ ಪ್ರಾಜೆಕ್ಟ್‌ನ ಬಗ್ಗೆ, ಅದೇನು ನಮ್ಮ ದುರ್ದೈವವೋ ಗೊತ್ತಿಲ್ಲ, ಹಿರಿಯರಾಗಿರುವ ಮಾನ್ಯ ಪ್ರಕಾಶ್‌ರವರೂ ಬಳ್ಳಾರಿಯಿಂದ ಬಂದಿದ್ದಾರೆ ಕೊಪ್ಪಳದಿಂದ ಸಹ ಮಂತ್ರಿಗಳಿದ್ದಾರೆ, ನಮ್ಮ ಜಿಲ್ಲೆಯ ಮಂತ್ರಿಗಳೂ ಇದ್ದಾರೆ ನಾವೆಲ್ಲರೂ ಇದ್ದೇವೆ ಯಾರೂ ಇದರ ಬಗ್ಗೆ ಪ್ರಭಾವ ತೋರಿಸತಕ್ಕ ರೀತಿಯಲ್ಲಿ ಸರ್ಕಾರದ ಮೇಲೆ ಒತ್ತಡ ತಂದಿಲ್ಲವೋ ಏನೋ ಗೊತ್ತಿಲ್ಲ ಆದ್ದರಿಂದ ಇವತ್ತು ಆ ಸಮಿತಿಯ ವರದಿಯನ್ನು ವಿಳಂಬ ಮಾಡುವುದರ ಮೂಲಕ ಮತ್ತು ಸಾಕಷ್ಟು ಹಣ ಬಾರದೇ ಅದು ಇವತ್ತು 250-300 ಕೋಟಿ ಆಗತಕ್ಕ ಪರಿಸ್ಥಿತಿ ಇದೆ ಆದ್ದರಿಂದ ಈ ಚಿನಿವಾಲ್ ಸಮಿತಿಯ ವರದಿಯ ಬಗ್ಗೆ ನಾಳೆ ಉತ್ತರ ಕೊಡತಕ್ಕ ಕಾಲದಲ್ಲಿ ಮಾನ್ಯ ಉಪ ಮುಖ್ಯಮಂತ್ರಿಗಳು ಆಶ್ವಾಸನೆ ಕೊಡಬೇಕೆಂದು ಕೋರುತ್ತೇನೆ ಇದರ ಬಗ್ಗೆ ನಮ್ಮಲ್ಲಿ ಅನೇಕ ಬಾರಿ ಸಭೆಗಳು ಆಗಿದೆ Irrigation consultative committeeಯಲ್ಲಿ ಪ್ರತಿ ಸಲ ಮಾನ್ಯ ಪ್ರಕಾಶ್‌ರವರು ಅಧ್ಯಕ್ಷತೆ ವಹಿಸುವ ಅವಕಾಶ ಇದೆ ಆ ಸಭೆಯಲ್ಲಿ ಕೂಡ ನಾವು ಚರ್ಚೆ ಮಾಡಿದ್ದೇವೆ ಆದ್ದರಿಂದ ಅಲ್ಲಿರುವ balance reservoir ಕೆಲಸವನ್ನು ಮಾಡಬೇಕು ಅದರ ಜೊತೆ down streem ನಲ್ಲಿರತಕ್ಕ ಡ್ಯಾಂ ಕೆಳಗೆ ತುಂಗಭದ್ರಾ reservoir ನಲ್ಲಿ ಏನು ನೀರು ಹೊರ ರಾಜ್ಯಕ್ಕೆ ಹೋಗುತ್ತಿದೆ ಅದನ್ನು regenerate ಮಾಡುವುದಕ್ಕೆ, ಜನರಿಗೆ ಅನುಕೂಲ ಮಾಡುವುದಕ್ಕೆ ಟೈಲ್ಯಾಂಡ್ ನಲ್ಲಿರುವ ರೈತರಿಗೆ ಅನುಕೂಲವಾಗುವ ರೀತಿಯಲ್ಲಿ ಲಿಫ್ಟ್ ಇರಿಗೇಷನ್, ಅಣೆಕಟ್ಟು ಮಾಡಬೇಕು ಎಂದು ಅನೇಕ ಸಲ ಮಾನ್ಯ ಪ್ರಕಾಶ್‌ರವರ ಅಧ್ಯಕ್ಷತೆಯಲ್ಲಿ ನಡೆದಿರುವ ಸಭೆಯಲ್ಲಿ ಹೇಳಿದ್ದೇವೆ ಆದರೂ ಸರ್ಕಾರ ಈ ವರ್ಷದ ಬಜೆಟ್‌ನಲ್ಲಿ

ಚಿನಿವಾಲ್ ಸಮಿತಿಯ ವರದಿಗೆ ಸಂಬಂಧಿಸಿದಂತೆ ಒಂದು ರೂಪಾಯಿಯನ್ನೂ ಇಟ್ಟಿಲ್ಲ ಎಂಬುದನ್ನು ಅವರ ಗಮನಕ್ಕೆ ತಂದಿದ್ದೇನೆ ಇದರ ಬಗ್ಗೆ ಸರ್ಕಾರ ಹೆಚ್ಚಿನ ಜವಾಬ್ದಾರಿಯುತವಾಗಿ ನಡೆದುಕೊಳ್ಳದ ಕಾರಣ ಮುಂದೆ ಬರತಕ್ಕ ವರ್ಷದಲ್ಲಿ ಹತ್ತು ಲಕ್ಷ ಹೆಕ್ಟಾರ್ ಪ್ರದೇಶದ ಮೂರು ಜಿಲ್ಲೆಗಳ ರೈತರಿಗೆ ಸಾಕಷ್ಟು ತೊಂದರೆ ಆಗುವ ಪರಿಸ್ಥಿತಿ ಇದೆ ರಾಯಚೂರು ಜಿಲ್ಲೆಯ ಎನ್ ಆರ್ ಬಿ ಸಿ ಕೆನಾಲ್ 95 ಕಿಲೋಮೀಟರ್ ಆಗಿದೆ ಅದು 152 ಕಿಲೋಮೀಟರ್‌ವರೆಗೆ ಹೋಗಬೇಕೆಂಬ ಒತ್ತಾಯ ನಮ್ಮ ರೈತರದ್ದು ಇದ ಸರ್ಕಾರ ಸಹ ಅದರ ಬಗ್ಗ ಆಶ್ವಾಸನೆ ಕೊಟ್ಟಿದೆ ಅದಕ್ಕೂ ಒಂದು ರೂಪಾಯಿ ಸಹ ಕೊಟ್ಟಿಲ್ಲ ಈ ಬಜೆಟ್‌ನಲ್ಲಿ ಅದಕ್ಕೆ ದುಡ್ಡನ್ನು ಅಲೋಕೇನ್ ಮಾಡಬಹುದು ಎಂದು ನಾವೆಲ್ಲರೂ ನಂಬಿದ್ದೇವೆ ಕನಿಷ್ಟ 95 ರಿಂದ 108ನೇ ಕಿಲೋಮೀಟರ್‌ವರೆಗೆ ಧರ್ಮಸಿಂಗ್‌ರವರ ಸರ್ಕಾರದಲ್ಲಿ ಮಲ್ಲಿಕಾರ್ಜುನ ಖರ್ಗೆಯವರು ಆ ಪ್ರದೇಶಕ್ಕೆ ಬಂದು ಅಲ್ಲಿಯ ರೈತರ ವಿನಂತಿಯ ಮೇರೆಗೆ 13 ಕಿಲೋಮೀಟರ್ ನಷ್ಟು ತಕ್ಷಣ ನಾವು ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಹೇಳಿ estimate, plane prepare ಮಾಡಿರತಕ್ಕದ್ದು ಇವತ್ತು ಸರ್ಕಾರದ ಮುಂದಿದೆ ಅದನ್ನು ಮಾಡಿಸಿಕೊಡುತ್ತೇವೆಂದು ನಮ್ಮ ನೀರಾವರಿ ಸಚಿವರು ನಮ್ಮೆಲ್ಲರಿಗೂ ಆಶ್ವಾಸನೆ ಕೊಟ್ಟಿದ್ದರು ಅದರ ಬಗ್ಗೆ ಸಹ ಯಾವುದೇ ಕ್ರಮ ತೆಗೆದುಕೊಂಡಿಲ್ಲ ಒಂದು ರೂಪಾಯಿ ಸಹ ಬಜೆಟ್‌ನಲ್ಲಿ ಇಟ್ಟಿಲ್ಲ ಅದರ ಜೊತೆ link carnal, ಇವತ್ತು balance reservoir ಇದೆ ಅದರ ಎನ್ ಆರ್ ಬಿ ಸಿ ಯಿಂದ ಏನು Waste ಆಗಿ ಪರರಾಜ್ಯಕ್ಕೆ ಹೋಗತಕ್ಕ ನೀರು ಕೃಷ್ಣಾ ನದಿಯ ಮೂಲಕ ಹೋಗುತ್ತದ ಅದನ್ನು ಉಪಯೋಗಿಸಿಕೊಳ್ಳಲು ರೈತರಿಗೆ ಇವತ್ತು ಅನುಕೂಲ ಮಾಡಿಕೊಡುತ್ತೇವೆಂದು ಏನು ಅನೇಕ ಬಾರಿ ಮಾನ್ಯ ಯಡಿಯೂರಪ್ಪನವರು ರಾಯಚೂರಿಗೆ ಬಂದಿದ್ದರು, ಆಗ ಆ ರೈತರ ಸಮಸ್ಯೆಯನ್ನು ನೋಡಿ ಸಾಕಷ್ಟು ಆಶ್ವಾಸನೆಯನ್ನು ಕೊಟ್ಟಿದ್ದರು ಅವರು ಅಂದು ಮಾತನಾಡಿದ್ದು ಇವತ್ತು ನಮ್ಮ ಜನರ ಮನಸ್ಸಿನಲ್ಲಿದೆ ತಾವು ರಾಯಚೂರು ಜಿಲ್ಲೆಯ ಬಗ್ಗೆ ಹೇಳಿ ಮರೆತಿರುವ ಮಾತನ್ನು ನಾನು ಅವರಿಗೆ ಈ ಸಂದರ್ಭದಲ್ಲಿ ನೆನಪಿಸುತ್ತೇನೆ ಎನ್ ಆರ್ ಬಿ ಸಿ ಯ ಕೆನಾಲ್‌ನ್ನು ಹೊಸದಾಗಿ ಮಾಡಲು ಈಗಾಗಲೇ ಟೆಂಡರ್ ಕರೆದಿದ್ದಾರೆ ಆ ಕೆನಾಲ್ ಬಗ್ಗೆ ಸಹ ಮಲ್ಲಿಕಾರ್ಜುನ ಖರ್ಗೆಯವರು ಇದ್ದ ಕಾಲದಲ್ಲಿ estimate, plane

ಮಾಡಿಸಿ 21 ಸಾವಿರ ಹೆಕ್ಟಾರ್‌ಗೆ ದೇವದುರ್ಗ ಮತ್ತು ಮಾನ್ವಿ ತಾಲ್ಲೂಕುಗಳಲ್ಲಿ ಬರತಕ್ಕ ಅರಿಕೆರ ಮತ್ತು ಒಡವೊಟ್ಟಿ ಬ್ರಾಂಚ್‌ನ ಮೂಲಕ 34 ಹಳ್ಳಿಯ ಜನರಿಗೆ ಕುಡಿಯುವ ನೀರಿಗೆ ಮತ್ತು ರೈತರಿಗೆ ಅನುಕೂಲವಾಗತಕ್ಕ ಒಂದು ಪ್ರಾಜೆಕ್ಟ್‌ನ್ನು ಪ್ರಾರಂಭ ಮಾಡಿದರು ಈಗ ಅದನ್ನು ಕಡಿಮೆ ಮಾಡಿ ಕೇವಲ ಹತ್ತೂವರೆ ಸಾವಿರ ಹೆಕ್ಟಾರ್‌ಗೆ ಮಾತ್ರ ನೀರು ಕೊಡತಕ್ಕ Phase ಗೆ ಈಗಾಗಲೇ ಟೆಂಡರ್ ಕರೆದಿದ್ದಾರೆ ಆದ್ದರಿಂದ ಆ ಭಾಗದ ಜನರು ಈಗಾಗಲೇ ಸರ್ಕಾರದ ವಿರುದ್ಧ representation ಕೊಟ್ಟಿದ್ದಾರೆ ಆದರೂ ಇವರು ಯಾರೂ ಅದಕ್ಕೆ ಜವಾಬ್ದಾರಿಯುತವಾಗಿ ಸ್ಪಂದಿಸದೇ ಇವತ್ತು ಟೆಂಡರ್‌ಗೆ 31ನೇ ತಾರೀಖು last Date ಕೊಟ್ಟಿದ್ದಾರ ನಿನ್ನೆ ಸಹ ನಾನು ಇದರ ಬಗ್ಗೆ ನೀರಾವರಿ ಸಚಿವರ ಗಮನಕ್ಕೆ ತಂದಿದ್ದೇನೆ ತಕ್ಷಣ ಮಾತನಾಡುವುದಾಗಿ ಹೇಳಿದ್ದಾರೆ ಅಲ್ಲಿರುವ ರೈತರ ಬೇಡಿಕೆ ಏನಿದೆ ಅದನ್ನು ಈಡೇರಿಸತಕ್ಕ ಪ್ರಯತ್ನ ಸರ್ಕಾರ ಮಾಡಬೇಕು ಅದಕ್ಕೆ ಹೆಚ್ಚಿನ ಹಣ ಕೊಡುವುದರ ಮೂಲಕ, ಇವತ್ತು 121 ಕೋಟಿ ಆ ಪ್ರಾಜೆಕ್ಟ್‌ಗೆ ಆಗತಕ್ಕದ್ದು ಎಂದು estimate ಮಾಡಿ technical committee ಯಲ್ಲಿ Clear ಮಾಡಿದ್ದಾರೆ ಆದರೆ ಸರಿಯಾದ ರೀತಿಯಲ್ಲಿ ಹಣ ಕೊಡದಿರುವ ಮೂಲಕ ಕೇವಲ ಜನರಿಗೆ ನಾವು ಪೂಜೆ ಮಾಡಿದೆವು ಎಂದು ಪೂಜಾ ಕಾರ್ಯಕ್ರಮವನ್ನು ಸಹ ನಾಳೆ ಶನಿವಾರ ಇಟ್ಟುಕೊಂಡಿದ್ದರು ಕಾರಣಾಂತರದಿಂದ ಅದನ್ನು ಮುಂದಕ್ಕೆ ಹಾಕಿದ್ದಾರೆ ಈ ರೀತಿ ಪ್ರಯತ್ನ ಮಾಡುವ ಮೂಲಕ ಅಲ್ಲಿರುವ ಜನರಿಗೆ, ರೈತರಿಗೆ ಅನುಕೂಲವಾಗುವ ಕಾರ್ಯಕ್ರಮವನ್ನು ನಾವು ಮಾಡಲು ಆಗುವುದಿಲ್ಲ ಎಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ ಇವತ್ತು ಅಲ್ಲಿರುವ ನೀರಾವರಿ ಪ್ರಾಜೆಕ್ಟ್‌ಗಳನ್ನು ಪೂರ್ಣ ಮಾಡತಕ್ಕ ಪ್ರಯತ್ನಕ್ಕೆ ಸರ್ಕಾರ ಈ ವರ್ಷದ ಹಣಕಾಸಿನಲ್ಲಿ ಯಾವುದೇ ಉತ್ತಮವಾದಂಥ ಕ್ರಮ ತೆಗೆದುಕೊಳ್ಳಲಿಲ್ಲ ಇವತ್ತು ಆರ್ ಡಿ ಎಸ್ ಕೆನಾಲ್ ಬಗ್ಗೆ ಸಹ ತಮಗೆಲ್ಲ ಗೊತ್ತಿದೆ 80 ಕಿಲೋಮೀಟರ್ ಉದ್ದ ಹೋಗತಕ್ಕ ಆರ್ ಡಿ ಎಸ್ ಕೆನಾಲ್ ನಮ್ಮ ಕರ್ನಾಟಕದಲ್ಲಿ 25 ಕಿಲೋಮೀಟರ್‌ನಲ್ಲಿ ಅದರಿಂದ ಸುಮಾರು 12 ಸಾವಿರ ಎಕರೆ ನೀರಾವರಿ ಆಗುತ್ತದೆ ಉಳಿದಿರು ವಂಥದ್ದು ಆಂಧ್ರ ಪ್ರದೇಶದಲ್ಲಿ ಆಗುತ್ತದೆ ಈ ವರ್ಷ ಆಂಧ್ರದವರು 250 ಕೋಟಿ ರೂಪಾಯಿ ವೆಚ್ಚದಲ್ಲಿ ನಮ್ಮ ಮುಂದೆಯೇ ಕೆನಾಲ್ ಲೈನಿಂಗ್ ಕೆಲಸ ಮಾಡುತ್ತಿದ್ದಾರೆ ನಮ್ಮ ರೈತರು ಕೇಳುತ್ತಿದ್ದಾರೆ ಏಕೆ

ನಮ್ಮ ಸರ್ಕಾರದವರು ಎಷ್ಟೆಲ್ಲಾ ಮಾತನಾಡುತ್ತಾರೆ, ಸಾಕಷ್ಟು ಹಣ ಇದೆಯೆಂದು ಹೇಳುತ್ತಾರೆ, ರೈತರ ಬಗ್ಗೆ ನಾವು ಇದ್ದೇವೆ ಎಂದು ಹೇಳುತ್ತಾರೆ ಆದರೂ ನಮ್ಮ ಕೆನಾಲ್‌ಗಳನ್ನು ಏಕೆ ರಿಪೇರಿ ಮಾಡುತ್ತಿಲ್ಲ ಆಂಧ್ರದವರು 80 ಕಿಲೋಮೀಟರ್‌ವರೆಗೆ ಕೆನಾಲ್ ಲೈನಿಂಗ್ ಮಾಡುತ್ತಿದ್ದಾರೆ ಆದರೆ ನಮ್ಮ ರಾಜ್ಯದಲ್ಲಿ 92 ಟಿ ಎಂ ಸಿ ಯಾವುದಾದರು ಒಂದು ಕೆನಾಲ್‌ಗ ಅಲೊಕೇಷನ್ ಇದ್ದರೆ ಅದು ಕೇವಲ ತುಂಗಭದ್ರಾ left bank cannel ಮಾತ್ರ, ವಿಶ್ವೇಶ್ವರಯ್ಯ ಕೆನಾಲ್ ಆಗಲಿ, ಯು ಕೆ ಪಿ ಯ ಕೆನಾಲ್ ಆಗಲಿ ಮತ್ತೆ ಯಾವುದೇ ಕೆನಾಲ್ ಆಗಲಿ ಇಷ್ಟೊಂದು ಹೆಚ್ಚಿನ ಪ್ರಮಾಣದಲ್ಲಿ ಅಲೊಕೇಷನ್ ಇರುವ ಕೆನಾಲ್ ಯಾವುದೂ ನಮ್ಮಲ್ಲಿ ಇಲ್ಲ ಅಂಥ ಉತ್ತಮವಾದ ಕೆನಾಲ್‌ಗೆ 6 ಲಕ್ಷ ಎಕರೆ ಪ್ರದೇಶಕ್ಕೆ ನೀರಾವರಿ ಆಗುವುದಕ್ಕೆ ಇವತ್ತು ಸರ್ಕಾರ ಮಲತಾಯಿಧೋರಣೆಯಿಂದ ನೋಡಿದರೆ ನಿಜವಾಗಿ ಸರ್ಕಾರ ರಾಯಚೂರು ಜಿಲ್ಲೆಯ ಬಗ್ಗೆ, ಹಿಂದುಳಿದ ಪ್ರದೇಶದ ಬಗ್ಗೆ, ಆ ಪ್ರದೇಶದ ರೈತರ ಬಗ್ಗೆ ಯಾವ ದಿಸೆಯಲ್ಲಿ ತಾವು ವಿಚಾರ ಮಾಡುತ್ತಿದ್ದಾರ ಎಂಬ ಬಗ್ಗೆ ಅಲ್ಲಿನ ರೈತರು ಸಾಕಷ್ಟು ಗೊಂದಲದಲ್ಲಿ ಇದ್ದಾರೆ ಅದರ ಜೊತೆಗೆ ಅನೇಕ minor irrigation Projects ಇವತ್ತು ಕೃಷ್ಣಾ, ನಾರಾಯಣಪುರದಿಂದ ಕೆಳಗೆ ಬರತಕ್ಕ ನಮ್ಮ ರಾಯಚೂರಿನ ಕಲ್ಮಲಾ, ತುಂಗಭದ್ರಾ ಎಂದರೆ ಗಂಗಾವತಿಯಿಂದ ಹಿಡಿದು ಸಿಂಧನೂರು, ಮಾನ್ವಿ ರಾಯಚೂರು ತಾಲ್ಲೂಕಿನಲ್ಲಿರತಕ್ಕದ್ದು ಆ ನೀರೆಲ್ಲಾ over flow ಆಗಿರತಕ್ಕದ್ದು ಆಂಧ್ರ ಪ್ರದೇಶಕ್ಕೆ ಹೋಗುತ್ತಿದೆ ಅಂಥ ಸಂದರ್ಭದಲ್ಲಿ ನದಿ ಪಾತ್ರದಲ್ಲಿರುವ ರೈತರು left irrigation ಮೂಲಕ, ತಮ್ಮ ವೈಯಕ್ತಿಕ left irrigation ಹಾಕಿಕೊಂಡು ಸಾಕಷ್ಟು ರೀತಿ ನೀರಾವರಿ ಮಾಡಿಕೊಳ್ಳುವ ಪ್ರದೇಶಗಳಿಗ Permission ಕೊಡಬೇಕಾದರೆ, ಏನು ಹೊರರಾಜ್ಯಕ್ಕೆ ಹೋಗತಕ್ಕಂಥ ನೀರನ್ನು regenerate ಮಾಡಿಕೊಂಡು left ಮಾಡಿಕೊಳ್ಳಬೇಕಾದರ Permissionಗ ಹೋದರೆ ನೀರಾವರಿ ಅಧಿಕಾರಿಗಳು ತಿಂಗಳುಗಟ್ಟಲ ತಿರುಗಿಸುತ್ತಾರೆ ಅದರ ಜೊತೆಗೆ Government lift ಗಳು ಸಹ ಸರಿಯಾದ ರೀತಿಯಲ್ಲಿ ಕೆಲಸ ಮಾಡುತ್ತಿಲ್ಲ ಇದು ಈಗಾಗಲೇ ಸರ್ಕಾರದ ಗಮನಕ್ಕೂ ಬಂದಿದೆ ಅಲ್ಲಿರುವ ಜನಪ್ರತಿನಿಧಿಗಳು ಸಹ ಅನೇಕ ಸಲ ತಮ್ಮ ಜೊತ ಮಾತನಾಡಿದ್ದಾರೆ ಆದರೂ ಅದನ್ನು ಸರಿಪಡಿಸುವ ಕ್ರಮ ಸರ್ಕಾರದಿಂದ ಆಗಿಲ್ಲ

ನಮ್ಮಲ್ಲಿ ತಾಲ್ಲೂಕಿನ ದದ್ದಲ ಎಂಬಲ್ಲಿ left irrigation ಪ್ರಾರಂಭ ಮಾಡಿದ್ದೇವೆ ಅದು ಆಗಿ ಈಗಾಗಲೇ ಮೂರೂವರೆ ವರ್ಷವಾಗಿದೆ ಕಳೆದ 15 ತಿಂಗಳಿನಿಂದ ಅದಕ್ಕೆ ವಿದ್ಯುತ್ ಕೊಡಿಸುವ ಕೆಲಸ ಸರ್ಕಾರದಿಂದ ಆಗದ ಕಾರಣ ಇವತ್ತು ಮೂರೂವರೆ ಸಾವಿರ ರೈತರಿಗೆ ಏನು ಅನುಕೂಲ ಆಗಬೇಕು ಆ ಕಾರ್ಯಕ್ರಮ ಇವತ್ತು ಸರ್ಕಾರದಿಂದ ನಡೆಯಲಿಲ್ಲ ಕೇವಲ ವಿದ್ಯುತ್ ಸಂಪರ್ಕ ಕೊಟ್ಟಿದ್ದರೆ ಅಲ್ಲಿ left irrigation ಪ್ರಾರಂಭವಾಗುತ್ತಿತ್ತು ಅದಕ್ಕೆ ಸರ್ಕಾರ ಈಗಾಗಲೇ 8 ಕೋಟಿ ವೆಚ್ಚ ಮಾಡಿದೆ ಆದರೂ ಅದರ ಬಗ್ಗೆ ಯಾರೂ ಮಾತನಾಡುವವರು ಇಲ್ಲ ಎಷ್ಟೇ ಹೇಳಿದರೂ ಸಹ ಮಾಡಿಕೊಡುತ್ತೇವೆ ಎಂಬ ಮಾತನ್ನು ಹೇಳುತ್ತಾರೆಯೇ ಹೊರತು ಬೇರೆ ಏನೂ ಮಾಡಿಲ್ಲ ಇವತ್ತು ರೈತರ ಪರಿಸ್ಥಿತಿ ಹೊರರಾಜ್ಯಕ್ಕೆ ಹೋಗತಕ್ಕ ನೀರನ್ನು regenerate ಮಾಡಿ ಉಪಯೋಗಿಸಿಕೊಳ್ಳದಿದ್ದರೆ ಅದಕ್ಕೆ ಸರ್ಕಾರ ಸ್ಪಂದಿಸಲಿಲ್ಲ ಎಂಬ ಮಾತನ್ನು ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತರುತ್ತೇನೆ ಕೆ.ಪಿ.ಟಿ.ಸಿ.ಎಲ್ ಬಗ್ಗೆ ಹೇಳುವುದಾದರೆ, ನಮ್ಮ ರೈತರು ಭೂಮಿಯಿಂದ, ಬೋರ್‌ವೆಲ್ ಮೂಲಕ ಮತ್ತು ಕೆನಾಲ್‌ನಿಂದ ಮತ್ತು ಕೃಷ್ಣಾ ಮತ್ತು ತುಂಗಭದ್ರಾ ನದಿಯಿಂದ ಸಾಕಷ್ಟು ನೀರು ಹರಿದು ಹೋಗುತ್ತಿದೆ ಆದರೂ ಸಹ ರೈತರು left irrigation ಮೂಲಕ ತಮ್ಮ ಭೂಮಿಗೆ ನೀರನ್ನು ಪಡೆಯಲು ಪ್ರಯತ್ನ ಮಾಡತಕ್ಕ ಸಂದರ್ಭದಲ್ಲಿ ಕೇವಲ 5–6 ಗಂಟೆ ಮಾತ್ರ ವಿದ್ಯುತ್‌ನ್ನು ಕೊಡುತ್ತಿದ್ದಾರೆ ಇಷ್ಟೆಲ್ಲಾ ಮಳೆ ಆಗಿ ಎಲ್ಲಾ ಜಲಾಶಯ ತುಂಬಿದ್ದರೂ ಇವತ್ತು load shedding ಮಾಡುತ್ತಿದ್ದಾರೆ ಅದನ್ನು ಮಾಡಬಾರದು ಅದನ್ನು withdraw ಮಾಡಬೇಕೆಂದು ನಾವೆಲ್ಲರು ಅನೇಕ ಸಲ representation ಕೊಟ್ಟೆವು ಆದರೆ ತಾವು ದಯವಿಟ್ಟು ಪರಿಶೀಲನೆ ಮಾಡಿ, ನದಿ ಪ್ರದೇಶಕ್ಕೆ ಇರತಕ್ಕ left irrigationಗೆ ಅನುಕೂಲ ಆಗುವ ರೀತಿಯಲ್ಲಿ load shedding withdraw ಮಾಡತಕ್ಕ ಕೆಲಸ ತಕ್ಷಣ ಆಗಬೇಕಾಗಿದೆ ನಾನು ನಿನ್ನೆ, ಮೊನ್ನೆಯಿಂದ ಇಲ್ಲಿ ಇದ್ದರೂ ರೈತರು ಅದೇ ಕೇಳುತ್ತಾರೆ, 10–12 ಗಂಟೆ ವಿದ್ಯುತ್‌ನ್ನು ಕೊಟ್ಟರೆ ಸಾಕಷ್ಟು ನೀರನ್ನು ನಾಲೆ ಮತ್ತು ನದಿಯ ಮೂಲಕ ಹೋಗತಕ್ಕ ಉಪಯೋಗಿಸಿಕೊಂಡು ನಾವು ನೀರಾವರಿ ಮಾಡಲು ಅನುಕೂಲ ಆಗುತ್ತದೆ ಆದ್ದರಿಂದ load shedding withdraw ಮಾಡಿಸಬೇಕೆಂದು ರೈತರು ಒತ್ತಾಯ ಮಾಡುತ್ತಿರುವುದನ್ನು ತಮ್ಮ

ಗಮನಕ್ಕೆ ತರುತ್ತೇನೆ ಕೃಷಿ ಬಗ್ಗೆ ಸಂಬಂಧಪಟ್ಟ ಇಲಾಖೆಯ ಸಚಿವರನ್ನು ಕೇಳಿದೆವು ಈ ವರ್ಷ ನಮಗೆ ಸಮಯಕ್ಕೆ ಸರಿಯಾದ ರೀತಿಯಲ್ಲಿ Seeds ಬಂದಿಲ್ಲ ಅಲ್ಲಿರತಕ್ಕಂಥ ರೈತರು Variety of Seeds ಕೇಳಿರುತ್ತಾರೆ ಅವರು ಯಾವ Seeds ಕೇಳಿರುತ್ತಾರೋ, ಉದಾಹರಣೆಗೆ Sun Flower, ಆ Seeds ಬಿಟ್ಟು ಬೇರೆ ಬಗೆಯ Seed ಕೊಡುತ್ತಿದ್ದಾರೆ ಯಾವುದೇ ರೀತಿಯಿಂದ ಸಮಯಕ್ಕೆ ಸರಿಯಾಗಿ ಬೀಜ ಬರಲಾರದ ಕಾರಣ ಅಲ್ಲಿ ಬಿತ್ತುವಂತಹ ಸಂದರ್ಭದಲ್ಲಿ ಸಾಕಷ್ಟು ತೊಂದರೆ ಇವತ್ತು ರೈತರಿಗೆ ಆಗುತ್ತಿದೆ ಆ ರೀತಿ ಆಗಬಾರದು ಎನ್ನುವಂತಹ ಮಾತನ್ನು ಈಗಾಗಲೇ ನಮ್ಮ ಅನೇಕ ಸ್ನೇಹಿತರು ಹೇಳಿದ್ದಾರೆ ರೈತ ಸಂಪರ್ಕ ಕೇಂದ್ರಗಳನ್ನು ತಾವು ಎಲ್ಲಾ ಕಡೆಯಲ್ಲೂ ಪ್ರಾರಂಭ ಮಾಡಿದ್ದೀರಿ ಪ್ರತಿ ತಾಲ್ಲೂಕಿನಲ್ಲಿ ಇವತ್ತು 8–10 ರೈತ ಸಂಪರ್ಕ ಕೇಂದ್ರಗಳಿವೆ ಅವು ಕೇವಲ ಬೀಜ ಕೊಡತಕ್ಕಂಥ ಕಾಲದಲ್ಲಿ ಮಾತ್ರ ಆ ಬಾಗಿಲು ತೆರೆದಿರುತ್ತವೆ, ಉಳಿದಂತಹ ಸಂದರ್ಬದಲ್ಲಿ ಆ ರೈತ ಸಂಪರ್ಕ ಕೇಂದ್ರಗಳ ಬಾಗಿಲುಗಳು ಮುಚ್ಚಿರುತ್ತವೆ ಹೀಗಾಗಿ ಯಾವ ಉದ್ದೇಶಕ್ಕಾಗಿ ಹಿಂದಿನ ಎಸ್ ಎಂ ಕೃಷ್ಣ ಸರ್ಕಾರದಲ್ಲಿ ಆ ರೈತ ಸಂಪರ್ಕ ಕೇಂದ್ರಗಳನ್ನು ನಾವು ಪ್ರಾರಂಭ ಮಾಡಿದೆವೋ, ಅದರ ಉದ್ದೇಶ ಈಡೇರಿಲ್ಲ ಅದು ಈಡೇರಬೇಕಾದರೆ ಉತ್ತಮವಾದಂತಹ ರೀತಿಯಲ್ಲಿ ಇವತ್ತು Agriculture Department ಅನ್ನು streamline ಮಾಡಬೇಕಾಗುತ್ತದೆ ಸರಿಯಾದ ರೀತಿಯಲ್ಲಿ ರೈತರಿಗೆ ಮಾಹಿತಿ ಕೊಡತಕ್ಕಂಥ ಒಂದು ಪ್ರಯತ್ನ ಮಾಡಬೇಕಾಗುತ್ತದೆ ತಾವು ಎಲ್ಲಿಯಾದರೂ ಹೋಗಿ Surprise visit ಮಾಡಿ ಯಾವುದೇ ರೈತ ಸಂಪರ್ಕ ಕೇಂದ್ರದ ಬಾಗಿಲು ಇವತ್ತು ತರೆದಿರುವುದಿಲ್ಲ ಬೀಜ ಕೊಡತಕ್ಕಂಥ 15–30 ದಿವಸದ ಸಮಯದಲ್ಲಿ ಮಾತ್ರ ಅವರು open ಮಾಡಿರುತ್ತಾರೆ ಎಷ್ಟರ ಮಟ್ಟಿಗೆ ನೀವು ಸಬ್ಸಿಡಿ ಕೊಡುತೀರೋ, ಅಷ್ಟು ದರದಲ್ಲಿ ಬೀಜವನ್ನು ಮಾರಾಟ ಮಾಡಿ ಕೇಂದ್ರವನ್ನು ಬಂದ್ ಮಾಡತಕ್ಕಂಥ ಪರಿಸ್ಥಿತಿ ಇವತು ನಮ್ಮ ರೈತ ಸಂಪರ್ಕ ಕೇಂದ್ರಗಳಲ್ಲಿ ಮಾಡುತ್ತಿದ್ದಾರೆ ಅದಲ್ಲದೇ ಇವತ್ತು fertilizer ಸರಬರಾಜು ಆಗದೇ ಸಾಕಷ್ಟು ತೊಂದರೆಯಾಗಿದೆ ಅದು ಸರಿಯಾಗಿ ಮಾರ್ಕೆಟ್‌ಗೆ ಬರುತ್ತಿಲ್ಲ ಈ ವಿಷಯವಾಗಿ ಈಗಾಗಲೇ ನಾವು ಪ್ರಶ್ನೋತ್ತರ ಕಾಲದಲ್ಲಿ ಸರ್ಕಾರದ ಗಮನಕ್ಕೆ ತಂದಿದ್ದೇವೆ ಆದರೂ ಕಳೆದ 10 ದಿವಸಗಳಿಂದ ಏನಾದರೂ ಪರಿಸ್ಥಿತಿ ಸುಧಾರಿಸಬಹುದು ಎಂದುಕೊಂಡರೆ, ಏನೂ ಪರಿಸ್ಥಿತಿ ಸುಧಾರಿಸಿಲ್ಲ

ಇವತ್ತು ನಮಗೆ ಬೇಕಾಗಿರತಕ್ಕಂಥ DAP ಮತ್ತು Complex Fertilizer ಮಾರ್ಕೆಟ್‌ಗೆ ಬರುತ್ತಿಲ್ಲ ಈಗಾಗಲೇ ನಾವು ನಮ್ಮ ಕೃಷಿ ಸಚಿವರಿಗೆ ವಿನಂತಿ ಮಾಡಿದ್ದೇವೆ ನೀವು ಮೇ ತಿಂಗಳಿನಲ್ಲಿ, ಜೂನ್ ತಿಂಗಳಿನಲ್ಲಿ, ಜುಲೈ ತಿಂಗಳಿನಲ್ಲಿ ಎಷ್ಟು allocation ಯಾವ್ಯಾವ Private Company ಗಳಿಂದ ಯಾವ್ಯಾವ ಸೆಂಟರ್‌ಗೆ ಎಷ್ಟೆಷ್ಟು ಬರಬೇಕೆಂಬುದು allocation ಆಗಿತ್ತೋ, ಅದು ಬಂದಿದೆಯೋ, ಇಲ್ಲವೋ? ಎಂಬುದನ್ನು ತಾವು ತಕ್ಷಣವೇ ನೋಡಿ ಎಂದು ಹೇಳಿದೆವು ಆದರೆ ಇವತ್ತಿನವರೆಗೂ ಆ ಪರಿಸ್ಥಿತಿ ಸುಧಾರಿಸುವಂತಹ ಪ್ರಯತ್ನ ಕೃಷಿ ಇಲಾಖೆಯಿಂದ ಆಗಿಲ್ಲ ನಮ್ಮ ಅಧಿಕಾರಿಗಳು ಇಂತಹ ಸಂದರ್ಭದಲ್ಲಿ ಆ Private Companies ಕರೆಸಿ, ಅವರಿಗೆ ಒತ್ತಾಯ ಮಾಡಿ, ಅವರಿಗೇನು allocation ಮಾಡಲಾಗಿದೆಯೋ, ಅದರ ಪ್ರಕಾರ ಆ fertilizer ಅನ್ನು ಕೊಡಿಸತಕ್ಕಂಥ ಪ್ರಯತ್ನ ಮಾಡಬೇಕು ಇಲ್ಲದಿದ್ದರೆ, ಇವತ್ತು sellers market ಗೆ ಹೋಗಬೇಕಾಗುತ್ತದೆ Fertilizers ಗೆ ಸಾಕಷ್ಟು ತೊಂದರೆ ಇರುವುದರಿಂದ, ಕಂಪೆನಿಗಳು ಅವರಿಗೆ ಸಮೀಪ ಇರತಕ್ಕಂಥ ರಾಜ್ಯಗಳಿಗೆ, ಸಮೀಪ ಇರತಕ್ಕಂಥ ಕೇಂದ್ರಗಳಿಗೆ ಮಾತ್ರ ಅವರು transport ಮಾಡಿ, ಅಲ್ಲಿ ಲಾಭ ಪಡೆಯತಕ್ಕಂಥ ಪ್ರಯತ್ನ ಮಾಡುತ್ತಾರೆ ಯಾವಾಗ fertilizers surplus ಆಗುತ್ತದೋ, ಆ ಸಮಯದಲ್ಲಿ ಮಾತ್ರ ಇಲ್ಲಿಗೆ ತಂದು buffer godownನಲ್ಲಿ stock ಮಾಡಿಕೊಳ್ಳತಕ್ಕಂಥ ಪ್ರಯತ್ನ ಮಾಡುತ್ತಾರೆ ತಕ್ಷಣ ರೈತರಿಗೆ ಅನುಕೂಲವಾ ಗಬೇಕಾದರೆ, ಈಗಾಗಲೇ ನದಿ ಮುಖಾಂತರ ನೀರು ಬಂದಿರುವುದರಿಂದ, ಕಾಲುವೆಗಳ ಮುಖಾಂತರ ನೀರು ಬಿಟ್ಟಿರುವುದರಿಂದ, ತಕ್ಷಣ ಅವರಿಗೆ complex fertilizer ಬಹಳ ಅತ್ಯವಶ್ಯಕವಾಗಿದೆ ಅದರಲ್ಲೂ ತುಂಗಭದ್ರಾ Project area ದಲ್ಲಿ, ರಾಯಚೂರು ಇರಬಹುದು, ಕೊಪ್ಪಳ ಇರಬಹುದು, ಬಳ್ಳಾರಿ ಇರಬಹುದು, ಆ ಪ್ರದೇಶಗಳಲ್ಲಿ ಇವತ್ತು shortage ಕಾಣುತ್ತಿದೆ ಅದನ್ನು ತಕ್ಷಣ ಸರಿಪಡಿಸತಕ್ಕಂಥ ಪ್ರಯತ್ನವನ್ನು ಸರ್ಕಾರದವರು ಮಾಡಬೇಕು ಅದರ ಜೊತೆಗೆ ಇವತ್ತು ತಕ್ಷಣ load shedding ಸಹಿತ immediately withdraw ಮಾಡಬೇಕು 15–20 ದಿವಸಗಳಾದ ಮೇಲೆ ಬೇಕಾದರ ಮತ್ತೆ load shedding ಮಾಡಿ ಈಗ ಸಾಕಷ್ಟು ನೀರು ನದಿ ಮುಖಾಂತರ ಆಂಧ್ರ ಪ್ರದೇಶಕ್ಕೆ ಹೋಗುತ್ತಿದೆ ಆ ನದಿ ಕೃಷ್ಣಾ ನದಿ ಇರಬಹುದು, ತುಂಗಭದ್ರಾ

ನದಿ ಇರಬಹುದು, ನಾಲಾಗಳ ಮುಖಾಂತರ ಇರಬಹುದು, ಆ ನದಿಯಲ್ಲಿನ ನೀರನ್ನು ಉಪಯೋಗಿಸಿಕೊಳ್ಳ ಬೇಕಾದರೆ, ಈಗಿರುವಂತಹ ನೆಲ್ಲು ರೈತರ ಕೈಗೆ ಬರಬೇಕಾದರೆ ಮತ್ತು ಇತರ ಕಾರ್ಯಕ್ರಮಗಳ ಉಪಯೋಗವಾಗ-ಬೇಕಾದರೆ ತಕ್ಷಣ ತಾವು load shedding ಅನ್ನು withdraw ಮಾಡಿ, ರೈತರಿಗೆ ಅನುಕೂಲ ಮಾಡತಕ್ಕಂಥ ಪ್ರಯತ್ನ ಮಾಡಬೇಕು ಹಾಗೆ ಮಾಡಿದಲ್ಲಿ ಮಾತ್ರ ಇವತ್ತು ರೈತರಿಗೆ ಅನುಕೂಲವಾಗಬಹುದು ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ ಇವತ್ತು ಸಾಕಷ್ಟು ಮಾರ್ಕೆಟ್ ಸಹಿತ ರೈತರಿಗೆ ಇಲ್ಲ ಅನೇಕ ಸಂದರ್ಭಗಳಲ್ಲಿ ಇದನ್ನು ತಮ್ಮ ಗಮನಕ್ಕೆ ತಂದಿದ್ದೇನೆ ನಮ್ಮಲ್ಲಿ ಉಳ್ಳಾಗಡ್ಡಿಗೆ ಬೆಲೆ ಸಿಗದೆ ತೊಂದರೆಯಾದಾಗ ರೈತರು ಸಾಕಷ್ಟು ಗಲಾಟೆ, ಧರಣಿ ಮತ್ತು ಸತ್ಯಾಗ್ರಹ ಮಾಡಿದಂತಹ ಸಂದರ್ಭದಲ್ಲಿ ನಮ್ಮ Marketing Minister ನಮ್ಮ ಪ್ರದೇಶಕ್ಕೆ ಭೇಟಿ ನೀಡಿದರು Support priceಗೆ ಖರೀದಿಸುವುದನ್ನು A,B & C ಎಂದು ವರ್ಗೀಕರಿಸಿ ಖರೀದಿಸಲು ಪ್ರಾರಂಭಿಸಲಾಯಿತು ಎರಡು ದಿವಸ ಖರೀದಿ ಮಾಡಿ, ನಂತರ ಮಾರ್ಕೆಟ್ ಬಂದ್ ಮಾಡಿದರು ಅದೇ ರೀತಿಯಾಗಿ ಹೋದ ವರ್ಷ ಮಾನ್ಯ ಮುಖ್ಯಮಂತ್ರಿಗಳು ರಾಯಚೂರಿಗೆ ಬಂದರು ಅವರು ಅಲ್ಲಿ meeting ಮಾಡಿ review ಮಾಡಿದಂತಹ ಸಂದರ್ಬದಲ್ಲಿ ಜನಪ್ರತಿನಿಧಿಗಳಾದ ನಾವೆಲ್ಲರೂ ರೈತರ ಭತ್ತಕ್ಕೆ ಬಹಳ ಕಡಿಮೆ ರೇಟ್ ಸಿಗುತ್ತಿದೆ, ಅದಕ್ಕೆ ತಕ್ಷಣ support price ಘೋಷಿಸಬೇಕೆಂದು ಕೋರಿದಾಗ, ಆ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಅಲ್ಲೇ announce ಮಾಡಿದರು 600 ರೂ ಗಳಿಗೆ ಮರು ದಿವಸದಿಂದಲೇ ಖರೀದಿ ಮಾಡಲು ನೀವು ಪ್ರಾರಂಭ ಮಾಡಿ ಎಂದು ಜಿಲ್ಲಾಧಿಕಾರಿಗಳಿಗೂ ಮತ್ತು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳಿಗೂ ಸೂಚನೆ ಕೊಟ್ಟು ಬಂದರು ಅದರ ಬಗ್ಗೆ ಪೇಪರ್‌ಗಳಲ್ಲಿ ದೊಡ್ಡ ದೊಡ್ಡ ಅಕ್ಷರಗಳಲ್ಲಿ ವರದಿಗಳು ಪ್ರಕಟವಾದವು ಆದರೆ ಮರು ದಿವಸದಿಂದಲ್ಲ, ನಾವು ಸತತವಾಗಿ ಒಂದು ತಿಂಗಳು ಪ್ರಯತ್ನ ಮಾಡಿದರೂ ಸಹ, ಒಂದು ಕಿಲೋ ನೆಲ್ಲನ್ನೂ ಸಹ 600 ರೂ ಗಳ ರೇಟ್‌ಗೆ ತೆಗೆದುಕೊಳ್ಳಲಿಲ್ಲ ಈ ವರ್ಷ ಮತ್ತೆ ಅದೇ ಪರಿಸ್ಥಿತಿ ಬಂದಾಗ, ಮತ್ತೆ ನಾವೆಲ್ಲರೂ ಸರ್ಕಾರದ ಮುಖ್ಯಸ್ಥರನ್ನು ಭೇಟಿಯಾದಾಗ, 600 ರೂ ಗಳಿಗೆ ಖರೀದಿ ಮಾಡಿ ಎಂದು ಹೇಳಿದರು 2–3 ದಿವಸಗಳಲ್ಲಿ FCI ನವರು ಬಂದು ಅಲ್ಲಿ ಮಾರಾಟ ಕೇಂದ್ರಗಳನ್ನು ಪ್ರಾರಂಭ ಮಾಡುತ್ತಾರೆ ನಿಮಗೆ ತಕ್ಷಣದಲ್ಲೇ 600 ರೂ ಗಳಿಗೆ

ಅವರು ಖರೀದಿ ಮಾಡುತ್ತಾರೆಂದು ಹೇಳಿದರು ಈ ವರ್ಷವೂ ಸಹಿತ ಅದು ಆಗಲಿಲ್ಲ ತಾವು ಬೇಕಾದರೆ records ಅನ್ನು verify ಮಾಡಬಹುದು ಒಂದು ಕಿಲೋ ಸಹಿತ ನೆಲ್ಲನ್ನು ಇವತ್ತು ಸಹಿತ ಖರೀದಿ ಮಾಡಲಿಲ್ಲ ನೀವು ಹೇಳಿರತಕ್ಕಂಥದ್ದರ ಬಗ್ಗೆ ಮತ್ತು ಆಶ್ವಾಸನೆ ನೀಡಿರತಕ್ಕದ್ದು ಜಾರಿಗೆ ಬಂದಿದೆಯೇ? ಎಂದು ನೀವು ನೋಡಬೇಕು ತಾವು ನೋಡದಿದ್ದರೆ ಅಧಿಕಾರಿಗಳು ಆ ಕೆಲಸದ ಬಗ್ಗೆ ಯಾವುದೇ ಕ್ರಮ ತೆಗೆದುಕೊಳ್ಳುವುದಿಲ್ಲ 'ಸಾರ್, ಅವರು ಹಾಗೆ ಹೇಳಿ ಹೋಗುತ್ತಾರೆ, ನಾವು ಎಲ್ಲಿ ಮಾಡಲಿಕ್ಕೆ ಆಗುತ್ತದೆ? 600 ರೂ ಗಳನ್ನು ಎಲ್ಲಿಂದ ಕೊಡಲಿಕ್ಕಾಗುತ್ತದೆ? ಈ ಪರಿಸ್ಥಿತಿಯಲ್ಲಿ ನಾವು ಕೊಡಲಿಕ್ಕೆ ಆಗುವುದಿಲ್ಲ' ಎನ್ನುವಂತಹ ಮಾತನ್ನು ಅಧಿಕಾರಿಗಳು clear ಆಗಿ ಹೇಳುತ್ತಾರೆ ಆ ಕಡೆ ನೀರಿನಿಂದ, ಈ ಕಡೆ ವಿದ್ಯುತ್‌ನಿಂದ, ಈ ಕಡೆ ಮಾರ್ಕೆಟ್‌ನಿಂದ, ಈ ಕಡೆ fertilizer non supply ನಿಂದ, ಹೀಗೆ ಅನೇಕ ರೀತಿಯ ತೊಂದರೆಗಳಿಂದ ಇವತ್ತು ರೈತರು ಸಂಕಷ್ಟಕ್ಕೆ ಒಳಗಾಗಿದ್ದಾರೆ ಈ ಸಮಯದಲ್ಲಿ ತಾವು ರೈತರ ಸಾಲ ಮನ್ನಾ ಮಾಡಿದ್ದೀರಿ ಇದೇ ಸಮಯದಲ್ಲಿ ರಾಯಚೂರಿನ ಡಿಸಿಸಿ ಬ್ಯಾಂಕ್ ನಮ್ಮ ಕೈಯಲ್ಲಿದೆ, ಅಧ್ಯಕ್ಷರು ನಮ್ಮವರಾಗಿದ್ದಾರೆ ಸದಸ್ಯರು ನಮ್ಮವರಾಗಿದ್ದಾರೆ, ನಾವು ಅನುಕೂಲ ಮಾಡಿಕೊಳ್ಳಬಹುದು ಎಂದುಕೊಂಡೆವು ಹೋದ ವರ್ಷದ 72 ಕೋಟಿ ರೂ ಗಳು ಮತ್ತು ಈ ವರ್ಷ 42 ಕೋಟಿ ರೂ ಗಳನ್ನು ಹಂಚಿದ್ದೇವೆಂದು ನೀವು ಹೇಳುತ್ತಿದ್ದೀರಿ ಆ ಬಗ್ಗೆ ನಾವು ಪ್ರತಿನಿತ್ಯ ಕೇಳುತ್ತಿದ್ದೇವೆ ಆದರೆ ಅದು ಬಂದಿಲ್ಲ ತಾವು ಬೆಳಿಗ್ಗೆ ಅಂಕಿ ಸಂಖ್ಯೆಗಳನ್ನು ಹೇಳಿದಿರಿ, ತಾವು ಬೇಕಾದರೆ ಈ ಬಗ್ಗೆ verify ಮಾಡಿ 42 ಕೋಟಿ ರೂ ಗಳೂ ಸಹಿತ ನಮ್ಮಲ್ಲಿ ಬಂದಿಲ್ಲ ರೈತರಿಗೆ ಆ ಕಡೆ current ನಿಂದ, ಆ ಕಡೆ fertilizer ನಿಂದ, ಆ ಕಡೆ ನೀರಿನಿಂದ, ಈ ಕಡೆ loan ನಿಂದ, ಈ ರೀತಿಯಾದಂತಹ ಒತ್ತಡಗಳು ಇರತಕ್ಕಂಥ ಸಂದರ್ಭದಲ್ಲಿ, ಅದನ್ನು ನಾವು ಪ್ರಾಮಾಣಿಕತೆಯಿಂದ ನಿವಾರಿಸುವಂತಹ ಪ್ರಯತ್ನವನ್ನು ಮಾಡದಿರುವು-ದರಿಂದ ಈ ಸಂದರ್ಭದಲ್ಲಿ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ ಯಾವ ರೀತಿಯಲ್ಲಿ ಈ ಪರಿಸ್ಥಿತಿಗಳನ್ನು ಸುಧಾರಿಸಬೇಕು ಎಂದು ನಾವು ವಿಚಾರ ಮಾಡದಿದ್ದರೆ, ನಾವು ಎಷ್ಟೇ ಭಾಷಣಗಳನ್ನು ಮಾಡಿದರೂ, ಎಷ್ಟೇ ಆಶ್ವಾಸನೆಗಳನ್ನು ಕೊಟ್ಟಿದ್ದರೂ ಸಹಿತ ರೈತರ ಆತ್ಮಹತ್ಯೆ ನಿಲ್ಲಿಸಲಿಕ್ಕೆ ಸಾಧ್ಯವಿಲ್ಲ ಅವರಿಗೆ ಇರತಕ್ಕಂಥ ಒತ್ತಡದಿಂದ ಅವರು ಇವತ್ತು ಆತ್ಮಹತ್ಯೆಗೆ

ಶರಣಾಗುತ್ತಿದ್ದಾರೆ ಅದಕ್ಕೆ ಪರಿಹಾರವಾಗಿ 1 ಲಕ್ಷ ರೂ ಗಳನ್ನು ಕೊಟ್ಟಿದ್ದೇವೆಂದು ಜನ ಪ್ರತಿನಿಧಿಗಳಾಗಲಿ, ಯಾವುದೇ ಸರ್ಕಾರವಿರಲಿ ಹೇಳುವುದರಿಂದ ರೈತರ ಸಮಸ್ಯೆ ಬಗೆಹರಿಯಲಿಕ್ಕೆ ಸಾಧ್ಯವಿಲ್ಲ ಎನ್ನುವಂತಹ ಮಾತನ್ನು ನಾವು ತಿಳಿದುಕೊಳ್ಳಬೇಕು ಇವತ್ತು ಪ್ರತಿನಿತ್ಯ ಬೆಳಿಗ್ಗೆ ಎದ್ದಾಗಿನಿಂದ ಸಾಯಂಕಾಲದ ವರೆಗೂ ಯಾರು ಬರುತ್ತಾರೋ ಅವರು ಸಮಯಕ್ಕೆ ತಕ್ಕ ಹಾಗೆ ಒಂದು ಮಾತನ್ನು ಹೇಳುತ್ತಾರೆ, ಸರಿಪಡಿಸಿ ಎಂದು ಅಧಿಕಾರಿಗಳಿಗೆ ಹೇಳುತ್ತಾರೆ, ಆದರೆ ಅದು ಆಗುವುದಿಲ್ಲ ಅದಿಕಾರಿಗಳಿಗೂ ಸಹ ಬೆಳಿಗ್ಗೆ 10 ಗಂಟೆಯಿಂದ ಸಾಯಂಕಾಲ 6 ಗಂಟೆಯವರೆಗೆ ಮನೆ ಮುಟ್ಟುವವರೆಗೂ ಏನು ಇರುತ್ತದೋ ಅದನ್ನೇ ನೋಡುತ್ತಾರೆ Priorities ಬಗ್ಗೆ ಯಾರೂ ವಿಚಾರ ಮಾಡುತ್ತಿಲ್ಲ ರಾಜ್ಯದ overall development ಆಗಲು infrascture ಅನ್ನು develop ಮಾಡತಕ್ಕಂಥ ಒಂದು ಪ್ರಯತ್ನಕ್ಕೆ Priorities ಅನ್ನು ನಾವು fix ಮಾಡದಿದ್ದರೆ, ನಾವು ಈ ರೀತಿಯಾಗಿ ಎಷ್ಟೇ ವರ್ಷಗಳು ಹೋದರೂ ಸಹಿತ ಸಮಸ್ಯೆಗಳನ್ನು ಬಗೆಹರಿಸಲಿಕ್ಕೆ ಸಾಧ್ಯವಿಲ್ಲ ನೀವು ಈಗ ಏನು ಮಾಡುತ್ತಿದ್ದೀರಿ? ತಾವು ನಿಮಗೆ ಬೇಕಾಗಿರತಕ್ಕಂಥ ತಾಲ್ಲೂಕುಗಳಿಗೆ, Constituencyಗಳಿಗೆ ಮತ್ತು ಜಿಲ್ಲೆಗಳಿಗೆ ಹೆಚ್ಚಿನ ಹಣವನ್ನು ಕೊಡುತ್ತಿದ್ದೀರಿ ಇದರಿಂದ imbalance ಜಾಸ್ತಿಯಾಗುತ್ತಿದೆ Imbalance ಜಾಸ್ತಿಯಾಗುತ್ತಿರುವುದರಿಂದ ಜನರಲ್ಲಿ ಕೂಗು ಹುಟ್ಟುತ್ತಿದೆ ಆ ಕೂಗಿನಿಂದ, ಇವತ್ತಲ್ಲ ಮುಂದಾದರೂ ಕೂಡ ನಾವು ತೊಂದರೆಗೆ ಒಳಪಡಬೇಕಾಗುತ್ತದೆ ಹಾಗಾಗಿ ತಾವು ಈ imbalance ಆಗಲಿಕ್ಕೆ ಅವಕಾಶ ಕೊಡಬಾರದು ಇವತ್ತು most backward taluksಗಳಿಗೆ order ವೊಂದನ್ನು ಮಾಡಿ drinking water ಗೆಂದು 15 ಲಕ್ಷ ರೂ ಗಳನ್ನು release ಮಾಡಿದಿರಿ ಕೇವಲ 12 ತಾಲ್ಲೂಕುಗಳಿಗೆ ಮಾತ್ರ ಕೊಟ್ಟಿರಿ 39 ತಾಲ್ಲೂಕುಗಳು ಇವತ್ತು most backward taluks ಪಟ್ಟಿಯಲ್ಲಿವೆ 15–20 ಲಕ್ಷ ರೂ ಗಳು ಕೆಲವಕ್ಕೆ ಕೊಟ್ಟರೆ, ಇನ್ನು ಕೆಲವು ತಮಗೆ ಬೇಕಾಗಿರತಕ್ಕಂಥ Constituency ಗಳಿಗೆ 100–150 ಲಕ್ಷ ರೂ ಗಳನ್ನು ಕೊಟ್ಟಿದ್ದೀರಿ ಬೇರೆ Constituency ಗಳಲ್ಲಿ ಇರತಕ್ಕಂಥ ಜನರು ನೀರು ಕುಡಿಯುವುದು ಬೇಡವೇ? ಆ ಜನರಿಗೆ ನೀರು ಕುಡಿಯುವುದಕ್ಕೆ ಸಮಸ್ಯೆಗಳಿಲ್ಲವೇ? ಅದಕ್ಕೂ ನಿಮಗೂ ಸಂಬಂಧವಿಲ್ಲವೇ? ಯಾವ ರೀತಿಯಾಗಿ ತಾವು ಅಲ್ಲಿರತಕ್ಕಂಥ ಪರಿಸ್ಥಿತಿಯನ್ನು

ಹೋಗಲಾಡಿಸತಕ್ಕಂಥ ಪ್ರಯತ್ನ ಮಾಡಿದ್ದೀರಿ? ಡಾ ನಂಜುಂಡಪ್ಪನವರ ವರದಿಯ ಆಧಾರದ ಮೇಲೆ ಹಂಚಿಕೆ ಮಾಡುತ್ತೇವೆಂದು ಹೇಳುತ್ತೀರಿ ಆದರೆ ತಮಗೆ ಬೇಕಾದ Constituency ಗಳಿಗೆ ಮಾತ್ರ order ಮಾಡಿಕೊಳ್ಳುತ್ತಾ ಹೋದರೆ imbalance ಜಾಸ್ತಿಯಾಗಿ ನಾಳೆ ಬಹಳಷ್ಟು ತೊಂದರೆಯಾಗುತ್ತದೆ ಇದರಿಂದ ರಾಜಕಾರಣಿಗಳಿಗೆ ತೊಂದರೆಯಾಗುತ್ತದೆ, ಸರ್ಕಾರಕ್ಕೆ ತೊಂದರೆ ಯಾಗುತ್ತದೆ, ಈ ವಿಷಯವನ್ನು neglect ಮಾಡಿದರೆ ಪ್ರತ್ಯೇಕತೆಯ ಕೂಗು ಜಾಸ್ತಿಯಾಗುತ್ತದೆ ಆ ಕೂಗಿಗೆ ನಾವೇ ಅವಕಾಶ ಕೊಟ್ಟಂತಾಗುತ್ತದೆ ಆದ್ದರಿಂದ ಕಡ್ಡಾಯವಾಗಿ ಡಾ ನಂಜುಂಡಪ್ಪನವರ ವರದಿಯನ್ನು ಅನುಸರಿಸಬೇಕು ನೀರಾವರಿ ವಿಷಯದಲ್ಲಾಗಲಿ, ಅಭಿವೃದ್ಧಿ infrastructure development ಮಾಡತಕ್ಕಂಥ ವಿಷಯದಲ್ಲಾಗಲಿ, ತಾವು ಎಲ್ಲಾ ರೀತಿಯಿಂದ, ಏನೊಂದು vaccum ಆಗಿದೆ, ಏನೊಂದು imbalance ಆಗಿದೆಯೋ, ಅದನ್ನು ಸರಿಪಡಿಸಲಿಕ್ಕೆ ಬೇಕಾಗಿರು ವಂತಹ ಪ್ರಯತ್ನವನ್ನು ಸರ್ಕಾರ ಮಾಡಬೇಕಾಗುತ್ತದೆ ಆ ದಿಸೆಯಲ್ಲಿ ತಾವು ಕೆಲಸ ಮಾಡಬೇಕು, ಆ ದಿಸೆಯಲ್ಲಿ ತಾವು ಹೆಚ್ಚಿನ ಹಣವನ್ನು ಕೊಡಬೇಕು, ಹೆಚ್ಚಿನ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕು ಮತ್ತು ರೈತರಿಗೆ ಸಮಾಧಾನ ಮಾಡುವಂತಹ ಕೆಲಸ ಮಾಡಬೇಕು ಕೇವಲ ಮಾತುಗಳಿಂದ ಮಾತ್ರ ಸಮಾಧಾನ ಮಾಡಿದರೆ ಸಮಾಧಾನ ಆಗತಕ್ಕಂಥ ಪರಿಸ್ಥಿತಿ ಇವತ್ತು ಯಾರ ಹತ್ತಿರವೂ ಉಳಿದಿಲ್ಲ ರಾಜಕಾರಣಿಗಳು ಎಷ್ಟೇ ಆಶ್ವಾಸನೆಗಳನ್ನು ಕೊಡಲಿ, ಎಷ್ಟೇ ಭಾಷಣಗಳನ್ನು ಮಾಡಲಿ, ಜನರು ನಂಬುವುದಿಲ್ಲ ಆ ಪರಿಸ್ಥಿತಿ ದಾಟಿ ಹೋಗಿದೆ ನಾವು ಭರವಸೆ ಕೊಟ್ಟಂತೆ ಕೆಲಸ ಮಾಡಿ ಕೊಟ್ಟಾಗ ಮಾತ್ರ, ಇವತ್ತು ರೈತರು ನಮ್ಮನ್ನು ನಂಬುತ್ತಾರೆ ಇವತ್ತು ನೀವೆಲ್ಲರೂ ಭರವಸೆ ಕೊಟ್ಟು ಹೋಗಿದ್ದೀರಿ, ಆದರೆ ಅದನ್ನು ಅನುಷ್ಠಾನ ಮಾಡಿಲ್ಲ ಮಾನ್ಯ ಮುಖ್ಯಮಂತ್ರಿಗಳು, ಮಾನ್ಯ ಉಪ ಮುಖ್ಯಮಂತ್ರಿಗಳಿಗೆ ನಾನು ಮತ್ತು ಮಾನ್ಯ ಅಮರೇಗೌಡರು ಹೋಗಿ ಮನವಿ ಕೊಟ್ಟಿದ್ದೆವು ಆಗ ಅವರು 250 ಕೋಟಿ ರೂ ಗಳನ್ನು ಕೊಟ್ಟೇ ಕೊಡುತ್ತೇವೆಂದು ಹೇಳಿದ್ದರು ಆದರೆ ಒಂದು ರೂಪಾಯಿಯನ್ನೂ ಸಹ ಕೊಟ್ಟಿಲ್ಲ ಏನು ಮಾಡಬೇಕು ಇವತ್ತು? ಯಾವ ರೀತಿಯಾಗಿ ಹೇಳಬೇಕು? ಈಗಾಗಲೇ ನಿಮ್ಮೆಲ್ಲರ ಗಮನಕ್ಕೆ ತೆಗೆದುಕೊಂಡು ಬಂದಿದ್ದೇವೆ ರಾಯಚೂರಿನಲ್ಲಿ Agricultural University ಆಗಬೇಕೆಂದು ಒತ್ತಾಯಿಸಿದ್ದೇವೆ ನಮ್ಮೆಲ್ಲರ ಒತ್ತಾಯದ ಮೇರೆಗೆ ಶ್ರೀಮಾನ್

ಎಸ್ ಎಂ ಕೃಷ್ಣರವರು ಧಾರವಾಡ University Vice Chancellor ರವರ ನೇತೃತ್ವದಲ್ಲಿ ಒಂದು Sub Committeeಯನ್ನು ಮಾಡಿದರು ಆ ಕಮಿಟಿ ರಿಪೋರ್ಟ್ ಇವತ್ತು ಸರ್ಕಾರದ ಮುಂದೆ ಬಂದಿದೆ ಇವತ್ತು ಅನೇಕ ಸಂಘ ಸಂಸ್ಥೆಗಳು ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಮತ್ತು ಸಚಿವರನ್ನು ಭೇಟಿಯಾದರು ಮಾನ್ಯ ಕೃಷಿ ಸಚಿವರು Agricultural University Campusಗೆ ಬಂದು ಆಶ್ವಾಸನೆ ನೀಡಿದ್ದರು ಆದರೆ ಅದು ಇವತ್ತಿನವರೆಗೆ ಕಾರ್ಯರೂಪಕ್ಕೆ ಬಂದಿಲ್ಲ ಅಲ್ಲಿ 652 ಎಕರೆ Campus ಇದೆ, Agricultural College ಇದೆ, ಉಪಯೋಗಿಸಿಕೊಳ್ಳಲಿಕ್ಕೆ 7500 ಎಕರೆ farm ಇದೆ ಮತ್ತು ನೀರಾವರಿ ಇರತಕ್ಕಂಥ ಪ್ರದೇಶ ಅಲ್ಲಿ laboratories ಇದೆ, auditorium ಇದೆ library ಇದೆ, ಎಲ್ಲ infrastructure ಸಹ ಇದೆ ಆದರೂ ಸಹ ಅದಕ್ಕೆ ಮತ್ತೊಂದು ಕಮಿಟಿ ರಚಿಸಿ, delay ಮಾಡತಕ್ಕಂಥ ಪ್ರಯತ್ನ ಮಾಡುವ ಮೂಲಕ ಮಲತಾಯಿ ಧೋರಣೆಯನ್ನು ರಾಯಚೂರಿನ ಹಿಂದುಳಿದ ಪ್ರದೇಶಗಳಿಗೆ ತೋರಿಸುತ್ತಿದ್ದೀರಿ ಎಲ್ಲರೂ ಆಶ್ವಾಸನೆ ಕೊಟ್ಟಿರಿ ಸರ್ಕಾರದ ವತಿಯಿಂದ ಯಾರ್ಯಾರು ರಾಯಚೂರಿಗೆ ಬಂದಿದ್ದರೋ, ಅವರೆಲ್ಲರೂ ಆಶ್ವಾಸನೆಗಳನ್ನು ಕೊಟ್ಟಿದ್ದಾರೆ ಹಾಗಾಗಿ, ಕೇವಲ ಈ ರೀತಿಯ ಆಶ್ವಾಸನೆಗಳಿಂದ ಜನರು ಎಷ್ಟು ದಿವಸ, ಎಷ್ಟರಮಟ್ಟಿಗೆ ರಾಜಕಾರಣಿಗಳಾದ ನಮ್ಮನ್ನು ನಂಬಲು ಸಾಧ್ಯವಾಗುತ್ತದೆ? ಎಂಬುದನ್ನು ತಾವು ಹೇಳಬೇಕು ನಾವು ಗೌರವವಿಡುತ್ತೇವೆ, ಹೇಳುತ್ತೇವೆ 'ಇಲ್ಲ, ನಾವು ಮಂತ್ರಿಗಳನ್ನು ಭೇಟಿಯಾದೆವು ಉಪ ಮುಖ್ಯಮಂತ್ರಿಗಳನ್ನು ಭೇಟಿಯಾದೆವು ಮುಖ್ಯಮಂತ್ರಿಗಳನ್ನು ಭೇಟಿಯಾದೆವು ಆಶ್ವಾಸನೆ ನೀಡಿರುವ ರೀತ್ಯಾ ಅವರು ಮಾಡುತ್ತಾರೆಂದು ಹೇಳಿದ್ದಾರೆ' ಎಂದರೆ, ಅವರು ನಮ್ಮನ್ನು ಸುಳ್ಳರು ಎಂದುಕೊಳ್ಳುತ್ತಾರೆ ಇವತ್ತು ನಮ್ಮ ಪ್ರದೇಶಗಳಲ್ಲಿ, ನಮ್ಮ ಜಿಲ್ಲೆಯಲ್ಲಿ, ಜನಪ್ರತಿನಿಧಿಗಳು ಯಾವ ರೀತಿಯಲ್ಲಿ ಅಲ್ಲಿಯ ಜನರನ್ನು ಸಮಾಧಾನ ಮಾಡುವಂತಹ ಕೆಲಸ ಮಾಡಬೇಕೆಂಬುದನ್ನು ತಾವು ವಿಚಾರ ಮಾಡಬೇಕು ಹಾಗಾಗಿ, ನಂಜುಂಡಪ್ಪನವರ ವರದಿಯಲ್ಲಿ ತಿಳಿಸಿರುವಂತೆ ತಾವು ಗುರ್ತಿಸಿ ಈಗಾಗಲೇ 1,571 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆಂದು ಏನು ಹೇಳಿದ್ದೀರಿ, ಅದನ್ನು within the budget ನಲ್ಲಿ ಕೊಟ್ಟು ಹೊರಗಡೆ, 'additional ಆಗಿ ಕೊಟ್ಟಿದ್ದೇವೆ ಯಾವುದೇ ಸರ್ಕಾರ ಕೊಟ್ಟಿಲ್ಲ'ವೆಂಬ

ಮಾತನ್ನು ತಾವು ಹೇಳುತ್ತಿದ್ದೀರಿ ಅದರಲ್ಲೂ ಇವತ್ತು ಈಗಾಗಲೇ ಈ ಆರ್ಡರ್ ಮುಖಾಂತರ ತಮಗೆ ಹೇಳುತ್ತೇನೆ ಬೇಕಾದರೆ, ತಮಗೆ ಕೊಟ್ಟು ಕಳುಹಿಸುತ್ತೇನೆ ಈ ರೀತಿ ಅನುದಾನ ಮತ್ತು ಮಂಜೂರಾತಿ ನೀಡಬಾರದೆಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ ತಾವು ಮಾಡಿದಾಗ 39 ಅತ್ಯಂತ ಹಿಂದುಳಿದ ತಾಲ್ಲೂಕುಗಳನ್ನು ತಾವು ಸರಿಯಾದ ರೀತಿಯಲ್ಲಿ ನೋಡಬೇಕಾಗುತ್ತದೆ ಅಲ್ಲಿ ಯಾವ ಪಕ್ಷದವರು ಇದ್ದಾರೆ, ಯಾವ ಪಕ್ಷದವರು ಇಲ್ಲವೆಂದಲ್ಲ ಎಲ್ಲ ಪಕ್ಷದ ಜನರೂ ನೀರು ಕುಡಿಯಬೇಕಾ ಗುತ್ತದೆ ಕುಡಿಯುವ ನೀರಿನ ಪರಿಸ್ಥಿತಿಯಿಂದಾಗಿ ಎಲ್ಲರಿಗೂ ತೊಂದರೆ ಇದೆ ಇವತ್ತು ಮಾನ್ವಿ ಟೌನಿಗೆ 8 ಕೋಟಿ ರೂಪಾಯಿಗಳು Sanction ಆಗಿ ಅಲ್ಲಿ balance ನಲ್ಲಿರುವ reservoir ನೀರು ಕೊಡಬೇಕೆಂದು ಈಗಾಗಲೇ ಹಿಂದಿನ ಸರ್ಕಾರದಲ್ಲಿ ಪಾಸ್ ಆಗಿರುವುದನ್ನು ಕಳೆದ 15 ತಿಂಗಳುಗಳಲ್ಲಿ ಅನೇಕ ಬಾರಿ ನಾವು ಸರ್ಕಾರಕ್ಕೆ ವಿನಂತಿ ಮಾಡಿಕೊಂಡೆವು ಆದರೂ ಇವತ್ತು ಆ ಸ್ಕೀಮ್ ಹೊರಗೆ ಬರುತ್ತಿಲ್ಲ HUD ಮೂಲಕ ಅದು ಆಗಬೇಕಾಗಿರುತ್ತದೆ 8 ಕೋಟಿ ರೂಪಾಯಿಗಳು Sanction ಆಗಿದೆ, Cabinet ನಲ್ಲಿ approval ಆಗಿದೆ, Technical Committee ಯಲ್ಲೂ approval ಆಗಿದೆ ಆದರೂ ಸರ್ಕಾರ ಅದರ ಬಗ್ಗೆ ಸ್ಪಂದಿಸುತ್ತಿಲ್ಲ ಈ ರೀತಿ ಅನೇಕ ಸಮಸ್ಯೆಗಳನ್ನಿಟ್ಟುಕೊಂಡು ನಾವೆಲ್ಲರೂ ಕಳೆದ 50 ವರ್ಷಗಳಿಂದ ಮಾಡಲಾರದ್ದನ್ನು 15 ತಿಂಗಳಿನಲ್ಲಿ ಮಾಡಿಬಿಟ್ಟೆವೆಂದು ಕೇವಲ ಭಾಷಣಗಳಲ್ಲಿ, ಪತ್ರಿಕೆಗಳಲ್ಲಿ, ಮಾಧ್ಯಮಗಳಲ್ಲಿ ಬರುವುದರ ಮುಖಾಂತರ ನಾವು ಜನರನ್ನು ನಂಬಿಸುವುದಕ್ಕೆ ಸಾಧ್ಯವಿಲ್ಲವೆಂಬ ಮಾತನ್ನು ನಾವೆಲ್ಲರೂ ಅರಿತುಕೊಳ್ಳ ಬೇಕಾಗುತ್ತದೆ ಮತ್ತು ಆ ಸಮಯ ದೂರವಿಲ್ಲವೆಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ ಸರ್ಕಾರ ಯಾವ್ಯಾವ ಆಶ್ವಾಸನೆಗಳನ್ನು ಕೊಟ್ಟಿದೆಯೋ, ಅವುಗಳನ್ನು ತಕ್ಷಣವೇ ನೆರವೇರಿಸುವ ಪ್ರಯತ್ನ ಮಾಡಬೇಕು ಏನು imbalance ಮಾಡುತ್ತಿದ್ದೀರಿ, ಇವತ್ತು ಏನು ನಂಜುಂಡಪ್ಪನವರ ವರದಿಯಲ್ಲಿ ಹಿಂದುಳಿದ ಪ್ರದೇಶ, Agricultural University ಇವನ್ನೆಲ್ಲ ಮಾಡುವಂತಹ ಸಂದರ್ಭದಲ್ಲಿ ತಾವು ಆ ಪ್ರದೇಶಗಳಿಗೆ ಹೆಚ್ಚು ಒತ್ತು ಕೊಟ್ಟು ತಾವು ಸರಿಯಾದ ರೀತಿಯಲ್ಲಿ ನಮ್ಮ ಜನರಿಗೆ ಅನುಕೂಲವಾಗುವಂತಹ ಒಂದು infrastructure ಅನ್ನು develop ಮಾಡಬೇಕೆಂಬ ಮಾತನ್ನು ಹೇಳುತ್ತೇನೆ ನಮ್ಮ Industries Minister ಇಲ್ಲಿಯೇ ಇದ್ದಾರೆ ಈಗಾಗಲೇ ನಾವು

ಅವರಿಗೆ ವಿನಂತಿ ಮಾಡಿಕೊಂಡೆವು ನಮ್ಮ ರಾಜ್ಯದಲ್ಲಿ ಇವತ್ತು 3 growth centers ಆಗಿವೆ, ರಾಯಚೂರು, ಹಾಸನ ಮತ್ತು ಧಾರವಾಡ, Central Government ಸಹ ಹೆಚ್ಚು-ಕಡಿಮೆ 22 ಕೋಟಿ ರೂಪಾಯಿಗಳಷ್ಟು investment ಮಾಡಿದೆ ಅದಕ್ಕೆ ರಾಜ್ಯ ಸರ್ಕಾರ ಸಹ ಸಾಕಷ್ಟು ಹಣ ಕೊಟ್ಟು improve ಮಾಡಿದೆ ಅಲ್ಲಿಯೇ ಪಕ್ಕದಲ್ಲಿ ಕೃಷ್ಣಾ ನದಿ ನೀರು ಇದ್ದು, 600 TMC ಯಷ್ಟು ನೀರು ಸಮುದ್ರಕ್ಕೆ ಹೋಗಿದೆ ಕರ್ನಾಟಕದ ಮೇರೆ ದಾಟಿ 600 TMC ಯಷ್ಟು ನೀರು ವಿಜಯವಾಡದ ಹತ್ತಿರ ಸಮುದ್ರಕ್ಕೆ ಸೇರಿದೆ ಆದುದರಿಂದ, infrastructure ಗೆ ಸಾಕಷ್ಟು ನೀರು ಸಿಗುತ್ತದೆ ಈಗಾಗಲೇ ಅಲ್ಲಿ develop ಆಗಿದೆ, drinking water ಇದೆ, ಅಲ್ಲಿಯೇ KPCL ನಿಂದ growth center ಪಕ್ಕದಲ್ಲಿಯೇ 1,300 MW ನಷ್ಟು ವಿದ್ಯುತ್ ಉತ್ಪಾದನೆಯಾಗುತ್ತದೆ ಅದು ಮುಂಬೈ ಮತ್ತು ಬೆಂಗಳೂರಿಗೆ, ಮುಂಬೈ ಮತ್ತು ಚೆನ್ನೈಗೆ centreನಲ್ಲಿರುವ ಪ್ರದೇಶವಾಗಿದೆ Daily ಬೆಂಗಳೂರಿಗೆ 5 trains ಇವತ್ತು connected ಇದೆ ದಿಲ್ಲಿಗೆ ರಾಜಧಾನಿ ಎಕ್ಸ್‌ಪ್ರೆಸ್ ಇದೆ, ಹೈದರಾಬಾದ್‌ಗೆ ಹೋಗಬೇಕಾದರೆ 3 hours ನಲ್ಲಿ ಉತ್ತಮವಾದ ರಸ್ತೆಯಲ್ಲಿ airportಗೆ ಹೋಗಬಹುದು ಎಲ್ಲ infrastructure ಇದ್ದರೂ, ಸಾಕಷ್ಟು ಅವಕಾಶಗಳಿದ್ದರೂ, ಅಲ್ಲಿಗೆ ಯಾವುದೇ industry ಯವರು ಬರುತ್ತಿಲ್ಲ ಯಾವ ಕಾರಣದಿಂದ ಬರುತ್ತಿಲ್ಲ? ಆ growth centres ಅನ್ನು ಏನು ಮಾಡಬೇಕು? ಅದರ ಜೊತೆಗೆ, ಹೋದ ಸಲ ನಾನು ಪ್ರಯತ್ನಿಸಿ 50 ಎಕರೆಗಳಷ್ಟು ಜಾಗ ತೆಗೆದುಕೊಂಡು ಮಾನ್ವಿ ಹೆಡ್‌ಕ್ವಾರ್ಟರ್ಸ್‌ನಲ್ಲಿ industrial area ಎಂದು ಪ್ರಾರಂಭಿಸಿದೆವು ಸನ್ಮಾನ್ಯ ಸಚಿವರು ಸಹ ನಮ್ಮ ವಿನಂತಿ ಮೇರೆಗೆ ಆ ಪ್ರದೇಶಕ್ಕೆ ಬಂದು ಅಲ್ಲಿರುವ ಸಣ್ಣ ಪುಟ್ಟ ಕೈಗಾರಿಕೋದ್ಯಮಿಗಳಿಗೆ ತಕ್ಷಣ ಜಾಗ ಕೊಡಬೇಕೆಂದು ಹೇಳಿದ್ದಕ್ಕೆ, ಅವರುಗಳಿಗೆ minimum rateನಲ್ಲಿ ಕೊಡುವುದಕ್ಕೆ ಸಹ ಅವರು ಪ್ರಯತ್ನಿಸಿ ಸಭೆ ನಡೆಸಿದರು ಆದರೆ, ಅಧಿಕಾರಿಗಳು ಅವರ ಮಾತುಗಳನ್ನು ಕೇಳುವುದಕ್ಕೆ ತಯಾರಿಲ್ಲ Sq ft ಗೆ 21 ರೂಪಾಯಿಗಳಂತೆ ಕೊಡಬೇಕೆಂದು ಅವರು ಹೇಳಿದರೆ, 37 ರೂಪಾಯಿಗಳ ರೇಟ್ ಹಾಕಿದ್ದಾರೆ, ಈಗಾಗಲೇ ಮಂತ್ರಿಗಳು ಅಲ್ಲಿಗೆ ಬಂದಿದ್ದು, ಅವರ ಆಶ್ವಾಸನೆಯಂತೆ ಆ ಬಡ ಜನರು 5-5 ಸಾವಿರ ರೂಪಾಯಿಗಳಂತೆ

ಮೊದಲು ಕಟ್ಟಿದರು ಈಗಾಗಲೇ 75 ಮಂದಿ ಕಟ್ಟಿದ್ದಾರೆ, ಎರಡೂವರೆ ತಿಂಗಳಾಗಿದೆ ಆದರೂ ಮಂತ್ರಿಗಳು 2-3 ಸಲ ಮೀಟಿಂಗ್‌ಗಳನ್ನು ಕರೆದು ಪಾಪ! ಬಡವರ ಪರವಾಗಿ ಸ್ಪಂದಿಸಿ ಆ ಪ್ರದೇಶಕ್ಕೆ ಒಂದು ಆಶ್ವಾಸನೆ ಕೊಟ್ಟು ತಕ್ಷಣ ಕಾರ್ಯಕ್ರಮ ಮಾಡುತ್ತೇವೆಂಬ ಮಾತುಗಳನ್ನು ಹೇಳಿದರೂ ಸಹ ಈಗ 3 ಗಂಟೆಗೆ ಸಹ ನಾನು ಅವರೊಂದಿಗೆ ಮಾತನಾಡಿದೆ ಆದರೆ, ಅವರ Principal Secretary ಯವರು ಅದನ್ನು ಕೊಡುವುದಕ್ಕೆ ಬರುವುದಿಲ್ಲ Sq feet ಗೆ 37 ರೂಪಾಯಿಗಳಂತೆ ಕೊಡಬೇಕೆಂದರು ಈ ರೀತಿಯ ಪರಿಸ್ಥಿತಿಯಾಗದೇ ಇರುವುದಕ್ಕೆ ನೀವು ಏನು ಹೇಳುತ್ತಿದ್ದೀರಿ, ಏನು ಆಶ್ವಾಸನೆ ಕೊಡುತ್ತಿದ್ದೀರಿ, ಏನು ಕ್ರಮ ತೆಗೆದುಕೊಳ್ಳುತ್ತಿದ್ದೀರಿ, ಹಿಂದಿನ ಅಧಿಕಾರಿಗಳು ಏನು ಮಾಡುತ್ತಿದ್ದಾರೆ ಎಂಬುದನ್ನೂ ಸಹ ನೋಡುವ ಜವಾಬ್ದಾರಿ ನಮ್ಮ ಮೇಲಿದೆ ಎಂಬ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ ಇಲ್ಲದಿದ್ದರೆ, ನಮ್ಮ ಆಶ್ವಾಸನೆ, ಕೇವಲ ಆಶ್ವಾಸನೆಯಾಗಿಯೇ ಉಳಿಯುತ್ತದೆ, suffer ಆಗುವವರು ಜನರು ಅವರು suffer ಆಗುತ್ತಲೇ ಇರುತ್ತಾರೆ ನಾವು ಶಾಸಕರಾಗಿ 'ಅಯ್ಯಾ ಅಪ್ಪ' ಎಂದು ಹೇಳಿ vote ಹಾಕಿಸಿಕೊಂಡಿದ್ದ ನಾವುಗಳು ಚಪ್ಪಲಿ ಹರಿಯುವಂತೆ ತಿರುಗಾಡಬೇಕಾಗುತ್ತದೆ ಈ ರೀತಿಯ ಪರಿಸ್ಥಿತಿಯನ್ನು ತಪ್ಪಿಸಬೇಕಾದರೆ, ನಾವು ಸರಿಯಾದ ಕ್ರಮಗಳನ್ನು ಕೈಗೊಳ್ಳಬೇಕಾಗುತ್ತದ ಕೊಟ್ಟಿದ್ದ ಆಶ್ವಾಸನೆಗಳಿಗೆ ಸಂಬಂಧಿಸಿದಂತೆ ಎಷ್ಟರಮಟ್ಟಿಗೆ ನಾವು ಅದರ ಒಗ್ಗೆ ಕ್ರಮ ತೆಗೆದುಕೊಂಡೆವು ಎಂಬುದರ ಬಗ್ಗೆಯೂ ತಾವು ನೋಡಬೇಕಾಗುತ್ತದೆ ಈ ಸಮಯದಲ್ಲಿ ನಾನು ಹೆಚ್ಚು ಸಮಯ ತೆಗೆದುಕೊಳ್ಳದೇ ನಮ್ಮ ಪ್ರದೇಶದ, ಅದರಲ್ಲೂ ತುಂಗಭದ್ರಾ ಪ್ರಾಜೆಕ್ಟ್ ಏರಿಯಾದಲ್ಲಿ ಇರುವಂತಹ ಅನೇಕ ಸಮಸ್ಯೆಗಳು ಈಗಾಗಲೇ ಸರ್ಕಾರದ ಗಮನದಲ್ಲಿರುವುದರಿಂದ, ಅವೆಲ್ಲದರ ಬಗ್ಗೆ ಸರಿಯಾದ ರೀತಿಯಲ್ಲಿ ಸ್ಪಂದಿಸಿ, ತಕ್ಷಣ ತಾವು ಅದಕ್ಕೆ ಹಣ ಮಂಜೂರಾತಿ ಮಾಡುವುದರ ಮುಖಾಂತರ ಅಲ್ಲಿರುವ ರೈತರಿಗೆ ಅನುಕೂಲವಾಗುವ ಪರಿಸ್ಥಿಯಲ್ಲಿ ತಾವು ಮಾಡಿಕೊಡಬೇಕೆಂಬ ಮಾತನ್ನು ಈ ಸಂದರ್ಭದಲ್ಲಿ ಹೇಳಿ, ಮಾತನಾಡುವುದಕ್ಕೆ ತಾವು ಅವಕಾಶ ಕಲ್ಪಿಸಿಕೊಟ್ಟಿದ್ದಕ್ಕಾಗಿ ಮಾನ್ಯ ಸಭಾಧ್ಯಕ್ಷರಾದ ತಮಗೆ ಧನ್ಯವಾದಗಳನ್ನರ್ಪಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ